ಅಕ್ಟೋಬರ್ 2016 ಸಂಚಿಕೆ – 3 ಸಂಪುಟ – 32

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ...........

ಸಂಪಾದಕೀಯ .................................................... 2

ಕರಕುಶಲತೆಯ ಸುಸ್ಥಿರತೆ .......................................... 3
*** ಸ್ಮೃತಿ ಇರಾನಿ**

ಕಾರ್ಮಿಕ ಕಲ್ಯಾಣದ ಭದ್ರತೆ ....................................... 6
*** ಅಜಯ್ ತಮಟ**

ಉದ್ಯೋಗ ಸೃಷ್ಟಿ ಮತ್ತು ಒಳಗೊಂಡ ಬೆಳವಣಿಗೆ .................... 9
*** ರಶ್ಮಿ ವರ್ಮಾ**

ಕೈಮಗ್ಗ: ಹಿಂದೆ, ಈಗ ಮತ್ತು ಮುಂದೆ ............................. 14
*** ಜಯಾ ಜೇಟ್ಲಿ**

ಖಾದಿ; ಕಾರ್ಬನ್ ಕಾರದ ಕೈಗಾರಿಕೆ ................................. 18
*** ವಿನಯ್ ಕುಮಾರ್ ಸಕ್ಸೆನಾ**

ತಾಂತ್ರಿಕ ಜವಳಿ; ಉದಯಿಸುತ್ತಿರುವ ಉದ್ಯಮ .................... 22
*** ಪ್ರಕಾಶ್ ವಾಸುದೇವನ್**

ರೇಷ್ಮೆ; ಸವಾಲು ಹಾಗೂ ಭವಿಷ್ಯದ ಹಾದಿ .......................... 26
*** ಬಿ.ಎಸ್. ಅಂಗಡಿ, ಕೆ.ಕೆ. ಶೆಟ್ಟಿ ಮತ್ತು ಹೆಚ್. ನಾಗೇಶ ಪ್ರಭು**

ಸೆಣಬಿಗೆ ಕಾಯಕಲ್ಪ .................................................. 34
*** ಡಾ. ಸುಬ್ರತೊ ಗುಪ್ತಾ**

ಭಾರತದ ಜವಳಿ ಮತ್ತು ಉಡುಪು ರಫ್ತು – ಸವಾಲು ........... 40
*** ಅದಿತಿ ದಾಸ್ ರಾವತ್**

ಏರುತಿಹುದು ಹಾರುತಿಹುದು ನೋಡು ನಮ್ಮ ಬಾವುಟ ......... 46
*** ಪ್ರಕಾಶ್ ಜೋಶಿ ಗುಡಗೇರಿ**

ಗಾಂಧಿ – ಚರಕ – ಸ್ವಾವಲಂಬನೆ ................................... 49
*** ಡಾ. ಹೊ. ಶ್ರೀನಿವಾಸಯ್ಯ**

ಮೈಸೂರು ರೇಷ್ಮೆಯ ನವಿರು ......................................... 52
*** ನೀಲಾ ಮಂಜುನಾಥ್**

ಕರ್ನಾಟಕದಲ್ಲಿ ಕೈಮಗ್ಗ ಮತ್ತು ಜವಳಿ ಉದ್ದಿಮೆ .................. 55
*** ಆರ್. ಗಿರೀಶ್**

ರೇಷ್ಮೆ ಉತ್ಪಾದನೆ; ಮುಂಚೂಣಿಯಲ್ಲಿ ಕರ್ನಾಟಕ ................ 60
**ಎನ್. ವಾಯ್. ಚಿಗರಿ**

ಇಳಕಲ್ ಸೀರೆಯ ಇತಿಹಾಸ ............................................ 66
*** ರಾಮು ಮನಗೂಳಿ ಮತ್ತು ಬಿ. ಬಾಬು ಇಳಕಲ್**

ವಾರ್ತಾ ವಿಶೇಷ ....................................................... 71

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಳಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**

*Log on to*
**http://publicationsdivision.nic.in/,**
*in collaboration with* **bharatkosh.gov.in**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

## ಸಂಪಾದಕೀಯ

### ಮುಖ್ಯ ಸಂಪಾದಕರ ಲೇಖನಿಯಿಂದ

# ಭವಿಷ್ಯತ್ತಿನ ವಿನ್ಯಾಸ




ಜವಳಿ ಅಂದ ಕೂಡಲೆ ಅರಳೆ, ರೇಷ್ಮೆ, ಮಸ್ಲಿನ್, ಶಿಫಾನ್ ಹೀಗೆ ವಿವಿಧ ಅಂದವಾದ ತರಹೇವಾರಿ ಬಟ್ಟೆಗಳ ರಾಶಿಗಳೇ ಕಣ್ಮುಂದೆ ಬರುತ್ತವೆ. ಮೆಹೆಂಜೆದಾರೊದ ನಾರಿ ಸುತ್ತಿಕೊಂಡ ಉಡುಪಿನ ಮಾದರಿ, ಕ್ಲಿಯೊಪಾತ್ರ ಧರಿಸಿದ ನವ ನಾವಿನ್ಯದ ದಿರಿಸು, ವಿಕ್ಟೋರಿಯನ್ ಯುಗದ ಚೆಂಡು ನೃತ್ಯದ ನಿಲುವಂಗಿಗಳು, ನಮ್ಮ ಇತಿಹಾಸದ ರಾಣಿ, ರಾಜಕುಮಾರಿಯರು ತೊಡುತ್ತಿದ್ದ ಸಿರಿವಂತಿಕೆಯ ಉಡುಪುಗಳು ಸ್ಮೃತಿ ಪಟಲದಲ್ಲಿ ಹಾದುಹೋಗುತ್ತವೆ. ಹತ್ತಿ, ಸೆಣಬು, ರೇಷ್ಮೆ ಅಲ್ಲದೆ ಮಾನವ ನಿರ್ಮಿತ ರೆಯಾನ್, ಶಿಫಾನ್, ಜವಳಿ ನಮ್ಮ ವಿಭಿನ್ನ ಅಭಿರುಚಿಯ ಅಭಿವ್ಯಕ್ತಿಗಳಾಗಿವೆ. ಬಟ್ಟೆ ನಾಗರಿಕತೆಯ ಸಂಕೇತ. ಉಡುಪು ಸಂಸ್ಕೃತಿಯನ್ನು ಪ್ರತಿಫಲಿಸುತ್ತದೆ.

ಭಾರತೀಯ ಜವಳಿ – ವಸ್ತ್ರ ವಿನ್ಯಾಸ, ನಳನಳಿಸುವ ಬಣ್ಣಗಳಿಗೆ ಸುಪ್ರಸಿದ್ಧ. ಭಾರತದಲ್ಲಿ ಬಟ್ಟೆಗಿರುವಷ್ಟು ಬಹು ಸ್ತರಗಳ ವಿವಿಧ ಆಯಾಮಗಳು ವಿಶ್ವದ ಬೇರಾವ ದೇಶದಲ್ಲೂ ಇಲ್ಲ. ಇದು ಸಂಸ್ಕೃತಿ – ಆಸಕ್ತಿ ನಡುವಿನ ನಂಟಿನ ದ್ಯೋತಕವಾಗಿದೆ. ಮೈಸೂರು ರೇಷ್ಮೆ, ರಾಜಸ್ತಾನದ ಬಾಂದಣಿ, ಬಂಗಾಳದ ಕಾಂತಾ, ಗುಜರಾತಿನ ಟಂಕೊಯಿ ಅಥವಾ ತಮಿಳುನಾಡಿನ ಕಾಂಜೀವರಂ – ಪ್ರತಿಯೊಂದು ಆಯಾ ಪ್ರದೇಶಗಳ ಪದ್ಧತಿ, ಪರಂಪರೆ ಪ್ರತಿಬಿಂಬಿಸುತ್ತವೆ.

ಮೈಸೂರು ರೇಷ್ಮೆ, ಬನಾರಸಿ ರೇಷ್ಮೆ, ಒಡಿಶಾ ರೇಷ್ಮೆ, ಟಸರ್, ಮುಗ ಮತ್ತು ಚಂದೇರಿ ಬ್ರ್ಯಾಂಡ್‌ಗಳು ಜಗತ್ಪ್ರಸಿದ್ಧವಾಗಿದೆ.

ಭಾರತ, ಹತ್ತಿ ವಸ್ತ್ರ ತಯಾರಿಕೆಯಲ್ಲಿ ಮೊದಲಿನಿಂದಲೂ ಮುಂಚೂಣಿಯಲ್ಲಿದೆ. ಐತಿಹಾಸಿಕವಾಗಿ ಅರಳೆ ಬಟ್ಟೆ – ಅದು ಧೋತಿ, ಕುರ್ತಾ, ಸೀರೆ ಅಥವಾ ಲೆಹೆಂಗಾ ಹೀಗೆ ಜನಸಾಮಾನ್ಯರು ಬಳಸುವ ಬಟ್ಟೆಯಾಗಿತ್ತು. ಹತ್ತಿ ಬೆಳೆಯುವ ಪ್ರಮುಖ ದೇಶವಾದ ಭಾರತದ ಜವಳಿ ಒಂದು ಕಾಲದಲ್ಲಿ ಬ್ರಿಟನ್ನಿನ ಹತ್ತಿ ಉದ್ಯಮಕ್ಕೇ ಬೆದರಿಕೆಯುಂಟು ಮಾಡಿದ ರಂಗವಾಗಿತ್ತು. ಅದೆಷ್ಟಿತ್ತೆಂದರೆ, ನಮ್ಮನ್ನು ಆಳುತ್ತಿದ್ದ ಬ್ರಿಟಿಷರು ತಮ್ಮ ದೇಶದ ಜವಳಿ ರಂಗದ ಉಳಿವಿಗಾಗಿ, ಭಾರತದ ವಸ್ತ್ರೋದ್ಯಮ ಬಗ್ಗು ಬಡಿಯಲು ವಿವಿಧ ನೀತಿ ನಿಯಮಗಳನ್ನು ಹೇರಿದರು. ಬ್ರಿಟಿಷ್ ಸರ್ಕಾರದ ಈ ನೀತಿಯೇ ಭಾರತದಲ್ಲಿ ಸ್ವಾತಂತ್ರ ಚಳವಳಿ ತಾರಕಕ್ಕೇರಲು ಪ್ರಮುಖ ಕಾರಣವಾಯಿತು. ಖಾದಿ ಒಂದು ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟದ ಸ್ಮರಣೆಯ ಪ್ರತೀಕವಾಗಿದೆ.

ಖಾದಿ ನಮ್ಮ ಸಂಪ್ರದಾಯದ ಅತ್ಯಮೂಲ್ಯ ಪರಂಪರೆಯಾಗಿದ್ದು ಅಸಂಖ್ಯ ಜನರಿಗೆ ಅದರಲ್ಲಿಯೂ ಗ್ರಾಮೀಣ ಮಹಿಳೆಯರಿಗೆ ಜೀವನ ನಿರ್ವಹಣೆಯ ಊರುಗೋಲಾಗಿದೆ. ಖಾದಿ ಕ್ಷೇತ್ರಕ್ಕಿರುವ ಅಪರಿಮಿತ ಉದ್ಯೋಗಸೃಷ್ಟಿ ಸಾಮರ್ಥ್ಯವನ್ನು ಗಮನಿಸಿದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು, ತಮ್ಮ ಮನ್ ಕಿ ಬಾತ್ ಸಂದೇಶದಲ್ಲಿ, ಯುವ ಜನರು ಇತರ ಚಟುವಟಿಕೆಗಳೊಂದಿಗೆ ಕನಿಷ್ಠ ಒಂದು ಖಾದಿ, ಸಿದ್ಧ ಉಡುಪು ತಯಾರಿಕೆಯನ್ನು ಕೈಗೆತ್ತಿಕೊಳ್ಳಬೇಕೆಂದು ಕರೆ ನೀಡಿದ್ದಾರೆ. ಖಾದಿ ಪರಿಶುದ್ಧವಾದ, ಸುಸ್ಥಿರತೆಯ ಬಟ್ಟೆಯಾಗಿದೆ. ಪರಿಸರಕ್ಕೆ ಹಾನಿಯುಂಟು ಮಾಡುವ ಪ್ರಕ್ರಿಯೆ ಒಳಗೊಂಡ ಆಧುನಿಕ, ಕೃತಕ ಬಟ್ಟೆಗೆ ಖಾದಿ ಪರ್ಯಾಯವಾಗಬಲ್ಲ ಎಲ್ಲ ಸುಪ್ತ ಸಾಮರ್ಥ್ಯ ಹೊಂದಿದೆ. ಕೈಮಗ್ಗ ರಂಗ ಹಳೆಯ ಪರಂಪರೆ, ಹೊಸ ಆವಿಷ್ಕಾರಗಳನ್ನು ಮೇಳೈಸಿದ ಮತ್ತೊಂದು ಪರಿಸರ ಸ್ನೇಹಿ ಕ್ಷೇತ್ರವಾಗಿದೆ. ಪ್ರಧಾನ ಮಂತ್ರಿಯವರ ಮಾತುಗಳಲ್ಲೆ ಹೇಳುವುದಾದರೆ, ಸಾಂಪ್ರದಾಯಿಕ ಕೈ ಮಗ್ಗದ ಉತ್ಪನ್ನಗಳಿಗೆ ನಾವು ಸೂಕ್ತವಾದ ಆದ್ಯತೆ ನೀಡಬೇಕು ಮತ್ತು ಭಾರತದ, ಅಷ್ಟೇ ಅಲ್ಲ ವಿಶ್ವದ ಆಧುನಿಕ ವಸ್ತ್ರಾಲಂಕಾರ ಫ್ಯಾಷನ್ನಿನಲ್ಲಿ ಕೇಂದ್ರ ಸ್ಥಾನಮಾನ ಒದಗಿಸಬೇಕಾಗಿದೆ. ಭಾರತದ ರೇಷ್ಮೆಗೆ ಬಹು ಹಿಂದಿನಿಂದಲೂ ವಿಶ್ವದಾದ್ಯಂತ ಜನಪ್ರಿಯತೆ ಇದೆ. ರಫ್ತಿನ ಬಹುಮುಖ್ಯ ವಸ್ತುಗಳಲ್ಲಿ ಮುತ್ತು, ಸಾಂಬಾರ ಪದಾರ್ಥಗಳೊಂದಿಗೆ ಭಾರತೀಯ ರೇಷ್ಮೆಗೂ ಪ್ರಮುಖ ಸ್ಥಾನವಿದೆ. ಭಾರತೀಯ ರೇಷ್ಮೆ ಮತ್ತು ಮಸ್ಲಿನ್ ಬಟ್ಟೆ ಜಗತ್ಪ್ರಸಿದ್ಧ. ದೇಶದ ದಕ್ಷಿಣ ಭಾಗ ಮತ್ತು ಈಶಾನ್ಯ ರಾಜ್ಯಗಳಲ್ಲಿ ರೇಷ್ಮೆ ಸಾಕಾಣಿಕೆ ಪ್ರಮುಖ ಉದ್ಯೋಗವಾಗಿದೆ. ಸೆಣಬು ಇಂದಿಗೂ, ಪ್ಯಾಕೇಜಿಂಗ್ ಸರಕಾಗಿ ಬಳಸಲಾಗುತ್ತಿರುವ ಉತ್ಪನ್ನವಾಗಿದೆ. ಈ ಕ್ಷೇತ್ರದಲ್ಲಿ ಆಗಿರುವ ಇನ್ನೊಂದು ಆಸಕ್ತಿದಾಯಕ ಬೆಳವಣಿಗೆ ಎಂದರೆ, ಇದು ಪ್ಯಾಕೇಜಿಂಗ್ ವ್ಯಾಪ್ತಿ ಮೀರಿ, ವಸ್ತ್ರ ವಿನ್ಯಾಸಕರ ಕಲ್ಪನೆಯ ಬೆನ್ನೇರಿರುವುದು. ಸೆಣಬು ಈಗ ಧರಿಸಬಲ್ಲ ಜವಳಿಯಾಗಿದೆ.

ಜವಳಿ ರಂಗ ಮತ್ತೊಂದು ಮನ್ವಂತರಕ್ಕೆ ಸದ್ದಿಲ್ಲದೆ ಸಿದ್ಧವಾಗುತ್ತಿದೆ. ತಾಂತ್ರಿಕ ಜವಳಿ ಹೊರಹೊಮ್ಮುತ್ತಿದ್ದು, ವೈದ್ಯಕೀಯ ಅನ್ವಯಿಕತೆ ನಿರ್ಮಾಣ ಇಂಜಿನಿಯರಿಂಗ್, ವಾಹನ – ಆಟೊ ಮೊಬೈಲ್ ಇಂಜಿನಿಯರಿಂಗ್ – ಮೊದಲಾದ ಕ್ಷೇತ್ರಗಳತ್ತ ತನ್ನ ಓಘ ಹರಿಸಿದೆ. ವಿಶ್ವದ ಜವಳಿ ಉದ್ಯಮದಲ್ಲಿ ಉತ್ಪಾದನೆ, ಮತ್ತು ಜವಳಿ, ಸಿದ್ಧ ಉಡುಪು ರಫ್ತಿನಲ್ಲಿ ಭಾರತ ಎರಡನೆ ಸ್ಥಾನದಲ್ಲಿದೆ. ಇದಲ್ಲದೆ, ಕೃಷಿ ಬಿಟ್ಟರೆ, ಅತಿ ಹೆಚ್ಚಿನ ಪ್ರಮಾಣದ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿರುವ ಕ್ಷೇತ್ರ ಇದಾಗಿದೆ. ಪ್ರಸ್ತುತ 45 ದಶಲಕ್ಷ ಜನರಿಗೆ ನೇರವಾಗಿ ಹಾಗೂ 60 ದಶಲಕ್ಷಕ್ಕೂ ಹೆಚ್ಚು ಜನರಿಗೆ ಪರೋಕ್ಷವಾಗಿ ಜೀವನ ನಿರ್ವಹಣೆಯ ಮಾರ್ಗವಾಗಿದೆ. ದೇಶದ ಒಟ್ಟು ದೇಶೀಯ ಉತ್ಪನ್ನ ಜಿಡಿಪಿಗೆ ಇದರ ಕೊಡುಗೆ ಶೇ. 4. ಈ ರಂಗದಲ್ಲಿರುವ ಕರಕುಶಲಗಾರರಿಗೆ ಆಧುನಿಕ ತಂತ್ರಜ್ಞಾನದ ಮಾಹಿತಿ ನೀಡಿ ಬೇಡಿಕೆಗಳನ್ನು ಪೂರೈಸಲು ಸಮರ್ಥರನ್ನಾಗಿಸುವತ್ತ ಸರ್ಕಾರ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ನೇಕಾರರ ಸೇವಾ ಕೇಂದ್ರ, ಕ್ರಾಫ್ಟ್ ಕ್ಲಸ್ಟರ್ ಸೇವೆ, ಇ–ಕಾಮರ್ಸ್ ವೇದಿಕೆ ಮೊದಲಾದವು ಇದರಲ್ಲಿ ಸೇರಿವೆ. ಜಾಗತಿಕ ಜವಳಿ ಕ್ಷೇತ್ರದಲ್ಲಿ ಭಾರತದ ಪಾಲು ಶೇ. 5.65. 2015–16ರಲ್ಲಿ ಭಾರತದ ಒಟ್ಟು ನಿರ್ಯಾತದಲ್ಲಿ ಜವಳಿಯ ಪಾಲು ಶೇ. 14 ರಷ್ಟಿತ್ತು. ಆದರೂ ಭಾರತದ ಜವಳಿ ಕ್ಷೇತ್ರ ಅಪಾರ ಸವಾಲುಗಳನ್ನು ಎದುರಿಸುತ್ತಿದೆ. ಚೀನಾ, ಬಾಂಗ್ಲಾದೇಶ, ಐರೋಪ್ಯ ಸಮುದಾಯ, ಹಾಂಕಾಂಗ್, ವಿಯೆಟ್ನಾಂ, ಇಂಡೊನೇಶಿಯಾ, ಅಮೆರಿಕ ಮತ್ತು ಕಾಂಬೋಡಿಯಾಗಳಿಂದ ಭಾರತ ಕಠಿಣ ಸ್ಪರ್ಧೆ ಎದುರಿಸುತ್ತಿದೆ. ಜವಳಿ ಕ್ಷೇತ್ರದಲ್ಲಿ ಪೂರ್ತಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ, ತಂತ್ರಜ್ಞಾನ ಉನ್ನತೀಕರಣ ನಿಧಿ ಯೋಜನೆ ತಿದ್ದುಪಡಿ, ತಾಂತ್ರಿಕ ಜವಳಿ ಕುರಿತಾದ ತಂತ್ರಜ್ಞಾನ ಮಿಷನ್, ಕೇಂದ್ರೀಕೃತ ಇನ್‌ಕ್ಯೂಬೇಷನ್ ಕೇಂದ್ರಗಳು, ಮಾರುಕಟ್ಟೆ ಅಭಿವೃದ್ಧಿ ನೆರವು, ಬೃಹತ್ ಕ್ಲಸ್ಟರ್ ಅಭಿವೃದ್ಧಿ ಮೊದಲಾದ ಜಾಗೃತ ಯೋಜನೆಗಳು, ಈ ರಂಗವನ್ನು ಭಾರತದಲ್ಲಿ ಮಾತ್ರವಲ್ಲ ವಿಶ್ವದ ರಫ್ತು ಕ್ಷೇತ್ರದಲ್ಲಿ ಉನ್ನತ ಎತ್ತರಕ್ಕೇರಿಸಲು ಸಹಾಯಕವಾಗಲಿವೆ. ಇದರೊಂದಿಗೆ ಜನಸಾಮಾನ್ಯರ ಮೂಲ ಅಗತ್ಯಗಳಾದ ರೊಟ್ಟಿ, ಬಟ್ಟೆ, ಮನೆ (ರೋಟಿ, ಕಪಡಾ ಔರ್ ಮಕಾನ್) ಪೂರೈಸಲೂ ನೆರವಾಗಲಿವೆ. ❑

# ಕರಕುಶಲತೆಯ ಸುಸ್ಥಿರತೆ



ಇ-ಕಾಮರ್ಸ್ ಮೂಲಕ ಕೈಮಗ್ಗ ಉತ್ಪನ್ನಗಳ ಮಾರಾಟವು ಜವಳಿ ಸಚಿವಾಲಯದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ. ಪಾರದರ್ಶಕ, ಸ್ಪರ್ಧಾತ್ಮಕ ಮತ್ತು ಪರಿಣಾಮಕಾರಿ ರೀತಿಯಲ್ಲಿ ಕೈಮಗ್ಗ ಉತ್ಪನ್ನಗಳ ಮಾರಾಟವನ್ನು ಉತ್ತೇಜಿಸುವ ನಿಟ್ಟಿನಲ್ಲಿ ವಿವಿಧ ಇ-ಕಾಮರ್ಸ್ ವೇದಿಕೆಗಳನ್ನು ಬಳಸಿಕೊಳ್ಳಲಾಗುತ್ತಿದೆ.

* ಸ್ಮೃತಿ ಇರಾನಿ

ಭಾರತದ ಕರಕುಶಲ ಮತ್ತು ಕೈಮಗ್ಗ ಕ್ಷೇತ್ರವು ದೇಶದ ಸಂಪದ್ಭರಿತ ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗವಾಗಿದೆ. ಅಸಂಘಟಿತ, ವಿಕೇಂದ್ರಿಕೃತ ಮತ್ತು ಶ್ರಮಪ್ರಧಾನ ಗುಡಿ ಕೈಗಾರಿಕೆ ರೂಪದಲ್ಲಿರುವ ಈ ಕ್ಷೇತ್ರ, ಗ್ರಾಮೀಣ ಹಾಗೂ ಅರೆ-ನಗರ ಪ್ರದೇಶಗಳ ಕುಶಲಕರ್ಮಿಗಳಿಗೆ ಉದ್ಯೋಗ ಒದಗಿಸಿದ್ದು, ಅವರ ಜೀವನಾಧಾರವಾಗಿದೆ. ಭಾರತದ ಸಿರಿವಂತ ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡುವುದರ ಜತೆಗೆ ದೇಶಕ್ಕೆ ಉತ್ತಮ ಪ್ರಮಾಣದ ವಿದೇಶಿ ವಿನಿಮಯವನ್ನು ತಂದುಕೊಡುವಲ್ಲೂ ಇದರ ಪಾತ್ರ ಅಪಾರ.

ಸಾಂಪ್ರದಾಯಿಕವಾಗಿ ಕೃಷಿಕರು ಮತ್ತು ಕುರಿ ಪಾಲನೆಯಲ್ಲಿರುವವರು ತಮ್ಮ ಎರಡನೇ ಆದಾಯದ ಮೂಲವಾಗಿ ನೇಯ್ಗೆ ಮತ್ತು ಕರಕುಶಲವಸ್ತುಗಳನ್ನು ಅವಲಂಬಿಸಿದ್ದಾರೆ. ದೇಶದಲ್ಲಿ ಪ್ರಸ್ತುತ ಸುಮಾರು 23 ದಶಲಕ್ಷ ಜನರು ಕರಕುಶಲ ಮತ್ತು ನೇಕಾರ ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆಂದು ಅಂದಾಜಿಸಲಾಗಿದೆ. ಸಾಮಾಜಿಕ-ಆರ್ಥಿಕ ಶ್ರೇಣಿಯಲ್ಲಿ ಅವರು ಅತ್ಯಂತ ಕೆಳಮಟ್ಟದಲ್ಲಿದ್ದಾರೆ. ಉತ್ತಮ ಪ್ರಮಾಣದ ರಫ್ತು ಗಳಿಕೆಯು ದೇಶದ ರಫ್ತು ವಹಿವಾಟಿನಲ್ಲಿ ಈ ಕ್ಷೇತ್ರದ ಕೊಡುಗೆಯನ್ನು ವಿಶದಪಡಿಸುತ್ತದೆ. ಭಾರತದ ಕರಕುಶಲ ವಸ್ತುಗಳನ್ನು ವಿಶ್ವದ ಹಲವು ದೇಶಗಳಿಗೆ ರಫ್ತು ಮಾಡಲಾಗುತ್ತಿದ್ದು, ಮುಖ್ಯವಾಗಿ ಅಭಿವೃದ್ಧಿ ಹೊಂದಿದ ಮಾರುಕಟ್ಟೆಗಳೆನಿಸಿದ ಅಮೆರಿಕ, ಬ್ರಿಟನ್, ಸಂಯುಕ್ತ ಅರಬ್ ಸಂಸ್ಥಾನ (ಯುಎಇ), ಜರ್ಮನಿ, ಫ್ರಾನ್ಸ್, ಲ್ಯಾಟಿನ್ ಅಮೆರಿಕ ದೇಶಗಳು (ಎಲ್‌ಎಸಿ), ಇಟಲಿ, ನೆದರ್‌ಲ್ಯಾಂಡ್, ಕೆನಡಾ ಮತ್ತು ಆಸ್ಟ್ರೇಲಿಯಾ ಈ ಪಟ್ಟಿಯಲ್ಲಿ ಸೇರಿವೆ.

ಸಾಂಸ್ಕೃತಿಕ ವಿಚಾರಕ್ಕೆ ಸಂಬಂಧಿಸಿದಂತೆ, ಕಲಾಕೌಶಲ್ಯದಲ್ಲಿ ದೇಶದ ಸಂಪದ್ಭರಿತ ಮತ್ತು ಪುರಾತನ ಸಂಪ್ರದಾಯವನ್ನು ಈ ಉತ್ಪನ್ನಗಳು ವಿಶ್ವಕ್ಕೆ ಸಾರುವುದರ ಜತೆಗೆ ಕರಕುಶಲತೆಯ ಸೌಂದರ್ಯವನ್ನು ಪ್ರತಿನಿಧಿಸುತ್ತವೆ.

ಸಮೃದ್ಧ ಪ್ರಮಾಣದಲ್ಲಿ ಮತ್ತು ಕಡಿಮೆ ದರದಲ್ಲಿ ಕಾರ್ಮಿಕರ ಲಭ್ಯತೆ, ಸ್ಥಳೀಯ ಸಂಪನ್ಮೂಲಗಳ ಸದುಪಯೋಗ, ಕಡಿಮೆ ಬಂಡವಾಳ ಹೂಡಿಕೆ ಮತ್ತು ಜಾಗತಿಕವಾಗಿ ಮೆಚ್ಚುಗೆ ಪಡೆದ ವಿಶಿಷ್ಟ ಕುಶಲಕಲೆ ಈ ಕ್ಷೇತ್ರದ ಪ್ರಮುಖ ಬಲವಾಗಿದೆ.

ಈ ಸಾಮರ್ಥ್ಯದ ಹೊರತಾಗಿಯೂ ಈ ಕ್ಷೇತ್ರ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಅಲ್ಪ ಸಾಕ್ಷರತೆ ಮತ್ತು ಶೈಕ್ಷಣಿಕ ಮಟ್ಟ, ಆಧುನಿಕ ತಾಂತ್ರಿಕ ಕೌಶಲ್ಯಗಳ ಅನುಭವದ ಕೊರತೆ, ಕಚ್ಚಾ ಪದಾರ್ಥಗಳ ಮೇಲೆ ಹೂಡಿಕೆಗೆ ಸಾಕಷ್ಟು ಸಾಲ-ಸೌಲಭ್ಯ ದೊರೆಯದಿರುವುದು ಮತ್ತು ಕಳಪೆ ಸಾಂಸ್ಥಿಕ ಚೌಕಟ್ಟು ಈ ಸಮಸ್ಯೆಗಳ ಪಟ್ಟಿಯಲ್ಲಿ ಸೇರಿವೆ.

ಸಮಗ್ರವಾಗಿ ನೋಡುವುದಾದರೆ, ಯಾಂತ್ರೀಕೃತ ಉತ್ಪನ್ನಗಳಿಂದ ಸ್ಪರ್ಧೆಯನ್ನೂ ಈ ಕ್ಷೇತ್ರ ಎದುರಿಸುತ್ತಿದೆ. ವಿದ್ಯುತ್ ಚಾಲಿತ ಮಗ್ಗಗಳು (ಪವರ್‌ಲೂಮ್ಸ್) ಮತ್ತು ಕೃತಕ ಎಳೆಯ ವಸ್ತ್ರಗಳಿಂದ ಕೈಮಗ್ಗಗಳು ಅಪಾಯ ಎದುರಿಸುತ್ತಿವೆ. ಇಂದು ತಂತ್ರಜ್ಞಾನದ ನೆರವಿನಿಂದ ಗಾಜು ಮತ್ತು

* ಸಂಪುಟ ದರ್ಜೆ ಸಚಿವರು, ಜವಳಿ ಖಾತೆ, ಭಾರತ ಸರ್ಕಾರ. E-mail : mot_fb@nic.in / minister.textile@gov.in

ಮೆಲಮೀನ್‌ಗಳನ್ನು ಪರಿಸರಸ್ನೇಹಿಯಾಗಿ ಮಾರ್ಪಡಿಸಿರುವ ಹಿನ್ನೆಲೆಯಲ್ಲಿ ಮಣ್ಣಿನಿಂದ ಮಾಡಿದ ಹೊಳಪುರಹಿತ 'ಕುಲ್ಹರ್' ಅಥವಾ 'ಶಿಕೊರಾ'ಗಳು ಬಹುತೇಕ ಲುಪ್ತವಾಗಿವೆ.

ಇಂತಹ ಮಿತಿಗಳ ಹೊರತಾಗಿಯೂ ಈ ಕ್ಷೇತ್ರ ವಾರ್ಷಿಕವಾಗಿ ಕೊಂಚ ಮಟ್ಟದ ಅಭಿವೃದ್ಧಿ ಹೊಂದುತ್ತಿದೆ ಎಂದು ಅಂದಾಜಿಸಲಾಗಿದೆ.

ಕುಶಲಕಲೆ ಕ್ಷೇತ್ರದಲ್ಲಿ ಹೂಡಿಕೆಯು ಗ್ರಾಮೀಣ ಸಮುದಾಯಗಳ ಆರ್ಥಿಕ, ಪರಿಸರೀಯ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಭಾರಿ ಅವಕಾಶಗಳನ್ನು ಒದಗಿಸುತ್ತದೆ. 2019ರ ವೇಳೆಗೆ ಕುಶಲಕಲೆ ಕ್ಷೇತ್ರದ ಜಾಗತಿಕ ಮಾರುಕಟ್ಟೆ ಮೌಲ್ಯ 700 ಶತಕೋಟಿ ಅಮೆರಿಕನ್ ಡಾಲರ್‌ಗೆ ಬೆಳೆಯಬಹುದೆಂದು ಅಂದಾಜಿಸಲಾಗಿದೆಯಾದರೂ, ಇದರಲ್ಲಿ ಭಾರತದ ಪಾಲು ಶೇ.2ಕ್ಕಿಂತಲೂ ಕಡಿಮೆ ಇರುವುದು, ಬೆಳವಣಿಗೆಗಿರುವ ಉತ್ತಮ ಅವಕಾಶವನ್ನು ಸೂಚಿಸುತ್ತದೆ. ಇದರಿಂದ ಕೆಲವೊಂದು ಪರಿಸರೀಯ ಅನುಕೂಲಗಳೂ ದೊರೆಯಲಿವೆ. ಕುಶಲಕಲಾ ಉತ್ಪನ್ನಗಳ ತಯಾರಿಕೆ ಪ್ರಕ್ರಿಯೆಯಲ್ಲಿ ಪರಿಸರ ಮಾಲಿನ್ಯ ಪ್ರಮಾಣ (ಕಾರ್ಬನ್ ಫೂಟ್‌ಪ್ರಿಂಟ್) ಕಡಿಮೆ ಇರುವುದಲ್ಲದೆ, ಸ್ಥಳೀಯವಾಗಿ ದೊರೆಯುವ ಕಚ್ಚಾ ಪದಾರ್ಥಗಳು, ನೈಸರ್ಗಿಕ ಮತ್ತು ಸಾವಯವ ಪದಾರ್ಥಗಳ ಬಳಕೆಯನ್ನು ಇದು ಪ್ರೋತ್ಸಾಹಿಸುತ್ತದೆ. ಕರಕುಶಲ ವಸ್ತುಗಳ ತಯಾರಿಕೆಯು ಕೌಶಲ್ಯರಹಿತರು, ಗೃಹಿಣಿಯರಿಗೆ ಆದಾಯದ ಮೂಲ ಮತ್ತು ಉದ್ಯೋಗವನ್ನು ಒದಗಿಸುವ ಮೂಲಕ ಕುಟುಂಬಗಳಲ್ಲಿ ಮತ್ತು ಸಮಾಜದಲ್ಲಿ ಅವರ ಸ್ಥಾನಮಾನ ಉತ್ತಮಪಡಿಸಲು ನೆರವಾಗುತ್ತದೆ.

ಸಾಂಪ್ರದಾಯಿಕ ಕುಶಲಕಲೆಯ ಸಂರಕ್ಷಣೆ, ಕ್ಷೇತ್ರದ ಬಲವರ್ಧನೆ ಮತ್ತು ಕುಶಲಕರ್ಮಿಗಳ ಆದಾಯದ ಪ್ರಮಾಣ ಹೆಚ್ಚಳ ಇವೇ ಮೊದಲಾದ ಕ್ರಮಗಳ



ಮೂಲಕ ಈ ಕ್ಷೇತ್ರದ ಸಾಮರ್ಥ್ಯವನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಳ್ಳಲು ಹಲವು ಬಗೆಯ ಹೂಡಿಕೆಗಳ ಅಗತ್ಯವಿದೆ.

ವಿಚ್ಛಿನ್ನ ಮೌಲ್ಯ ಆಧರಿತ ಸರಪಳಿ ಮೂಲಕ ಕುಶಲಕರ್ಮಿಗಳತ್ತ ಸಹಾಯಹಸ್ತ ಚಾಚಬೇಕಿದೆ. ಕರಕುಶಲ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಅವರ ಕೌಶಲ್ಯದ ಮೌಲ್ಯದ ಬಗ್ಗೆ ಅರಿವು ಮೂಡಿಸುವುದಲ್ಲದೆ, ಅವರ ಉತ್ಪನ್ನ ಮತ್ತು ಕೌಶಲ್ಯದ ಗುಣಮಟ್ಟ ಹೆಚ್ಚಿಸಲು ಸತತ ತರಬೇತಿ ನೀಡಬೇಕು.

ಕೌಶಲಾಭಿವೃದ್ಧಿ, ಸಾಮರ್ಥ್ಯಾವೃದ್ಧಿ ಮತ್ತು ತಾಂತ್ರಿಕ ಆವಿಷ್ಕಾರಗಳನ್ನು ಕೈಮಗ್ಗ ನೇಕಾರರಿಗೆ ತಲುಪಿಸಿ, ಅವರ ಉತ್ಪಾದಕತೆ ಹೆಚ್ಚಿಸಲು ಮತ್ತು ಆ ಮೂಲಕ ಅವರ ಗಳಿಕೆಯನ್ನು ಹೆಚ್ಚಿಸುವಲ್ಲಿ ಜವಳಿ ಸಚಿವಾಲಯದ ಕೈಮಗ್ಗ ಅಭಿವೃದ್ಧಿ ಆಯುಕ್ತರ (ಡಿಸಿ ಹ್ಯಾಂಡ್‌ಲೂಮ್) ಕಚೇರಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೇಕಾರರ ಸೇವಾ ಕೇಂದ್ರಗಳು ಪ್ರಮುಖ ಪಾತ್ರ ವಹಿಸುತ್ತಿವೆ.

ನೇಕಾರರಿಗೆ ವಿನ್ಯಾಸದ ನೆರವು ನೀಡುವುದರ ಜತೆಗೆ ಪೂರ್ವ ನೇಯ್ಗೆ ಮತ್ತು ನೇಯ್ಗೆ ನಂತರದ ಪ್ರಕ್ರಿಯೆ, ಸುತ್ತುವಿಕೆ, ಹಾಸುವಿಕೆ, ಅಳತೆ, ಬಣ್ಣ, ದೋಬಿ ಜಾಕಾರ್ಡ್ ನ್ಯುಮಾಟಿಕ್ ನೇಯ್ಗೆ, ವಿನ್ಯಾಸ ರೂಪಣೆ (ಸಿಎಡಿ) ಇತ್ಯಾದಿಗಳ ಬಗ್ಗೆ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಈ ಕೇಂದ್ರಗಳ ವತಿಯಿಂದ ಹಮ್ಮಿಕೊಳ್ಳಲಾಗುತ್ತಿದೆ.

ನೇಕಾರರಿಗೆ ನೇರ ಮಾರುಕಟ್ಟೆ ಸಂಪರ್ಕ ಕಲ್ಪಿಸಲು ವಿವಿಧ ಮಾರಾಟ ಮತ್ತು ಪ್ರದರ್ಶನ ಮೇಳಗಳನ್ನು ಏರ್ಪಡಿಸುವ ಮೂಲಕವೂ ನೇಕಾರರ ಸೇವಾ ಕೇಂದ್ರಗಳು ನೆರವು ನೀಡುತ್ತಿವೆ.

ನಿರ್ದಿಷ್ಟ ವಸ್ತುಗಳ ಉತ್ಪಾದನೆಯಲ್ಲಿ ವೈಶಿಷ್ಟ್ಯತೆ ಪಡೆದಿರುವ ಹಾಗೂ ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವಂತಹ ಭೌಗೋಳಿಕ ಪ್ರದೇಶಗಳ ಅಭಿವೃದ್ಧಿಯಲ್ಲಿ 'ಮೆಗಾ ಹ್ಯಾಂಡ್‌ಲೂಮ್ ಕ್ಲಸ್ಟರ್' ಯೋಜನೆಯು ಸಕ್ರಿಯವಾಗಿದೆ. ಕೌಶಲ್ಯ ಅಭಿವೃದ್ಧಿ, ವಿನ್ಯಾಸ ಮಾಹಿತಿ ಒದಗಿಸುವುದು, ಮೂಲಸೌಕರ್ಯ ಮತ್ತು ಆರೋಗ್ಯ ಸೌಲಭ್ಯಗಳ ಸುಧಾರಣೆಯಂತಹ ಕ್ರಮಗಳನ್ನೂ ಈ ಯೋಜನೆಯಡಿ



ಕೈಗೊಳ್ಳಲಾಗುತ್ತಿದೆ. ಆ ಮೂಲಕ ದೇಶೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬದಲಾದ ಮಾರುಕಟ್ಟೆ ಬೇಡಿಕೆಗಳನ್ನು ಪೂರೈಸುವುದು ಮತ್ತು ಕೈಮಗ್ಗ ಕ್ಷೇತ್ರವನ್ನು ಆಧರಿಸಿರುವ ಕೋಟ್ಯಂತರ ನೇಕಾರರ ಜೀವನಮಟ್ಟವನ್ನು ಸುಧಾರಿಸುವುದು ಇದರ ಉದ್ದೇಶವಾಗಿದೆ.

ಕೈಮಗ್ಗ ಕ್ಷೇತ್ರದಲ್ಲಿ ಕೌಶಲ ಮತ್ತು ಔದ್ಯಮಿಕತೆಯನ್ನು ಹೆಚ್ಚಿಸಲು ಈ ವರ್ಷದ ರಾಷ್ಟ್ರೀಯ ಕೈಮಗ್ಗ ದಿನಾಚರಣೆ ಸಂದರ್ಭದಲ್ಲಿ (ಆಗಸ್ಟ್ 7), ಜವಳಿ ಸಚಿವಾಲಯ ಮತ್ತು ಕೌಶಲಾಭಿವೃದ್ಧಿ ಮತ್ತು ಔದ್ಯಮಿಕತೆ ಇಲಾಖೆಗಳು ಒಪ್ಪಂದಕ್ಕೆ ಸಹಿ ಹಾಕಿವೆ.

ಈ ಒಪ್ಪಂದದ ಅಂಗವಾಗಿ, ಎರಡೂ ಸಚಿವಾಲಯಗಳೂ ಜಂಟಿಯಾಗಿ ಪರಸ್ಪರ ಜ್ಞಾನ ವಿನಿಮಯ, ಸಂಪನ್ಮೂಲಗಳ ಸದ್ಬಳಕೆ ಮತ್ತು ಸಾಂಸ್ಥಿಕ ಸಹಕಾರದ ಮೂಲಕ ನೇಕಾರರಿಗೆ ಕೌಶಲಾಭಿವೃದ್ಧಿ ಮತ್ತು ಔದ್ಯಮಿಕತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿವೆ.

ಎರಡನೆಯದಾಗಿ, ಕರಕುಶಲ ವಸ್ತುಗಳನ್ನು ಸಮಕಾಲೀನಗೊಳಿಸುವ ಮತ್ತು ನಗರ ಜೀವನಶೈಲಿಗೆ ಪ್ರಸ್ತುತವೆನಿಸುವ ರೀತಿಯಲ್ಲಿ ಮಾರ್ಪಡಿಸುವ ಅಗತ್ಯವಿದೆ. ಭಾರತದ ಕರಕುಶಲ ವಸ್ತುಗಳು ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧೆಯನ್ನು ಎದುರಿಸಲು ಅವುಗಳ ಪ್ರಚಾರ ಕಾರ್ಯ ಬಲಪಡಿಸಬೇಕು. ಜತೆಗೆ, ಸಾಮಾಜಿಕ ಮತ್ತು

ಆರ್ಥಿಕ ಗುರಿಗಳನ್ನು ಸಮ್ಮಿಳಿತಗೊಳಿಸುವ ಹೊಸ ವ್ಯಾಪಾರ ಮಾದರಿಗಳನ್ನು ಅಭಿವೃದ್ಧಿಪಡಿಸಬೇಕಿದೆ. ಮಾರುಕಟ್ಟೆ ವಿಸ್ತರಣೆ ಮತ್ತು ಪ್ರಚಾರದ ದೃಷ್ಟಿಯಲ್ಲಿ 'ಇಂಡಿಯನ್ ಹ್ಯಾಂಡ್‌ಲೂಮ್ ಬ್ರ್ಯಾಂಡ್' ಒಂದು ಮಹತ್ವದ ಪ್ರಯತ್ನವಾಗಿದೆ. 2015ರ ಆಗಸ್ಟ್ 7ರಂದು ಮೊದಲ ಕೈಮಗ್ಗ ದಿನಾಚರಣೆ ಅಂಗವಾಗಿ ಈ ಅಭಿಯಾನಕ್ಕೆ ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಚಾಲನೆನೀಡಿದರು.

ಯಾವುದೇ ಲೋಪ–ದೋಷಗಳನ್ನು ಹೊಂದಿರದ, ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಬೀರದ ಉತ್ಕೃಷ್ಟ ಕೈಮಗ್ಗ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಪ್ರಚಾರ ಮಾಡುವುದು ಈ ಬ್ರ್ಯಾಂಡಿಂಗ್ ಅಭಿಯಾನದ ಉದ್ದೇಶ. ಇಂತಹ ಉತ್ಪನ್ನಗಳ ತಯಾರಿಕೆಗೆ ಬಳಸಲಾದ ಕಚ್ಚಾವಸ್ತು, ತಯಾರಿಕಾ ಪ್ರಕ್ರಿಯೆ, ಅಲಂಕಾರ, ನೇಯ್ಗೆ ವಿನ್ಯಾಸ ಹೀಗೆ ಪ್ರತಿಯೊಂದು ಮಾನದಂಡದಲ್ಲೂ ಗುಣಮಟ್ಟ ಕಾಯ್ದುಕೊಳ್ಳುವುದರ ಜತೆಗೆ ಅವುಗಳ ಉತ್ಪಾದನೆಯು ಸಾಮಾಜಿಕ, ಪರಿಸರೀಯ ಅನುಸರಣೆಗಳನ್ನು ಹೊಂದಿರುವಂತೆ ನೋಡಿಕೊಳ್ಳಲಾಗುತ್ತದೆ.

ಕ್ಷಿಪ್ರವಾಗಿ ಬದಲಾಗುವ ಗ್ರಾಹಕರ ಅಭಿರುಚಿ, ಆಯ್ಕೆಗಳಿಗೆ ತಕ್ಕಂತೆ ಉತ್ಪನ್ನಗಳನ್ನು ವಿನ್ಯಾಸಗೊಳಿಸುವಲ್ಲಿ ಕುಶಲಕರ್ಮಿಗಳಿಗೆ ವೃತ್ತಿ ಸಂಬಂಧ ಮಾರ್ಗದರ್ಶನವಿಲ್ಲದಿರುವುದು ಈ ಕ್ಷೇತ್ರವನ್ನು ಕಾಡುತ್ತಿರುವ ಮತ್ತೊಂದು ಸಮಸ್ಯೆ.

ಈ ಸಮಸ್ಯೆ ಪರಿಹರಿಸಲು 'ಕ್ರಾಫ್ಟ್ ಕ್ಲಸ್ಟರ್' ಯೋಜನೆಯನ್ನು 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ' (ಎನ್‌ಐಎಫ್‌ಟಿ) ಪಠ್ಯಕ್ಕೆ ಸೇರ್ಪಡೆಗೊಳಿಸಲಾಗಿದ್ದು, ದೇಶದ ವಿವಿಧ ಪ್ರದೇಶಗಳ ನೇಕಾರರು ಮತ್ತು ಕುಶಲಕರ್ಮಿಗಳ ಸಹಯೋಗದಲ್ಲಿ ಕಾರ್ಯನಿರ್ವಹಿಸಲು ವಿದ್ಯಾರ್ಥಿಗಳಿಗೆ ಇದರಿಂದ ಅವಕಾಶ ದೊರೆಯಲಿದೆ. ಇದರಿಂದ ಈ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳು ವಿದ್ಯಾರ್ಥಿಗಳ ಗಮನಕ್ಕೆ ಬರಲಿದ್ದು, ನೇಕಾರರು ಮತ್ತು ಕುಶಲಕಮಿಗಳಿಗೆ ಹೊಸ ವಿನ್ಯಾಸ, ತಂತ್ರಗಳು ಮತ್ತು ಕಚ್ಚಾವಸ್ತುಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಅನುವಾಗಲಿದೆ. ನೇಕಾರರು ಮತ್ತು ಕುಶಲಕರ್ಮಿಗಳಿಗೆ ಆಧುನಿಕ ಮಾರುಕಟ್ಟೆಯ ಸವಾಲುಗಳನ್ನು ಪರಿಚಯಿಸಲು ಸಹ ಇದರಿಂದ ನೆರವಾಗಲಿದೆ.

ಚೆನ್ನೈನ 'ಎನ್‌ಐಎಫ್‌ಟಿ', ಕೇರಳದ ಕೋಯಿಕ್ಕೋಡ್ ಕ್ಲಸ್ಟರ್ ಜತೆ ಕೆಲಸ ಮಾಡುತ್ತಿದ್ದು (ವಡಕಾರ, ಕೊಯಿಲಾಂಡಿ ಮತ್ತು ಕೊಯಿಕ್ಕೋಡ್), ಈ ಭಾಗದ ಪುರಾತನ ಕುಶಲಕಲೆಗಳಾದ ಕೈಮಗ್ಗ ಮತ್ತು 'ಉರು' (ಸಾಂಪ್ರದಾಯಿಕ ಮರದ ದೋಣಿ) ವಿಚಾರವಾಗಿ ಹೆಚ್ಚು ಗಮನ ವಹಿಸಲಾಗುತ್ತಿದೆ. ಕೈಮಗ್ಗ ಕ್ಷೇತ್ರವು ಸುಮಾರು 30 ಸಕ್ರಿಯ ಸಹಾಯಕ ಸಂಘಗಳನ್ನು ಹೊಂದಿದೆ. ಕರಕುಶಲ ವಸ್ತುಗಳಿಗೆ ಸಂಬಂಧಿಸಿದಂತೆ, ಉರು ಎಂದು ಕರೆಯಲಾಗುವ ಸಾಂಪ್ರದಾಯಿಕ ಮರದ ದೋಣಿಗಳನ್ನು ನಿರ್ಮಿಸುವ ಕುಶಲಕರ್ಮಿಗಳನ್ನು ಸಂಘ ಒಳಗೊಂಡಿದೆ.

ನಿತ್ಯ ಮಾರುಕಟ್ಟೆಯ ಬೇಡಿಕೆಗಳನ್ನು ಪೂರೈಸುವಲ್ಲಿ ಕುಶಲಕರ್ಮಿಗಳು ಸಫಲವಾದಲ್ಲಿ ಮತ್ತು ದುಬಾರಿಯಲ್ಲದ ದರದಲ್ಲಿ ಗುಣಮಟ್ಟದ ಕಚ್ಚಾ ಪದಾರ್ಥಗಳು ದೊರೆಯುವಂತಾದಲ್ಲಿ ಈ ಕ್ಷೇತ್ರದಲ್ಲಿ ಉತ್ತಮ ಕೆಲಸದ ಗುಣಮಟ್ಟ ಮತ್ತು ಉತ್ತಮ ಕೂಲಿದರ ಕಾಯ್ದುಕೊಳ್ಳಲು ಸಾಧ್ಯವಾಗಲಿದೆ.

ನೇರ ಅಂಗಡಿ–ಮುಂಗಟ್ಟುಗಳ ಅನುಪಸ್ಥಿತಿ ಮತ್ತು ನಗರ ಪ್ರದೇಶಗಳ ಮಾರುಕಟ್ಟೆಗಳ ಜತೆ ಸಂಪರ್ಕ ಕೊರತೆಯು ಇಂದಿಗೂ ಗ್ರಾಮೀಣ ಭಾಗದ ಸಾಮಾನ್ಯ ಕುಶಲಕರ್ಮಿಗಳಿಗೆ ದೊಡ್ಡ ಸವಾಲಾಗಿದೆ. ಕುಶಲಕರ್ಮಿಗಳು ಮತ್ತು ಕ್ಲಸ್ಟರ್‌ಗಳ ಮಾರುಕಟ್ಟೆ ಸಂಪರ್ಕವನ್ನು ಉತ್ತಮಗೊಳಿಸಿ, ತಂತ್ರಜ್ಞಾನದ ಸದುಪಯೋಗ ಪಡೆದುಕೊಂಡರೆ, ಈ ಸವಾಲನ್ನು ಯಶಸ್ವಿಯಾಗಿ ಎದುರಿಸಲು ಸಾಧ್ಯವಾಗಲಿದೆ.

ಈ ಹಿನ್ನೆಲೆಯಲ್ಲಿ, ಇ–ಕಾಮರ್ಸ್ ಮೂಲಕ ಕೈಮಗ್ಗ ಉತ್ಪನ್ನಗಳ ಮಾರಾಟವು ಜವಳಿ ಸಚಿವಾಲಯದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ. ಪಾರದರ್ಶಕ, ಸ್ಪರ್ಧಾತ್ಮಕ ಮತ್ತು ಪರಿಣಾಮಕಾರಿ ರೀತಿಯಲ್ಲಿ ಕೈಮಗ್ಗ ಉತ್ಪನ್ನಗಳ ಮಾರಾಟವನ್ನು ಉತ್ತೇಜಿಸುವ ನಿಟ್ಟಿನಲ್ಲಿ ವಿವಿಧ ಇ–ಕಾಮರ್ಸ್ ವೇದಿಕೆಗಳನ್ನು ಬಳಸಿಕೊಳ್ಳಲಾಗುತ್ತಿದೆ.



ಇಂತಹ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವ ಮೂಲಕ ಉತ್ತಮ ಜೀವನಾಧಾರ ಆದಾಯ ಗಳಿಸಲು ಕುಶಲಕರ್ಮಿಗಳನ್ನು ಸಮರ್ಥಗೊಳಿಸಬಹುದು.

ಸರ್ಕಾರ, ಹಣಕಾಸು ಸಂಸ್ಥೆಗಳು, ಸರ್ಕಾರೇತರ ಸೇವಾ ಸಂಸ್ಥೆಗಳು ಮತ್ತು ತಜ್ಞರು ಹೀಗೆ ಬಹುಮುಖಿ ವ್ಯಕ್ತಿ–ಸಂಸ್ಥೆಗಳನ್ನು ಒಳಗೊಂಡ ಸಮಗ್ರ ಪರಿಹಾರ ಕ್ರಮದ ಮೂಲಕ ಕರಕುಶಲ ಕ್ಷೇತ್ರಕ್ಕೆ ಹೆಚ್ಚಿನ ನೆರವು ನೀಡಬಹುದು. ವಿವಿಧ ಪಾಲುದಾರರಿಗೆ ಅವರ ಜವಾಬ್ದಾರಿಗಳನ್ನು ನಿರ್ಧರಿಸುವ ಸಹಯೋಜಿತ ವ್ಯವಸ್ಥೆಯೊಂದನ್ನು ರೂಪಿಸುವುದರಿಂದ ಕುಶಲಕರ್ಮಿಗಳಿಗೆ ಪ್ರತಿಯೊಬ್ಬರು ವಿಭಿನ್ನ ರೀತಿಯಲ್ಲಿ ನೆರವು ನೀಡಲು ಅನುಕೂಲವಾಗಲಿದೆ.

ಇದಕ್ಕೆ ಆಸಕ್ತಿಕರ ಉದಾಹರಣೆಯೆಂದರೆ, ಈಶಾನ್ಯ ಅಭಿವೃದ್ಧಿ ಹಣಕಾಸು ನಿಗಮದ ಅಸ್ಸಾಂ ಮೂಲದ 'ಆಕ್ವಾ ವೀವ್ಸ್' ಸಂಘಟನೆ. ಜಲಮಾಲಿನ್ಯಕ್ಕೆ ಕಾರಣವಾಗಿದ್ದ ಹಯಾಸಿಂತ್ ಸಸ್ಯವನ್ನು ಈ ಸಂಘಟನೆಯು ಬ್ಯಾಗ್, ಗೃಹಾಲಂಕಾರ ವಸ್ತುಗಳು, ಇತರ ಬಹುಪಯೋಗಿ ವಸ್ತುಗಳ ತಯಾರಿಕೆಗೆ ಕಚ್ಚಾವಸ್ತುವನ್ನಾಗಿ ಬಳಸಿಕೊಳ್ಳುವ ಮೂಲಕ ಗಮನ ಸೆಳೆದಿದೆ.

ಥಾಯ್ಲೆಂಡ್ ಮತ್ತು ಮಲೇಶಿಯಾಗಳ ಹಾದಿಯಲ್ಲೇ, ಅಹ್ಮದಾಬಾದ್‌ನ ರಾಷ್ಟ್ರೀಯ ವಿನ್ಯಾಸ ಸಂಸ್ಥೆಯ ತಜ್ಞರ ಸಲಹೆ ಹಾಗೂ ಮಾರ್ಗದರ್ಶನದಿಂದಾಗಿ, ಈ ಉತ್ಪನ್ನಗಳು ಕೇವಲ ಭಾರತದಲ್ಲಿ ಮಾತ್ರವಲ್ಲದೆ, ನೇಪಾಳ ಜಪಾನ್ ಸೇರಿದಂತೆ ಜಾಗತಿಕ ಮಾರುಕಟ್ಟೆಗೂ ವಿಸ್ತರಿಸಿದ್ದು, ಇದರಿಂದ ಈ ವೃತ್ತಿಯಲ್ಲಿ ನಿರತರಾಗಿರುವ ಕುಶಲಕರ್ಮಿಗಳಿಗೆ ನೆರವಾಗಿದೆ. ಭಾರತದ ಕೈಮಗ್ಗ ಮತ್ತು ಕರಕುಶಲ ವಸ್ತುಗಳು ಭಾರಿ ವೈವಿಧ್ಯತೆ ಹೊಂದಿವೆ.

**(21ನೇ ಪುಟಕ್ಕೆ)**

# ಕಾರ್ಮಿಕ ಕಲ್ಯಾಣದ ಭದ್ರತೆ

* ಅಜಯ್ ತಮಟ



ಜವಳಿ ಉದ್ಯಮದ ಬೃಹತ್ ಗಾತ್ರ ಮತ್ತು ಅದರ ವಿಭಿನ್ನ ವಿಭಾಗಗಳನ್ನು ಗಮನಿಸಿದಾಗ ಇಲ್ಲಿ ಬೇರೆ ಬೇರೆ ತರಹದ ಕೌಶಲಗಳನ್ನು ಹೊಂದಿದ ಕೆಲಸಗಾರರು ಬೇಕಾಗುತ್ತಾರೆ. ಭಾರತ ಸರ್ಕಾರ ಇವರೆಲ್ಲರ ಅಗತ್ಯಗಳಿಗೆ ಅನುಸಾರವಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ.

ಜವಳಿ, ಭಾರತದ ಅತ್ಯಂತ ಪುರಾತನ ಮತ್ತು ಬೃಹತ್ ಉದ್ಯಮಗಳಲ್ಲಿ ಒಂದು. ಸುಮಾರು ನಾಲ್ಕು ಸಾವಿರ ವರ್ಷಗಳಷ್ಟು ಹಿಂದಿನ ಹರಪ್ಪಾ ನಾಗರಿಕತೆಯ ಜನ ನೂಲುವುದು ಮತ್ತು ನೇಯುವುದನ್ನು ಬಲ್ಲವರಾಗಿದ್ದರೆಂಬುದನ್ನು ಪುರಾತತ್ವ ಅಧ್ಯಯನ ಮತ್ತು ಸಮೀಕ್ಷೆಗಳು ಸೂಚಿಸುತ್ತವೆ.

ಜವಳಿ ಕ್ಷೇತ್ರದ ಅಭಿವೃದ್ಧಿಯ ಕೀರ್ತಿಕಥನ ಕಳೆದ ನಾಲ್ಕು ಸಾವಿರ ವರ್ಷಗಳಿಂದ ನಿರಂತರವಾಗಿ ಮುಂದುವರಿದಿದ್ದು ಇಂದು ಈ ಉದ್ಯಮ ದೇಶದ ಲಕ್ಷಾಂತರ ಮಂದಿಯ ಪಾಲಿಗೆ ಜೀವನಾಧಾರವಾಗಿದೆ. ಜವಳಿ ಉದ್ಯಮದಲ್ಲಿ ಇನ್ನೂ ಲಕ್ಷಾಂತರ ಜನರಿಗೆ ಉದ್ಯೋಗ ಒದಗಿಸುವ ಪ್ರಯತ್ನ ಜಾರಿಯಲ್ಲಿದೆ. ಭಾರತ ಸರ್ಕಾರ ಜವಳಿ ಕ್ಷೇತ್ರದ ಕಾರ್ಮಿಕರಿಗೆ ಆರೋಗ್ಯ ಪೂರ್ಣವಾದ ವಾತಾವರಣವನ್ನು ಒದಗಿಸುವ ಪ್ರಯತ್ನ ಮಾಡುತ್ತಿದೆ. ಈ ಮೂಲಕ ಕಾರ್ಮಿಕರು ಉತ್ತಮವಾದ ಗುಣಾತ್ಮಕ ಉತ್ಪನ್ನಗಳನ್ನು ತಯಾರಿಸುವಂತಾಗಬೇಕು ಮತ್ತು ಉದ್ಯಮದ ಎಲ್ಲಾ ಕಾರ್ಮಿಕರಿಗೆ ನಿಶ್ಚಿತವಾಗಿ ಒಳಿತಾಗಬೇಕು ಎಂಬುದು ಸರ್ಕಾರದ ಉದ್ದೇಶ.

ಜವಳಿ ಉದ್ಯಮದ ಬೃಹತ್ ಗಾತ್ರ ಮತ್ತು ಅದರ ವಿಭಿನ್ನ ವಿಭಾಗಗಳನ್ನು ಗಮನಿಸಿದಾಗ ಇಲ್ಲಿ ಬೇರೆ ಬೇರೆ ತರಹದ ಕೌಶಲಗಳನ್ನು ಹೊಂದಿದ ಕೆಲಸಗಾರರು ಬೇಕಾಗುತ್ತಾರೆ. ಭಾರತ ಸರ್ಕಾರ ಇವರೆಲ್ಲರ ಅಗತ್ಯಗಳಿಗೆ ಅನುಸಾರವಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಅವುಗಳಲ್ಲಿ ಹಲವು ಹೀಗಿವೆ.

### 1. ವಿದ್ಯುತ್ ಮಗ್ಗ ವಲಯಕ್ಕಾಗಿ ಕಲ್ಯಾಣ ಯೋಜನೆಗಳು

**ಅ. ಗುಂಪು ವಿಮಾ ಯೋಜನೆ (ಜಿಐಎಸ್)**

ವಿದ್ಯುತ್ ಮಗ್ಗ ನೇಕಾರರು ಕಡಿಮೆ ಆದಾಯದ ಸ್ತರದಲ್ಲಿ ಬರುತ್ತಾರೆ. ಆರೋಗ್ಯಕವರವಲ್ಲದ ಪರಿಸರದಲ್ಲಿ ಬದುಕುತ್ತಾರೆ. ಮತ್ತಿವರು ಯಾವುದೇ ಜೀವ ವಿಮಾ ಯೋಜನೆ ಅಥವಾ ಆರೋಗ್ಯ ವಿಮಾ ಯೋಜನೆಯಡಿ ಸೇರಿರುವುದಿಲ್ಲ. ಜವಳಿ ನೇಕಾರರಿಗಾಗಿ ಗುಂಪು ವಿಮಾ ಯೋಜನೆಯನ್ನು 2003ರಲ್ಲಿ ಪ್ರಾರಂಭಿಸಲಾಗಿದ್ದು ಇದು 12ನೇ ಯೋಜನೆಯಲ್ಲೂ ಮುಂದುವರಿದಿದೆ. ಈ ಯೋಜನೆ ಜವಳಿ ಮಂತ್ರಾಲಯದ ಮೂಲಕ, ಅಂದರೆ ಅದಕ್ಕೇ ಅಂಟಿಕೊಂಡಿರುವ ಮುಂಬೈ ಜವಳಿ ಆಯುಕ್ತರ ಕಛೇರಿಯ ಮೂಲಕ ಜಾರಿಯಾಗುತ್ತಿದ್ದು, ನೇಕಾರರಿಗೆ ಪರಿಹಾರ ಸೌಲಭ್ಯಗಳನ್ನು ಒದಗಿಸುತ್ತಿದೆ.

ಎ. ಸಹಜ ಸಾವಿನ ಸಂದರ್ಭದಲ್ಲಿ 60,000 ರೂಪಾಯಿಗಳು. ಬಿ. ಅಪಘಾತದಲ್ಲಿ ಸಾವುಂಟಾದರೆ 1,50,000 ರೂಪಾಯಿಗಳು. ಸಿ. ಅಪಘಾತದಲ್ಲಿ ಶಾಶ್ವತ ಅಂಗವಿಕಲತೆ ಉಂಟಾದರೆ 1,50,000 ರೂಪಾಯಿಗಳು. ಡಿ. ಅಪಘಾತದಲ್ಲಿ ಭಾಗಶಃ ಅಂಕವಿಕಲತೆ ಉಂಟಾದರೆ 75,000 ರೂಪಾಯಿಗಳು

ಇದರೊಟ್ಟಿಗೆ ಶಿಕ್ಷಣ ಸಹಾಯ ಯೋಜನೆಯಡಿಯಲ್ಲಿ ವಿಮೆ ಮಾಡಿಸಿದ ವ್ಯಕ್ತಿಯ ಕುಟುಂಬದ 9 ರಿಂದ 12ನೆಯ

* ಜವಳಿ ಖಾತೆ ಸಹಾಯಕ ಸಚಿವರು, ಭಾರತ ಸರ್ಕಾರ. E-mail : mos-textiles@gov.in

ತರಗತಿಯವರೆಗೆ ಓದುವ ಇಬ್ಬರು ಮಕ್ಕಳಿಗೆ ವಾರ್ಷಿಕ ಗರಿಷ್ಠ 2400 ರೂಪಾಯಿಗಳ ಶಿಕ್ಷಣ ಅನುದಾನ ನೀಡುವ ಅವಕಾಶವಿದೆ. ಈ ಯೋಜನೆಯ ಅಡಿಯಲ್ಲಿ ನೇಕಾರ ವಾರ್ಷಿಕ ಪ್ರೀಮಿಯಂನ 470 ರೂಪಾಯಿಗಳಲ್ಲಿ 80 ರೂಪಾಯಿ ಮಾತ್ರ ಪಾವತಿಸಬೇಕಾಗುತ್ತದೆ. ಉಳಿದ ಮೊತ್ತವನ್ನು ಭಾರತ ಸರ್ಕಾರ ಕಟ್ಟಿಕೊಡುತ್ತದೆ.

**ಆ. ಜವಳಿ ನೇಕಾರರ ಪುನರ್ವಸತಿ ಪುದವಟ್ಟು ಯೋಜನೆ (ಐಡಬ್ಲ್ಯೂಆರ್‌ಇಎಸ್)**

ಈ ಯೋಜನೆಯ ಅಡಿಯಲ್ಲಿ ಜವಳಿ ಘಟಕ ಅಥವಾ ಅದರ ಯಾವುದೇ ವಿಭಾಗ ಬಾಗಿಲು ಮುಚ್ಚಿದರೆ ಕಾರ್ಮಿಕರಿಗೆ ಮಧ್ಯಂತರ ಪರಿಹಾರ ಒದಗಿಸಲಾಗುವುದು.

ಈ ವರ್ಷ, 2016ರ ಆಗಸ್ಟ್‌ವರೆಗೆ ಭಾರತದಾದ್ಯಂತ ಬಾಗಿಲು ಮುಚ್ಚಿದ 98 ಜವಳಿ ಮಿಲ್‌ಗಳ 1,17,751 ಕಾರ್ಮಿಕರಿಗೆ 319.66 ಕೋಟಿ ರೂಪಾಯಿಗಳ ಪರಿಹಾರ ಒದಗಿಸಲಾಗಿದೆ.

### 2. ಕೈಮಗ್ಗ ನೇಕಾರರಿಗಾಗಿ ಕಲ್ಯಾಣ ಯೋಜನೆಗಳು

ಕೈಮಗ್ಗ ಕ್ಷೇತ್ರದಲ್ಲಿ ದುಡಿಯುವವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿ, ವಿದ್ಯುತ್ ಮಗ್ಗದ ಕ್ಷೇತ್ರದಲ್ಲಿ ದುಡಿಯುವ ಅವರ ಬಂಧುಗಳಿಗಿಂತ ಹೆಚ್ಚೇನೂ ಭಿನ್ನವಾಗಿಲ್ಲ. ಕೈ ಮಗ್ಗದ ನೇಕಾರರು, ಬುಡಕಟ್ಟು ಮೂಲ ನಿವಾಸಿಗಳೂ ಸೇರಿದಂತೆ ಭಾರತದಾದ್ಯಂತ ಹರಡಿಕೊಂಡಿದ್ದಾರೆ. ಅವರ ಸಾಮಾಜಿಕ ಭದ್ರತೆಯ ವಿಚಾರ ಹೆಚ್ಚು ಹೆಚ್ಚು ಜಟಿಲವಾಗುತ್ತಿರುವುದಕ್ಕೆ ಇದೇ ಕಾರಣವಾಗಿದೆ.

ಭಾರತ ಸರ್ಕಾರ ನೇಕಾರರ ಅನುಕೂಲಕ್ಕಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳಲ್ಲಿ ಕೆಲವು ಹೀಗಿವೆ.

**ಅ) ಮಹಾತ್ಮ ಗಾಂಧಿ ನೇಕಾರರ ವಿಮಾ ಯೋಜನೆ**

ಈ ಯೋಜನೆಯಡಿ ವಿಮೆ ಮಾಡಿಸಿದ ನೇಕಾರರು ಮುಂದಿನ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.

ಎ. ಸಹಜ ಸಾವಿನ ಸಂದರ್ಭದಲ್ಲಿ 60,000 ರೂಪಾಯಿಗಳು. ಬಿ. ಅಪಘಾತದಲ್ಲಿ ಸಾವುಂಟಾದರೆ 1,50,000 ರೂಪಾಯಿಗಳು. ಸಿ. ಅಪಘಾತದಲ್ಲಿ ಶಾಶ್ವತ ಅಂಗವಿಕಲತೆ ಉಂಟಾದರೆ 1,50,000 ರೂಪಾಯಿಗಳು. ಡಿ. ಅಪಘಾತದಲ್ಲಿ ಭಾಗಶಃ ಅಂಕವಿಕಲತೆ ಉಂಟಾದರೆ 75,000 ರೂಪಾಯಿಗಳು

**ಆ) ಆರೋಗ್ಯ ವಿಮಾ ಯೋಜನೆ (ಹೆಚ್‌ಐಎಸ್)**

12ನೆಯ ಯೋಜನೆಯಲ್ಲಿ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ, ಉದ್ಯೋಗ ಮತ್ತು ಕಾರ್ಮಿಕ ಸಚಿವಾಲಯದ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯ ಮಾದರಿಯಲ್ಲಿ ಆರೋಗ್ಯ ವಿಮಾ ಯೋಜನೆಯೊಂದನ್ನು ಅನುಮೋದಿಸಿದೆ. 2016ರ ಮಾರ್ಚ್ 29ರಂದು ಆರೋಗ್ಯ ಸಚಿವಾಲಯ, ಕೈಮಗ್ಗ ನೇಕಾರರಿಗೆ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯ ಲಾಭ ಒದಗಿಸಲು ವಿವರವಾದ ನಿರ್ದೇಶನ ನೀಡಿದೆ. ಈ ಯೋಜನೆ ಆಸ್ಪತ್ರೆಯಲ್ಲಿ ಭರ್ತಿಯಾದ ಕಾರ್ಮಿಕರಿಗಾಗಿ 30,000 ರೂಪಾಯಿಗಳ ವಿಮಾ ಸೌಲಭ್ಯವನ್ನು ನೀಡುತ್ತದೆ.

ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ ಜಾರಿಯಾಗುತ್ತಿರುವ 19 ರಾಜ್ಯಗಳೆಂದರೆ ಅಸ್ಸಾಂ, ಬಿಹಾರ, ಛತ್ತೀಸ್‌ಗಢ, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ, ಜಾರ್ಖಂಡ್, ಕರ್ನಾಟಕ, ಕೇರಳ, ಮಣಿಪುರ, ಮೇಘಾಲಯ, ಮಿಜೊರಾಂ, ಒಡಿಶಾ ಪಂಜಾಬ್ ರಾಜಾಸ್ಥಾನ, ತ್ರಿಪುರಾ, ಉತ್ತರ ಪ್ರದೇಶ, ಉತ್ತರಾಖಂಡ ಹಾಗೂ ಪಶ್ಚಿಮ ಬಂಗಾಳ. ತಮಿಳುನಾಡು ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯನ್ನು ಜಾರಿಗೊಳಿಸಿಲ್ಲ. ಅಲ್ಲಿ ಸಚಿವ ಸಂಪುಟದ ತೀರ್ಮಾನದಂತೆ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯ ಮಾದರಿಯಲ್ಲಿ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ವತಿಯಿಂದ ಒಳರೋಗಿಗಳಿಗೆ





30,000 ರೂಪಾಯಿಗಳನ್ನು ಹಾಗೂ ಹೊರರೋಗಿಗಳಿಗೆ 7,500 ರೂಪಾಯಿಗಳನ್ನು ಹಾಗೂ ಅಕ್ಟೋಬರ್ 1, 2015ರ ವರೆಗೆ 1,44,294 ಮಂದಿ ನೇಕಾರರು ಈ ಯೋಜನೆಯಡಿ ನಾಮ ನಿರ್ದೇಶನ ಹೊಂದಿದ್ದಾರೆ. ಜವಳಿ ಸಚಿವಾಲಯ ಆಗಾಗ್ಗೆ ರಾಷ್ಟ್ರೀಯ ಬಿಮಾ ಯೋಜನೆಯ ಬಗ್ಗೆ ಕಾರ್ಯಾಲಯಗಳನ್ನು ಏರ್ಪಡಿಸುತ್ತದೆ. ಈ ಕಾರ್ಯಾಗಾರಗಳಲ್ಲಿ ರಾಜ್ಯ ಕೈ ಮಗ್ಗ ಇಲಾಖೆಯ ಆಯುಕ್ತರು, ನಿರ್ದೇಶಕರು, ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯ ಅಧಿಕಾರಿಗಳು ಭಾಗವಹಿಸಿ ಯೋಜನೆಯನ್ನು ಜಾರಿಗೊಳಿಸುವ ವಿಧಿ ವಿಧಾನಗಳ ಬಗ್ಗೆ ಚರ್ಚಿಸಲಾಗುತ್ತದೆ.

### 3. ಕರಕುಶಲ ಕ್ಷೇತ್ರದ ನೇಕಾರರಿಗೆ ಕಲ್ಯಾಣ ಯೋಜನೆಗಳು

ಭಾರತದಲ್ಲಿ ಕರಕುಶಲ ಉದ್ಯಮ ತುಂಬಾ ಶ್ರೀಮಂತವಾಗಿದ್ದು, ಗ್ರಾಮೀಣ ಪ್ರದೇಶ, ಬುಡಕಟ್ಟು ಪ್ರದೇಶ ಹಾಗೂ ದೇಶದ ಒಳನಾಡು, ದೂರಪ್ರದೇಶಗಳಲ್ಲೆಲ್ಲಾ ಹರಡಿಕೊಂಡಿದೆ. ಈ ಕ್ಷೇತ್ರದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಭಾರತ ಸರ್ಕಾರ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**ಅ) ರಾಜೀವ್ ಗಾಂಧಿ ಶಿಲ್ಪಿ ಸ್ವಾಸ್ಥ್ಯ ಬಿಮಾ ಯೋಜನೆ**

ಈ ಯೋಜನೆಯನ್ನು 2006–07ರಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಯಿತು ಹಾಗೂ ನಂತರ 11 ಹಾಗೂ 12ನೇ ಯೋಜನೆಗಳಲ್ಲೂ ಮುಂದುವರಿಸಲಾಯಿತು. ಈ ಯೋಜನೆ ಕರಕುಶಲ ಕ್ಷೇತ್ರದಲ್ಲಿ ದುಡಿಯುವ ಶಿಲ್ಪಿಗಳಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸುವ ಉದ್ದೇಶ ಹೊಂದಿದೆ. ಶಿಲ್ಪಿ ನೊಂದಣಿಗಾಗಿ ಕೇವಲ 30 ರೂಪಾಯಿಗಳನ್ನು ನೀಡಿದರೆ ಸಾಕು. ಭಾರತ ಸರ್ಕಾರ ಈ ಯೋಜನೆಯ ಶೇಕಡ 75 ರಷ್ಟು ಖರ್ಚನ್ನು ಭರಿಸುತ್ತದೆ.



ಉಳಿದ ಶೇ. 25 ರಷ್ಟು ಖರ್ಚನ್ನು ರಾಜ್ಯ ಸರ್ಕಾರಗಳು ತುಂಬಿಕೊಡುತ್ತವೆ. ಜಮ್ಮು ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳಲ್ಲಿ ವಿಮಾ ಕಂತಿನ ಶೇಕಡ 9 ರಷ್ಟನ್ನು ಭಾರತ ಸರ್ಕಾರವೇ ತುಂಬಿಕೊಡುತ್ತದೆ. ಈ ಯೋಜನೆಯಡಿಯಲ್ಲಿ ಶಿಲ್ಪಿ ಮತ್ತವನ ಕುಟುಂಬದ ನಾಲ್ಕು ಮಂದಿಗೆ ಆರೋಗ್ಯ ವಿಮೆಯ ಸೌಲಭ್ಯ ದೊರಕುತ್ತದೆ.

ವಿಮೆ ಮಾಡಿಸಿದ ಕುಟುಂಬದ ಯಾವುದೇ ವ್ಯಕ್ತಿ ಆಸ್ಪತ್ರೆಗೆ ಸೇರುವ ಸಂದರ್ಭ ಬಂದಲ್ಲಿ 30,000 ರೂಪಾಯಿಗಳ ವಿಮಾ ಸೌಲಭ್ಯ ದೊರಕುತ್ತದೆ. ಹೊರ ರೋಗಿಯಾಗಿ ಚಿಕಿತ್ಸೆ ಪಡೆದರೆ 7500 ರೂಪಾಯಿಯ ಸೌಲಭ್ಯ ನೀಡಲಾಗುತ್ತದೆ. ಈಗ ಈ ಯೋಜನೆಯನ್ನು ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಲ್ಲಿ ಅಂತರ್ಗತಗೊಳಿಸಲಾಗಿದೆ. 1.4.2017 ರಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ ಇದನ್ನು ಜಾರಿ ಮಾಡುವ ಹೊಣೆ ಹೊರುತ್ತದೆ. ಈ ಯೋಜನೆಯಡಿಯಲ್ಲಿ ಇದುವರೆಗೆ 23, 74, 938 ಶಿಲ್ಪಿಗಳು ನೊಂದಣಿಯಾಗಿದ್ದಾರೆ.

**ಆ. ಆಮ್ ಆದ್ಮಿ ಬಿಮಾ ಯೋಜನೆ**

ಭಾರತೀಯ ಜೀವ ವಿಮಾ ನಿಗಮ 2004–05ರಲ್ಲಿ ಕರಕುಶಲ ಕ್ಷೇತ್ರದ ಶಿಲ್ಪಿಗಳಿಗೆ ವಿಮಾ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಜನಶ್ರೀ ವಿಮಾ ಯೋಜನೆಯನ್ನು ಜಾರಿ ಮಾಡಿತು. ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ 11ನೇ ಯೋಜನೆಯಲ್ಲಿ ಇದಕ್ಕೆ ಒಪ್ಪಿಗೆ ನೀಡಿದರೂ ಇದರ ಹೆಸರನ್ನು ಇಎಫ್‌ಸಿ ವೆಚ್ಚ ಹಣಕಾಸು ಸಮಿತಿ ಸಲಹೆಯಂತೆ ಆಮ್ ಆದ್ಮಿ ಬಿಮಾ ಯೋಜನೆ ಎಂದು ಬದಲಾಯಿಸಲಾಯಿತು. ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ಅಂದರೆ 2013–14, 2014–15 ಹಾಗೂ 2016–17ರಲ್ಲಿ ಜೂನ್ ತಿಂಗಳವರೆಗೆ 23, 31, 288 ಮಂದಿ ಕುಶಲ ಕರ್ಮಿಗಳನ್ನು ಈ ಯೋಜನೆಯಡಿ ತರಲಾಗಿದೆ.

ಆಮ್ ಆದ್ಮಿ ಬಿಮಾ ಯೋಜನೆ ಹಾಗೂ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆಯಲ್ಲಿ ವಿಲೀನ ಮಾಡುವ ಪ್ರಸ್ತಾಪವಿದೆ.

**ಬಡ ಕುಶಲ ಕರ್ಮಿಗಳಿಗೆ ಆರ್ಥಿಕ ನೆರವು**

ಈ ಯೋಜನೆಯಡಿ ಕುಶಲ ಕರ್ಮಿಗಳಿಗೆ ಅವರ ಇಳಿ ವಯಸ್ಸಿನಲ್ಲಿ ಆರ್ಥಿಕ ನೆರವು ನೀಡಲಾಗುವುದು. ಶಿಲ್ಪಿ ಗುರು, ರಾಷ್ಟ್ರ ಪ್ರಶಸ್ತಿ, ನ್ಯಾಷನಲ್ ಮೆರಿಟ್ ಅವಾರ್ಡ್, ರಾಜ್ಯ ಕರಕುಶಲ ಪ್ರಶಸ್ತಿ ಮುಂತಾದ ಗೌರವ ಪಡೆದಿರುವ 60 ವರ್ಷ ಮೀರಿದ, ವಾರ್ಷಿಕ 30,000 ರೂಪಾಯಿಗಳಿಗಿಂತ ಕಡಿಮೆ ಆದಾಯವಿರುವ ಕುಶಲ ಕರ್ಮಿಗಳಿಗೆ ಪ್ರತಿ ತಿಂಗಳಿಗೆ ಮೂರು ಸಾವಿರ ರೂಪಾಯಿಗಳ ಆರ್ಥಿಕ ನೆರವು ನೀಡಲಾಗುವುದು. ಈ ಯೋಜನೆಯಡಿ ಈಗಾಗಲೇ 1035 ಕುಶಲಕರ್ಮಿಗಳಿಗೆ 2014–15 ರಿಂದ 2016–17ರ ವರೆಗೆ 164.06 ಲಕ್ಷ ರೂಪಾಯಿಗಳ ಆರ್ಥಿಕ ನೆರವು ನೀಡಲಾಗಿದೆ.

### 4. ನಾರಿನ ಉತ್ಪನ್ನಗಳ ಕ್ಷೇತ್ರದ ಕಾರ್ಮಿಕರಿಗಾಗಿ ಕಲ್ಯಾಣ ಯೋಜನೆಗಳು

**ಅ. ನಾರಿನ ಕಾರ್ಮಿಕರ ಕಲ್ಯಾಣ ಯೋಜನೆ: ಗಿರಣಿ ಪ್ರದೇಶದಲ್ಲಿ ಸ್ವಚ್ಛತೆ**

ನಾರಿನ ಗಿರಣಿಗಳಲ್ಲಿ ಕೆಲಸ ಮಾಡುವ ನೌಕರರು ಮತ್ತು ಅವರ ಕುಟುಂಬದವರಿಗೆ ಸ್ವಚ್ಛತೆಯ ಸೌಲಭ್ಯಗಳನ್ನು ಒದಗಿಸಿ ಕೊಡಲು ಈ ಯೋಜನೆ ಉದ್ದೇಶಿಸಿದೆ. ಈ ಯೋಜನೆಯಡಿ ನಾರಿನ ಗಿರಣಿಗಳಲ್ಲಿ ಕೆಲಸ ಮಾಡುವ ಮಹಿಳೆ ಹಾಗೂ ಪುರುಷರಿಗೆ, ಸ್ವಚ್ಛತೆಯಿಂದ ಕೂಡಿರುವ ಶೌಚಾಲಯ ವಾಷ್‌ಬೇಸಿನ್ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ರಾಷ್ಟ್ರೀಯ ಜೂಟ್ ಬೋರ್ಡ್ ಈ ಖರ್ಚಿನ ಶೇಕಡ 90 ರಷ್ಟು ಅಥವಾ ಗರಿಷ್ಠ 40 ಲಕ್ಷ ರೂಪಾಯಿಗಳ ಸೌಲಭ್ಯ ಒದಗಿಸುತ್ತದೆ.



**ಆ. ನಾರಿನ ಗಿರಣಿಗಳ ಕಾರ್ಮಿಕರಿಗೆ, ಶಿಕ್ಷಣಕ್ಕೆ ಉತ್ತೇಜನ ನೀಡಲು ವಿದ್ಯಾರ್ಥಿ ವೇತನ**

ಈ ಯೋಜನೆಯಡಿ ನಾರಿನ ಗಿರಣಿಗಳ ಕಾರ್ಮಿಕರ ಮಕ್ಕಳಿಗೆ ಅದರಲ್ಲೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಶಿಷ್ಯ ವೇತನ ನೀಡಲಾಗುತ್ತದೆ. ಮಾಧ್ಯಮಿಕ ಶಾಲಾ ಪರೀಕ್ಷೆಯಲ್ಲಿ ಪ್ರತಿ ಹೆಣ್ಣು ಮಗುವಿನ ಕುಟುಂಬಕ್ಕೆ 5000 ರೂಪಾಯಿಗಳ ಶಿಷ್ಯವೇತನ ನೀಡಲಾಗುವುದು. ಪ್ರೌಢಶಾಲೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮಕ್ಕಳ ಕುಟುಂಬಕ್ಕೆ 10,000 ರೂಪಾಯಿಗಳ ವಿದ್ಯಾರ್ಥಿ ವೇತನ ನೀಡಲಾಗುವುದು. 2015–2016ರ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಪದವೀಧರರಿಗೆ 15,000 ರೂಪಾಯಿಗಳು ಹಾಗೂ ಸ್ನಾತಕೋತ್ತರ ಪದವೀಧರರಿಗೆ 20,000 ರೂಪಾಯಿಗಳಿಗೆ ವಿದ್ಯಾರ್ಥಿ ವೇತನವನ್ನು ವಿಸ್ತರಿಸಲಾಯಿತು. ಇಂಜಿನಿಯರಿಂಗ್ ತಂತ್ರಜ್ಞಾನ, ಮ್ಯಾನೇಜ್‌ಮೆಂಟ್, ಸಿ.ಎ., ಸಿ.ಎಸ್., ಐ.ಸಿ.ಡಬ್ಲ್ಯೂ.ಎ.ಐ. ಮುಂತಾದ ಮತ್ತಿತರ ಕೋರ್ಸ್‌ಗಳಿಗೆ ಕೂಡಾ ವಾರ್ಷಿಕ ಟ್ಯೂಷನ್ ಫೀಸ್‌ಗೆ ಸಂಬಂಧಿಸಿದಂತೆ ನೆರವು ಒದಗಿಸಲು ವ್ಯವಸ್ಥೆ ಮಾಡಲಾಗಿದೆ. ಈ ಯೋಜನೆಯಡಿ 2013–14ರ ಸಾಲಿನಿಂದ 6,733 ವಿದ್ಯಾರ್ಥಿಗಳು ಅನುಕೂಲ ಪಡೆದಿದ್ದಾರೆ.

**ಇ. ನಾರಿನ ಗಿರಣಿಗಳಲ್ಲಿ ದುಡಿಯುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ನೌಕರರಿಗೆ ಜೀವ ವಿಮಾ ಯೋಜನೆ**

ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ನಾರಿನ ಗಿರಣಿಗಳ ಕಾರ್ಮಿಕರಿಗೆ ಜೀವ ವಿಮಾ ಯೋಜನೆ ಆರಂಭದಲ್ಲಿ ಮೂರು ವರ್ಷಗಳಿಗೆ ಸೀಮಿತವಾಗಿದೆ. (ಆಗಸ್ಟ್ 2016 ರಿಂದ ಮಾರ್ಚ್ 2019). ಈ ಯೋಜನೆಯಲ್ಲಿ ಎರಡು ಅಂಗಗಳಿವೆ. 1. ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ. 2. ಪ್ರಧಾನ ಮಂತ್ರಿ ಸುರಕ್ಷಾ ಬೀಮಾ ಯೋಜನೆ. ಜವಳಿ ಸಚಿವಾಲಯ, ಈ ಯೋಜನೆಗಳ ಲಾಭ ಜವಳಿ ಕಾರ್ಮಿಕರಿಗೆ ಎಷ್ಟರ ಮಟ್ಟಿಗೆ ಒದಗುತ್ತಿದೆ ಎಂಬುದನ್ನು ಆಗಿಂದಾಗ್ಗೆ ಪರಿಶೀಲನೆ ಮಾಡುತ್ತಿರುತ್ತದೆ. ಕಾರ್ಮಿಕರ ಹಿತಾಸಕ್ತಿಗೆ ಮಂತ್ರಾಲಯ ಅತಿ ಹೆಚ್ಚಿನ ಆದ್ಯತೆ ನೀಡುತ್ತದೆ ಮತ್ತು ಅವರಿಗೋಸ್ಕರ ಇರುವ ಕಲ್ಯಾಣ ಯೋಜನೆಗಳನ್ನು ಇನ್ನೂ ಉತ್ತಮಗೊಳಿಸುವ ನಿರಂತರ ಪ್ರಯತ್ನ ಮಾಡುತ್ತಿದೆ. ❑

# ಉದ್ಯೋಗ ಸೃಷ್ಟಿ ಮತ್ತು ಒಳಗೊಂಡ ಬೆಳವಣಿಗೆ

* ರಶ್ಮಿ ವರ್ಮಾ



**ಜವಳಿ ಉದ್ಯಮದ ಆರಂಭಿಕ ಸ್ತರಗಳಲ್ಲಿ ಯಾವುದೇ ರೀತಿಯ ಅತ್ಯಂತ ಹೆಚ್ಚಿನ ತಾಂತ್ರಿಕ ಕೌಶಲ್ಯಗಳಾಗಲಿ ಅಥವಾ ಹೆಚ್ಚಿನ ಶೈಕ್ಷಣಿಕ ಹಿನ್ನೆಲೆ ಬೇಕು ಎಂದೇನೂ ಇಲ್ಲ. ಹೀಗಾಗಿ ಗ್ರಾಮೀಣ ಪ್ರದೇಶದ ವ್ಯಕ್ತಿಯೊಬ್ಬ 3 ರಿಂದ 4 ವಾರಗಳಲ್ಲಿ ತರಬೇತಿ ಪಡೆದರೆ ಸಾಕು; ಆತ ಜವಳಿ ಕ್ಷೇತ್ರದ ಉದ್ಯೋಗಸ್ಥನಾಗಬಲ್ಲ.**

ಭಾರತದ ಪಾಲಿಗೆ ಜನಸಂಖ್ಯೆಯೇ ಲಾಭಾಂಶವಾಗಿರುವುದರಿಂದ ಮತ್ತು ಬೆಳೆಯುತ್ತಿರುವ ಉದ್ಯೋಗಿಗಳ ಸಂಖ್ಯೆಯಿಂದಾಗಿ ಉದ್ಯೋಗ ಸೃಷ್ಟಿಯೇ ಕೇಂದ್ರೀಕೃತ ಸಂಗತಿಯಾಗಿದೆ. ಹೀಗಾಗಿ ಜವಳಿ ಮತ್ತು ಉಡುಪು ಉದ್ಯಮ ಅತ್ಯಂತ ಹೆಚ್ಚು ಉದ್ಯೋಗಿಗಳನ್ನು ಬೇಡುವ ಮತ್ತು ಭಾರತ ನಿರೀಕ್ಷಿಸುತ್ತಿರುವ ಉದ್ಯೋಗಾಕಾಂಕ್ಷಿಗಳಿಗೆ ತಕ್ಕಂತೆ ಉದ್ಯೋಗಗಳ ಪೂರೈಕೆ ಮಾಡುವ ಬೃಹತ್ ಉದ್ಯಮವಾಗಿದೆ.

ಜಾಗತಿಕ ಮಟ್ಟದ ಆರ್ಥಿಕ ಮಹಾಕುಸಿತದಿಂದ ಪಾರಾಗಿ, ವಿಶಿಷ್ಟ ಸಾಲಿನಲ್ಲಿ ನಿಂತಿರುವ ಭಾರತ ಉಡುಪು ಮತ್ತು ಜವಳಿ ಉದ್ಯಮಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಿರುವುದಲ್ಲದೇ, ಕೌಶಲ್ಯದ ಮೇಲೆ ನಂಬಿಕೆ ಇರಿಸಿ, ಉದ್ಯೋಗಗಳನ್ನೂ ಸೃಷ್ಟಿಸುತ್ತಿದೆ. ಈ ಉದ್ದೇಶಗಳು ಮತ್ತು ಈ ವಲಯದಲ್ಲಿ ತೆಗೆದುಕೊಂಡ ಹೊಸ ನಿಯಮಗಳು ಹೆಚ್ಚಿನ ಪ್ರಗತಿ, ಹೆಚ್ಚಿನ ರಫ್ತು, ಹೆಚ್ಚಿನ ಉದ್ಯೋಗ ಸೃಷ್ಟಿ ಮತ್ತು ಅತ್ಯಂತ ಹೆಚ್ಚು ಸಾಮಾಜಿಕ ಸಂಚಲನವನ್ನು ಉಂಟು ಮಾಡಿದೆ.

ಜಾಗತಿಕ ಮಟ್ಟದಲ್ಲಿ ಆರ್ಥಿಕ ಮಹಾ ಕುಸಿತದಂತಹ ಸಂದರ್ಭಗಳಲ್ಲೂ, ಭಾರತ ಪ್ರಗತಿ ಹೊಂದುತ್ತಿರುವ ದೇಶಗಳ ಸಾಲಿನಲ್ಲಿ ಸಕ್ರಿಯವಾಗಿದ್ದು ಇತ್ತೀಚಿನ ವರ್ಷಗಳಲ್ಲಿ ಶೇ. 7 ರಷ್ಟು ಪ್ರಗತಿದರ ದಾಖಲಿಸಿದೆ. ಆದರೂ, ದೇಶದಲ್ಲಿ ದಿನೇ ದಿನೇ ಉದ್ಯೋಗಾಕಾಂಕ್ಷಿಗಳು ಹೆಚ್ಚುತ್ತಿದ್ದು, ಇವರಿಗಾಗಿ ಉದ್ಯೋಗ ಸೃಷ್ಟಿ ಮಾಡುವ ಕಾಳಜಿ ಇದೆ. ಆಧುನಿಕ ಇತಿಹಾಸವನ್ನು ನೋಡಿದಾಗ ನೀತಿ ನಿರೂಪಕರು, ಉದ್ಯೋಗ ಸೃಷ್ಟಿಗಾಗಿ ಮತ್ತು ಆರ್ಥಿಕತೆಯಲ್ಲಿಮುಂದುವರಿಯಲು ಜವಳಿ ಕ್ಷೇತ್ರವನ್ನು ಅವಲಂಬಿಸಿದ್ದರು ಎಂಬುದು ವೇದ್ಯವಾಗುತ್ತದೆ. ಇತ್ತೀಚಿನ ತಿಂಗಳಲ್ಲಿ ಭಾರತ ಕೂಡ ಈ ವಲಯಕ್ಕೆ ವಿಶಿಷ್ಟ ಸ್ಥಾನ ಮಾನ ತಂದುಕೊಡುವ ಮೂಲಕ ಇದರ ರಾಷ್ಟ್ರೀಯ ಉದ್ದೇಶಗಳನ್ನು ಈಡೇರಿಸಲು ಮುಂದಾಗಿದೆ. ವರ್ತಮಾನದಲ್ಲಿ ಇಡೀ ಜಗತ್ತು ನಿರಾಶಾವಾದದ ಆರ್ಥಿಕತೆ ನಿವಾರಿಸಲು ಮಾರ್ಗವನ್ನು ಎದುರು ನೋಡುತ್ತಿರುವಾಗಲೇ ಭಾರತ, ಮುಂದಿನ ಆರ್ಥಿಕ ಪ್ರಗತಿಗಾಗಿ ಜವಳಿ ಮತ್ತು ಉಡುಪು ಉದ್ಯಮದ ಮೇಲೆ ಹೆಚ್ಚಿನ ಆಸ್ಥೆ ವಹಿಸಿ ಅಭಿವೃದ್ಧಿ ಪಡಿಸಲು ಮುಂದಾಗಿದೆ.

### ಜವಳಿ ಕ್ಷೇತ್ರದ ಪುನರುತ್ಥಾನ

ಬಹಳಷ್ಟು ಶತಮಾನಗಳವರೆಗೆ ಭಾರತ ಹತ್ತಿ ಮತ್ತು ರೇಷ್ಮೆ ಬಟ್ಟೆಗಳ ಬಹುದೊಡ್ಡ ಉತ್ಪಾದಕ ದೇಶ ಮತ್ತು ರಫ್ತುದಾರ ದೇಶವಾಗಿತ್ತು. ಇದಕ್ಕೆ ಕಾರಣ, ಈ ವಲಯದಲ್ಲಿ ಭಾರತಕ್ಕಿದ್ದ ವ್ಯಾಪಕ ಶಕ್ತಿ ಮತ್ತು ಸಾಂಪ್ರದಾಯಿಕ ಭಾಗಗಳಾಗಿದ್ದವು. ಆದರೆ ಭಾರತದ ಈ ಜವಳಿ ಉದ್ಯಮಕ್ಕೆ ಹೊಡೆತ ಬಿದ್ದಿದ್ದು, ಬ್ರಿಟಿಷರ ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟ ಮೇಲೆ. ಬ್ರಿಟಿಷರ ನಿಯಮದಿಂದಾಗಿ ಭಾರತದ ಜವಳಿ ಉದ್ಯಮ ಬಹಳಷ್ಟು ಹೊಡೆತ ಅನುಭವಿಸಿತು. ಆದರೆ ಸ್ವಾತಂತ್ರ್ಯಾನಂತರ ಭಾರತದ ಗ್ರಾಮೀಣ ಕುಟುಂಬಗಳಿಗೆ ಲಕ್ಷಾಂತರ ಉದ್ಯೋಗ ಕೊಟ್ಟಿದ್ದಲ್ಲದೇ, ಹಳ್ಳಿಗಳಿಂದ ನಗರಗಳಿಗೆ ವಲಸೆ ಬಂದ ಅಷ್ಟೇ ಪ್ರಮಾಣದ ಕುಟುಂಬಗಳಿಗೆ ಉದ್ಯೋಗ

* ಕಾರ್ಯದರ್ಶಿ, ಜವಳಿ ಸಚಿವಾಲಯ, ಭಾರತ ಸರ್ಕಾರ. E-mail : secy-textiles@nic.in



ಒದಗಿಸುವಲ್ಲಿಯೂ ಯಶಸ್ವಿಯಾಯಿತು. 1990ರ ಆರಂಭದಲ್ಲಿ ಭಾರತ ಹೊಸ ಆರ್ಥಿಕತೆಗೆ ತೆರೆದುಕೊಂಡ ಮೇಲೆ ಮತ್ತು ಸರ್ಕಾರ ಜವಳಿ ಉದ್ಯಮದ ಮೇಲೆ ವಿಶೇಷ ಆಸ್ಥೆ ವಹಿಸಿದ ಮೇಲೆ ಮತ್ತೆ ಪ್ರಗತಿಯ ಕಡೆಗೆ ಅದು ಹೆಜ್ಜೆ ಹಾಕಿತು. ಅಮೆರಿಕ ಮತ್ತು ಯುರೋಪ್‌ಗಳಲ್ಲಿ ಉತ್ಪಾದನಾ ವೆಚ್ಚ ಹೆಚ್ಚಾಗತೊಡಗಿದ ಮೇಲೆ ಏಷ್ಯಾದ ದೇಶಗಳಾದ, ಅದರಲ್ಲೂ ಭಾರತದಲ್ಲಿ ಕಡಿಮೆ ವೇತನಕ್ಕೆ ಕೆಲಸ ಮಾಡುವ ಜನ ಸಿಕ್ಕುವ, ವಿಫುಲವಾಗಿ ಸಿಕ್ಕುವ ನೈಸರ್ಗಿಕ ಸಂಪನ್ಮೂಲಗಳು ಮತ್ತು ಇದಕ್ಕೆ ಪೂರಕವಾಗಿ ಇರಬಲ್ಲ ಸರ್ಕಾರದ ನಿಯಮಗಳಿಂದಾಗಿ ಭಾರತ ಜವಳಿ ಉದ್ಯಮದಲ್ಲೇ ಜಗತ್ತಿನ ಅತ್ಯಂತ ಆಕರ್ಷಕವಾದ ಉತ್ಪಾದಕದೇಶವಾಗಿ ಮಾರ್ಪಟ್ಟಿತು.

ಭಾರತಕ್ಕಿರುವ ಇನ್ನೊಂದು ಅನುಕೂಲವೆಂದರೆ ಹಿಂದಿನ ಕಾಲದಿಂದಲೂ ಸಿಗುವ ನೈಸರ್ಗಿಕ ಕಚ್ಚಾ ಸಾಮಗ್ರಿಗಳು, ಇದರ ಜತೆಯಲ್ಲೇ ಮನುಷ್ಯ ನಿರ್ಮಿತ ನಾರು ಮತ್ತು ಕೆಲಸಕ್ಕೆ ಸಿಗಬಲ್ಲ ಕಾರ್ಮಿಕರು. ಆದರೆ ಬಾಂಗ್ಲಾದೇಶ ಮತ್ತು ವಿಯೆಟ್ನಾಮ್ ದೇಶಗಳು ಕೇವಲ ರಫ್ತಿನ ಮೇಲೆ ತಮ್ಮ ಉದ್ಯಮವನ್ನು ಬೆಳೆಸಿಕೊಂಡಿವೆ. ಆದರೆ ಭಾರತದ ಸ್ಥಿತಿ ಹೀಗಿಲ್ಲ. ಇಲ್ಲಿ ರಫ್ತು ಮತ್ತು ಆಂತರಿಕವಾಗಿ ಉಪಯೋಗಿಸಬಲ್ಲ ಶಕ್ತಿ ಕೂಡ ಇದೆ. ಅದು ರಫ್ತಿನ ಪ್ರಮಾಣಕ್ಕೂ ಹೆಚ್ಚಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಭಾರತ ಜಗತ್ತಿನಲ್ಲೇ ಜವಳಿ ಮತ್ತು ಉಡುಪು ಸಾಮಗ್ರಿಗಳನ್ನು ರಫ್ತು ಮಾಡಬಲ್ಲ ಎರಡನೇ ದೇಶವಾಗಿ ಮಾರ್ಪಟ್ಟಿದೆ. ಇಂದು ಭಾರತದ ರಫ್ತು ಮೌಲ್ಯ 40 ಬಿಲಿಯನ್ ಅಮೆರಿಕನ್ ಡಾಲರ್‌ಗಳು. ಅಂದರೆ ಜಾಗತಿಕ ಮಾರುಕಟ್ಟೆಯಲ್ಲಿ ಶೇ. 5 ರಷ್ಟಿದೆ. ಅಲ್ಲದೆ ಜವಳಿ ಉದ್ಯಮ ದೇಶದ ಜಿಡಿಪಿಯ

**ಕೋಷ್ಟಕ 1 : ಜವಳಿ ಮತ್ತು ಉಡುಪು ಉದ್ಯಮದಲ್ಲಿನ ಅಂದಾಜು ಉದ್ಯೋಗದ ಮೌಲ್ಯ (ಎಲ್ಲವೂ ದಶಲಕ್ಷಗಳಲ್ಲಿ)**

| ವಲಯ/ಉದ್ಯಮ | 2011ರ ಮಾರ್ಚ್‌ನಂತೆ | 2017ಕ್ಕೆ ಅಂದಾಜಿಸಿದಂತೆ | 2015–16 (ಪಿ) |
|---|---|---|---|
| **ಜವಳಿ ವಲಯ** | | | |
| ಹತ್ತಿ/ಮಾನವ ನಿರ್ಮಿತ ನಾರು/ ನೂಲು ಜವಳಿ/ ಮಿಲ್ ಜವಳಿ (ಎಸ್‌ಎಸ್‌ಐ ನೂಲುವುದು ಸೇರಿ ಮತ್ತು ನೇಕಾರಿಕೆಯ ಘಟಕಗಳು ಹೊರಕ್ಕೆ) | 1.4 | 1.61 | 1.58 |
| ಮನುಷ್ಯ ನಿರ್ಮಿತ ನಾರು/ತಂತ್ರ ನೂಲು ಉದ್ಯಮ (ಜವಳಿ ಉದ್ಯಮ ಸೇರಿ ) | 0.24 | 0.28 | 0.27 |
| ವಿಕೇಂದ್ರೀತ ಯಾಂತ್ರೀಕೃತ ಮಗ್ಗ ವಲಯ | 5.08 | 5.84 | 5.71 |
| ಕೈಮಗ್ಗ ವಲಯ | 7 | 8.05 | 7.88 |
| ಹೆಣಿಗೆ ವಲಯ | 0.45 | 0.52 | 0.51 |
| ಸಂಸ್ಕರಣ ವಲಯ | 0.44 | 0.51 | 0.50 |
| ಉಣ್ಣೆಯ ವಲಯ | 3.2 | 3.68 | 3.60 |
| ರೆಡಿಮೇಡ್ ಗಾರ್ಮೆಂಟ್ ವಲಯ (ಹೆಣೆದ ಉಡುಪಿನ ವಲಯ ಸೇರಿ) | 11.22 | 12.9 | 12.62 |
| ರೇಷ್ಮೆ ಕೃಷಿ | 7.7 | 8.86 | 8.67 |
| ಕರಕುಶಲ ವಲಯ | 8 | 9.2 | 9.00 |
| **ಸೆಣಬು ಉದ್ಯಮ** | | | |
| i) ಸಂಘಟಿತ ಸೆಣಬು ಉದ್ಯಮ | 0.26 | 0.3 | 0.29 |
| ii) ಅಸಂಘಟಿತ ಸೆಣಬು ಉದ್ಯಮ | 0.2 | 0.23 | 0.23 |
| ಒಟ್ಟು (I) | 45.19 | 51.97 | 50.84 |
| **ಪೂರಕ ವಲಯ** | | | |
| **ಹತ್ತಿ** | | | |
| i) ಹತ್ತಿ ಕೃಷಿ | 20 | 23 | 22.50 |
| ii) ಹತ್ತಿ ಬೇರ್ಪಡಿಸುವ/ಒತ್ತುವ ಪ್ರಕ್ರಿಯೆ | 1.3 | 1.5 | 1.47 |
| iii) ಹತ್ತಿ ವ್ಯಾಪಾರ | 19 | 21.85 | 21.38 |
| ಉಪ ಮೊತ್ತ | 40.3 | 46.35 | 45.34 |
| ಕುರಿ ಪಾಲನೆ | 2.8 | 3.22 | 3.15 |
| ಸೆಣಬು ಕೃಷಿ | 17 | 19.55 | 19.13 |
| ಜವಳಿ ಯಂತ್ರ ಮತ್ತು ಉಪಕರಣಗಳು | 0.1 | 0.12 | 0.12 |
| ಒಟ್ಟು (II) | 60.2 | 69.23 | 67.73 |
| **ಎಲ್ಲವೂ ಸೇರಿ ಒಟ್ಟಾರೆ ಮೊತ್ತ(I+II)** | **105.4** | **121.2** | **118.57** |

ಮೂಲ : ಭಾರತ ಸರ್ಕಾರದ ಜವಳಿ ಇಲಾಖೆಯ 12ನೇ ಯೋಜನಾ ಅಧ್ಯಯನ ಸಮಿತಿಯ ವರದಿ.

| ಕೋಷ್ಟಕ 2: ಜವಳಿ ಮತ್ತು ಇತರೆ ವಲಯಗಳಲ್ಲಿ ಸೃಷ್ಟಿಯಾಗುತ್ತಿರುವ ಉದ್ಯೋಗಗಳ ವ್ಯತ್ಯಾಸ | | | |
|---|---|---|---|
| ಉತ್ಪಾದಕ ವಲಯ | ನಿಶ್ಚಿತ ಬಂಡವಾಳ (ಲಕ್ಷಗಳಲ್ಲಿ) | ಉದ್ಯೋಗಿಗಳು | ಪ್ರತಿ ಕೋಟಿ ಬಂಡವಾಳ ಹೂಡಿಕೆಗೆ ತಕ್ಕಂತೆ ಇರುವ ಉದ್ಯೋಗ |
| ಹೈನುಗಾರಿಕೆ ವಸ್ತುಗಳು | 1203869 | 145601 | 12 |
| ಪಾನೀಯಗಳು | 2675247 | 158507 | 6 |
| ಧರಿಸುವ ಉಡುಪು, ತುಪ್ಪಳ ಉಡುಪು ಹೊರತುಪಡಿಸಿ | 1280564 | 713833 | 56 |
| ನೇಯ್ದು ಮತ್ತು ಹೆಣೆದ ಉಡುಪುಗಳು | 1369141 | 264261 | 19 |
| ಪೇಪರ್ ಮತ್ತು ಪೇಪರ್ ವಸ್ತುಗಳು | 642536 | 248529 | 39 |
| ರಬ್ಬರ್ ವಸ್ತುಗಳು | 2668512 | 218754 | 8 |
| ಮೂಲ ಕಬ್ಬಿಣ ಮತ್ತು ಉಕ್ಕು | 40999661 | 650680 | 2 |
| ಎಲೆಕ್ಟ್ರಾನಿಕ್ ವಸ್ತುಗಳು | 421154 | 76619 | 18 |
| ಸಾಮಾನ್ಯ ಉದ್ದೇಶಕ್ಕಾಗಿ ಬಳಸುವ ಯಂತ್ರಗಳು | 3417453 | 338964 | 10 |
| ಮೋಟಾರು ವಾಹನಗಳು | 7088020 | 176523 | 2 |
| ಮಾಹಿತಿ ಮೂಲ : ಕೈಗಾರಿಕೆಗಳ ವಾರ್ಷಿಕ ಸಮೀಕ್ಷೆ, 2013-14 | | | |

ಶೇ. 2 ರಷ್ಟು ಪಾಲನ್ನು ಹೊಂದಿದೆ. ಅಲ್ಲದೆ ಕೃಷಿ ಬಿಟ್ಟರೆ, ಅತ್ಯಂತ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿರುವುದು ಇಲ್ಲೇ. ಜತೆಗೆ ಶೇ.10 ರಷ್ಟು ಕೈಗಾರಿಕಾ ಉತ್ಪಾದನೆ ಮತ್ತು ಒಟ್ಟಾರೆಯಾಗಿ ಶೇ. 13 ರಷ್ಟು ರಫ್ತಿಗೆ ಕೊಡುಗೆ ನೀಡುತ್ತಿದೆ.

### ಭಾರತದ ಜನಸಂಖ್ಯಾ ಲಾಭಾಂಶ

120 ಕೋಟಿ ಜನಸಂಖ್ಯೆ ಹೊಂದಿರುವ ಭಾರತ ಇಡೀ ಜಗತ್ತಿನಲ್ಲೇ ಹೆಚ್ಚು ಜನಸಂಖ್ಯೆ ಹೊಂದಿರುವ ಎರಡನೇ ದೇಶ. ಸದ್ಯ ಶೇ. 66 ರಷ್ಟು ಅಂದರೆ, ಅಂದಾಜು 85 ಕೋಟಿ ಜನ ಉದ್ಯೋಗಕ್ಕೆ ಹೋಗಬಲ್ಲ ವಯಸ್ಸಿನವರಾಗಿದ್ದಾರೆ. ಈ ಸಂಖ್ಯೆ 2030ರ ಹೊತ್ತಿಗೆ ಇನ್ನೂ 16.9 ಕೋಟಿಯಷ್ಟು ಏರಿಕೆಯಾಗಲಿದೆ. ಮುಂದಿನ ದಿನಗಳಲ್ಲಿ ಈ ಜನಸಂಖ್ಯೆಯ ಲಾಭಾಂಶದಿಂದ ಹೆಚ್ಚು ಉದ್ಯೋಗಿಗಳನ್ನು ನಿರೀಕ್ಷಿಸುವ ಉದ್ಯಮಗಳಾದಂತಹ ಜವಳಿ ಮತ್ತು ಉಡುಪು ಕ್ಷೇತ್ರದಲ್ಲಿ ಯಶಸ್ಸು ಸಾಧಿಸಬಹುದಾಗಿದೆ. ಈ ರೀತಿಯಲ್ಲಿ ಹೆಚ್ಚುತ್ತಿರುವ ಉದ್ಯೋಗಾಕಾಂಕ್ಷಿಗಳಿಗೆ ತಕ್ಕಂತೆ ಅಷ್ಟೇ ಪ್ರಮಾಣದ ಉದ್ಯೋಗಗಳನ್ನೂ ಸೃಷ್ಟಿಸಬೇಕಾಗಿದೆ. ಅಲ್ಲದೆ ಭಾರತ ಪ್ರತಿವರ್ಷವೂ ಶೇ. 8 ರಿಂದ 10 ರಷ್ಟು ಪ್ರಗತಿಯನ್ನೂ ಹೊಂದುತ್ತಿದೆ;ಜೊತೆಗೆ ಪ್ರಗತಿಯ ಮಾದರಿಯೂ ಎಲ್ಲರನ್ನು ಒಳಗೊಂಡ ಮತ್ತು ಉದ್ಯೋಗಸೃಷ್ಟಿಯ ಮೇಲೆ ಕೇಂದ್ರೀಕರಿಸಿಗೊಂಡಿದೆ.

### ಜವಳಿ ಕ್ಷೇತ್ರದಲ್ಲಿ ಉದ್ಯೋಗ ಸಂಭಾವ್ಯತೆ

ಉದ್ಯೋಗ ಸೃಷ್ಟಿಯಲ್ಲಿ ಜವಳಿ ಉದ್ಯಮವು ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ಮತ್ತು ಸಂಭಾವ್ಯತೆಯನ್ನು ಹೊಂದಿದೆ. ಸದ್ಯ ಈ ವಲಯದಲ್ಲಿ 5 ಕೋಟಿ ಮಂದಿ ನೇರವಾಗಿ ಮತ್ತು 6.7 ಕೋಟಿ ಮಂದಿ ಪರೋಕ್ಷವಾಗಿ, ಅಂದರೆ ಸಂಬಂಧಿತ ವಲಯಗಳಲ್ಲಿ, ಹತ್ತಿ ಮತ್ತು ಸೆಣಬು ಬೆಳೆಯುವ, ಕುರಿ ಉಣ್ಣೆ ಬಿಡಿಸುವ, ಜವಳಿ ಯಾಂತ್ರೀಕತೆಯಲ್ಲಿ ತೊಡಗಿಕೊಂಡಿದ್ದಾರೆ. ಜವಳಿ ಮತ್ತು ಉಡುಪು ಉದ್ಯಮದ ಬಗ್ಗೆ ಹೇಳುವ ವಿಚಾರವೆಂದರೆ, ಇಲ್ಲಿ ಇವೆರಡು



ಸಮ್ಮಿಳಿತಗೊಂಡಿರುವ ಉದ್ಯಮದಲ್ಲಿ ಪ್ರತಿ ಕೋಟಿ ರೂಪಾಯಿಗೆ 30 ಉದ್ಯೋಗಗಳು ಸೃಷ್ಟಿಯಾಗುತ್ತವೆ. ಅದೇ ಉಡುಪು ವಲಯದಲ್ಲಿ ಪ್ರತಿ ಕೋಟಿ ರೂಪಾಯಿಗೆ 70 ಉದ್ಯೋಗಗಳು ಸೃಷ್ಟಿಯಾಗುತ್ತವೆ. ಇನ್ನೂ ಖಚಿತವಾಗಿ ಹೇಳುವುದಾದರೆ, ಅಖಿಲ ಭಾರತ ಜವಳಿ ಮತ್ತು ಗಾರ್ಮೆಂಟ್ ಕೈಗಾರಿಕಾ ಸಮೀಕ್ಷೆ 2011–12ರ ಪ್ರಕಾರ ಎಸ್‌ಎಸ್‌ಐ– ಗಾರ್ಮೆಂಟ್ ಘಟಕಕ್ಕೆ ಸೇರದ ವಲಯದಲ್ಲಿ ಪ್ರತಿ ಕೋಟಿ ರೂಪಾಯಿ ಹೂಡಿಕೆಗೆ 68 ರಿಂದ 169 ಉದ್ಯೋಗಗಳು ಸೃಷ್ಟಿಯಾಗುತ್ತವೆ. ಹೀಗಾಗಿ ಜವಳಿ ಉದ್ಯಮವುಹೂಡಿಕೆ ಮತ್ತು ಹೂಡಿಕೆ ಮಾಡುವ ಹಣದ ಮೌಲ್ಯವನ್ನು ಹೆಚ್ಚು ಉದ್ಯೋಗ ಸೃಷ್ಟಿಸುವ ಮೂಲಕ ಇನ್ನಷ್ಟು ಹೆಚ್ಚಿಸುತ್ತದೆ.

### ಜವಳಿ ಮತ್ತು ಒಳಗೊಂಡ ಅಭಿವೃದ್ಧಿ

ಉದ್ಯೋಗ ಸೃಷ್ಟಿಯನ್ನು ಒಂದು ಕಡೆ ಪಕ್ಕಕ್ಕಿಟ್ಟು ನೋಡಿದಾಗ, ಇದು ಮಹಿಳಾ ಸ್ವಾವಲಂಬನೆಗೂ ಹೆಚ್ಚಿನ ಸಹಾಯ ನೀಡುತ್ತಿರುವುದನ್ನು ಕಾಣಬಹುದು. ಉಡುಪು ವಲಯದಲ್ಲಿ ಶೇ. 70 ರಷ್ಟು ಮಹಿಳೆಯರೇ ಇದ್ದಾರೆ ಎಂಬ ಅಂದಾಜಿದೆ. ಈ ವಲಯವು ಅವಕಾಶ ಸಿಗದ ಸಮಾಜದ ಲಕ್ಷಾಂತರ ಜನರಿಗೆ ಉದ್ಯೋಗ ಅವಕಾಶ ನೀಡಿರುವುದಲ್ಲದೇ, ಅವರಿಗೆಸ್ಥಿರ ಆದಾಯ ಬರಲು ಮತ್ತು ಅವರ ಜೀವನ ಮಟ್ಟ ಸುಧಾರಿಸಲು ಅನುವು ಮಾಡಿಕೊಟ್ಟಿದೆ. ಜತೆಗೆ, ಭಾರತದಂತಹ ದೇಶಕ್ಕೆ ಉದ್ಯೋಗ ಸೃಷ್ಟಿಯಲ್ಲಿ ಜವಳಿ ಉದ್ಯಮವು ಅಪ್ರತಿಮವಾದ ಪ್ರಾಮುಖ್ಯತೆ ಪಡೆದಿದೆ.

ಭಾರತದ ಬಹುಪಾಲು ಜನ ಗ್ರಾಮೀಣ ಪ್ರದೇಶದಲ್ಲೇ ವಾಸಿಸುತ್ತಿದ್ದು, ಅವರಿಗೆ ಉತ್ಕೃಷ್ಟವಾದ ಶಿಕ್ಷಣ ಮತ್ತು ಮೂಲಭೂತ ಸೌಲಭ್ಯಗಳೇ ಸಿಕ್ಕಿರುವುದಿಲ್ಲ. ಅಲ್ಲದೆ ಜವಳಿ ಉದ್ಯಮದ ಆರಂಭಿಕ ಸ್ತರಗಳಲ್ಲಿ ಯಾವುದೇ ರೀತಿಯ ಅತ್ಯಂತ ಹೆಚ್ಚಿನ ತಾಂತ್ರಿಕ ಕೌಶಲ್ಯಗಳಾಗಲಿ ಅಥವಾ ಹೆಚ್ಚಿನ ಶೈಕ್ಷಣಿಕ

| ಕೋಷ್ಟಕ 3 : ಭಾರತದ ಜವಳಿ ಮತ್ತು ಉಡುಪು ಮಾರುಕಟ್ಟೆಯ ಪ್ರಗತಿಯ ಅಂದಾಜು | | | |
|---|---|---|---|
| | 2015–16 | 2025–26 | ಸಿಎಜಿಆರ್ |
| ರಫ್ತು | 40 ಶತಕೋಟಿ ಅಮೆರಿಕನ್ ಡಾಲರ್ | 150 ಶತಕೋಟಿ ಅಮೆರಿಕನ್ ಡಾಲರ್ | 14% |
| ದೇಶೀಯ ಮಾರುಕಟ್ಟೆ | 79 ಶತಕೋಟಿ ಅಮೆರಿಕನ್ ಡಾಲರ್ | 250 ಶತಕೋಟಿ ಅಮೆರಿಕನ್ ಡಾಲರ್ | 12% |
| ಒಟ್ಟು | 119 ಶತಕೋಟಿ ಅಮೆರಿಕನ್ ಡಾಲರ್ | 400 ಶತಕೋಟಿ ಅಮೆರಿಕನ್ ಡಾಲರ್ | 13% |
| ಮೂಲ : ಆಂತರಿಕ ಅಂದಾಜು, ಭಾರತ ಸರ್ಕಾರದ ಜವಳಿ ಸಚಿವಾಲಯ. | | | |

ಹಿನ್ನೆಲೆ ಬೇಕು ಎಂದೇನೂ ಇಲ್ಲ. ಹೀಗಾಗಿ ಗ್ರಾಮೀಣ ಪ್ರದೇಶದ ವ್ಯಕ್ತಿಯೊಬ್ಬ 3 ರಿಂದ 4 ವಾರಗಳಲ್ಲಿ ತರಬೇತಿ ಪಡೆದರೆ ಸಾಕು; ಆತ ಜವಳಿ ಕ್ಷೇತ್ರದ ಉದ್ಯೋಗಸ್ಥನಾಗಬಲ್ಲ.

### ಜಾಗತಿಕ ಕೈಗಾರಿಕೆಯ ರಚನಾತ್ಮಕ ಪಲ್ಲಟ

ಜಾಗತಿಕ ವ್ಯಾಪಾರದಲ್ಲಿ ಚೀನಾ ಕಳೆದ ಮೂರು ದಶಕಗಳಿಂದ ಯಾವುದೇ ವಿವಾದವಿಲ್ಲದ ನಾಯಕನಾಗಿದೆ. ಅದರಲ್ಲೂ ಜವಳಿ ಉದ್ಯಮ ಮತ್ತು ಉಡುಪು ವಲಯದಲ್ಲಿ ಅದು ಭಾರಿ ಪ್ರಮಾಣದ ಪಾಲನ್ನು ಹೊಂದಿದೆ. ಅಂದರೆ ಕಳೆದ 20 ವರ್ಷಗಳಲ್ಲಿ ಅದರ ಪಾಲು ಶೇ. 40ಕ್ಕೆ ಹೆಚ್ಚಾಗಿದೆ. 2009ರ ಆರ್ಥಿಕ ಸಮಸ್ಯೆಯ ನಂತರ, ಚೀನಾದ ಪ್ರಗತಿಯ ದರ ಕಡಿಮೆಯಾಗುತ್ತಿದ್ದು, 2014ರಷ್ಟೊತ್ತಿಗೆ ಅಂದಾಜು ಶೇ. 15ರಿಂದ ಶೇ.4ಕ್ಕೆ ಬಂದಿಳಿದಿದೆ. ಇದು ಭವಿಷ್ಯದಲ್ಲೂ ಮುಂದುವರಿಯಲಿದೆ ಎಂದು ಹೇಳಲಾಗುತ್ತಿದೆ. ಸದ್ಯ ಚೀನಾವು ಜಾಗತಿಕ ರಫ್ತಿನಿಂದ ಹಿಂತೆಗೆಯುತ್ತಿದ್ದು, ಇದಕ್ಕೆ ಹೆಚ್ಚಿನ ವೇತನವೇ ಕಾರಣವಾಗಿದೆ. ಜತೆಗೆ ಆಂತರಿಕ ಮಾರುಕಟ್ಟೆಯತ್ತಲೂ ದೃಷ್ಟಿ ನೆಟ್ಟಿದೆ. ಹೀಗಾಗಿ ಜಾಗತಿಕ ಜವಳಿ ಮಾರುಕಟ್ಟೆಯಲ್ಲಿ ಚೀನಾ ಪ್ರಭಾವ ಕಡಿಮೆಯಾಗುತ್ತಿರುವ ಹೊತ್ತಲ್ಲೇ ಭಾರತಕ್ಕೆ, ಈ ಸದವಕಾಶವನ್ನು ಬಳಸಿಕೊಳ್ಳುವ ಎಲ್ಲ ಸಾಧ್ಯತೆಗಳೂ ಇವೆ. ಅಲ್ಲದೆ ಭಾರತದಲ್ಲಿ ಕಡಿಮೆ ದರಕ್ಕೆ ಸಿಗುವ ಕಾರ್ಮಿಕರು ಮತ್ತು ಕಚ್ಚಾ ಸಾಮಗ್ರಿಗಳೂ ಕಾರಣವಾಗಬೇಕಿದೆ.

### ಜವಳಿ ಮಾರುಕಟ್ಟೆಯ ಪ್ರಗತಿಯ ಅಂದಾಜುಗಳು

ರಫ್ತು ಉದ್ಯಮದಲ್ಲೂ ಭಾರಿ ಏರಿಕೆಯಾಗುವ ಅಂದಾಜಿನ ಜೊತೆಗೆ ಆಂತರಿಕವಾಗಿಯೂ ಜನರ ಆದಾಯ ಹೆಚ್ಚಾಗುತ್ತಿದ್ದು, ಬಟ್ಟೆಯ ಖರೀದಿ ಸಾಮರ್ಥ್ಯವೂ ಎರಡಂಕಿಗೆ ಹೆಚ್ಚುತ್ತಿದೆ. ಹೀಗಾಗಿ ಜಾಗತಿಕ ಮತ್ತು ಆಂತರಿಕ ಮಾರುಕಟ್ಟೆಯಲ್ಲಿ ಹೆಚ್ಚುತ್ತಿರುವ ಬೇಡಿಕೆಯಿಂದಾಗಿ ಭಾರತದ ಜವಳಿ ಮತ್ತು ಉಡುಪು ಮಾರುಕಟ್ಟೆಯು 2025–26ರ ಹೊತ್ತಿಗೆ ಈಗಿರುವ 119 ಶತಕೋಟಿ ಅಮೆರಿಕನ್ ಡಾಲರ್ ನಿಂದ 400 ಶತಕೋಟಿಅಮೆರಿಕನ್ ಡಾಲರ್‌ಗೆ ಹೆಚ್ಚಬಹುದಾಗಿದೆ.

### ಉದ್ಯೋಗ ಸೃಷ್ಟಿಗೆ ತಂತ್ರಗಳು ಮತ್ತು ಎಲ್ಲರನ್ನೊಳಗೊಂಡ ಅಭಿವೃದ್ಧಿ

ಜವಳಿ ಕ್ಷೇತ್ರದಲ್ಲಿ ಎಲ್ಲಿಗೂ ಹೋಲಿಕೆ ಇಲ್ಲದಂತಹ ಉದ್ಯೋಗ ಸೃಷ್ಟಿಯ ಅವಕಾಶವಿರುವುದು ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಜವಳಿ ಉದ್ಯಮ ಬೆಳೆಯುತ್ತಿರುವುದನ್ನು ಮನಗಂಡ ಸರ್ಕಾರ ವೇಗವಾಗಿ ಪ್ರಗತಿ ಕಾಣುವ ಹಾಗೂ ಈ ಉದ್ಯಮದಲ್ಲಿ ಇನ್ನಷ್ಟು ಉದ್ಯೋಗ ಸೃಷ್ಟಿ ಮಾಡುವುದಕ್ಕಾಗಿ ಹೊಸ ತಂತ್ರಗಳನ್ನು ಹೆಣೆಯಿತು. ಇದಕ್ಕೆ ಜತೆಯಾಗಿ ಇರುವ ಯೋಜನೆಗಳನ್ನೇ ಮೇಲ್ದರ್ಜೆಗೇರಿಸುವ, ಮೂಲಭೂತ ಸೌಕರ್ಯ ಹೆಚ್ಚಿಸುವ, ಸಾಂಪ್ರದಾಯಿಕ ಭಾಗಗಳನ್ನು ಶಕ್ತಿಯುತಗೊಳಿಸುವ ಕೆಲಸವನ್ನೂ ಮಾಡಿತು. ಕೌಶಲವೃದ್ಧಿಗಾಗಿ ವಿಶೇಷ



ಆಸ್ಥೆ ವಹಿಸಿತು. ಭಾರತೀಯ ಉಡುಪು ವಲಯದಲ್ಲಿ ಇನ್ನಷ್ಟು ಸ್ಪರ್ಧೆ ಬೆಳೆಯುವ ಸಲುವಾಗಿ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿದ್ದಲ್ಲದೇ, ಇರುವ ಅಡೆ ತಡೆಗಳನ್ನು ನಿವಾರಿಸಿ ಇನ್ನೂ ಹೆಚ್ಚಿನ ಉತ್ಪಾದನೆ, ಉದ್ಯೋಗ ಸೃಷ್ಟಿ ಮತ್ತು ರಫ್ತಿಗೆ ಅವಕಾಶ ಮಾಡುವ ಗುರಿ ಇರಿಸಿಕೊಂಡಿದೆ.

### ಕೌಶಲಭರಿತ ಜನ–ಪೂರಕ ವಾತಾವರಣದ ಸೃಷ್ಟಿ

ಬರುವ ವರ್ಷಗಳಲ್ಲಿ ಇನ್ನಷ್ಟು ಉದ್ಯೋಗ ಸೃಷ್ಟಿಯಾಗಬೇಕಾದರೆ ಹೆಚ್ಚಿನ ಪ್ರಗತಿಯೂ ಬೇಕು. ಈ ಪ್ರಗತಿಗಾಗಿ ಉತ್ಪಾದನಾ ವಲಯದಲ್ಲಿ ಬಹುದೊಡ್ಡ ಮಟ್ಟದ ಹೂಡಿಕೆಯೂ ಬೇಕು. ಇದು ಉತ್ಪಾದನಾ ವಲಯದಲ್ಲಿ ಕೌಶಲ್ಯಭರಿತ ಉದ್ಯೋಗಿಗಳನ್ನೂ ಬಯಸುತ್ತದೆ. ಈ ಬೇಡಿಕೆಯನ್ನು ಈಡೇರಿಸುವುದಕ್ಕಾಗಿ ದೇಶದಲ್ಲಿ ಕೌಶಲವರ್ಧನೆಗಾಗಿ ಸಾಕಷ್ಟು ಯೋಜನೆಗಳನ್ನೂ ಹಮ್ಮಿಕೊಳ್ಳಲಾಗಿದೆ.

ಜವಳಿ ವಲಯಕ್ಕಾಗಿ ಏಕೀಕೃತ ನೈಪುಣ್ಯ ಅಭಿವೃದ್ಧಿ ಯೋಜನೆ (ಐಎಸ್‌ಡಿಎಸ್) ಅನ್ನು ಶುರು ಮಾಡಲಾಗಿದ್ದು, ಈ ಮೂಲಕ ಕೌಶಲ್ಯ ಹೊಂದಿದ ಉದ್ಯೋಗಿಗಳನ್ನು ತಯಾರು ಮಾಡಲಾಗುತ್ತಿದೆ. ಇದು ಇರುವ ಜವಳಿ ತರಬೇತಿ ಸಂಸ್ಥೆಗಳ ಮೂಲಕ ಹಾಗೂ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಮತ್ತು ರಾಜ್ಯ ಸರ್ಕಾರಗಳ ಸಂಸ್ಥೆಗಳ ಮೂಲಕ ತರಬೇತಿ ನೀಡುತ್ತಿದೆ. 2016ರ ಸೆ. 1 ರ ಪ್ರಕಾರ, ಐಎಎಸ್‌ಡಿಎಸ್ ನಲ್ಲಿ 7.7 ಲಕ್ಷ ಉದ್ಯೋಗಿಗಳು ತರಬೇತಿ ಪಡೆದು ಹೊರಬಂದಿದ್ದಾರೆ. ಇದರಲ್ಲಿ 5.06 ಲಕ್ಷ ಅಂದರೆ, ಶೇ.66 ರಷ್ಟು ಮಂದಿ ಜವಳಿ ಉದ್ಯಮದಲ್ಲಿ ಕೆಲಸಕ್ಕೆ ಸೇರಿದ್ದಾರೆ.

2016–17ನೇ ಸಾಲಿನಲ್ಲಿ 15 ಲಕ್ಷ ಉದ್ಯೋಗಿಗಳಿಗೆ ತರಬೇತಿ ನೀಡುವ ಗುರಿಯನ್ನು ಐಎಸ್‌ಡಿಎಸ್ ಹಾಕಿಕೊಂಡಿದೆ. ಇದರ ಜತೆಗೆ ಅಸಂಘಟಿತ ವಲಯದ ಕುಶಲತೆಯನ್ನು ಭಾರತ ಸರ್ಕಾರದ ಕೈಮಗ್ಗ ವಲಯ ಮತ್ತು ಕರಕುಶಲ ವಲಯದ ಯೋಜನೆಗಳ ಮೂಲಕ ಉತ್ತೇಜಿಸಲಾಗುತ್ತಿದೆ. ಅಲ್ಲದೆ ಇತ್ತೀಚೆಗೆ ಸ್ಕಿಲ್ ಇಂಡಿಯಾ ಮಿಷನ್ ಅಡಿಯಲ್ಲಿ ಪರಿಣಾಮಾತ್ಮಕ ಮತ್ತು ವಿಶಾಲ ತರಬೇತಿಯನ್ನು ಬಹು ಯಶಸ್ವಿಯಾಗಿ ನೀಡಲಾಗಿದೆ. ಜವಳಿ

| ಕೋಷ್ಟಕ 4 | |
|---|---|
| **ಭಾಗ/ ಮಧ್ಯಸ್ಥಿಕೆ** | **ನೇರ ಮತ್ತು ಪರೋಕ್ಷ ಉದ್ಯೋಗ (ಲಕ್ಷಗಳಲ್ಲಿ)** |
| ಉಡುಪು ಕ್ಷೇತ್ರದಲ್ಲಿ ಸ್ಪರ್ಧಾತ್ಮಕತೆ ಬೆಳೆಯಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು | 9.7 |
| 80ಜೆಜೆಎಎ ತಿದ್ದುಪಡಿಗಳು | 12.25 |
| ಉಡುಪು ತಯಾರಿಕೆಗಾಗಿ ಹೆಚ್ಚುವರಿ ಟಿಯುಎಫ್ಎಸ್ | 9.5 |
| ಹೆಚ್ಚುವರಿಯಾಗಿ ಶೇ.3.67 ರಷ್ಟು ಇಪಿಎಫ್ ಕೊಡುಗೆ | |
| ಗಾರ್ಮೆಂಟ್ಸ್‌ಗಳಲ್ಲಿ ಕೊರತೆಯಿಂದಾಗಿ ಹೆಚ್ಚುವರಿ ಕೆಲಸದ ಅವಕಾಶ | |
| ಕಾರ್ಮಿಕ ಕಾನೂನುಗಳ ಸುಧಾರಣೆ | 1.75 |
| ಅಪ್ ಸ್ಟ್ರೀಮ್ ಭಾಗದಲ್ಲಿ ಶೇ.35 ಉದ್ಯೋಗ (ನೂಲು, ನಾರು ಮತ್ತು ಸಂಸ್ಕರಣೆ) | 10.7 |
| ಪರೋಕ್ಷ ಉದ್ಯೋಗ (@ 1:1.3) | 56.4 |
| **ಒಟ್ಟು** | **100.3** |
| **ಮೂಲ : ಭಾರತ ಜವಳಿ ಮಂತ್ರಾಲಯದ ಆಂತರಿಕ ಅಂದಾಜು.** | |

ಮತ್ತು ಉಡುಪು ವಲಯಗಳಿಗಾಗಿ ಎರಡು ಕೌಶಲ್ಯ ಮಂಡಳಿಗಳನ್ನು ನಿರ್ಮಿಸಲಾಗಿದೆ. ಜವಳಿ ಮತ್ತು ಉಡುಪು ವಲಯದ ಕೌಶಲ ಮಂಡಳಿ, ರಚನೆ ಮತ್ತು ಗೃಹ ಪೀಠೋಪಕರಣ ವಲಯದ ಕೌಶಲ ಮಂಡಳಿಯನ್ನು ಸ್ಥಾಪಿಸಲಾಗಿದೆ.

### ಸಿದ್ಧ ಉಡುಪು; ವಿಶೇಷ ಪ್ಯಾಕೇಜ್

ಜಾಗತಿಕ ಮಟ್ಟದಲ್ಲಿ ಹೆಚ್ಚಿನ ವೇತನ ವೆಚ್ಚದಿಂದಾಗಿ ಮತ್ತು ಅಲ್ಲಿನ ಕಾರ್ಮಿಕ ನಿಯಮಗಳಿಂದಾಗಿ ಉತ್ಪಾದನೆ ಮೇಲೆ ಹೊಡೆತ ಬಿದ್ದಿರುವುದರಿಂದ ಜವಳಿ ಕ್ಷೇತ್ರವು ಉದ್ಯೋಗ ಸೃಷ್ಟಿಯ ವಿಚಾರದಲ್ಲಿ ದೇಶದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡಿದೆ. ಹೀಗಾಗಿ ಸರ್ಕಾರವು ಹೆಚ್ಚಿನ ಹೂಡಿಕೆ ಮತ್ತು ರಫ್ತಿಗಾಗಿ ಕ್ಷೇತ್ರದ ಮೇಲೆ ಹೆಚ್ಚಿನ ಉತ್ತೇಜನ ನೀಡುತ್ತಿದೆ. ಅಲ್ಲದೆ ಭಾರತದ ಜವಳಿ ಉದ್ಯಮದಲ್ಲಿ ಸ್ಪರ್ಧೆ ಬೆಳೆಯುವ ಸಲುವಾಗಿ ಸಿದ್ಧ ಉಡುಪು ಕ್ಷೇತ್ರದ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್ ಅನ್ನೂ ಘೋಷಿಸಿದೆ.



ಇತ್ತೀಚೆಗಷ್ಟೇ ಜವಳಿ ರಫ್ತಿನಲ್ಲಿರುವ ಕೊರತೆ ನೀಗಿಸುವುದಕ್ಕಾಗಿ, ಜವಳಿ ಉದ್ಯಮಕ್ಕೆ ಇನ್ನಷ್ಟು ಕೆಲಸಗಾರರು ಬರುವ ದೃಷ್ಟಿಯಿಂದ ಕಾರ್ಮಿಕರ ಸುಧಾರಣೆಯಲ್ಲಿ ನಿಗದಿತ ಅವಧಿಯ ಉದ್ಯೋಗ, ಹೆಚ್ಚುವರಿ ಅವಧಿಯ ಹೆಚ್ಚಳ, ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಜೆಜೆಎಎರ ಸರಳೀಕರಣಕ್ಕಾಗಿ ಪ್ಯಾಕೇಜ್ ಅನ್ನು ಒಪ್ಪಲಾಗಿದೆ.

ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಬರುವ ಹೊಸ ಉದ್ಯೋಗಿಗಳ ಮೊದಲ ಮೂರು ವರ್ಷದ ವರೆಗೆ ಕಾರ್ಮಿಕರ ಭವಿಷ್ಯ ನಿಧಿ(ಇಪಿಎಫ್)ನ ಶೇ. 12 ರಷ್ಟನ್ನು ಸರ್ಕಾರವೇ ಭರಿಸುತ್ತಿದೆ. ಅಲ್ಲದೆ 15 ಸಾವಿರ ರೂಪಾಯಿಗಿಂತ ಕಡಿಮೆ ವೇತನ ಪಡೆಯುವವರಿಗೆ ಇಪಿಎಫ್ ಅನ್ನು ಆಯ್ಕೆಯನ್ನಾಗಿ ಮಾಡಲಾಗಿದೆ. ಇವರು ಬೇಕಾದಲ್ಲಿ ಮಾತ್ರ ಇದನ್ನು ಪಡೆಯಬಹುದು. ಇಲ್ಲದಿದ್ದರೆ ಇದನ್ನು ಬೇಡವೆಂದು ಹೇಳಿ ಪೂರ್ಣ ವೇತನ ಪಡೆಯಬಹುದು. ನಿಗದಿತ ಅವಧಿಯ ಉದ್ಯೋಗದ ಪರಿಚಯದೊಂದಿಗೆ ಕಾರ್ಮಿಕರ ಪೂರೈಕೆಯು ಹೆಚ್ಚಳವಾಗಿದ್ದು, ಜವಳಿ ಉದ್ಯಮದ ಭರಪೂರ ಕೆಲಸದ ಅವಧಿಯಲ್ಲಿ ಹೆಚ್ಚಾದ ಕೆಲಸಗಳಾಗುತ್ತಿವೆ. ನಿಗದಿತ ಅವಧಿಯ ಕಾರ್ಮಿಕರನ್ನು, ಕಾಯಂ ಕಾರ್ಮಿಕರ ಜೊತೆಗೆ ಸೇರಿಸಿಕೊಂಡು ಕೆಲಸದ ಅವಧಿ, ವೇತನ, ಭತ್ಯೆ ಮತ್ತು ಕಾನೂನು ಬದ್ಧ ಸೌಕರ್ಯ ನೀಡಲು ಅವಕಾಶ ನೀಡಲಾಗಿದೆ. ಅಲ್ಲದೆ ಹೆಚ್ಚುವರಿ ಅವಧಿಯ ಕೆಲಸಕ್ಕೂ ಅವಕಾಶ ನೀಡಿ ಇದನ್ನು 50 ಗಂಟೆಯಿಂದ 100 ಗಂಟೆಗೆ ಹೆಚ್ಚಿಸಲಾಗಿದ್ದು, ಇದರಿಂದಾಗಿ ಕಾರ್ಮಿಕರ ಗಳಿಕೆಯೂ ಹೆಚ್ಚಾಗುವಂತೆ ಮಾಡಲಾಗಿದೆ. ಹೊಸ ಪ್ಯಾಕೇಜ್ ನಿಂದಾಗಿ ಜವಳಿ ಕ್ಷೇತ್ರದಲ್ಲಿ ಮುಂದಿನ 3 ವರ್ಷಗಳಲ್ಲಿ 1 ಕೋಟಿ ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂದು ನಿರೀಕ್ಷಿಸಲಾಗಿದೆ. ಈ ಬಗ್ಗೆ ಕೋಷ್ಟಕ – 4 ರಲ್ಲಿ ವಿವರಣೆ ನೀಡಲಾಗಿದೆ.

### ಸಾರಾಂಶ

ನಿರೀಕ್ಷಿತ ಪ್ರಮಾಣದಲ್ಲಿ ಉದ್ಯೋಗಗಳ ಏರಿಕೆ ಮತ್ತು ಕೌಶಲ್ಯ ವರ್ಧಿತ ಉದ್ಯೋಗಿಗಳು ಹೆಚ್ಚುತ್ತಿರುವುದರಿಂದಾಗಿ ಆಂತರಿಕವಾಗಿ ಮತ್ತು ಎಫ್‌ಡಿಐ ಮೂಲಕವೂ ಈ ಕ್ಷೇತ್ರಕ್ಕೆ ದೊಡ್ಡ ಮಟ್ಟದ ಹೂಡಿಕೆ ಬರುತ್ತಿದೆ. ಇದಕ್ಕೆ ಮಾನ್ಯ ಪ್ರಧಾನಿ ಅವರ ಮೇಕ್ ಇನ್ ಇಂಡಿಯಾ ಉದ್ದೇಶವೂ ಕಾರಣವಾಗಿದೆ.

ಭಾರತ ಬದಲಾಗುತ್ತಿದೆ ಸರಣಿಯ ಉಪನ್ಯಾಸ ನೀಡುವಾಗ ಸಿಂಗಾಪೂರ ಉಪಪ್ರಧಾನಿ ಶ್ರೀ ಥರ್ಮಾನ್ ಷಣ್ಮುಗುರತ್ನಮ್ ಅವರು, ಜಾಗತಿಕವಾಗಿ ಆರ್ಥಿಕತೆಯು ತೀವ್ರ ನಿರಾಶೆ ಮತ್ತು ನೇತ್ಯಾತ್ಮಕತೆಯತ್ತ ಹೋಗುತ್ತಿದ್ದರೂ, ಭಾರತವು ವಿಶಿಷ್ಟವಾಗಿ ಕಾಣುತ್ತಿದೆ. ಇದಕ್ಕೆ ಸಾಮಾಜಿಕ ಚಲನಶೀಲತೆ, ಮತ್ತು ದೀರ್ಘ ಕಾಲದಲ್ಲಿ ಸಹಾಯವಾಗಬಲ್ಲ ಸಾಮಾಜಿಕ ಮತ್ತು ಮಾನವ ಸಂಪನ್ಮೂಲದ ಮೇಲೆ ಹೆಚ್ಚಿನ ಹೂಡಿಕೆ ಮಾಡುತ್ತಿರುವುದೇ ಕಾರಣವಾಗಿದೆ ಎಂದು ಹೇಳಿದ್ದರು. ಇದಕ್ಕಾಗಿ ಇತ್ತೀಚೆಗಷ್ಟೇ ಜವಳಿ ಮತ್ತು ಉಡುಪು ವಲಯಕ್ಕೆ ಹೆಚ್ಚಿನ ಉತ್ತೇಜನ ನೀಡಲಾಗುತ್ತಿದ್ದು, ಭಾರತ ಸರ್ಕಾರ ಹೊಸ ಭಾಷ್ಯವನ್ನೇ ಬರೆಯುತ್ತಿದೆ. ಈ ಮೂಲಕ ರಫ್ತಿನ ಹೆಚ್ಚಳ, ಹೆಚ್ಚಿನ ಉದ್ಯೋಗ ಸೃಷ್ಟಿ ಮತ್ತು ಸಾಮಾಜಿಕ ಬದಲಾವಣೆಗೆ ಮುನ್ನುಡಿ ಬರೆಯಲಾಗಿದೆ. ❑

ಅವಲೋಕನ

# ಕೈಮಗ್ಗ: ಹಿಂದೆ, ಈಗ ಮತ್ತು ಮುಂದೆ

* ಜಯಾ ಜೇಟ್ಲಿ



**ಕೈಮಗ್ಗ ಉತ್ಪನ್ನಗಳ ಬಳಕೆಯಿಂದ ಇರುವ ಪ್ರಯೋಜನಗಳ ಕುರಿತು ಭಾರತವು ಮೇಕ್ ಇನ್ ಇಂಡಿಯಾ ಮತ್ತು ಸ್ಕಿಲ್ ಇಂಡಿಯಾ ಕಾರ್ಯಕ್ರಮಗಳ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸೃಷ್ಟಿಸಿರುವ ಜಾಗೃತಿಯ ಪರಿಣಾಮವಾಗಿ ವಿದೇಶಿಗರ ಆಸಕ್ತಿ ಮತ್ತು ಅಭಿರುಚಿ ಹೆಚ್ಚಾಗುತ್ತಿದೆ.**

ಪಾರಂಪರಿಕ ಸೃಜನಶೀಲ ಕೈಕಸುಬು ಮತ್ತು ಸೌಂದರ್ಯದ ಅಭಿವ್ಯಕ್ತಿಗಳಲ್ಲಿ ಭಾರತ ಶ್ರೀಮಂತವಾಗಿದೆ. ಭಾರತದ ಈ ಶ್ರೀಮಂತ ಪರಂಪರೆಯ ಕುರಿತು ನಾವು ಆಗಾಗ್ಗೆ ಅರ್ಥ ವಿವರಣೆ ನೀಡುತ್ತಿರುತ್ತೇವೆ. ಜತೆಗೆ, ಏಕತಾನತೆ ಮತ್ತು ಯಾಂತ್ರೀಕೃತ ಪರಿಹಾರ ಸೂಚಿಸುವ ಇತರ ಸಂಸ್ಕೃತಿಗಳ ಬಗ್ಗೆಯೂ ಕುತೂಹಲದಿಂದ ನೋಡುತ್ತಿರುತ್ತೇವೆ. ಇದಕ್ಕೆ ತಪ್ಪು ಗ್ರಹಿಕೆ ಮತ್ತು ಅಂಧವಿಶ್ವಾಸವೇ ಕಾರಣ. ನಾವು ಸಾಂಸ್ಕೃತಿಕವಾಗಿ ಸಂಪನ್ನರಾಗಲು ನಮ್ಮ ಸಂಪ್ರದಾಯಗಳೇ ಕಾರಣ ಎಂಬುದನ್ನು ಮರೆಯುತ್ತಿದ್ದೇವೆ. ವಾಸ್ತವವಾಗಿ, ದೇಶವು ಹೊಸ ಸನ್ನಿವೇಶ ಮತ್ತು ಸಂದರ್ಭಗಳಿಗೆ ಪರಿವರ್ತನೆಯಾಗಲು ಹಾಗೂ ನಾವು ಭಾರತೀಯರೆಂದು ಗುರುತಿಸಿಕೊಳ್ಳಲು ಈ ಸಂಪ್ರದಾಯಗಳೇ ಮೂಲ ಎಂಬುದು ಸತ್ಯ.

### ಅರ್ಥ, ಗುರುತು ಮತ್ತು ಶೈಲಿ

ಭಾರತವನ್ನು ಆಧ್ಯಾತ್ಮಿಕತೆ ಬೇರೂರಿರುವ ರಾಷ್ಟ್ರ ಎಂದು ಆಗಿಂದಾಗ್ಗೆ ಬಣ್ಣಿಸಲಾಗುತ್ತದೆ. ಹಿಂದೆಯೂ ಬಣ್ಣ ಹಚ್ಚಿದ ಮತ್ತು ಮುದ್ರಿಸಿದ ಬಹುತೇಕ ವಸ್ತ್ರಗಳಲ್ಲಿ ದೈವಿಕ ಪ್ರಾರ್ಥನೆಯ ಚಿತ್ರಗಳನ್ನು ರಚಿಸಲಾಗುತ್ತಿತ್ತು. ಈ ರೀತಿಯ ಚಿತ್ರಗಳುಳ್ಳ ಉಡುಪುಗಳು ಬೌದ್ಧ ಧರ್ಮದ ಸಂದೇಶವನ್ನು ಪೂರ್ವ ರಾಷ್ಟ್ರಗಳಿಗೆ ಮುಟ್ಟಿಸಲು ನೆರವಾಗಿತ್ತು ಎಂಬುದು ಗಮನಾರ್ಹ. ದೇವರ ವಿಗ್ರಹಗಳಿಗೆ ತೊಡಿಸುತ್ತಿದ್ದ ರೇಷ್ಮೆ ಸೀರೆಗಳಲ್ಲಿ ಚಿನ್ನದ ದಾರದಿಂದ ಪವಿತ್ರ ಶ್ಲೋಕಗಳನ್ನು ಹೆಣೆಯಲಾಗುತ್ತಿತ್ತು. ಜತೆಗೆ, ರಾಜಮಹಾರಾಜರು ಭುಜದ ಮೇಲೆ ಧರಿಸುತ್ತಿದ್ದ ಶಲ್ಯಗಳ ಮೇಲೂ ಈ ಪವಿತ್ರ ಶ್ಲೋಕಗಳನ್ನು ಚಿನ್ನದ ದಾರದಿಂದ ಹೆಣೆಯಲಾಗುತ್ತಿತ್ತು. ನವವಿವಾಹಿತ ವಧುವಿಗೆ ನೀಡುವ ಒಡಿಶಾದ ಕೈಮಗ್ಗದ ಇಕಾತ್ ಸೀರೆಗಳ ಪಲ್ಲುಗಳ (ನೆರಿಗೆ) ಮೇಲೆ "ಸಂತೋಷದ ಮತ್ತು ದೀರ್ಘ ವಿವಾಹ ಜೀವನ ನಿಮ್ಮದಾಗಲಿ" ಎಂಬ ಆಶೀರ್ವಾದದ ಸಂದೇಶ ಸಾರುವ ಸರಳ ಭಜನೆಗಳು ಮತ್ತು ಕಾವ್ಯಗಳ ಸಾಲುಗಳನ್ನು ಹೆಣೆಯಲಾಗುತ್ತಿತ್ತು. ಭಾರತದ ಸಂಪ್ರದಾಯದಲ್ಲಿ ಯಾವುದೇ ಶುಭ ಕಾರ್ಯಕ್ರಮವನ್ನು ಪವಿತ್ರ ಎಂದೇ ಪರಿಗಣಿಸಲಾಗುತ್ತದೆ. ಯುವಕನೊಬ್ಬ ತನ್ನ ಮೊದಲ ದುಡಿಮೆಯಲ್ಲಿ ತಾಯಿಗೆ ಕೈಯಿಂದ ನೇಯ್ದ (ಕೈಮಗ್ಗ) ಸೀರೆಯೊಂದನ್ನು ಖರೀದಿಸಿದರೂ, ಅದು ಭಾರತದಲ್ಲಿ ಪವಿತ್ರ ಸಾಂಪ್ರದಾಯಿಕ ಕರ್ತವ್ಯವಾಗುತ್ತದೆ. ಗೌರವ ಮತ್ತು ಕೃತಜ್ಞತೆಯ ಸಂಕೇತವಾಗುತ್ತದೆ.

ಸಮಾಜದ ಸಾಮಾನ್ಯ ವಸ್ತ್ರಗಳು ಮತ್ತು ಉಡುಪುಗಳ ಅಗತ್ಯಗಳನ್ನು ಪೂರೈಸುತ್ತಿರುವ ಕೈಮಗ್ಗ ಉದ್ಯಮವು, ಯಾವುದೇ ಒಂದು ಸಮುದಾಯದ ಸಂಸ್ಕೃತಿ ಮತ್ತು ವೈಶಿಷ್ಟ್ಯತೆಗೆ ತಕ್ಕ ವಸ್ತ್ರ ಮತ್ತು ಜವಳಿ ಅಗತ್ಯಗಳನ್ನು ಸಹ ಪೂರೈಸುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ, ವಿಶೇಷ ಅರ್ಥ ಮತ್ತು ಉದ್ದೇಶದ ಅಲಂಕಾರಿಕ ಉಡುಪುಗಳು ಹಾಗೂ ಬೇರೆಯದೇ ರೀತಿಯ ಕೈನೇಯ್ಗೆಯ ಉತ್ಪನ್ನಗಳನ್ನು ಕೈಮಗ್ಗ ಕ್ಷೇತ್ರವು ನೀಡುತ್ತಾ ಬಂದಿದೆ. ಈ ವಿಶೇಷತೆಯಿಂದಾಗಿ, ಭಾರತದ ಜವಳಿ ಉದ್ಯಮ ವಿಶ್ವದಲ್ಲೇ ವಿಶೇಷ ಮತ್ತು ಅರ್ಥಪೂರ್ಣವಾಗಿ ಹೊರಹೊಮ್ಮಿದೆ. ದಕ್ಷಿಣ ಅಮೆರಿಕ, ಆಫ್ರಿಕಾ ಮತ್ತು ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿರುವ ಕೆಲವು ಜನಾಂಗೀಯ ಸಮುದಾಯಗಳು ಈಗಲೂ ಈ ರೀತಿ ಜವಳಿ ಉತ್ಪನ್ನಗಳ ತಯಾರಿಕೆ ಮತ್ತು ಬಳಕೆ

* ಅಧ್ಯಕ್ಷರು, ದಸ್ತ್‌ಕಾರಿ ಹಾತ್ ಸಮಿತಿ. Email : dastkarihaat@gmail.com

ಮಾಡುತ್ತಿವೆ. ಆದರೆ, ಭಾರತದಲ್ಲಿ ಇರುವಷ್ಟು ವ್ಯಾಪಕವಾಗಿಲ್ಲ. ಭಾರತದ ಈಶಾನ್ಯ ರಾಜ್ಯಗಳಲ್ಲಿ ತಯಾರಾಗುವ ಶಾಲುಗಳಲ್ಲಿ ನಿರ್ದಿಷ್ಟ ಸಮುದಾಯದ ಮಾನ್ಯತೆ ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ಬಿಂಬಿಸಿರುವುದನ್ನು ಗಮನಿಸಬಹುದು. ಭಾರತದ ವಿವಿಧೆಡೆ ತಯಾರಾಗುವ ಕೈಮಗ್ಗ ಉತ್ಪನ್ನಗಳಲ್ಲಿ ಆಯಾ ಪ್ರದೇಶದ ಸಾಂಸ್ಕೃತಿಕ ಮತ್ತು ಪಾರಂಪರಿಕ ವೈಭವ ಇರುವುದನ್ನು ಗಮನಿಸಬಹುದು.

ಮೊಘಲರು ಭಾರತವನ್ನು ಪ್ರವೇಶಿಸುವ ಮುನ್ನ, ಬಟ್ಟೆಗಳನ್ನು ಹೊಲಿಗೆ ಮಾಡದೆಯೇ ಹಾಗೆಯೇ ಹೆಚ್ಚಾಗಿ ಧರಿಸಲಾಗುತ್ತಿತ್ತು. ಕೈಮಗ್ಗ ಬಂದ ನಂತರ ಲುಂಗಿ, ಧೋತಿ, ಅಂಗವಸ್ತ್ರ, ಪೇಟಾ, ಶಾಲು, ವೇಸ್ಟ್‌ಕೋಟ್ ಮತ್ತಿತರ ಉಡುಪುಗಳನ್ನು ಪುರುಷರು ಹಾಗೂ ಸೀರೆ, ಶಿರೋವಸ್ತ್ರ ಮತ್ತು ಶಾಲ್‌ಗಳನ್ನು ಮಹಿಳೆಯರು ಧರಿಸಲಾರಂಭಿಸಿದರು. ಆದರೆ, ಮೊಘಲರು ತಮ್ಮ ಆಡಳಿತದಲ್ಲಿ ಹೊಲಿಗೆ ಸೇರಿದಂತೆ ನಾನಾ ಕೌಶಲ್ಯ ಮತ್ತು ಕಸೂತಿಗಳನ್ನು ಪರಿಚಯಿಸಿದರು.

ಪರ್ಷಿಯಾದ ಶೇರ್ವಾನಿ, ಪೈಜಾಮಾ, ಸಲ್ವಾರ್, ಕುರ್ತಾ, ಶರಾರ ಮತ್ತು ಲೆಹೆಂಗಾ ಶೈಲಿಯ ಉಡುಪುಗಳು ಬನಾರಸ್‌ನ ನೇಯ್ದ ರೇಷ್ಮೆ ಜವಳಿ ಮತ್ತು ಬೆಂಗಾಲ್‌ನ ಮಸ್ಲಿನ್ ವಸ್ತ್ರೋದ್ಯಮದಲ್ಲಿ ಭಾರಿ ಬೇಡಿಕೆಯನ್ನೇ ಸೃಷ್ಟಿಸಿತು. 14 ಮತ್ತು 15ನೇ ಶತಮಾನದಲ್ಲಿ ಭಾರತ ಮತ್ತು ಯೂರೋಪ್‌ನಲ್ಲಿ ಈ ವಸ್ತ್ರೋದ್ಯಮದ ಪರಿಪೂರ್ಣ ಹೊಲಿಗೆ ಕೌಶಲ್ಯವು ಭಾರಿ ಬೇಡಿಕೆಗೆ ಕಾರಣವಾಯಿತು. ತರುವಾಯ, ಭಾರತದಲ್ಲಿ ಬ್ರಿಟಿಷರ ಆಡಳಿತವು ಭಾರತದ ಕೈಮಗ್ಗ ವಲಯದ ಅವನತಿಗೆ ಕಾರಣವಾಯಿತು. ಏಕೆಂದರೆ ಬ್ರಿಟಿಷರು ಭಾರತದಲ್ಲಿ ತಮ್ಮ ಆಡಳಿತ ಶುರು ಮಾಡಿದ್ದ ವೇಳೆಗಾಗಲೇ, ಮ್ಯಾಂಚೆಸ್ಟರ್ ಮತ್ತು ಲ್ಯಾಂಕ್‌ಶೈರ್‌ನಲ್ಲಿ ಜವಳಿ ಯಂತ್ರೋದ್ಯಮ ಆರಂಭವಾಗಿತ್ತು. ಇದರಿಂದ ಪ್ರೇರಿತವಾದ ವಸಾಹತುಶಾಹಿ ಆಡಳಿತವು ಭಾರತದಲ್ಲಿ ನೇಕಾರರ ಮೇಲೆ ಭರಿಸಲಾಗದಷ್ಟು ತೆರಿಗೆ ಹಾಕಿ, ನೇಕಾರಿಕೆಯನ್ನು ಹಾಳು ಮಾಡಲು ಮುಂದಾಯಿತು. ಇದು ನೇಕಾರ ಉದ್ಯಮವನ್ನು ಅವನತಿಯತ್ತ ಕೊಂಡೊಯ್ಯಿತು. ಈ ಕಾಲಘಟ್ಟದಲ್ಲಿ ಸ್ವಲ್ಪ ಜಾಣರಾಗಿದ್ದ ನೇಕಾರರು ಹಾಗೂ



ಹೇಗೂ ಬಚಾವಾದರು. ಆದರೆ, ಸ್ಪರ್ಧಾತ್ಮಕ ಕೈಮಗ್ಗ ಉಡುಪುಗಳ ತಯಾರಿಕೆಯಲ್ಲಿ ತಲ್ಲೀನರಾಗಿದ್ದವರು ಪ್ರಬಲ ಸ್ಪರ್ಧೆ ನೀಡಲಾಗದೆ ಹಿಂದೆ ಸರಿದರು. ವಿವಿಧೋದ್ದೇಶದ ದೈನಂದಿನ ಬಳಕೆಯ ಸ್ಕಾರ್ಫ್‌ನಂತಹ ಸರಳ ಉಡುಪುಗಳನ್ನು ತಯಾರಿಸುತ್ತಿದ್ದ ಬಡ ನೇಕಾರರು ಉದ್ಯಮದಲ್ಲಿ ಉಳಿದುಕೊಂಡರು. ಟವೆಲ್, ಮಫ್ಲರ್, ಸೊಂಟದ ಬೆಲ್ಟ್, ಟರ್ಬನ್, ಅರ್ಧ ಲುಂಗಿ, ಬೆಡ್‌ಶೀಟ್, ಹಾಸಿಗೆ ಹೊದಿಕೆ ಮತ್ತಿತರ ಬಟ್ಟೆಗಳನ್ನು ತಯಾರಿಸುತ್ತಿದ್ದ ಬಡ ನೇಕಾರರಿಗೆ ಬ್ರಿಟಿಷರ ತೆರಿಗೆ ಹೊರೆ ಹೆಚ್ಚಾಗಿ ಬಾಧಿಸಲಿಲ್ಲ. ಕೈಮಗ್ಗ ಜವಳಿಯಲ್ಲಿ ಕೆಲವು ಸಂಸ್ಕಾರ ಸಂಪ್ರದಾಯಗಳು ಈಗಲೂ ಉಳಿದುಕೊಂಡಿವೆ. ಉದಾಹರಣೆಗೆ, ಕರ್ನಾಟಕದ ಬುಡಕಟ್ಟು ಜನಾಂಗ "ತಿಗಳರು" ಧರ್ಮರಾಯನ ಪೂಜೆ, ಕೊಂಡ ಹಾಯುವ ಉತ್ಸವ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳ ವೇಳೆ ಭುಜದ ಮೇಲೆ ಬಳಸುವ ಕಡು ಕೆಂಪು ಕರವಸ್ತ್ರ(ಟವಲ್)ದ ಮೇಲೆ ಹಕ್ಕಿಗಳ ಚಿತ್ರಗಳನ್ನು ಹೆಣೆಯಲಾಗಿರುತ್ತದೆ. ಇದು ಕೈಮಗ್ಗಕ್ಕೆ ಇರುವ ಸಾಂಪ್ರದಾಯಿಕ ಹಿನ್ನೆಲೆಯನ್ನು ತೋರುತ್ತದೆ.

### ಮುಂದುವರಿಕೆ

ನೇಕಾರಿಕೆ ಉದ್ಯಮದ ನಿರಂತರ ಮುಂದುವರಿಕೆಯೇ ಭಾರತದಲ್ಲಿ ಕೈಮಗ್ಗ ಸಂಪ್ರದಾಯ ಇನ್ನೂ ಜೀವಂತವಾಗಿ ಉಳಿಯಲು ಸಾಧ್ಯವಾಗಿದೆ. ಮೊದಲನೆಯದಾಗಿ, ಕೈಮಗ್ಗದ ಬಟ್ಟೆಗಳ ವಿನ್ಯಾಸದಲ್ಲಿ ಭಾರತದ ಸಾಂಸ್ಕೃತಿಕ ಪಾವಿತ್ರ್ಯ ಮತ್ತು ಅದರ ಅರ್ಥವನ್ನು ಸಾರಿರುವುದು, ಎರಡನೆಯದಾಗಿ, ಕೈಮಗ್ಗದ ಉಡುಪು ಧರಿಸುವ ಪ್ರತಿ ವ್ಯಕ್ತಿಗೆ ತನ್ನ ಧರ್ಮ, ಸಮುದಾಯ ಮತ್ತು ಪ್ರದೇಶದ ಹಿನ್ನೆಲೆ ಗುರುತಿಸಲು ಕೈಮಗ್ಗದಲ್ಲಿ ಒದಗಿಸಿದ ಅವಕಾಶ ಹಾಗೂ ಮೂರನೆಯದಾಗಿ, ಜಾತಿ ವ್ಯವಸ್ಥೆಯ ನಿರಂತರ ಮುಂದುವರಿಕೆಯ ಮೂಲಕ ನಿಶ್ಚಲತೆಯನ್ನು ಖಾತ್ರಿಪಡಿಸಿರುವುದೇ ಕೈಮಗ್ಗದ ಉಳಿವಿಗೆ ಕಾರಣ. ಆದರೆ, ಈ ಕೈಮಗ್ಗ ಕಸುಬನ್ನೇ ವಂಶ ಪಾರಂಪರ್ಯವಾಗಿ ಮಾಡುತ್ತಾ ಬಂದಿರುವ ಕುಶಲಕರ್ಮಿಗಳು ಮತ್ತು ನೇಕಾರರು ಒಂದೇ ವೃತ್ತಿಯಲ್ಲಿ ಸಿಕ್ಕಿಕೊಂಡು ಖಿನ್ನತೆಗೆ ಒಳಗಾಗಿದ್ದಾರೆ. ಸಮಾಜದಲ್ಲಿ ಉತ್ಕೃಷ್ಟ ಎಂದು ಗುರುತಿಸಿಕೊಂಡಿರುವ ವೃತ್ತಿಗಳಿಗೆ ಸ್ವಚ್ಛಂದವಾಗಿ ಹೋಗಲಾಗುತ್ತಿಲ್ಲವಲ್ಲ ಎಂಬ ಭಾವನೆ ಅವರನ್ನು ಕಾಡತೊಡಗಿದೆ. ಶ್ರೀಮಂತ ಮತ್ತು ಪ್ರಬಲ ನೇಕಾರರ ಸಂಘಟನೆಗಳು ದಕ್ಷಿಣ ಭಾರತದ ವಿಜಯನಗರ ಮತ್ತು ಬಹಮನಿ ಸಾಮ್ರಾಜ್ಯದ ಕಾಲದಲ್ಲಿ ದೇವಾಲಯಗಳು ಮತ್ತು ಆಡಳಿತಗಾರರಿಗೆ ಹಣಕಾಸಿನ ನೆರವು ಒದಗಿಸುತ್ತಿದ್ದವು. ಕೈಮಗ್ಗ ಆ ಕಾಲದಲ್ಲೇ ಅಷ್ಟರ ಮಟ್ಟಿಗೆ ಪ್ರಬಲವಾಗಿ ಬೆಳೆದಿತ್ತು. ಆನಂತರದ ದಿನಗಳಲ್ಲಿ ಅದು ಸೊರಗುತ್ತಾ ಬಂತು. ವರ್ತಕರ ವ್ಯಾಪಾರ ಶೋಷಣೆ ಮತ್ತು ಸಾಮಾಜಿಕ ಅಸಮಾನತೆಯ ಪರಿಣಾಮವಾಗಿ ಕಾಣಿಸಿಕೊಂಡ ಅಸ್ಥಿರತೆಯಿಂದಾಗಿ ಕೈಮಗ್ಗ ಉದ್ಯಮವು ಕುಸಿಯತೊಡಗಿತು. ಬ್ರಿಟನ್‌ನ ಜವಳಿ ಗಿರಣಿಗಳಿಗೆ ಯಂತ್ರಗಳು ಪ್ರವೇಶ ನೀಡಿದ್ದರಿಂದಾಗಿ, ಸಾಂಪ್ರದಾಯಿಕ ಕಸುಬು ಕೈಮಗ್ಗದ ಮುಂದುವರಿಕೆ ಮತ್ತು ವ್ಯಾಪಕತೆಗೆ ತೀವ್ರ ಹಿನ್ನಡೆ ಉಂಟಾಯಿತು.

### ಗ್ರಾಹಕರು

ಗತ ಕಾಲದ ಕೈಮಗ್ಗ ಉದ್ದಿಮೆಯ ಮೌಲ್ಯಮಾಪನ ಅವಲೋಕಿಸಿದರೆ, ಅಂದಿನ ಗ್ರಾಹಕ ಸಮುದಾಯ ಹಿತಾಸಕ್ತಿಗಳು ಹೇಗಿದ್ದವು ಎಂಬುದನ್ನು ಸಹ ಪರಿಶೀಲಿಸಬೇಕಾಗುತ್ತದೆ. ಅರ್ಧ ಶತಮಾನದ ಹಿಂದೆ, ಗ್ರಾಹಕರು ಯಾವ ರೀತಿಯ ಉಡುಪುಗಳನ್ನು ಧರಿಸುತ್ತಿದ್ದರು ಎಂಬುದು ಮುಖ್ಯವಾಗಿರುತ್ತಿತ್ತೆ ಹೊರತು ಅವರ ದೈಹಿಕ ಆಕಾರ ಮುಖ್ಯವಾಗುತ್ತಿರಲಿಲ್ಲ. ಪ್ರತಿಯೊಬ್ಬರೂ ಸಹ ಕೈಮಗ್ಗದ ವಸ್ತ್ರಗಳನ್ನೇ ತೊಡುತ್ತಿದ್ದರು. ಹಾಗಾಗಿ, ಕೈಮಗ್ಗ ನೇಕಾರರು ಎಲ್ಲಾ ವರ್ಗದ ಗ್ರಾಹಕರಿಗೂ ವಸ್ತ್ರಗಳನ್ನು ಪೂರೈಕೆ ಮಾಡುತ್ತಿದ್ದರು. ಮೊಘಲರ ಆಡಳಿತದಲ್ಲಿ ಬಳಕೆಗೆ ಬಂದ ಹೊಲಿದ ವಸ್ತ್ರಗಳು, ಮೇಲ್ವರ್ಗ ಮತ್ತು ಉಳ್ಳವರ ಪಾಲಿಗೆ ದುಬಾರಿ ಉತ್ಪನ್ನಗಳಾಗಿ ಪರಿವರ್ತನೆ ಆದವು. ಆದರೆ, ಕೆಳವರ್ಗದ ಜನರು ಮಾತ್ರ ಕೈಮಗ್ಗದ ಸಾಮಾನ್ಯ ಜವಳಿಯನ್ನೇ ಬಳಸುತ್ತಿದ್ದರು. ಜತೆಗೆ, ಹೊಲಿದ ಪ್ಯಾಂಟ್, ರವಿಕೆ ಮತ್ತು ಕುರ್ತಾ

ಇತ್ಯಾದಿ ಹೆಚ್ಚುವರಿ ಸಿದ್ಧ ಉಡುಪುಗಳನ್ನು ತೊಡುತ್ತಿದ್ದರು.

ಪ್ರಸ್ತುತ, ನಗರ ಭಾಗದ ಮಧ್ಯಮ ವರ್ಗವು ಸಾಂಸ್ಕೃತಿಕ ಜೀವನಶೈಲಿಗೆ ಹೊರತಾಗಿ ಆಮದಾದ ಸಿದ್ಧ ಉಡುಪುಗಳಿಗೆ ಬದಲಾಗುತ್ತಿದ್ದಾರೆ. ಭಾರತೀಯರ ಈ ಬದಲಾದ ಅಭಿರುಚಿಯಿಂದಾಗಿ ದೇಶದ ವೈವಿಧ್ಯಮಯ ಜವಳಿ ಪರಂಪರೆ ತನ್ನ ಸಂಪರ್ಕವನ್ನು ಕಡಿದುಕೊಳ್ಳುತ್ತಿದೆ.

ಜಾಗತಿಕ ಫ್ಯಾಷನ್ ರಂಗದಲ್ಲಿ ಕೈಮಗ್ಗ ಉತ್ಪನ್ನಗಳ ಬಳಕೆ ಸೇರಿಲ್ಲ. ಆದರೆ, ಪ್ರಮುಖ ಸಿಂಥೆಟಿಕ್ ಜವಳಿ ಉತ್ಪನ್ನಗಳು ಗ್ರಾಹಕ ಸಮುದಾಯವನ್ನು ತನ್ನತ್ತ ಸೆಳೆಯುತ್ತಿವೆ. ಹಲವಾರು ಸ್ಥಳೀಯ ಸಮುದಾಯಗಳು ಕೈಮಗ್ಗ ಉತ್ಪನ್ನಗಳನ್ನು ತಮ್ಮ ಜೀವನ ಸಂಪ್ರದಾಯದ ಭಾಗವಾಗಿ ಮೌಲ್ಯೀಕರಿಸಿದ್ದರೂ, ಕೈಮಗ್ಗ ಉದ್ಯಮ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿದೆ. ಇತ್ತೀಚಿನ ದಿನಗಳಲ್ಲಿ ಈ ಉದ್ದಿಮೆಗೆ ಪುನಶ್ಚೇತನ ನೀಡುವ ಪ್ರಯತ್ನಗಳಿಗೆ ಚಾಲನೆ ದೊರಕಿರುವುದು ಆಶಾದಾಯಕ ಬೆಳವಣಿಗೆ.

**ಪರಿಸ್ಥಿತಿ**

ದೇಶ ಸ್ವಾತಂತ್ರ್ಯ ಗಳಿಸುವ ಮುನ್ನ, ಭಾರತದಲ್ಲಿ ಯಾವುದೇ ರೀತಿಯ ಜವಳಿಯ ಮಾರುಕಟ್ಟೆ ವ್ಯವಸ್ಥೆಯನ್ನು ಮಾರುಕಟ್ಟೆ ಶಕ್ತಿಗಳು ನಿಯಂತ್ರಿಸುತ್ತಿದ್ದವು. ಬ್ರಿಟಿಷರ ಆಡಳಿತದಲ್ಲಿದ್ದ ಕೆಲವು ನಿಯಂತ್ರಣ ವ್ಯವಸ್ಥೆಗಳೇ ಇದಕ್ಕೆ ಕಾರಣ. ಆದರೆ, ದೇಶವು ಸ್ವಾತಂತ್ರ್ಯ ಗಳಿಸಿದ ನಂತರ ಮಹಾತ್ಮ ಗಾಂಧೀಜಿ ಅವರ ನಿರಂತರ ಹೋರಾಟ ಮತ್ತು ರಾಷ್ಟ್ರೀಯತಾವಾದಿ ಖಾದಿ ಆಂದೋಲನ ಹಾಗೂ ಕಮಲಾದೇವಿ ಚಟ್ಟೋಪಾಧ್ಯಾಯ, ಪುಪುಲ್ ಜಯಕರ್ ಅವರಂತಹ ಪ್ರಭಾವಿ ನಾಯಕಿಯರು ಹಾಕಿದ್ದ ರಚನಾತ್ಮಕ ಪುನಶ್ಚೇತನ ಪ್ರಯತ್ನಗಳ ಫಲವಾಗಿ ಭಾರತ ಸರ್ಕಾರದಿಂದ ಅಭಿವೃದ್ಧಿ, ಕಲ್ಯಾಣ ಮತ್ತು ಬೆಂಬಲ ಕಾರ್ಯಕ್ರಮಗಳು ಆರಂಭವಾದವು. ಆದಾಗ್ಯೂ, ಸ್ವಾತಂತ್ರ್ಯಾಪೂರ್ವ ಕೈಗಾರೀಕರಣವು ತಂದ ಯಾಂತ್ರಿಕ ಗಿರಣಿ ಬಟ್ಟೆ, ಸಿಂಥೆಟಿಕ್ ಜವಳಿ ಮತ್ತು ವಿದ್ಯುತ್ ಮಗ್ಗಗಳ ಉತ್ಪನ್ನಗಳು ದುಡಿಮೆಯ ವರ್ಗಕ್ಕೆ ಅಗ್ಗವಾಗಿ, ಧರಿಸಲು ಆರಾಮದಾಯಕ ಎನಿಸಿದ್ದರಿಂದ, ಕೈಮಗ್ಗ ಉದ್ದಿಮೆ ಕುಸಿಯುತ್ತಾ ತೊಡಗುವ ಜತೆಗೆ



ನೇಕಾರರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಾ ಬಂತು.

ಈ ನಿಟ್ಟಿನಲ್ಲಿ, ಕೈಮಗ್ಗ ಉದ್ದಿಮೆಯ ವಾಸ್ತವ ಪರಿಸ್ಥಿತಿಯ ಅವಲೋಕನ ನಡೆಸದೆ ಮೊದಲು ಪುನಶ್ಚೇತನಕ್ಕೆ ಹಾಗೂ ದಶಕಗಳ ಕಾಲದ ನಂತರ ಮಾರುಕಟ್ಟೆಗಳು, ರಫ್ತು ಅಥವಾ ಸಬ್ಸಿಡಿಗಳ ಬಗ್ಗೆ ಗಮನ ನೀಡಲಾಗಿತ್ತು. ಕೈಮಗ್ಗ ಉದ್ದಿಮೆಯ ಪ್ರಸ್ತುತ ಪರಿಸ್ಥಿತಿಯ ಕುರಿತು ವಿವಿಧ ಮೂಲಗಳಿಂದ ಮಾಹಿತಿ ಇದ್ದರೂ, ಅದರ ಸದೃಢತೆ ಮತ್ತು ಸುಧಾರಣೆಗೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಕೈಮಗ್ಗ ಉದ್ದಿಮೆ ಪುನಶ್ಚೇತನಕ್ಕೆ ಹೇರಳವಾಗಿ ಅನುದಾನ ಒದಗಿಸಿದ್ದರೂ, ಅದು ಅರ್ಹ ಫಲಾನುಭವಿಗಳನ್ನು ನೇರವಾಗಿ ತಲುಪುತ್ತಿಲ್ಲ. ಹೀಗಾಗಿ, ನೇಕಾರರು ಮತ್ತಷ್ಟು ಸಂಕಷ್ಟಗಳನ್ನು ಅನುಭವಿಸುವಂತಾಗಿದೆ. ಇದರಿಂದಾಗಿ ಗ್ರಾಮೀಣ ನೇಕಾರರು ಕೈಮಗ್ಗ ವೃತ್ತಿ ತ್ಯಜಿಸಿ ಪರ್ಯಾಯವಾಗಿ ಆಟೊರಿಕ್ಷಾ, ಕಡಲೆಕಾಯಿ ಮಾರಾಟ ಮತ್ತಿತರ ಚಿಲ್ಲರೆ ವ್ಯವಹಾರ ನಡೆಸುವ ದುಃಸ್ಥಿತಿ ಸೃಷ್ಟಿಯಾಗಿದೆ.

1980ರ ಮಧ್ಯಭಾಗದಲ್ಲಾದ ವಿದ್ಯುತ್ ಕೈಮಗ್ಗಗಳ ತ್ವರಿತ ಬೆಳವಣಿಗೆಯು ಕೈಮಗ್ಗ ನೇಕಾರರ ಮೇಲೆ ನೇರ ಹೊಡೆತ ಬೀಳತೊಡಗಿತು. ಜತೆಗೆ, ಗ್ರಾಹಕರ ಅಭಿರುಚಿ ವಿದ್ಯುತ್ ಕೈಮಗ್ಗದ ಉತ್ಪನ್ನಗಳತ್ತ ವಾಲಿತು. ಇದರಿಂದ ಕೈಮಗ್ಗ ಉತ್ಪನ್ನಗಳು ಸೊರಗತೊಡಗಿದವು. ಸರ್ಕಾರದ ವಿವಿಧ ಸಂಸ್ಥೆಗಳು ಕೈಮಗ್ಗ ಉತ್ತೇಜನಕ್ಕೆ ಹಲವು ಕಾರ್ಯಕ್ರಮಗಳನ್ನು ರೂಪಿಸಿದವಾದರೂ, ಖಾಸಗಿ ವಲಯದ ಜಾಹಿರಾತುಗಳ ಮುಂದೆ ಸರ್ಕಾರದ ನಾನಾ ರೀತಿಯ ಪ್ರಯತ್ನಗಳು ಯಶಸ್ಸು ಕಾಣಲಿಲ್ಲ. ದುರದೃಷ್ಟಕರ ಸಂಗತಿ ಎಂದರೆ, ಸರ್ಕಾರದ ಆರಂಭಿಕ ಬದ್ಧತೆಗಳು ಮತ್ತು ಕಾರ್ಯಕ್ರಮಗಳ ಉತ್ಸಾಹ ಕೈಗೂಡಲೇ ಇಲ್ಲ.

ಕೈಮಗ್ಗ ಮತ್ತು ಖಾದಿ ಉದ್ಯಮ ಮುಕ್ತ ಮಾರುಕಟ್ಟೆಯ ಕೊರತೆ ಸೇರಿದಂತೆ ನಾನಾ ಸಮಸ್ಯೆಗಳನ್ನು ಎದುರಿಸಿದೆ. ಈ ನಡುವೆ, ಸರ್ಕಾರದ ಮಧ್ಯಸ್ಥಿಕೆಯಿಂದಾಗಿ, ಉದ್ದಿಮೆಗಳ ಸಂಖ್ಯೆ ವಿಮುಖವಾದರೂ ಉಳಿದುಕೊಂಡು ಬಂದಿದೆ.

ಕೈಮಗ್ಗ ಉದ್ಯಮ ಪುನಶ್ಚೇತನವಾಗಬೇಕಾದರೆ, ಸೃಜನಶೀಲ ಕುಶಲಕರ್ಮಿಗಳು ಮತ್ತು ಸಂಘ ಸಂಸ್ಥೆಗಳು ಪರಿಣಾಮಕಾರಿ ಪಾಲುದಾರಿಕೆ ಹೊಂದುವ ಮೂಲಕ ಉದ್ಯಮವನ್ನು ಕಟ್ಟಬೇಕಿದೆ. ಉದಾಹರಣೆಗೆ, 70 ಮತ್ತು 80ರ ದಶಕದಲ್ಲಿ ಸರ್ಕಾರ ವಿಶ್ವಕರ್ಮ ಯೋಜನೆ ಅಡಿ ದೇಶಾದ್ಯಂತ ಆಯೋಜಿಸಿದ್ದ ಹಲವಾರು ಕೈಮಗ್ಗ ವಸ್ತು ಪ್ರದರ್ಶನಗಳಂತೆ ಈಗಲೂ ಮಾರಾಟ ಪ್ರದರ್ಶನಗಳನ್ನು ಆಯೋಜಿಸುವ ಅಗತ್ಯವಿದೆ. ಕಳೆದ 2 ದಶಕಗಳಲ್ಲಿ, ಮಾರುಕಟ್ಟೆ ಶಕ್ತಿಗಳು ನಿಧಾನ ಗತಿಯಲ್ಲಿ ಮತ್ತೆ ಮಾರಾಟ ಚಟುವಟಿಕೆಗಳಿಗೆ ಮುಂದಾಗುತ್ತಿವೆ. ಈ ಶಕ್ತಿಗಳನ್ನು ಪರಿಣಾಮಕಾರಿ ಮಾರುಕಟ್ಟೆ ವೇದಿಕೆಗಳಿಗೆ ಸಂಪರ್ಕ ಕಲ್ಪಿಸಿದರೆ, ಕೈಮಗ್ಗ ಪುನಶ್ಚೇತನ ಸಾಧ್ಯವಾಗಲಿದೆ. ಫ್ಯಾಷನ್ ಉದ್ಯಮಕ್ಕೂ ಕೈಮಗ್ಗ ಪರಿಚಯಿಸಲು ಅವಕಾಶಗಳಿವೆ.

**ಕೈಮಗ್ಗ ಬೆಂಬಲಿಸಲು ಹೊಸ ಮಾರ್ಗಗಳು**


ಕೈಮಗ್ಗ ವಲಯದ ಪುನಶ್ಚೇತನಕ್ಕೆ ಆಡಳಿತಾತ್ಮಕ ವ್ಯವಸ್ಥೆಯಿಂದ ತುರ್ತು ಪರಾಮರ್ಶೆ ನಡೆಯಬೇಕಿದೆ. ಅಪಾರ ಸಾಮರ್ಥ್ಯ ಹೊಂದಿರುವ ಕೈಮಗ್ಗವನ್ನು ಒಂದು ವಲಯವಾಗಿ ಪರಿಗಣಿಸುವಂತಾಗಬೇಕು. ಕೈಮಗ್ಗ ಪುನಶ್ಚೇತನಕ್ಕೆ ಚಾಲ್ತಿಯಲ್ಲಿರುವ ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ಬದಲಾಗಿ ಅಗತ್ಯವಿರುವ ವಾಸ್ತವಿಕ ಮಾರ್ಗಗಳನ್ನು ಹುಡುಕುವ ಪ್ರಯತ್ನಗಳು ಆಗಬೇಕು. ಬೃಹತ್ ಉದ್ಯೋಗ ಸೃಷ್ಟಿಯ ತಾಕತ್ತು ಹೊಂದಿರುವ ಈ ಉದ್ಯಮಕ್ಕೆ ಹೊಂದಾಣಿಕೆ ಆಗುವ ವಿಧಾನಗಳನ್ನು ರೂಪಿಸುವುದು ಅಗತ್ಯ. ಕುಶಲಕರ್ಮಿಗಳಿಗೆ ಮುದ್ರಾ ಯೋಜನೆಯ ಸಾಲ ಸೌಲಭ್ಯ, ಸ್ಟಾರ್ಟಪ್ ನೆರವು, ಸ್ಕಿಲ್ ಇಂಡಿಯಾ, ಬ್ಯಾಂಕ್‌ಗಳ ಮೂಲಕ ತರಬೇತಿ ಮತ್ತಿತರ ಸವಲತ್ತುಗಳನ್ನು ಒದಗಿಸುವ ಜತೆಗೆ, ಅವರನ್ನು ಜಾಗೃತಿಗೊಳಿಸುವ ಕೆಲಸ ನಡೆಯಬೇಕು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ನೇಕಾರರಿಗೆ ಪ್ರಯೋಜನ ಒದಗಿಸುತ್ತಿಲ್ಲ. ಈ ಯೋಜನೆ ಕೌಶಲ್ಯಗಳನ್ನು

ಸಂರಕ್ಷಿಸಲು ನಿರುತ್ತೇಜನಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ, ಕೌಶಲ್ಯ ನಿರ್ವಹಿಸುವ ಅಧಿಕಾರಿಗಳು, ಕೈಮಗ್ಗ ಮತ್ತು ನರೇಗಾ ನಡುವೆ ಉತ್ತಮ ಸಮನ್ವಯ ಅಗತ್ಯ.

ಗುಣಮಟ್ಟದ ನೂಲನ್ನು ನ್ಯಾಯಯುತ ಬೆಲೆಗೆ ಪಡೆಯುವುದು ಕಷ್ಟವಾಗುತ್ತಿದೆ. ಹತ್ತಿ ನೂಲಿಗೆ ಪರ್ಯಾಯವಾಗಿರುವ ಸೆಣಬು, ಸಾವಯವ ಹತ್ತಿ ಮತ್ತು ಲಿನೆನ್ ನೂಲಿನ ಬಗ್ಗೆ ನೇಕಾರರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ. ಕೈಮಗ್ಗದಿಂದ ಹೊಸತನದ ಉತ್ಪನ್ನಗಳನ್ನು ಸೃಷ್ಟಿಸಲು ಜವಳಿ ಮತ್ತು ಫ್ಯಾಷನ್ ಲೋಕದ ವಿನ್ಯಾಸಕರು ಮುಂದೆ ಬರಬೇಕು. ಕನಿಷ್ಠ 2 ವರ್ಷಗಳ ಕಾಲ ಗಂಭೀರವಾಗಿ ಕಾರ್ಯ ನಿರ್ವಹಿಸಿದರೆ, ಉತ್ತಮ ಫಲಿತಾಂಶ ಪಡೆಯಲು ಸಾಧ್ಯ. ಕೈಮಗ್ಗ ಬಟ್ಟೆಗಳಿಗೆ ನೈಸರ್ಗಿಕ ವಿಧಾನದಲ್ಲಿ ಬಣ್ಣ ಹಚ್ಚುವ ಕಲೆ ಕುರಿತು ಕುಶಲಕರ್ಮಿಗಳಿಗೆ ತರಬೇತಿ ಪ್ರೋತ್ಸಾಹ ನೀಡಬೇಕು. ಇದರಿಂದ ಗಣನೀಯ ಪ್ರಮಾಣದಲ್ಲಿ ಪರಿಸರ ಮಾಲಿನ್ಯ ತಡೆಯಬಹುದು.

ಗುಡ್ಡಗಾಡು ಮತ್ತು ಕರಾವಳಿ ಭಾಗಗಳಲ್ಲಿ ಸಿಗುವ ಬಹುವಿಧದ ನೈಸರ್ಗಿಕ ನಾರುಗಳ ಬಳಕೆಗೆ ಒತ್ತು ನೀಡಬೇಕು. ಬಿದಿರು, ಅನಾನಸ್ ಮತ್ತು ಬಾಳೆಯಿಂದ ನಾರುಗಳನ್ನು ತೆಗೆಯಲು ಅಂತಾರಾಷ್ಟ್ರೀಯ ತಂತ್ರಜ್ಞಾನ ಸಹಭಾಗಿತ್ವ ಹೊಂದಬೇಕು. ಈ ರೀತಿ ಮಾಡುವುದರಿಂದ ಸಾವಯವ ಕಚ್ಚಾ ಮೂಲಗಳನ್ನು ಬಳಸಿಕೊಂಡು ಹೊಸ ನಾವಿನ್ಯದ ಕೈಮಗ್ಗ ಉತ್ಪನ್ನಗಳನ್ನು ತಯಾರಿಸಲು ಸಾಧ್ಯವಾಗಲಿದೆ.

ಮಾರುಕಟ್ಟೆ ಅವಕಾಶಗಳು ತ್ವರಿತವಾಗಿ ವಿಸ್ತರಣೆ ಆಗುತ್ತಿವೆ. ಆನ್‌ಲೈನ್ ಮಾರಾಟ ಕಂಪನಿಗಳಾದ ಅಮೆಜಾನ್, ಫ್ಲಿಪ್‌ಕಾರ್ಟ್, ಇಂಡಿಮಾರ್ಟ್ ಇತ್ಯಾದಿ ಕೈಮಗ್ಗ ಮತ್ತು ಕರಕುಶಲ ಉತ್ಪನ್ನಗಳ ಮಾರಾಟವನ್ನು ಹೆಚ್ಚು ಮಾಡುತ್ತಿವೆ. ಹಾಗಾಗಿ, ನೇಕಾರ ಸಮುದಾಯವು ಈ ಮಾರಾಟ ಕಂಪನಿಗಳಿಂದ ಸಿಗುವ ಪ್ರಯೋಜನಗಳ ಬಗ್ಗೆ ಸಮಗ್ರ ಮಾಹಿತಿ ಹೊಂದಬೇಕು. ಕುಶಲಕರ್ಮಿಗಳು ಫೇಸ್‌ಬುಕ್ ಮತ್ತಿತರ ಸಾಮಾಜಿಕ ಜಾಲತಾಣಗಳಲ್ಲಿ ಖಾತೆ ತೆರೆದು, ತಮ್ಮ ಕಸುಬಿನ ಮಾಹಿತಿ ಪೋಸ್ಟ್ ಮಾಡಬೇಕು.



ದೇಶಿಯ ಮಾರುಕಟ್ಟೆಯಲ್ಲಿ ಕೈಮಗ್ಗ ಉತ್ಪನ್ನಗಳ ಮಾರಾಟ ಹೆಚ್ಚಿಸಲು ವಿಶೇಷ ಪ್ರಯತ್ನಗಳು ನಡೆಯಬೇಕು. ಎಲ್ಲಕ್ಕಿಂತ ವಿಶೇಷವಾಗಿ, ರಫ್ತು ಮಾರುಕಟ್ಟೆಗೆ ಪರಿಚಯಿಸುವ ಕಾರ್ಯ ತ್ವರಿತವಾಗಿ ನಡೆಯಬೇಕು. ಸರ್ಕಾರೇತರ ಸಂಘ ಸಂಸ್ಥೆ 'ಎನ್‌ಜಿಓ' ಗಳು ಕೈಮಗ್ಗ ಉತ್ತೇಜನಕ್ಕೆ ಈವರೆಗೆ ಸರ್ಕಾರದ ಜತೆ ಕೈಜೋಡಿಸಿಲ್ಲ. ಹಾಗಾಗಿ, ಎನ್‌ಜಿಓಗಳ ಜತೆ ಸಹಭಾಗಿತ್ವ ಸಾಧಿಸಲು ಸರ್ಕಾರ ಮುಂದಾಗಬೇಕು.

ದೇಶಾದ್ಯಂತ ನೇಕಾರರ ಸೇವಾ ಕೇಂದ್ರಗಳನ್ನು ಸ್ಥಾಪಿಸುವ ಅಗತ್ಯವಿದೆ. ಈ ಕೇಂದ್ರಗಳ ಮೂಲಕ ಸ್ಥಳೀಯವಾಗಿ ಮಾರಾಟ ವಸ್ತು ಪ್ರದರ್ಶನ ಆಯೋಜಿಸಿ, ಕೈಮಗ್ಗ ಉತ್ಪನ್ನಗಳ ಮಾರಾಟ ಹೆಚ್ಚಿಸಬಹುದು. ಅಲ್ಲದೆ, ನೇಕಾರರ ನಾನಾ ರೀತಿಯ ಅಗತ್ಯಗಳು, ಸಮಸ್ಯೆಗಳು, ತರಬೇತಿ ಮುಂತಾದ ಕಾರ್ಯಕ್ರಮಗಳನ್ನು ಇಲ್ಲಿ ಒದಗಿಸಲು ಸಾಧ್ಯವಿದೆ.

ಕೈಮಗ್ಗ ವಲಯವನ್ನು ಉತ್ತೇಜಿಸಲು ಕೌಶಲ್ಯ ಸಮೀಕ್ಷಾ ಕಾರ್ಯಕ್ರಮ ರೂಪಿಸುವ ಅಗತ್ಯವಿದೆ. ನೇಕಾರ ಸಮುದಾಯಕ್ಕೆ ಈಗಿರುವ ಕೌಶಲ್ಯ ಮಟ್ಟ, ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಅಧ್ಯಯನ ನಡೆಸಿ, ಅವರ ಸಾಮರ್ಥ್ಯ ಅಭಿವೃದ್ಧಿಪಡಿಸಲು ಇರುವ ಸೂಕ್ತ ಮಾರ್ಗಗಳ ಕುರಿತು ವ್ಯವಸ್ಥಿತ ಮಾರ್ಗೋಪಾಯ ಹುಡುಕಬೇಕು. ಕುಶಲಕರ್ಮಿಗಳಿಗೆ ಛಾಯಾಚಿತ್ರ ಕಲೆ, ಲೆಕ್ಕ ಪತ್ರ ನಿರ್ವಹಣೆ, ವಸ್ತು ಪ್ರದರ್ಶನಗಳ ಆಯೋಜನೆ, ಆನ್‌ಲೈನ್ ಮಾರಾಟ ವಿಧಾನ ಮತ್ತಿತರ ವಿಚಾರಗಳ ಕುರಿತು ತರಬೇತಿ ನೀಡುವಂತಾಗಬೇಕು.

### ಪುನರುಜ್ಜೀವನ

ಕೈಮಗ್ಗ ಉದ್ಯಮವನ್ನು ಪುನರುಜ್ಜೀನಗೊಳಿಸುವ ಹಿತಾಸಕ್ತಿ ಇತ್ತೀಚೆಗೆ ಹೆಚ್ಚಾಗುತ್ತಿದೆ. ಎಲ್ಲೆಡೆ ಜಾಗತಿಕ ಬ್ರ್ಯಾಂಡ್‌ಗಳ ಏಕತಾನತೆಯಿಂದಾಗಿ, ಅಪ್ಪಟ ನೂಲಿನಿಂದ ತಯಾರಾಗುವ ಕೈಮಗ್ಗ ಉತ್ಪನ್ನಗಳತ್ತ ಜನರ ಆಸಕ್ತಿ ಹೆಚ್ಚಾಗುತ್ತಿದೆ. ಸಂಪ್ರದಾಯ ಮತ್ತು ಪರಂಪರೆಯ ರೋಮಾಂಚನವನ್ನು ಈ ಉತ್ಪನ್ನಗಳು ನೀಡುತ್ತಿರುವುದೇ ಜನರ ಅಭಿರುಚಿ ಕೈಮಗ್ಗದತ್ತ ತಿರುಗಲು ಕಾರಣವಾಗಿದೆ. ಅಲ್ಲದೆ, ಸಾಮಾಜಿಕ ಜಾಲತಾಣಗಳು ಸಹ ನಾನಾ ರೂಪದಲ್ಲಿ ಉತ್ತೇಜನ ನೀಡುತ್ತಾ ಬಂದಿವೆ.

ಕೇಂದ್ರ ಜವಳಿ ಸಚಿವಾಲಯದ ಇತ್ತೀಚಿನ ಕೈಮಗ್ಗ ಉತ್ತೇಜನಾ ಕಾರ್ಯಕ್ರಮಗಳು ಹಾಗೂ ಸಂಘ ಸಂಸ್ಥೆಗಳ ವಿವಿಧ ಪ್ರಚಾರಾಂದೋಲನದಿಂದಾಗಿ ಕೈಮಗ್ಗ ಉತ್ಪನ್ನಗಳತ್ತ ಹೊಸ ಗ್ರಾಹಕ ಸಮುದಾಯ ಆಕರ್ಷಿತವಾಗುತ್ತಿದೆ.

ಕೈಮಗ್ಗ ಉತ್ಪನ್ನಗಳ ಬಳಕೆಯಿಂದ ಇರುವ ಪ್ರಯೋಜನಗಳ ಕುರಿತು ಭಾರತವು ಮೇಕ್ ಇನ್ ಇಂಡಿಯಾ ಮತ್ತು ಸ್ಕಿಲ್ ಇಂಡಿಯಾ ಕಾರ್ಯಕ್ರಮಗಳ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸೃಷ್ಟಿಸಿರುವ ಜಾಗೃತಿಯ ಪರಿಣಾಮವಾಗಿ ವಿದೇಶಿಗರ ಆಸಕ್ತಿ ಮತ್ತು ಅಭಿರುಚಿ ಹೆಚ್ಚಾಗುತ್ತಿದೆ.

ಒಟ್ಟಾರೆ, ಭಾರತದಲ್ಲಿ ಕೈಮಗ್ಗ ಉದ್ಯಮವು ಅಪಾರ ಸಾಮರ್ಥ್ಯವನ್ನು ಹೊಂದಿದೆ. ಜತೆಗೆ, ಹಲವು ಸಮಸ್ಯೆಗಳನ್ನು ಸಹ ಎದುರಿಸುತ್ತಿದೆ. ಈ ವಲಯದ ಮುಂದಿರುವ ಸವಾಲು ಸೃಜನಶೀಲವೂ, ಸ್ಫೂರ್ತಿದಾಯಕವೂ ಆಗಿದೆ. ಆದರೆ ಈ ಸವಾಲು ಭಾರತದ ಬಹುಪದರವುಳ್ಳ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ವೈವಿಧ್ಯಮಯ ಮತ್ತು ಅನನ್ಯ ಕೌಶಲ್ಯ, ತಂತ್ರ ಮತ್ತು ನಾವಿನ್ಯತೆ ಹೊಂದಿರುವ ಕೈಮಗ್ಗ ಉದ್ಯಮವನ್ನು ಪುನರುಜ್ಜೀವನಗೊಳಿಸಿದರೆ, ನೇಕಾರ ಸಮುದಾಯಕ್ಕೆ ನಿಜವಾದ ಜೀವನಾಧಾರ ಒದಗಿಸುವುದರ ಜತೆಗೆ, ಅವರ ಆರ್ಥಿಕ ಸಬಲೀಕರಣವೂ ಸಾಧ್ಯವಾಗಲಿದೆ. ❑

# ಖಾದಿ; ಕಾರ್ಬನ್ ಕಾರದ ಕೈಗಾರಿಕೆ

* ವಿನಯ್ ಕುಮಾರ್ ಸಕ್ಸೆನಾ



ಆಧುನಿಕ ಭಾರತ ನಿರ್ಮಾಣ ಮಾಡುವ ಕುರಿತು ನಾವುಗಳೆಲ್ಲಾ ಇತ್ತೀಚೆಗೆ ಹೆಚ್ಚಿನ ಮಾತುಕತೆ, ಚರ್ಚೆ ನಡೆಸುತ್ತಿದ್ದೇವೆ. ಆದರೆ ಆಧುನಿಕ ಭಾರತ ನಿರ್ಮಾಣ ಮಾಡಬೇಕಾದರೆ ಮೂಲಸೌಕರ್ಯ, ವೈಜ್ಞಾನಿಕ ಸ್ಫೂರ್ತಿ, ತಾಂತ್ರಿಕ ಬಲ, ಸೇನಾ ಸಾಮರ್ಥ್ಯ, ಕಲಾ ಶ್ರೇಷ್ಠತೆಯನ್ನು ಅಭಿವೃದ್ಧಿಪಡಿಸುವುದು ಅತಿಮುಖ್ಯ. ಈ ಎಲ್ಲಾ ವೈವಿಧ್ಯಮಯ ವಲಯಗಳ ಅಭಿವೃದ್ಧಿಯು ಆಧುನಿಕತೆಯನ್ನು ನಿರೂಪಿಸುತ್ತದೆ.

ಆಧುನಿಕತೆಗೆ ಅಡಿಪಾಯ ಎನಿಸಿರುವ ನಮ್ಮ ಎಲ್ಲಾ ಆಧಾರ ಮೂಲಗಳನ್ನು ಗುರುತಿಸುವುದು ಎಲ್ಲಕ್ಕಿಂತ ಮುಖ್ಯವಾದ ವಿಷಯವಾಗುತ್ತದೆ. ಈ ರೀತಿಯ ಆಧಾರ ಮೂಲಗಳನ್ನು ಹೆಚ್ಚಾಗಿ ಅಭಿವೃದ್ಧಿಪಡಿಸಿದರೆ, ರಾಷ್ಟ್ರವು ಹೆಚ್ಚಿನ ಫಲವನ್ನು ಪಡೆಯುತ್ತದೆ. ನಾವು ಈ ಆಧಾರ ಮೂಲಗಳನ್ನು ಎಷ್ಟು ದೀರ್ಘಕಾಲ ಉಳಿಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ಆಧುನಿಕ ಭಾರತ ನಿರ್ಮಾಣ ಮಾಡುವ ಕನಸು ಸಂಪೂರ್ಣವಾಗಿ ಅವಲಂಬಿತವಾಗಿರುತ್ತದೆ.

ಶತಮಾನಗಳ ಬ್ರಿಟಿಷರ ಆಡಳಿತದ ನಂತರವೂ ನಾವು ಒಂದು ರಾಷ್ಟ್ರವಾಗಿ, ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ಮಾರ್ಗದ ಬದುಕಿನಲ್ಲಿ ಶ್ರೀಮಂತವಾಗೇ ಉಳಿದಿದ್ದೇವೆ. ತಳಪಾಯದಲ್ಲಿರುವ ಸುಪ್ತವಾದ ಬಲ ಮತ್ತು ಸಾಮರ್ಥ್ಯದಲ್ಲಿ ಭಾರತೀಯರ ಭವಿಷ್ಯದ ಬದುಕು ಅಡಗಿದೆಯೇ ಹೊರತು ಆಮದಾದ ಮೌಲ್ಯಗಳ ಆಧಾರದಿಂದ ಆಧುನಿಕ ಭಾರತ ನಿರ್ಮಾಣ ಸಾಧ್ಯವಿಲ್ಲ ಎಂದು ಪಿತಾಮಹ ಮಹಾತ್ಮ ಗಾಂಧಿ ಅಂದೇ ಪ್ರತಿಪಾದಿಸಿದ್ದರು. 1920ರಲ್ಲಿ, ಭಾರತದಲ್ಲಿ ಬ್ರಿಟಿಷರ ಸಾಮ್ರಾಜ್ಯಶಾಹಿ ಇದ್ದ ನಡುವೆಯೇ ಗಾಂಧೀಜಿ ಅವರು ಸ್ವದೇಶಿ ಚಳವಳಿಯಲ್ಲಿ ಖಾದಿಯನ್ನು ರಾಷ್ಟ್ರೀಯತೆಯ ರಾಜಕೀಯ ಅಸ್ತ್ರವಾಗಿ ಆಂದೋಲನ ರೂಪದ ಹೋರಾಟ ನಡೆಸಿದ್ದರು.

ಖಾದಿಯನ್ನು ಸ್ವಾತಂತ್ರ್ಯ ಚಳವಳಿಯ ವಿಶಿಷ್ಟ ಉಡುಪು ಎಂದು ಕರೆ ನೀಡಿದ್ದೇ ಅಲ್ಲದೆ, ಖಾದಿ ಮೂಲಕ ಅವರು ಭಾರತಕ್ಕೆ ಶಾಶ್ವತ ಸ್ವಾವಲಂಬನೆಯ ಸಂಕೇತ ತಂದಿದ್ದರು. ಭಾರತ ತನ್ನ ಸ್ವಂತ ಶಕ್ತಿಯಿಂದಲೇ ಬದುಕಬಲ್ಲದು, ಗಟ್ಟಿಯಾಗಿ ನಿಲ್ಲಬಲ್ಲದು ಎಂಬುದನ್ನು ಅವರು ಖಾದಿ ಚಳವಳಿಯ ಮೂಲಕ ಬ್ರಿಟಿಷರಿಗೆ ತೋರಿದ್ದರು. ತಮ್ಮ ದೈನಂದಿನ ಬದುಕಿನಿಂದಲೇ ತಮ್ಮ ಜೀವನಕ್ಕೆ ಸ್ವಂತವಾಗಿ ಸಮೃದ್ಧಿ ಸೃಷ್ಟಿಸಿಕೊಳ್ಳಲು ಭಾರತೀಯರು ಸ್ವತಂತ್ರರು ಮತ್ತು ತಾಕತ್ತು ಉಳ್ಳವರು ಎಂದು ಗಾಂಧೀಜಿ ಅಂದೇ ಸಾರಿದ್ದರು.

ಆನಂತರ, ಖಾದಿ ಮತ್ತು ಗ್ರಾಮೀಣ ಉತ್ಪಾದಕತೆಯು ರಾಷ್ಟ್ರೀಯತೆಯ ವೈಭವದ ಆಧಾರ ಮೂಲವಾಗಿ ಪರಿಣಮಿಸಿತು. ಗ್ರಾಮೀಣ ಜನರ ಕಠಿಣ ಪ್ರಯತ್ನ ಮತ್ತು ಮಹತ್ವದ ಕೊಡುಗೆಯಿಂದಲೇ ನಮ್ಮ ಸಮಾಜ ನಿರ್ಮಾಣವಾಗಿದೆ ಮತ್ತು ಭದ್ರವಾಗಿ ನೆಲೆ ನಿಂತಿದೆ ಎಂಬುದನ್ನು ಈ ಮೂಲಕ ಭಾರತ, ಇಡೀ ವಿಶ್ವಕ್ಕೆ ಪ್ರದರ್ಶಿಸಿತು. ಗಾಂಧೀಜಿ ಅವರ ಹೋರಾಟದ ಫಲವಾಗಿ ವಿಶ್ವ ಮಟ್ಟದಲ್ಲಿ ಖಾದಿ ಮಾಡಿದ ಕ್ರಾಂತಿ ಅನನ್ಯ. ಈ ಹಿನ್ನೆಲೆಯಲ್ಲಿ, ಖಾದಿ ಕೇವಲ ಬಟ್ಟೆಯ ತುಂಡಾಗಿ ಗುರುತಿಸಿಕೊಳ್ಳದೆ, ಅದು ಶಾಂತಿಯ ಮುನ್ಸೂಚಕವಾಗಿ ಜಗಜ್ಜಾಹೀರಾಗಿದೆ. ಸ್ವಾತಂತ್ರ್ಯ ಮತ್ತು ರಾಷ್ಟ್ರೀಯತೆಯ ಅಸ್ತಿತ್ವದ ಮೂರ್ತರೂಪವಾಗಿದೆ.

**ಖಾದಿ ಉತ್ಪಾದನೆಗೆ ವಿದ್ಯುತ್ ಬಳಕೆಯ ಗೋಜಿಲ್ಲ. ಇದು ಸಂಪೂರ್ಣ ಸಾವಯವ ಮತ್ತು ಇಂಗಾಲ ತಟಸ್ಥ. ಒಂದಲ್ಲ, ಹಲವು ಮಾರ್ಗಗಳಲ್ಲಿ ಲೆಕ್ಕ ಹಾಕಿದರೂ, ಭವಿಷ್ಯದ ಜವಳಿ ಉದ್ಯಮದಲ್ಲಿ ಖಾದಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಆಕ್ರಮಿಸಿಕೊಳ್ಳಲಿದೆ.**

* ಅಧ್ಯಕ್ಷರು, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ, ಭಾರತ ಸರ್ಕಾರ. E-mail : chairmankvic2015@gmail.com

ದೇಶವು ಸ್ವಾತಂತ್ರ್ಯ ಪಡೆದ ನಂತರ, ಭಾರತ ಸರ್ಕಾರ 1956ರ ಕೆವಿಐಸಿ ಕಾಯಿದೆಯ ಅಡಿ "ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (ಕೆವಿಐಸಿ)" ವನ್ನು ಶಾಸನಬದ್ಧ ಸಂಸ್ಥೆಯಾಗಿ ಸ್ಥಾಪಿಸಿತು. ಸ್ವಾವಲಂಬನೆಯಿಂದಲೇ ರಾಷ್ಟ್ರ ನಿರ್ಮಿಸಿಕೊಂಡ ಭಾರತೀಯರ ನೈಜ ಶಕ್ತಿಗೆ ಗೌರವಸೂಚಕವಾಗಿ ಈ ಆಯೋಗವನ್ನು ಸ್ಥಾಪಿಸಲಾಗಿದೆ.

ಉದ್ಯೋಗ ಮಾಡಬೇಕೆಂಬ ಅಪಾರ ತುಡಿತ ಹೊಂದಿದ್ದ ಹಾಗೂ ಆರ್ಥಿಕ ಸಂಪನ್ಮೂಲ ಕೊರತೆ ಎದುರಿಸುತ್ತಿದ್ದ ಬೃಹತ್ ಮಾನವ ಸಂಪನ್ಮೂಲವೇ ಆಗ ದೇಶದಲ್ಲಿತ್ತು. ಈ ಪ್ರತಿಭಾವಂತ ಯುವ ಸಂಪನ್ಮೂಲವನ್ನು ಉಪಯುಕ್ತ ರಾಷ್ಟ್ರೀಯ ಉತ್ಪನ್ನಗಳನ್ನು ತಯಾರಿಸಲು ಆಯೋಗದ ಮೂಲಕ ಬಳಸಿಕೊಳ್ಳಲಾಯಿತು. ಅಲ್ಲದೆ, ಯುವ ಸಮುದಾಯಕ್ಕೆ ಜೀವನಾಧಾರಕ್ಕೆ ದಾರಿ ಮಾಡಿಕೊಡುವ ಬೆಂಬಲವನ್ನು ನೀಡಲಾಯಿತು. ಖಾದಿ ಮತ್ತು ಗ್ರಾಮೋದ್ಯೋಗವನ್ನು ಉತ್ತೇಜಿಸುವ ಈ ಮಹತ್ವಾಕಾಂಕ್ಷೆಗಿಂತ ಇನ್ನಾವುದೇ ಹೆಚ್ಚಿನ ಮಹತ್ವದ ಮತ್ತು ಸೂಕ್ತ ಕಾರ್ಯಕ್ರಮಗಳಿಂದ ಭಾರತ ಮುಂದುವರಿಯಲು ಸಾಧ್ಯವಾಗುತ್ತಿರಲಿಲ್ಲ.

ಇಡೀ ವಿಶ್ವದಲ್ಲಿ ಖಾದಿ ಉತ್ಪನ್ನಗಳ ತಯಾರಿಕೆಯು ಬಹುಪಾಲು ಗ್ರಾಮೀಣ ಉತ್ಪಾದಕತೆಯ ಕಾರ್ಯಕ್ರಮವಾಗಿದೆ. ಸಾವಿರಾರು ಕುಟುಂಬಗಳು ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮುಟ್ಟಿಸುತ್ತಿವೆ. ಇದರಲ್ಲಿ ಮಧ್ಯವರ್ತಿಗಳ ಹಾವಳಿ ಇಲ್ಲ. ಸಂಕೀರ್ಣ ಮಾರುಕಟ್ಟೆ ವ್ಯವಸ್ಥೆಯ ತಾಪತ್ರಯ ಇಲ್ಲ. ಖಾದಿ ಗ್ರಾಮೋದ್ಯೋಗವು ಗ್ರಾಮೀಣ ಸಮುದಾಯದ ಪ್ರಯತ್ನಗಳಿಗೆ ಅಧಿಕ ಮೌಲ್ಯಗಳನ್ನು ತಂದುಕೊಡುತ್ತಿದೆ. ಜತೆಗೆ, ಗ್ರಾಹಕರ ಹಣಕ್ಕೂ ಹೆಚ್ಚಿನ ಮೌಲ್ಯಗಳನ್ನು ಒದಗಿಸುತ್ತಿದೆ. ರಾಷ್ಟ್ರದ ವಿಚಾರಕ್ಕೆ ಬಂದರೆ, ಇದು ನಿಸ್ಸಂದೇಹವಾಗಿ ನಾಡಿನ ಪರಂಪರೆಯ ಅತ್ಯಮೂಲ್ಯ ಆಸ್ತಿ.



ದೇಶದಲ್ಲಿ 5,000ಕ್ಕಿಂತ ಅಧಿಕ ಖಾದಿ ಉದ್ಯಮ ಸಂಸ್ಥೆಗಳು ಮತ್ತು 3.20 ಲಕ್ಷಕ್ಕಿಂತ ಹೆಚ್ಚಿನ ಸಣ್ಣ ಉದ್ಯಮಶೀಲರ ದೊಡ್ಡ ಜಾಲವೇ ಕಾರ್ಯ ನಿರ್ವಹಿಸುತ್ತಿದ್ದು, "ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ"ದ ಕಾರ್ಯಕ್ರಮ ಮತ್ತು ಉದ್ದೇಶಗಳನ್ನು ಅನುಷ್ಠಾನಗೊಳಿಸುತ್ತಿವೆ. ಆಯೋಗದ ವಿವಿಧ ಯೋಜನೆಗಳ ಅಡಿಯಲ್ಲಿ ಒಂದು ಕೋಟಿಗಿಂತ ಅಧಿಕ ಜನರು ಖಾದಿ ಉತ್ಪನ್ನಗಳ ಉತ್ಪಾದಕತೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಖಾದಿ ಗ್ರಾಮೋದ್ಯೋಗವು ಪ್ರಧಾನವಾಗಿ ಮಹಿಳೆಯರನ್ನು ಆಧರಿಸಿದ ಚಟುವಟಿಕೆ. 80%ಕ್ಕಿಂತ ಹೆಚ್ಚಿನ ಕಸುಬುದಾರರು ಮಹಿಳೆಯರೇ ಆಗಿದ್ದಾರೆ. ಗ್ರಾಮೋದ್ಯೋಗ ಕಾರ್ಯಕ್ರಮದಲ್ಲಿ ಮಹಿಳೆಯರ ಪಾಲು 30% ಇದೆ. ಖಾದಿ ಮತ್ತು ಗ್ರಾಮೋದ್ಯೋಗ ವಲಯವು 40,000 ಕೋಟಿ ರೂಪಾಯಿಗಿಂತ ಹೆಚ್ಚಿನ ವಹಿವಾಟು ನಡೆಸುತ್ತಿದೆ. ಅದರಲ್ಲಿ 40% ವಹಿವಾಟು ಗ್ರಾಮೀಣ ಸಮುದಾಯದ್ದೇ ಇದೆ. ಈ ಸಮುದಾಯವು ತಮ್ಮ ಜೀವನಾಧಾರಕ್ಕೆ ಖಾದಿ ಚಟುವಟಿಕೆಯನ್ನೇ ಸಂಪೂರ್ಣವಾಗಿ ಅವಲಂಬಿಸಿದೆ.

ಕೈಗಾರೀಕರಣದಿಂದಾಗಿ ಇಂಗಾಲ ಹೊರಸೂಸುವಿಕೆ ಪ್ರಮಾಣ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಹವಾಮಾನದಲ್ಲಿ ವೈಪರೀತ್ಯಗಳು ಉಂಟಾಗುತ್ತಿವೆ. ಇದರಿಂದ ಮನುಕುಲದ ಮೇಲೆ ಎರಗುತ್ತಿರುವ ಮಾರಣಾಂತಿಕ ರೋಗಗಳ ಕುರಿತು ಇಡೀ ವಿಶ್ವವೇ ಗಂಭೀರ ಚರ್ಚೆ ನಡೆಸುತ್ತಿರುವ ಸಮಕಾಲೀನ ಸಂದರ್ಭದಲ್ಲಿ, ಭಾರತವು ಪರಿಸರಸ್ನೇಹಿ ಆಗಿರುವ, ಇಂಗಾಲ ಹೊರಸೂಸುವಿಕೆಗೆ ಎಳ್ಳಷ್ಟೂ ಕೊಡುಗೆ ನೀಡದ ಖಾದಿ ಉದ್ಯಮವನ್ನು ವಿಶ್ವ ವೇದಿಕೆಯಲ್ಲಿ ಜನಪ್ರಿಯಗೊಳಿಸಲು ಮುಂದಾಗುವುದು ಅಗತ್ಯ. ರಾಸಾಯನಿಕ ಮಿಶ್ರಿತ (ಸಿಂಥೆಟಿಕ್) ಜವಳಿ ಉದ್ಯಮ ಪರಿಸರಕ್ಕೆ ಭಾರಿ ಹಾನಿ ಉಂಟು ಮಾಡುತ್ತಿರುವುದು ಹಲವಾರು ಅಧ್ಯಯನಗಳಿಂದ ತಿಳಿದುಬಂದಿದೆ.

ಜಗತ್ತಿನಾದ್ಯಂತ ವಾರ್ಷಿಕ ಅಂದಾಜು 60 ಶತಕೋಟಿ ಕೆ.ಜಿ. ಜವಳಿ ಉತ್ಪಾದಿಸಲಾಗುತ್ತಿದೆ. ಈ ಉತ್ಪಾದನೆಗೆ ವಾರ್ಷಿಕ 1,074 ಶತಕೋಟಿ ಕಿಲೋವ್ಯಾಟ್ ವಿದ್ಯುತ್ ಅಥವಾ 132 ದಶಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲು ಮತ್ತು 6–9 ಲಕ್ಷ ಕೋಟಿ ಲೀಟರ್ ನೀರಿನ ಬಳಕೆಯಾಗುತ್ತಿದೆ. ಹವಾಮಾನದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಹಸಿರು ಮನೆ ಇಂಗಾಲದ ಹೊರಸೂಸುವಿಕೆಗೆ ಸಿಂಥೆಟಿಕ್ ಜವಳಿ ಉದ್ಯಮವೇ ಕಾರಣ. ವಿಶ್ವಾದ್ಯಂತ ಹೊರಸೂಸುತ್ತಿರುವ ಇಂಗಾಲ ಪ್ರಮಾಣದಲ್ಲಿ 20ರಲ್ಲಿ ಒಂದು ಭಾಗದಷ್ಟು ಜವಳಿ ಉದ್ಯಮದಿಂದ ಆಗುತ್ತಿರುವುದು ಆತಂಕಕಾರಿ ಬೆಳವಣಿಗೆ.




ಅದೇ ಖಾದಿ ವಿಷಯಕ್ಕೆ ಬಂದರೆ, ಇದು ಕೈಯಿಂದಲೇ ನೂಲು ತೆಗೆದು ಹೆಣೆಯುವ ಮತ್ತು ನೇಯುವ ಉದ್ಯಮ. ಖಾದಿ ಉತ್ಪಾದನೆಗೆ ವಿದ್ಯುತ್ ಬಳಕೆಯ ಗೋಜಿಲ್ಲ. ಇದು ಸಂಪೂರ್ಣ ಸಾವಯವ ಮತ್ತು ಇಂಗಾಲ ತಟಸ್ಥ. ಒಂದಲ್ಲ, ಹಲವು ಮಾರ್ಗಗಳಲ್ಲಿ ಲೆಕ್ಕ ಹಾಕಿದರೂ, ಭವಿಷ್ಯದ ಜವಳಿ ಉದ್ಯಮದಲ್ಲಿ ಖಾದಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಆಕ್ರಮಿಸಿಕೊಳ್ಳಲಿದೆ. ಅಲ್ಲದೆ, ಖಾದಿ ವಸ್ತ್ರಗಳ ಆಧುನಿಕ ಪ್ರಸ್ತುತತೆ, ಸ್ವಚ್ಛ ಹಾಗೂ ಸುಸ್ಥಿರ ವೃದ್ಧಿ ರೂಪಿಸುವಲ್ಲಿ ಖಾದಿ ಭವಿಷ್ಯದಲ್ಲಿ ವಹಿಸಲಿರುವ ಪಾತ್ರದ ಅಂಶಗಳನ್ನು ಮೂಲಾಧಾರವಾಗಿ ಇಟ್ಟುಕೊಂಡು, ನಾವು ಖಾದಿಯನ್ನು ಜಾಗತಿಕ ವೇದಿಕೆಯಲ್ಲಿ ಜನಪ್ರಿಯಗೊಳಿಸುವ ಅಗತ್ಯವಿದೆ.

"ದೇಶದ ಗ್ರಾಮೀಣ ಭಾಗದಲ್ಲಿ ಖಾದಿ ಗ್ರಾಮೋದ್ಯೋಗ ಜಾಲವನ್ನು ಸ್ಥಾಪಿಸಲು ಸರ್ಕಾರ ಬಯಸಿದೆ," ಎಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇತ್ತೀಚೆಗೆ ಆಕಾಶವಾಣಿಯ "ಮನ್ ಕಿ ಬಾತ್" ಕಾರ್ಯಕ್ರಮದಲ್ಲಿ ಪ್ರಕಟಿಸಿರುವುದು ಸರಿಯಾದ ದಿಕ್ಕಿನಲ್ಲೇ ಇದೆ. ಲಕ್ಷಾಂತರ ಜನರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಾಮರ್ಥ್ಯ ಖಾದಿ ಗ್ರಾಮೋದ್ಯೋಗಕ್ಕೆ ಇದೆ.

ಪ್ರಧಾನಿ ಅವರು ತಮ್ಮ ಭಾಷಣದಲ್ಲಿ ಖಾದಿಗೆ ಮಹತ್ವ ನೀಡಿರುವುದು ವಿಶೇಷವಾಗಿ ಕುಶಲಕರ್ಮಿಗಳ ವೃತ್ತಿ ಮತ್ತು ಬದುಕಿನ ಕಾರಣಗಳಿಗಾಗಿ. ರಾಷ್ಟ್ರ ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ಕಸುಬುದಾರರು ವಹಿಸುತ್ತಿರುವ ಮಹತ್ವದ ಪಾತ್ರವನ್ನು ಇದು ಪ್ರತಿಫಲಿಸುತ್ತಿದೆ. ಅಲ್ಲದೆ, ಪ್ರಧಾನಿ ಶ್ರೀ ಮೋದಿ ಅವರು ಇತ್ತೀಚೆಗಷ್ಟೇ ಖಾದಿಗೆ "ಆಜಾದಿ ಕೆ ಪೆಹ್ಲೆ ಖಾದಿ ಫಾರ್ ನೇಷನ್ ಅಂಡ್ ಆಜಾದಿ ಕೆ ಬಾದ್ ಖಾದಿ ಫಾರ್ ಫ್ಯಾಷನ್" ಎಂಬ ಘೋಷವಾಕ್ಯ ನೀಡಿದ್ದಾರೆ. ನಾವು ಖಾದಿ ಬಳಕೆಯನ್ನು ಕಡ್ಡಾಯವಾಗಿ ಉತ್ತೇಜಿಸಬೇಕು ಎಂದು ಕರೆ ನೀಡಿದ್ದಾರೆ. ನೀವು ವರ್ಷಕ್ಕೆ ಕನಿಷ್ಠ ಒಂದು ಖಾದಿ ವಸ್ತ್ರ ಖರೀದಿಸುವ ಮೂಲಕ ಬಡ ಕುಶಲಕರ್ಮಿಗಳ ಮನೆಯ ಸಮೃದ್ಧಿಯ ದೀಪ ಬೆಳಗಿಸಬೇಕು ಎಂದು ಪ್ರಧಾನಿ ಮನವಿ ಮಾಡಿದ್ದಾರೆ. ಪ್ರಧಾನಿ ಅವರ ಈ ಕರೆಯ ನಂತರ, ಖಾದಿ ಉಡುಪುಗಳು ಮತ್ತು ವಸ್ತ್ರಗಳ ಮಾರಾಟದಲ್ಲಿ ಕಳೆದ ವರ್ಷ 29% ಏರಿಕೆ ಕಂಡಿದೆ. ಮಾರಾಟ ಪ್ರಮಾಣ ದಿನೇದಿನೇ ಹೆಚ್ಚಾಗುತ್ತಾ ಸಾಗಿದೆ.

ಆಧುನಿಕ ಸಮಾಜದಲ್ಲಿ ಬದಲಾಗುತ್ತಿರುವ ಅಭಿರುಚಿ ಮತ್ತು ಅಗತ್ಯಗಳಿಗೆ ತಕ್ಕಂತೆ ಖಾದಿಯ ವಸ್ತ್ರಗಳು ಸಹ ಬದಲಾಗುತ್ತಿವೆ. ದೇಶದ ಸಾವಿರಾರು ಖಾದಿ ಉತ್ಪನ್ನಗಳ ತಯಾರಿಕಾ ಕೇಂದ್ರಗಳು ನಾವೀನ್ಯತೆಯ ಸಮ್ಮಿಳನದ (ಫ್ಯೂಷನ್) ಫ್ಯಾಬ್ರಿಕ್ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿವೆ. ಕಾಟನ್ ಜತೆ ಪಾಲಿಸ್ಟರ್, ರೇಷ್ಮೆ ಮತ್ತು ಇತರೆ ಜವಳಿಯನ್ನು ಮಿಶ್ರಣ ಮಾಡಿ, ಗ್ರಾಹಕರ ಅಭಿರುಚಿಗೆ ತಕ್ಕಂತೆ ಬಗೆಬಗೆಯ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸುತ್ತಿವೆ.

"ಒಂದು ನೂಲು, ಒಂದು ರಾಷ್ಟ್ರ" ಎಂಬುದು ಈಗ ಹೊಸ ಘೋಷವಾಕ್ಯ. ಖಾದಿ ಉದ್ಯಮದ ಮುದ್ರೆ (ಬ್ರ್ಯಾಂಡ್)ಯನ್ನು "ಖಾದಿ" ಬದಲಾಗಿ "ಖಾದಿ ಇಂಡಿಯಾ" ಎಂದು ಬದಲಿಸಲಾಗಿದೆ. "ಒಂದು ನೂಲು, ಒಂದು ರಾಷ್ಟ್ರ" ಘೋಷವಾಕ್ಯದ ಅಡಿ, "ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ"ವು 2016 ಮೇ 5ರಿಂದ ಜೂನ್ 4ರ ವರೆಗೆ ಶ್ರೀನಗರದಲ್ಲಿ ಒಂದು ತಿಂಗಳ ಕಾಲ ರಾಷ್ಟ್ರೀಯ ಖಾದಿ ವಸ್ತು ಪ್ರದರ್ಶನ ಆಯೋಜಿಸಿತ್ತು. ಭಯೋತ್ಪಾದನೆಯಿಂದ ಬಾಧಿತವಾಗಿರುವ ಜಮ್ಮು-ಕಾಶ್ಮೀರ



ರಾಜ್ಯದಲ್ಲಿ ಸ್ವಾತಂತ್ರ್ಯಾ ನಂತರ ಈ ರೀತಿಯ ಮೊದಲ ಬೃಹತ್ ವಸ್ತು ಪ್ರದರ್ಶನ ಆಯೋಜಿಸಿದ್ದು ಇದೇ ಮೊದಲು. ದೇಶದ ಸುಮಾರು 198 ಖಾದಿ ಸಂಸ್ಥೆಗಳು ಈ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದವು. ಅದರಲ್ಲಿ 56 ಸಂಸ್ಥೆಗಳು ಕಾಶ್ಮೀರ ಕಣಿವೆಗೆ ಸೇರಿವೆ ಎಂಬುದು ಗಮನಾರ್ಹ. ಒಂದು ಲಕ್ಷಕ್ಕಿಂತ ಅಧಿಕ ಸಾರ್ವಜನಿಕರು ಪ್ರದರ್ಶನಕ್ಕೆ ಭೇಟಿ ನೀಡಿದ್ದರು. ಒಂದು ತಿಂಗಳ ಈ ಪ್ರದರ್ಶನದಲ್ಲಿ 2 ಕೋಟಿ ರೂ,ಗಿಂತ ಹೆಚ್ಚಿನ ವಹಿವಾಟು ನಡೆದಿತ್ತು.


2016 ಮೇನಲ್ಲಿ ಆಯೋಗವು ಕಾಶ್ಮೀರದ ಪ್ಯಾಂಪೋರ್‌ನಲ್ಲಿ 25 ಖಾದಿ ಚರಕಗಳ ಘಟಕ ಮತ್ತು 5 ನೂಲು ಕೇಂದ್ರಗಳನ್ನು ಆರಂಭಿಸಿ, ಭಯೋತ್ಪಾದನೆಯಿಂದ ಬಾಧಿತವಾದ ಕುಟುಂಬಗಳಿಗೆ ಜೀವನಾಧಾರ ಕಲ್ಪಿಸಿದೆ. ಜಮ್ಮು ಜಿಲ್ಲೆಯ ನಗ್ರೋತಾ ಗ್ರಾಮದಲ್ಲಿ ಆರಂಭವಾದ ಈ ಕೇಂದ್ರಗಳಲ್ಲಿ ಕರವಸ್ತ್ರಗಳನ್ನು ತಯಾರಿಸಲಾಗುತ್ತಿದೆ. ಇಲ್ಲಿ 296 ಮಹಿಳೆಯರಿಗೆ ಉದ್ಯೋಗ ದೊರೆತಿದೆ.

ಜಾಗತಿಕ ಫ್ಯಾಷನ್ ರಂಗಕ್ಕೆ ಅದ್ದೂರಿ ಪ್ರವೇಶ ನೀಡುವ ನಿಟ್ಟಿನಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ಫ್ಯಾಷನ್ ವಿನ್ಯಾಸಕಿ ಶ್ರೀಮತಿ ರಿತು ಬೆರಿ ಅವರನ್ನು ತನ್ನ ಸಲಹೆಗಾರ್ತಿಯಾಗಿ ನೇಮಿಸಿಕೊಂಡಿದೆ. ಫ್ಯಾಷನ್ ಲೋಕದ ತರಹೇವಾರಿ ಹೊಸ ಹೊಸ ವಿನ್ಯಾಸ ಮತ್ತು ಶೈಲಿಗಳನ್ನು ಖಾದಿ ಸಿದ್ಧ ಉಡುಪುಗಳಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ರಿತು ಬೆರಿ ಆಯೋಗಕ್ಕೆ ಸಲಹೆ ನೀಡಲಿದ್ದಾರೆ. ಅಲ್ಲದೆ, ದೇಶ ಮತ್ತು ವಿದೇಶಗಳಲ್ಲಿ ಖಾದಿ ಉತ್ತೇಜನ ಕುರಿತು ಅವರು ಮಾರ್ಗದರ್ಶನ ನೀಡಲಿದ್ದಾರೆ.

ಈ ಎಲ್ಲಾ ಹಿನ್ನೆಲೆಯಲ್ಲಿ, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ಬಡವರು ಮತ್ತು ಗ್ರಾಮೀಣ ಭಾರತೀಯ ಸಮುದಾಯವನ್ನು ಉತ್ಪಾದಕತೆಯ ಉದ್ಯೋಗದಲ್ಲಿ ತೊಡಗಿಸುವ ಗುರುತರ ಜವಾಬ್ದಾರಿಯನ್ನು ಹೊಂದಿದೆ. ಭಾರತದ ಗ್ರಾಮೀಣ ಅಭಿವೃದ್ಧಿಗೆ ಸೇವೆ ಸಲ್ಲಿಸಲು ಆಯೋಗವನ್ನು ಪ್ರಮುಖ ಚಾಲನಾ ಶಕ್ತಿಯಾಗಿ ಸಜ್ಜುಗೊಳಿಸಿ, ಜವಾಬ್ದಾರಿ ಹೊರಿಸಲಾಗಿದೆ. ವಿಶಾಲ ವೈವಿಧ್ಯತೆ ಹೊಂದಿರುವ ಗ್ರಾಮೀಣ ಖಾದಿ ಉದ್ದಿಮೆಗಳನ್ನು ಸೃಜಿಸುವ, ಉತ್ತೇಜಿಸುವ, ಪ್ರೋತ್ಸಾಹಿಸುವ ಮತ್ತು ಸುಸ್ಥಿರವಾಗಿ ಉಳಿಸುವ ಜವಾಬ್ದಾರಿಯನ್ನು ಆಯೋಗಕ್ಕೆ ಕಡ್ಡಾಯಗೊಳಿಸಲಾಗಿದೆ.

"ಗ್ರಾಮೀಣ ಸಮುದಾಯಕ್ಕೆ ಚರಕವು ಸ್ಮಾರಕವಿದ್ದಂತೆ" ಎಂದು ದೇಶದ ಪಿತಾಮಹಾ ಮಹಾತ್ಮ ಗಾಂಧಿ ನೀಡಿದ್ದ ಕರೆಯನ್ನು ನಾನು ಸದಾ ನಂಬಿದ್ದೇನೆ. ಈ ನಿಟ್ಟಿನಲ್ಲಿ ನಾವೆಲ್ಲರೂ, ಅವರು ಹಾಕಿಕೊಟ್ಟಿರುವ ಸ್ವಾವಲಂಬನೆ ಮತ್ತು ಕಾರ್ಮಿಕ ಘನತೆಯ ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಚರಕದಲ್ಲಿ ನೂಲು ಹೆಣೆಯುತ್ತಾ ಅಹಿಂಸಾ ಸ್ವಾತಂತ್ರ್ಯ ಚಳವಳಿಯಲ್ಲಿ ಹೋರಾಡಿದ ಎಲ್ಲಾ ಯೋಧರು ಮತ್ತು ಹೋರಾಟಗಾರರ ಬಗ್ಗೆ ನಾವು ಸಂಪೂರ್ಣ ನೆನಪು ಇಟ್ಟುಕೊಂಡಿಲ್ಲ ಅಥವಾ ಅವರ ಬಗ್ಗೆ ದಾಖಲೆಗಳನ್ನು ಸಂಗ್ರಹಿಸಿಲ್ಲ. ಆದರೆ, ನಾವು ಚರಕದ ಆಚರಣೆ ಮಾಡುವಾಗ ಅವರೆಲ್ಲರಿಗೂ ಸಾಂಕೇತಿಕವಾಗಿ ಗೌರವ ನಮನ ಸಲ್ಲಿಸುತ್ತೇವೆ. ಈ ದೃಷ್ಟಿಕೋನದಲ್ಲಿ, ಸ್ವರಾಜ್ಯದ ಈ ಸಂಕೇತವನ್ನು ರಾಜಧಾನಿ ನಗರ ದೆಹಲಿಯ ಪ್ರಮುಖ ಸ್ಥಳದಲ್ಲಿ ಸ್ಥಾಪಿಸುವುದು ಸೂಕ್ತ ಮಾರ್ಗ ಎಂದು ನಾನು ನಂಬಿದ್ದೇನೆ. ಈ ರೀತಿ ಮಾಡುವುದರಿಂದ ಚರಕವನ್ನು ನಾವು ಮರೆಯದೆ, ಅದರೆಡೆ ನಮ್ಮ ಸ್ಥಿರ ಗಮನ ಹರಿಸಲು ಸಾಧ್ಯ.

ಚರಕದ ಮಹತ್ವವನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 30 ಅಡಿ ಉದ್ದ, 17 ಅಡಿ ಎತ್ತರ, 9 ಅಡಿ ಅಗಲದ ಚರಕವನ್ನು ಪ್ರತಿಷ್ಠಾಪಿಸಲಾಗಿದೆ. ಬರ್ಮಾ ಟೀಕ್ ಮರದಲ್ಲಿ ನಿರ್ಮಿಸಿರುವ ಈ ಚರಕವು 4 ಟನ್ ತೂಕ ಹೊಂದಿದ್ದು, ವಿಶ್ವದಲ್ಲೇ ಅತಿದೊಡ್ಡ ಚರಕವಾಗಿದೆ. ಜಗತ್ತಿನ ನಾನಾ ಕಡೆಯಿಂದ ವಿಮಾನದಲ್ಲಿ ಆಗಮಿಸುವ ಲಕ್ಷಾಂತರ ಜನರಿಗೆ ಈ ವಿಮಾನ ನಿಲ್ದಾಣದಲ್ಲಿ ಕೆಲ ಕ್ಷಣಗಳ ಕಾಲ ನಿಂತು, ಭಾರತ ಇತಿಹಾಸದ ಸಂಕೇತವಾಗಿರುವ ಚರಕವನ್ನು ನಿತ್ಯವೂ



ವೀಕ್ಷಿಸುವ ಅವಕಾಶ ಸಿಕ್ಕಿದಂತಾಗಿದೆ. ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ರಾಷ್ಟ್ರೀಯ ವೈಮಾನಿಕ ನೆಲೆಗೆ ಮಾರ್ಗದ್ವಾರವಾಗಿದೆ. ಇದೇ ಮಾರ್ಗದ್ವಾರದ ಬಳಿ ಚರಕ ಪ್ರತಿಷ್ಠಾಪಿಸಲಾಗಿದೆ.

ಗ್ರಾಮೀಣ ಭಾಗದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಪ್ರಮುಖ ಕಾರ್ಯಗಳಲ್ಲಿ ಒಂದಾಗಿದೆ. ಪ್ರಧಾನ ಮಂತ್ರಿಗಳ ಉದ್ಯೋಗ ಖಾತ್ರಿ ಯೋಜನೆ ಆರಂಭವಾದಂದಿನಿಂದ 20 ಲಕ್ಷಕ್ಕಿಂತ ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ. ಗ್ರಾಮೀಣ ಭಾಗಗಳಿಂದ ನಗರಗಳತ್ತ ವಲಸೆ ಹೋಗುತ್ತಿದ್ದ ಜನರನ್ನು ತಡೆದು ಸ್ಥಳೀಯ ಪ್ರತಿಭಾವಂತರಿಗೆ ಉದ್ಯೋಗ ಕಲ್ಪಿಸಿರುವುದು ಆಯೋಗದ ಪ್ರಮುಖ ಕೊಡುಗೆಯಾಗಿದೆ.

ಆಯೋಗದ ಹಲವಾರು ಕಾರ್ಯಕ್ರಮಗಳು ಮತ್ತು ಉಪಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವ ಜತೆಗೆ ಆಯೋಗದ ಅಧ್ಯಕ್ಷನಾಗಿ, ರೋಗಗ್ರಸ್ಥ ಗ್ರಾಮೋದ್ಯೋಗಗಳನ್ನು ಪುನಶ್ಚೇತನಗೊಳಿಸುವುದು, ಖಾದಿ ಉತ್ಪನ್ನಗಳ ಮಾರಾಟವನ್ನು ದುಪ್ಪಟ್ಟುಗೊಳಿಸುವುದು ಹಾಗೂ ಕಸುಬುದಾರರು ಅಥವಾ ಕುಶಲಕರ್ಮಿಗಳಿಗೆ ಅಧಿಕ ಸಂಭಾವನೆ ದೊರಕಿಸುವ ಸೂಕ್ತ ವ್ಯವಸ್ಥೆ ರೂಪಿಸುವುದು ನನ್ನ ಆಕಾಂಕ್ಷೆಯಾಗಿದೆ. ಆಯೋಗವು ನೂಲುವ ಘಟಕಗಳ ಕಾರ್ಯಾಚರಣೆಗೆ ಸೌರಶಕ್ತಿಯನ್ನು ಬಳಸಲು ಉದ್ದೇಶಿಸಿದೆ. ಇದರಿಂದ ಕಾರ್ಮಿಕರ ಅವಲಂಬನೆಯನ್ನು ತಗ್ಗಿಸಲು ಸಾಧ್ಯವಾಗಲಿದೆ. ವಿಮಾ ಸೌಲಭ್ಯ ಹಾಗೂ ನಂಬಿಕಾರ್ಹ ಆರೋಗ್ಯ ಸೌಲಭ್ಯ ಜಾಲಕ್ಕೆ ನೇಕಾರ ಸಮುದಾಯವನ್ನು ತರಲು ಹಾಗೂ ಅವರ ಶೈಕ್ಷಣಿಕ ಸಾಮರ್ಥ್ಯವನ್ನು ಹೆಚ್ಚಿಸಲು ಆಯೋಗ ಸದ್ಯಕ್ಕೆ ಗಮನ ನೀಡಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಕುಶಲಕರ್ಮಿಗಳನ್ನು ಜಾಗತಿಕ ಬದುಕಿನ ಮುಖ್ಯ ವಾಹಿನಿಗೆ ತರಲು ಆಯೋಗ ಪ್ರಸ್ತುತ ಪ್ರಯತ್ನಿಸುತ್ತಿದೆ.

ಒಟ್ಟಾರೆ, ಮಾನವ ಇತಿಹಾಸದಲ್ಲಿ ಅಭಿವೃದ್ಧಿಯಾದ ಅತ್ಯಂತ ಸುಸ್ಥಿರ ಸಾಮಾಜಿಕ ಮತ್ತು ಆರ್ಥಿಕ ಮಾದರಿಯಾಗಿ ಖಾದಿ ಮತ್ತು ಗ್ರಾಮೋದ್ಯೋಗಗಳು ಆಧುನಿಕ ಭಾರತ ಮತ್ತು ವಿಶ್ವಕ್ಕೆ ತಮ್ಮ ಹೆಚ್ಚಿನ ಪ್ರಸ್ತುತತೆಯನ್ನು ಸಾಬೀತುಪಡಿಸುತ್ತಾ ಬಂದಿವೆ. ❑

## ಕರಕುಶಲತೆಯ ಸುಸ್ಥಿರತೆ

(5ನೇ ಪುಟದಿಂದ)

ದೇಶದ ಬೇರೆ ಬೇರೆ ಭಾಗಗಳಲ್ಲಿ ಅಲ್ಲಿನ ಭೌಗೋಳಿಕ ಪ್ರದೇಶ, ಹವಾಮಾನ ಮತ್ತು ಪುರಾತನ ಸಂಪ್ರದಾಯಗಳನ್ನು ಆಧರಿಸಿ ಅಭಿವೃದ್ಧಿಪಡಿಸಲಾದ ವಿಭಿನ್ನ ರೀತಿಯ ಕರಕುಶಲ ವಸ್ತುಗಳನ್ನು ಉತ್ಪಾದಿಸಲಾಗುತ್ತಿದೆ.

ಜಿಯೋಗ್ರಫಿಕಲ್ ಇಂಡಿಕೇಶನ್ಸ್ (ಜಿಐ)ನಲ್ಲಿ 143 ಬಗೆಯ ವಸ್ತ್ರಗಳು ಹಾಗೂ ಕರಕುಶಲ ವಸ್ತುಗಳನ್ನು ನೊಂದಾಯಿಸಿರುವುದು ಸಂತಸದ ವಿಷಯ. ಜಿಯೋಗ್ರಫಿಕಲ್ ಇಂಡಿಕೇಶನ್‌ನಲ್ಲಿ ನೊಂದಾಯಿಸಲ್ಪಟ್ಟ ವಸ್ತ್ರಗಳಲ್ಲಿ ಪ್ರಸಿದ್ಧ 'ಚಂದೇರಿ'ಯೂ ಸೇರಿದೆ. ಭಾರತದ ಹೃದಯಭಾಗದಲ್ಲಿ ತಯಾರಾಗುವ ಈ ನೇಯ್ಗೆ ವಸ್ತ್ರದ ಮೂಲ ಕ್ರಿ.ಶ. 1305ರಷ್ಟು ಹಳೆಯದು. ಅದೇ ರೀತಿ, 'ಕೋಟ ದೋರಿಯಾ' ಸಹ 'ಐಜಿ'ಯಲ್ಲಿ ನೊಂದಾಯಿಸಲ್ಪಟ್ಟಿದೆ. ರಾಜಸ್ಥಾನದ ಕೈತೂನ್ ಹಾಗೂ ಬರನ್ ಜಿಲ್ಲೆಯ ಇತರ ಗ್ರಾಮಗಳಲ್ಲಿ ಹತ್ತಿ ಮತ್ತು ರೇಷ್ಮೆ ಎಳೆಗಳಿಂದ ತಯಾರಿಸಲಾಗುವ ಈ ಸೀರೆಯು ತನ್ನದೇ ವಿಶೇಷತೆ ಹೊಂದಿದೆ. ಹತ್ತಿ ಮತ್ತು ರೇಷ್ಮೆ ಎಳೆಗಳನ್ನು ವಿಭಿನ್ನ ಮಾದರಿಗಳಲ್ಲಿ ಸಂಯೋಜಿಸಿ ವಿಶಿಷ್ಟವಾಗಿ ಇದನ್ನು ಹೆಣೆಯಲಾಗುತ್ತದೆ.

ಪೋಚಂಪಲಿ, ಇಕಾತ್, ಕಾಂಜೀವರಂ ರೇಷ್ಮೆ, ಶ್ರೀಕಾಳಹಸ್ತಿ ಕಲಂಕಾರಿ, ಮಹೇಶ್ವರ್, ಕಾಂತಾ (ಪಶ್ಚಿಮ ಬಂಗಾಳದಲ್ಲಿ ಮಹಿಳೆಯರು ಮನೆಯಲ್ಲೇ ತಯಾರಿಸುವ ದೇಶೀಯ ಕರಕುಶಲ ಉತ್ಪನ್ನ), ಸುಸ್ಪಷ್ಟ ನಮೂನೆಯ ಶುದ್ಧ ಅರಳೆ ವಸ್ತ್ರ 'ಜಾಮ್‌ದಾನಿ', ಬಲುಚಾರಿ ಮತ್ತು ಒರಿಸ್ಸಾದ ಖ್ಯಾತ ಇಕಾತ್ ಹೀಗೆ ಹಲವು ಪ್ರಸಿದ್ಧ ಉತ್ಪನ್ನಗಳೂ 'ಜಿಐ' ಸ್ಥಾನಮಾನ ಗಿಟ್ಟಿಸಿವೆ. ನೇಕಾರರು ಮತ್ತು ಕುಶಲಕರ್ಮಿಗಳ ಸಮುದಾಯದವರ ಸಾಂಪ್ರದಾಯಿಕ ಜ್ಞಾನವನ್ನು 'ಜಿಐ' ಕಾಪಾಡುವುದಲ್ಲದೆ, ಈ ಜ್ಞಾನವು ದುರುಪಯೋಗವಾಗದಂತೆ ಕಾನೂನಿನ ರಕ್ಷಣೆ ಒದಗಿಸುತ್ತದೆ. ಕಲಾವಿದರಿಗೆ ಸಾಮೂಹಿಕ ಏಕಸ್ವಾಮ್ಯವನ್ನು ನೀಡುವ ಮೂಲಕ ನಮ್ಮ ಸಾಂಪ್ರದಾಯಿಕ ಕಲೆ, ಕರಕುಶಲತೆಯ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಇದು ರಕ್ಷಿಸುತ್ತದೆ. ಯಾಂತ್ರಿಕತೆ, ಏಕರೂಪೀಕರಣದ ಪ್ರಪಂಚದಲ್ಲಿ ಭಾರತದ ಅಸಂಖ್ಯ ಕರಕುಶಲ ವಸ್ತುಗಳು, ತಂತ್ರಗಳು ಮತ್ತು ಪ್ರಾಚೀನ ಜ್ಞಾನವನ್ನು ಸುಸ್ಥಿರವಾಗಿ ಕಾಪಾಡುವುದು ದೊಡ್ಡ ಸವಾಲಾಗಿದೆ. ಗ್ರಾಮೀಣ ಪ್ರದೇಶದ ಉತ್ಪನ್ನಗಳಿಗೆ ಮಾರುಕಟ್ಟೆ ಹಾಗೂ ನ್ಯಾಯಸಮ್ಮತ ಬೆಲೆ ಪಡೆಯಲು ಕಷ್ಟಸಾಧ್ಯ ಪರಿಸ್ಥಿತಿ ಹಿನ್ನೆಲೆಯಲ್ಲಿ ಗ್ರಾಮೀಣ ಯುವಕರು ಇತ್ತೀಚೆಗೆ ಕುಟುಂಬದ ಕರಕುಶಲ ಸಂಪ್ರದಾಯದ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ನಮ್ಮ ಕುಶಲಕಲೆಗಳ ಮಹತ್ವದ ಬಗ್ಗೆ ಜನರನ್ನು ಸೂಕ್ಷ್ಮಗ್ರಾಹಿಗಳನ್ನಾಗಿಸುವ ಅಗತ್ಯವಿದೆ. ಆದ್ದರಿಂದ ಕಲಾವಿದರ ಮಕ್ಕಳಿಗೆ ಶಿಕ್ಷಣ, ತರಬೇತಿ ಹಾಗೂ ಮಾರುಕಟ್ಟೆ ಸಂಪರ್ಕವನ್ನು ಒದಗಿಸಲು ಕಟ್ಟುನಿಟ್ಟಿನ ಕ್ರಮ ಹಾಗೂ ಪ್ರಯತ್ನ ಅವಶ್ಯವಾಗಿದೆ. ಕಲಾವಿದರು ತಮ್ಮ ಕುಟುಂಬ ಹಾಗೂ ಸಮುದಾಯದ ಕುಶಲಕಲೆಯನ್ನು ಮುಂದುವರಿಸಲು ಅವರಿಗೆ ಗುಣಮಟ್ಟದ ಜೀವನಕ್ಕೆ ಅಗತ್ಯವಾದ ಕೂಲಿ ದೊರೆಯುವಂತೆ ಕಾಯ್ದುಕೊಳ್ಳಬೇಕಿದೆ. ಇದು ಜಾಗತಿಕ ಮಾರುಕಟ್ಟೆಯಲ್ಲಿ ಭಾರತಕ್ಕೆ ವಿಶಿಷ್ಟ ಸ್ಥಾನ ತಂದುಕೊಟ್ಟಿರುವ ಭಾರತದ ಕರಕುಶಲ ವಸ್ತುಗಳನ್ನು ಉಳಿಸಿ ಬೆಳೆಸಲು ನೆರವಾಗಲಿದೆ. ❑

# ತಾಂತ್ರಿಕ ಜವಳಿ; ಉದಯಿಸುತ್ತಿರುವ ಉದ್ಯಮ

* ಪ್ರಕಾಶ್ ವಾಸುದೇವನ್



> ಜಗತ್ತಿನಲ್ಲಿ ತಾಂತ್ರಿಕ ಜವಳಿ ಉತ್ಪನ್ನ ಒಂದು ಹೊಸ ಆಯಾಮವಾಗಿದೆ. ಈ ಉತ್ಪನ್ನಗಳನ್ನು ವೈದ್ಯಕೀಯ ವೃತ್ತಿಯಿಂದ ಹಿಡಿದು ಆಟೊಮೊಬೈಲ್ ತಂತ್ರಜ್ಞಾನದವರೆಗೂ ಬಳಸಲಾಗುತ್ತದೆ.

ಮಾನವನ ಜೀವನದಲ್ಲಿ ಜವಳಿ ಬಹು ಮುಖ್ಯವಾದ ಪಾತ್ರ ವಹಿಸುತ್ತದೆ. ವಸ್ತ್ರ, ನಾಗರಿಕ ಸಂಸ್ಕೃತಿ. ಹುಟ್ಟಿನಿಂದ ಹಿಡಿದು ಸಾವಿನ ಕ್ಷಣದವರೆಗೂ ಮೈ ಮೇಲಿರುವ ಮೂಲಭೂತ ಅವಶ್ಯಕತೆ. ಯಾವುದೇ ನಿರ್ದಿಷ್ಟ ಉದ್ದೇಶದ ಬಳಕೆಗೆ ತಯಾರಿಸುವ ಜವಳಿ ಉತ್ಪನ್ನವನ್ನು ತಾಂತ್ರಿಕ ಜವಳಿ ಎಂದು ಕರೆಯಲಾಗುತ್ತದೆ. ಸೌಂದರ್ಯ ವರ್ಧನೆಗೆ ಬದಲಾಗಿ ಉತ್ಪನ್ನದ ತಾಂತ್ರಿಕ ಮತ್ತು ಗುಣ ವಿಶೇಷಗಳನ್ನು ಬಳಸಿಕೊಳ್ಳುವ ಉದ್ದೇಶದಿಂದ ತಯಾರಿಸಲಾಗುವ ಸರಕು / ಉತ್ಪನ್ನಗಳನ್ನೂ ತಾಂತ್ರಿಕ ವಸ್ತ್ರ / ಜವಳಿ ಎಂದು ಕರೆಯಲಾಗಿದೆ. ವಸ್ತ್ರಗಳ ಸಂಯೋಜನೆ, ರಚನೆಯಿಂದಾಗಿ ಉಡುಪು ತಯಾರಿಕಾ ತಂತ್ರಜ್ಞಾನವನ್ನು ಹಲವಾರು ತಾಂತ್ರಿಕ ವಸ್ತ್ರೋತ್ಪನ್ನಗಳಲ್ಲಿಯೂ ಉಪಯೋಗಿಸಬಹುದು. ನೆಲಒರೆಸುವ ಬಟ್ಟೆಯಿಂದ ಹಿಡಿದು ಟಿಶ್ಯು ತಂತ್ರಜ್ಞಾನದವರೆಗೂ ಇದರ ಬಳಕೆ ಕಾಣಬಹುದು. ಹಾಗೇ ನೋಡಿದರೆ ವಸ್ತ್ರವನ್ನು ತಂತ್ರಜ್ಞಾನ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿರುವುದು ಮಾನವನಿಗೆ ಹೊಸದೇನಲ್ಲ. ಹಿಂದೆ ಇದರ ಗುಣ ವಿಧಾನ ಬಹಳ ಸರಳವಾಗಿತ್ತು. ಆದರೆ, ಈಗ ಇದರ ಕಾರ್ಯವೈಖರಿ ಸೇರಿದಂತೆ ಎಲ್ಲವೂ ಆಧುನಿಕಗೊಂಡಿದೆ. ಅದರ ಉಪಯುಕ್ತತೆ, ಆಯ್ಕೆ, ಉತ್ಪಾದನೆ, ರಚನೆಗಳಲ್ಲಿ ಸಾಕಷ್ಟು ಮಾರ್ಪಡುಗಳಾಗಿವೆ. ಹೊಸ ವಿನ್ಯಾಸ, ತಯಾರಿಸುವ ಕ್ರಮ, ರಾಸಾಯನಿಕ ವಸ್ತು ಬಳಕೆ, ಸಂಯೋಜನೆ ಉತ್ಪಾದನೆಯಲ್ಲೂ ಪ್ರಭಾವ ಬೀರಿದೆ. ಪ್ಲಾಸ್ಟಿಕ್, ಲೋಹ ಹಾಗೂ ಕಾಗದದ ಬಳಕೆಯ ಬದಲಿಗೆ ಬಟ್ಟೆಗೆ ಆದ್ಯತೆ ನೀಡಲಾಗುತ್ತಿದೆ. ಇದರ ನಾರಿನಂತಹ ರಚನೆ ಹಾಗೂ ತೂಕ ರಹಿತವಾದ ವಿಶೇಷ ಗುಣವೇ ಇದಕ್ಕೆ ಮುಖ್ಯ ಕಾರಣ. ಆಧುನಿಕ ಜಗತ್ತಿನಲ್ಲಿ ಈ ತಂತ್ರಜ್ಞಾನವು ಸಂಕೀರ್ಣ ರಚನೆ ಹೊಂದಿದೆ. ಜೊತೆಗೆ ಅಷ್ಟೇ ಉಪಯುಕ್ತತೆಯನ್ನೂ ಹೊಂದಿದೆ. ತಾಂತ್ರಿಕ ಜವಳಿಯೋತ್ಪನ್ನದ ತಂತ್ರಗಾರಿಕೆಯನ್ನು ಉಪಯೋಗಿಸಿಕೊಂಡು ಹಲವಾರು ನಾರಿನ ರಚನೆಯಂತಹ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಕಸೂತಿಯ ರೀತಿ ಹಾಗೂ ಹೆಣೆಯುವಂತಹ ನಾರಿನ ರಚನೆಗಳಿಂದಲೂ ತಾಂತ್ರಿಕ ಜವಳಿ ಉತ್ಪನ್ನಗಳನ್ನು ತಯಾರಿಸಬಹುದು. ಆಧುನಿಕ ತಾಂತ್ರಿಕ ಬಟ್ಟೆಗಳನ್ನು ಹೆಚ್ಚು ಕ್ರಿಯಾತ್ಮಕವಾಗಿ ರೂಪಿಸಲಾಗುತ್ತದೆ. ಕಚ್ಚಾ ವಸ್ತು, ನೂಲು, ನೂಲು ರಚನೆ ಆಯ್ಕೆ ಮುಖ್ಯವಾಗಿರುತ್ತದೆ.

ಉದಾಹರಣೆಗೆ – ವೈದ್ಯಕೀಯ ಉದ್ದೇಶಗಳಿಗಾಗಿ ಬಳಸುವ ಹತ್ತಿ ಉಣ್ಣೆ ರೋಲ್, ಹತ್ತಿ ಬಡ್ಸ್, ರಕ್ತ ಹರಿವು ನಿಲ್ಲಿಸುವ ನಾರುಯುಕ್ತ ಬಟ್ಟೆ, ಶಬ್ದ ನಿರೋಧಕ ನಾರು, ಶಾಖ ನಿರೋಧಕ ಬಟ್ಟೆ, ದಿಂಬು, ಪರಿಶೋಧಕಗಳು ಮೊದಲಾದವು. ಶಸ್ತ್ರ ಕ್ರಿಯೆಗಳಲ್ಲಿ ಹೊಲಿಗೆ ಹಾಕಲು ಬಳಸುವ ದಾರಗಳನ್ನು ಕರಗಬಲ್ಲ ನಾರು ನೂಲಿನಿಂದ ತಯಾರಿಸಲಾಗುತ್ತದೆ. ತಾಂತ್ರಿಕ ಜವಳಿ ಉತ್ಪನ್ನಗಳನ್ನು ವಿವಿಧ ರೀತಿಯ ನೇಯ್ಗೆ ಮಾಡಿದ (ಬೆಡ್‌ಶೀಟ್‌ಗಳು, ಶಸ್ತ್ರ ಕ್ರಿಯೆ ನಿಲುವಂಗಿ, ನೆಲಹಾಸು, ಆಸನ ಬಟ್ಟೆ, ಗಾಯ ನಿರೋಧಕ ಬಟ್ಟೆ) ಹೆಣೆದ (ಹರ್ನಿಯಾ ಮೆಶ್, ಕ್ರೀಡಾ ಉಡುಪು, ಸಂಕುಚಿತ ಉಡುಪು ಅವಕಾಶ ಜವಳಿ..., ರಕ್ತನಾಳ ಕಸಿ, ಟ್ಯೂಬುಲಾರ್ ಬ್ಯಾಂಡೇಜ್, ಫಿಶ್‌ನೆಟ್, ಉಪಗ್ರಹ ಆ್ಯಂಟೆನಾ... ಇತ್ಯಾದಿ)

* ನಿರ್ದೇಶಕರು, ದಕ್ಷಿಣ ಭಾರತ ಜವಳಿ ಸಂಶೋಧನಾ ಸಂಘ, ಕೊಯಮತ್ತೂರು. E-mail : director@sitra.org.in

ಹೆಣಿಗೆಯೇತರ (ಇನ್ಸುಲೇಶನ್ ಟೇಪ್, ಟಿಶ್ಯೂ ಇಂಜಿನಿಯರಿಂಗ್‌ಗೆ ಬೇಕಾದ ಸ್ಕ್ಯಾಫ್‌ಫೋಲ್ಡ್ ಫಿಲ್ಟರ್ ಮೆಂಬ್ರೇನ್, ವೈಪ್ಸ್, ಬೆಳೆ ಹೊದಿಕೆ, ಬೀಜ ಹೊದಿಕೆ, ಕಳೆ ನಿಯಂತ್ರಕ ನಾರು ಇತ್ಯಾದಿ) ಹೊಸೆದ (ಸೂಚರ್, ಹಗ್ಗ, ಸ್ಟೆಂಟ್ಸ್, ಲಿಗಮೆಂಟ್ಸ್, ಟೆಂಡನ್ಸ್, ಫ್ಲಾಸ್ ಇತ್ಯಾದಿ) ಕಸೂತಿಯುತ (ರೊಟೇಟರ್ ಕಫ್, ಸರ್ಕಿಟ್) ನಾರು, ಎಳೆ, ಬಟ್ಟೆಗಳಿಂದ ತಯಾರಿಸಲಾಗಿದೆ. ಇದಲ್ಲದೆ ಈ ಎಲ್ಲ ವಿಭಿನ್ನ ನೂಲು ಮಾದರಿಯ ಸಂಯೋಜನೆಯಿಂದಲೂ ಅಗತ್ಯಕ್ಕೆ ತಕ್ಕಂತೆ ಬಟ್ಟೆ ಸಾಮಗ್ರಿ (ಡಯಾಪರ್ಸ್, ಸ್ಯಾನಿಟರಿ ನ್ಯಾಪ್‌ಕಿನ್ಸ್) ತಯಾರಿಸಲಾಗುತ್ತದೆ. ತಾಂತ್ರಿಕ ಜವಳಿಗೆ ಸೇರಿದ ಪ್ರತಿಯೊಂದು ಉತ್ಪನ್ನವನ್ನು ನಿರ್ದಿಷ್ಟ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗುತ್ತದೆ. ಇವುಗಳ ತಯಾರಿಕೆಯಲ್ಲಿ ಕೋಟಿಂಗ್ / ಲ್ಯಾಮಿನೇಷನ್ (ಉದಾ – ಬೆಂಕಿ ನಿರೋಧಕ, ಸೂಕ್ಷ್ಮಾಣು ನಿರೋಧಕ, ಗಾಳಿ ಪ್ರಸರಕ, ದ್ರವ ಹರಿವು ನಿರೋಧಕ ಇತ್ಯಾದಿ) ಸಂಸ್ಕರಣೆ ಪ್ರಕ್ರಿಯೆಗಳೂ ಇರುತ್ತವೆ.

### ಭಾರತದಲ್ಲಿ ತಾಂತ್ರಿಕ ಜವಳಿಯೋತ್ಪನ್ನ ಬೆಳೆಯಲು ಇರುವ ಅವಕಾಶಗಳು

* ಭಾರತದ ಗ್ರಾಹಕರ ಆದಾಯ ಹೆಚ್ಚಾಗಿದ್ದು, ಅವರು ಈಗೀಗ ಸ್ವಚ್ಛತೆ, ಆರೋಗ್ಯದ ಮೇಲೆ ಹೆಚ್ಚು ಒತ್ತು ಕೊಡುತ್ತಿದ್ದಾರೆ. ಇದರಿಂದ ಹಾಯಾಗಿರುವ ಜೀವನ ಕ್ರಮವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದು, ಸ್ಯಾನಿಟರಿ ನ್ಯಾಪ್ಕಿನ್ಸ್, ಮಕ್ಕಳ ಡೈಪರ್‌ಗಳನ್ನು ಹಿಂದಿಗಿಂತಲೂ ಅಧಿಕವಾಗಿ ಬಳಸುತ್ತಿದ್ದಾರೆ.

* ಈ ತಂತ್ರಜ್ಞಾನ ಒಂದು ನಿರ್ದಿಷ್ಟ ಪರಿಧಿಯಲ್ಲಿ ಬೆಳೆಯುತ್ತಿದೆ. ಉದಾಹರಣೆಗೆ ಆರೋಗ್ಯ ಪ್ರವಾಸೋದ್ಯಮದಂತಹ ವಿಷಯಗಳು ಹುಟ್ಟಿಕೊಳ್ಳುತ್ತಿರುವುದರಿಂದ ವೈದ್ಯಕೀಯ ಜವಳಿ ಉದ್ಯಮ ಬೆಳೆಯುತ್ತಿದೆ.

* ಇಂಟರ್ನೆಟ್ ಬಳಕೆಯಿಂದ ಜನರು ವಿದ್ಯಾವಂತರಾಗುತ್ತಿದ್ದಾರೆ. ಇದರಿಂದ ತಾಂತ್ರಿಕ ವಸ್ತ್ರೋತ್ಪನ್ನದ ಬಗ್ಗೆ ಜನರಲ್ಲಿ ಅರಿವು ಮೂಡುತ್ತಿದೆ. ಈ ತಾಂತ್ರಿಕ ಜವಳಿ ಉತ್ಪನ್ನವು ತಂತ್ರಜ್ಞಾನದ ಕೂಸಾಗಿರುವುದರಿಂದ ಭಾರತದಲ್ಲಿ ಇದರ ಹೊಸ ಅಲೆ ಎದ್ದಿರುವುದರಿಂದ, ಸ್ಥಳೀಯ ವಾಣಿಜ್ಯೋದ್ಯಮಿಗಳಲ್ಲಿ ಸ್ಪರ್ಧೆ ಇರುವುದಿಲ್ಲ. ಹಾಗೆಯೇ ದೇಶದ ಜನಸಂಖ್ಯೆ ಮತ್ತು ಜೀವನಾಯಸ್ಸು ದಿನೇ ದಿನೇ ಹೆಚ್ಚುತ್ತಿದೆ.



ಇದರಿಂದ ತಾಂತ್ರಿಕ ಜವಳಿ ಉತ್ಪನ್ನಕ್ಕೆ ಮಾರುಕಟ್ಟೆ ತೆರೆದುಕೊಳ್ಳಲಿದೆ.

* ವ್ಯವಹಾರದ ಹಂಚಿಕೆಯಲ್ಲಿ ಹಲವಾರು ಬದಲಾವಣೆಗಳು ಕಂಡಿದ್ದು ಗ್ರಾಹಕನಿಗೆ ಎಲ್ಲವೂ ಕೈಗೆಟಕುವ ಹಾಗೆ ಪಸರಿಸಿಕೊಂಡಿದೆ. ಇದರಿಂದಲೂ ತಾಂತ್ರಿಕ ಜವಳಿಯೋತ್ಪನ್ನದ ಬೆಳವಣಿಗೆಯಾಗುತ್ತಿದೆ. ಬೆಳೆಯುತ್ತಿರುವ ಜಾಗತಿಕ ಮಾರುಕಟ್ಟೆ, ಹಾಗೂ ಕಾರ್ಖಾನೆಗಳು ಇದಕ್ಕೆ ಒತ್ತು ನೀಡುತ್ತಿದೆ. ಕಡಿಮೆ ವೆಚ್ಚದಲ್ಲೇ ತಂತ್ರಜ್ಞಾನ ತಿಳಿದಿರುವ ಕೆಲಸಗಾರರು ಲಭ್ಯವಿರುವುದರಿಂದ ಈ ಜವಳಿ ಉದ್ಯಮ ಇನ್ನು ಹೆಚ್ಚು ವೃದ್ಧಿಯಾಗಲು ಅನುವು ಮಾಡಿಕೊಡುತ್ತಿದೆ.

* ತಾಂತ್ರಿಕ ಜವಳಿ ತಂತ್ರಜ್ಞಾನವನ್ನು ಅವಲಂಬಿಸಿದೆ. ಅಂತಾರಾಷ್ಟ್ರೀಯ ಮತ್ತು ತುಲನಾತ್ಮಕ ಚಿಂತನೆ ಜವಳಿ ತಯಾರಕರಿಗೆ ಬೇಕಾಗಿದೆ. ಈ ಕಾರಣದಿಂದ ಸ್ಥಳೀಯ ಹೊಸ ವಾಣಿಜ್ಯೋದ್ಯಮಿಗಳಿಗೆ ಸ್ಥಳೀಯ ಸ್ಪರ್ಧೆ ಕಡಿಮೆ.

* ಜನಸಂಖ್ಯೆಯಲ್ಲಿ ಭಾರತ ವಿಶ್ವದಲ್ಲಿ ಎರಡನೇ ಸ್ಥಾನದಲ್ಲಿದೆ. ಹಾಗಾಗಿ ನೈರ್ಮಲ್ಯ ಮತ್ತು ಆರೋಗ್ಯದ ದೃಷ್ಟಿಯಿಂದ ತಾಂತ್ರಿಕ ಜವಳಿಗಳು ಬೇಕಾಗಿವೆ.

* ಹೆಚ್ಚು ಸಂಘಟಿತ ಚಿಲ್ಲರೆ ಮತ್ತು ಆನ್‌ಲೈನ್ ವ್ಯವಹಾರ, ವಿತರಣೆ ಮತ್ತು ಗ್ರಾಹಕರ ಆಕರ್ಷಣೆ ದೃಷ್ಟಿಯಿಂದ ಅನುಕೂಲಕರ. ಜತೆಗೆ ಇದು ವಸ್ತ್ರೋದ್ಯಮ ವ್ಯಾಪಾರದ ಬೆಳವಣಿಗೆಯಲ್ಲಿ ಸಹಕಾರಿ.

* ಸಾಂಪ್ರದಾಯಿಕ ಜವಳಿಗೆ ಹೋಲಿಸಿದಲ್ಲಿ ತಾಂತ್ರಿಕ ಜವಳಿಯಿಂದ ಹೆಚ್ಚಿನ ಲಾಭ ನಿರೀಕ್ಷೆ ಮಾಡಬಹುದು.

* ವಿಶ್ವದ ಬೇರೆ ದೇಶಗಳಿಗೆ ಹೋಲಿಸಿದಲ್ಲಿ ಭಾರತದಲ್ಲಿ ತಾಂತ್ರಿಕ ಜವಳಿ ಬಳಕೆ ಕಡಿಮೆ. ಜಾಗತೀಕರಣ ತಾಂತ್ರಿಕ ಜವಳಿಯ ಅಗತ್ಯವನ್ನು ಪರಿಚಯಿಸುತ್ತಿದೆ. ಹೀಗಾಗಿ ಭಾರತದಲ್ಲಿ ಈ ಉದ್ಯಮಕ್ಕೆ ಹೆಚ್ಚಿನ ಅವಕಾಶ ಇದೆ. ಮನೆ ಜವಳಿ, ಮೊಬೈಲ್ ಟೆಕ್, ಸ್ಪೋರ್ಟ್ಸ್ ಟೆಕ್, ಬಳಕೆ ಹೆಚ್ಚಾಗುತ್ತಿದೆ.

* ತಾಂತ್ರಿಕ ಜವಳಿಗೆ ಮಾರುಕಟ್ಟೆ ರೂಪುಗೊಳ್ಳುತ್ತಿದೆ.

* ವಿಶ್ವ ಆರ್ಥಿಕ ಮಟ್ಟದಲ್ಲಿ ಭಾರತದ ಜವಳಿ ಉದ್ಯಮ ಎರಡನೇ ಸ್ಥಾನ ಪಡೆದಿದೆ. ಆದ್ದರಿಂದ ಪೂರೈಕೆ ಮಾಡುವ ವಿಧಾನ, ಬಲವಾದ ಆಮದು–ರಫ್ತು ಸಂಬಂಧಗಳು, ಮೂಲ ಸೌಕರ್ಯಗಳು ಭಾರತಕ್ಕೆ ವರದಾನವಾಗಿದೆ.

* ಜಾಗತೀಕರಣ ಭಾರತಕ್ಕೆ ಅಂತಾರಾಷ್ಟ್ರೀಯ ಮಾರುಕಟ್ಟೆ ಸೃಷ್ಟಿಸಿದೆ.

* ಕಡಿಮೆ ಖರ್ಚಿಗೆ ಸಿಗುವ ಕಾರ್ಮಿಕರು ಕೂಡ ತಾಂತ್ರಿಕ ವಸ್ತ್ರೋದ್ಯಮ ಬೆಳವಣಿಗೆಗೆ ಸಹಕಾರಿ.

### ತಾಂತ್ರಿಕ ಜವಳಿಗೆ ಬೇಡಿಕೆ

ಇತ್ತೀಚಿನ ದಿನಗಳಲ್ಲಿ ಈ ಉದ್ಯಮವು ಬಹಳ ವೇಗಗತಿಯಲ್ಲಿ ಬೆಳೆಯುತ್ತಿದೆ. ಒಂದು ಅಂಕಿ ಅಂಶದ ಪ್ರಕಾರ 2015ರಿಂದ 2020ರವರೆಗೆ ಈ ಉದ್ಯಮವು ಸರಿಸುಮಾರು 42.2 ದಶ ಲಕ್ಷ ಮೆಟ್ರಿಕ್ ಟನ್‌ವರೆಗೂ ಅಭಿವೃದ್ಧಿಯಾಗಲಿದೆ. ಭಾರತದಲ್ಲಿ ಶೇ. 8 ರಿಂದ 19 ರಷ್ಟು ಪ್ರತಿ ವರ್ಷ ಬೆಳವಣಿಗೆಯಾಗುತ್ತಿದೆ. ನಮ್ಮ ದೇಶದ ಒಟ್ಟು ಬೆಳವಣಿಗೆಯಲ್ಲಿ ಈ ಉದ್ಯಮದ ಪಾಲು ಕೇವಲ 0.75 ರಷ್ಟು. 2017–18ನೇ ಸಾಲಿನಲ್ಲಿ ಭಾರತದಲ್ಲಿ ಈ ಉದ್ಯಮದ ಬೆಳವಣಿಗೆ 1,16,217 ಕೋಟಿ ದಾಟುವ ನಿರೀಕ್ಷೆ ಇದೆ. ಚೀನಾ ಹಾಗೂ ಯುರೋಪ್ ದೇಶಗಳ ಪಾಲು ವಿಶ್ವದಲ್ಲೇ ಅತಿ ಹೆಚ್ಚಿದೆ. ಅಂದರೆ ಸರಿಸುಮಾರು ಶೇ. 75 ರಷ್ಟಿದೆ. ಭಾರತದ್ದು ಸರಿ ಸುಮಾರು ಶೇ. 3 ರಷ್ಟು.

### ಈ ತಾಂತ್ರಿಕ ಉದ್ಯಮವನ್ನು 12 ವಿವಿಧ ವಿಂಗಡಗಳಾಗಿ ವಿಭಜಿಸಲಾಗಿದೆ

1. ಕೃಷಿ (ತೋಟಗಾರಿಕೆ ಮತ್ತು ಅರಣ್ಯ). 2. ಕಟ್ಟಡ ಮತ್ತು ನಿರ್ಮಾಣ. 3. ಜವಳಿ (ಶೂಗಳು ಮತ್ತು ಬಟ್ಟೆ ತಾಂತ್ರಿಕ ಅಂಶಗಳು). 4. ಭೂ ತಂತ್ರಜ್ಞಾನ (ಸಿವಿಲ್ ಇಂಜಿನಿಯರಿಂಗ್). 5. ಮನೆಯ ಜವಳಿ (ಪೀಠೋಪಕರಣ ಘಟಕ, ಮತ್ತು ನೆಲ ಹೊದಿಕೆಗಳು). 6. ಪರಿಶೋಧನೆ (ಶುದ್ಧೀಕರಣ ಮತ್ತು ಕೈಗಾರಿಕಾ ಬಳಕೆ). 7. ಮೆಡಿಟೆಕ್ (ನೈರ್ಮಲ್ಯ ಮತ್ತು ವೈದ್ಯಕೀಯ).

8. ಸಂಚಾರ (ವಾಹನಗಳು, ಹಡಗು, ರೈಲು ಮತ್ತು ಅಂತರಿಕ್ಷಯಾನ). 9. ಪರಿಸರ ರಕ್ಷಣೆ. 10. ಪ್ಯಾಕೆಜಿಂಗ್. 11. ವೈಯಕ್ತಿಕ ಮತ್ತು ಆಸ್ತಿ ರಕ್ಷಣೆ. 12. ಕ್ರೀಡೆ ಮತ್ತು ಬಿಡುವಿನ ವೇಳೆ

**ಎದುರಿಸುತ್ತಿರುವ ಸವಾಲುಗಳು**

* **ವಿಶೇಷ ಕಚ್ಚಾ ವಸ್ತುಗಳ ಕೊರತೆ:** ಭಾರತದಲ್ಲಿ ಸಾಂಪ್ರದಾಯಿಕ ವಸ್ತ್ರೋತ್ಪನ್ನಕ್ಕೆ ಬೇಕಾಗಿರುವ ಎಲ್ಲಾ ರೀತಿಯ ಕಚ್ಚಾವಸ್ತುಗಳು ಲಭ್ಯವಿದೆಯಾದರೂ ತಂತ್ರಜ್ಞಾನ ಬಳಸಿಕೊಂಡು ತಯಾರಿಸುವ ಈ ತಾಂತ್ರಿಕ ವಸ್ತ್ರೋತ್ಪನ್ನಕ್ಕೆ ಬೇಕಿರುವ ವಸ್ತುಗಳು ಸಿಗದಿರುವುದು ಇದರ ಮಾರುಕಟ್ಟೆಗೆ ತಡೆಗೋಡೆಯಾಗಿ ಪರಿಣಮಿಸಿದೆ. ಉನ್ನತ ಕಾರ್ಯಕ್ಷಮತೆಯ ಕಚ್ಚಾ ಸಾಮಗ್ರಿಗಳು, ನಾರುಗಳು, ನೂಲುಗಳು ಬಟ್ಟೆಗಳು ದೊರಕದಿರುವುದು ಒಂದು ಅನಾನುಕೂಲವಾಗಿ ಪರಿಣಮಿಸಿದೆ. ಸ್ಪರ್ಧಾತ್ಮಕತೆ ದೃಷ್ಟಿಯಿಂದ ನಾನಾ ಪದಾರ್ಥಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ.

* **ತಂತ್ರಜ್ಞಾನ ಕೊರತೆ :** ಭಾರತದಲ್ಲಿ ಸಾಂಪ್ರದಾಯಿಕ ಜವಳಿ ತಂತ್ರಜ್ಞಾನವಿದೆ. ಆದರೆ ತಾಂತ್ರಿಕ ಜವಳಿ ತಂತ್ರಜ್ಞಾನದ ಕೊರತೆ ಇದೆ. ಕಚ್ಚಾ ವಸ್ತುಗಳೇನೋ ಇದೆ. ಆದರೆ, ತಯಾರಿಕಾ ಯಂತ್ರಗಳಿಲ್ಲ. ಬಹಳಷ್ಟು ಯಂತ್ರಗಳನ್ನು ಆಮದು ಮಾಡಲಾಗುತ್ತಿದೆ. ಇದರಿಂದ ಖರ್ಚು–ವೆಚ್ಚ ಹೆಚ್ಚಾಗಿದೆ.

* **ಪರಿಣಾಮಕಾರಿ ಮಾರುಕಟ್ಟೆ:** ತಾಂತ್ರಿಕ ವಸ್ತ್ರೋದ್ಯಮದಲ್ಲಿ ಹೊಸ ಉತ್ಪನ್ನ



ಅಭಿವೃದ್ಧಿಗೆ ಬಹು ಶಿಸ್ತಿನ ವಿಧಾನದ ಅಗತ್ಯವಿರುತ್ತದೆ. ಮಿತವ್ಯಯದ ಉತ್ಪನ್ನದ ಅಭಿವೃದ್ಧಿ, ಒಂದು ಸವಾಲಾದರೆ, ಮಾರುಕಟ್ಟೆ ಹುಡುಕುವುದು ಮತ್ತೊಂದು ಸವಾಲಾಗಿದೆ.

* **ನುರಿತ ನೌಕರರ ಕೊರತೆ :** ತಾಂತ್ರಿಕ ವಸ್ತ್ರೋತ್ಪನ್ನವು ಒಂದು ಸಂಕೀರ್ಣ ನಿರ್ದಿಷ್ಟ ರಚನೆಯಾಗಿದ್ದು ಕೆಲಸಗಾರರಿಗೆ ಇದರ ಕುರಿತು ಸಂಪೂರ್ಣ ಮಾಹಿತಿ ತಿಳಿದಿರಬೇಕಾಗುತ್ತದೆ. ಅವರು ಕೆಲಸ ಮಾಡುವ ಕ್ಷೇತ್ರದ ಅಗತ್ಯ ಕೌಶಲಗಳನ್ನು ತಿಳಿದುಕೊಳ್ಳಬೇಕಾಗುತ್ತದೆ.

* **ಗುಣಮಟ್ಟದ ಕೊರತೆ :** ತಾಂತ್ರಿಕ ವಸ್ತ್ರೋತ್ಪನ್ನವು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದು ಹತ್ತು ಹಲವು ಉತ್ಪನ್ನಗಳಿಗೆ ಸರಿಯಾದ ಗುಣಮಟ್ಟ ಮಾಪಕಗಳೇ ಇಲ್ಲವಾಗಿದೆ. ಈ ಗುಣಮಟ್ಟವನ್ನು ಆಧುನೀಕರಿಸುವ ತುರ್ತು ಅವಶ್ಯಕತೆ ನಮಗಿದೆ.

* **ಜಾಗೃತಿ ಕೊರತೆ :** ಭಾರತವು ನಗರೀಕರಣಗೊಳ್ಳುತ್ತಿದ್ದರೂ, ಜನರು ವಿದ್ಯಾವಂತರಾಗುತಿದ್ದರೂ ಬಹಳಷ್ಟು ಜನ ಬಡತನದ ರೇಖೆಯ ಕೆಳಗೆ ಇದ್ದಾರೆ, ಅನೇಕರಿಗೆ ತಾಂತ್ರಿಕ ವಸ್ತ್ರೋತ್ಪನ್ನಗಳನ್ನು ಕೊಳ್ಳಲಾಗುವುದಿಲ್ಲ, ಹಾಗೆಯೇ ಇದರ ಕುರಿತು ಅರಿವೂ ಸಹ ಇಲ್ಲ.

* **ಮೂಲಸೌಕರ್ಯ ಕೊರತೆ:** ಪ್ರಯೋಗಾಲಯಗಳು, ದೂರಸಂಪರ್ಕ, ಅಂತರ್ಜಾಲ, ಉತ್ಪಾದನಾ ವಲಯ ಮುಂತಾದ ಮೂಲಸೌಲಭ್ಯಗಳ ಕೊರತೆ ಇದ್ದು, ಇವುಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕಾಗಿದೆ.

* **ಸಂಘಟಿತ ವಲಯದ ಕೊರತೆ:** ಭಾರತದಲ್ಲಿ ವಸ್ತ್ರೋದ್ಯಮ ವಲಯ ಚದುರಿದೆ. ಸಾಂಪ್ರದಾಯಿಕ ಜವಳಿ ತಯಾರಿಕೆ ಹೆಚ್ಚು ವಿಕೇಂದ್ರೀಕೃತ ಆಗಿದೆ. ಇವುಗಳಲ್ಲಿ ಸಂಘಟಿತ ಮನೋಭಾವ ಮೂಡಬೇಕಿದೆ.


* **ಸಂಶೋಧನೆ – ಅಭಿವೃದ್ಧಿ :** ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ, ಕಾಲೇಜುಗಳಲ್ಲಿ ವಿಶ್ವಮಟ್ಟದ ಸಂಶೋಧನೆ – ಅಭಿವೃದ್ಧಿ ಆರ್ ಆ್ಯಂಡ್ ಡಿ ಸಂಸ್ಥೆಗಳ ಸ್ಥಾಪನೆಯಾಗಬೇಕಿದೆ.

* **ಕೋಡಿಂಗ್ ವ್ಯವಸ್ಥೆ :** ತಾಂತ್ರಿಕ ಉತ್ಪನ್ನಗಳ ಕೋಡಿಂಗ್ ಆಗಬೇಕು. ಯೂನಿಫಾರ್ಮ್ ಕೋಡಿಂಗ್ ವ್ಯವಸ್ಥೆಯ ಅವಶ್ಯಕತೆ ಸಹ ಇದೆ. ಚೀನಾದಂತಹ ಜಾಗತಿಕ ಮಾರುಕಟ್ಟೆಯಿಂದಲೂ ಬರುತ್ತಿರುವ ಸ್ಪರ್ಧೆ ಎದುರಿಸುವುದು ಭಾರತಕ್ಕೆ ಬಹಳ ದೊಡ್ಡ ಸವಾಲಾಗಿದೆ.

* **ತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಮತ್ತು ನಿಬಂಧನೆಗಳು ಕೊರತೆ :** ವಸ್ತ್ರೋದ್ಯಮ ಉತ್ಪನ್ನಗಳಿಗೆ ಸೂಕ್ತ ತ್ಯಾಜ್ಯ ನಿರ್ವಹಣೆ ಪರಿಹಾರ ನೀಡಲು ತುರ್ತು ಕೇಂದ್ರಗಳಿಲ್ಲ. ವಿಶೇಷವಾಗಿ ತ್ಯಾಜ್ಯ ವಿಲೇವಾರಿ ಮಾಡುವ ಪರಿಸರ ಸ್ನೇಹಿ ವ್ಯವಸ್ಥೆ ಇಲ್ಲ.

**ಪಟ್ಟಿ 1 ತಾಂತ್ರಿಕ ಜವಳಿ ಪಾರಮ್ಯದ ಕೇಂದ್ರಗಳು**

| | ಸಂಸ್ಥೆಯ ಹೆಸರು | ವಲಯ |
|---|---|---|
| 1. | ದ ಸಿಂಥೆಟಿಕ್ಸ್ ಆರ್ಟ್ ಸಿಲ್ಕ್ ಮಿಲ್ಸ್ ರಿಸರ್ಚ್ ಅಸೋಸಿಯೇಟ್, ಮುಂಬಯಿ | ಅಗ್ರೋಟೆಕ್ |
| 2. | ಟೆಕ್ಸ್‌ಟೈಲ್ ಇಂಡಸ್ಟ್ರಿ ರಿಸರ್ಚ್ ಅಸೋಸಿಯೇಷನ್, ಅಹಮದಾಬಾದ್ | ಕಾಂಪೊಸಿಟ್ |
| 3. | ಟೆಕ್ಸಾಟೈಲ್ ರಿಸರ್ಚ್ ಅಸೋಸಿಯೇಷನ್, ಮುಂಬೈ | ಜಿಯೊಟೆಕ್ |
| 4. | ಪಿಎಸ್‌ಜಿ ಕಾಲೇಜ್ ಆಫ್ ಟೆಕ್ನಾಲಜಿ, ಕೊಯಂಬತ್ತೂರ್ | ಇಂಡುಟೆಕ್ |
| 5. | ದಿ ಸೌತ್ ಇಂಡಿಯನ್ ಟೆಕ್ಸ್‌ಟೈಲ್ಸ್, ರಿಸರ್ಚ್ ಅಸೋಸಿಯೇಷನ್, ಕೊಯಂಬತೂರ್ | ಮೆಡಿಟೆಕ್ |
| 6. | ಡಿಕೆಟಿಇ ಸೊಸೈಟಿ ಟೆಕ್ಸ್‌ಟೈಲ್ಸ್, ಇಂಜಿನಿಯರಿಂಗ್ ಇನ್‌ಸ್ಟಿಟ್ಯೂಟ್, ಈಚಲ ಕರಂಜಿ | ನಾನ್‌ವೂವನ್ |
| 7. | ನಾರ್ಥರ್ನ್ ಇಂಡಿಯಾ ಟೆಕ್ಸ್‌ಟೈಲ್ಸ್ ರಿಸರ್ಚ್ ಅಸೋಸಿಯೇಶನ್, ನಜಿಯಾಬಾದ್ | ಪ್ರೊಟೆಕ್ |
| 8. | ವೂಲ್ ರಿಸರ್ಚ್ ಅಸೋಸಿಯೇಶನ್ ಮುಂಬಯಿ | ಸ್ಪೋರ್ಟ್ಸ್‌ಟೆಕ್ |




**ತಾಂತ್ರಿಕ ಸೇವಾ ಪಾರಮ್ಯ ಕೇಂದ್ರಗಳಿಂದ ದೊರಕುವ ಸೇವೆ**

**ವೈದ್ಯಕೀಯ ಸಂಬಂಧಿ ಜವಳಿ ಉತ್ಪನ್ನವನ್ನು ವೃದ್ಧಿಸಲು ಭಾರತದ ನಡೆ**

ತಾಂತ್ರಿಕ ವಸ್ತ್ರೋತ್ಪನ್ನದ ಅಭಿವೃದ್ಧಿಗಾಗಿ ಭಾರತ ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ.

* ತಾಂತ್ರಿಕ ವಸ್ತ್ರೋತ್ಪನ್ನದ ಬೆಳವಣಿಗೆ ಹಾಗೂ ಪ್ರಗತಿ ಯೋಜನೆಯು ಸೆಂಟರ್ ಫಾರ್ ಎಕ್ಸಲೆನ್ಸ್ ಅನ್ನು ಸ್ಥಾಪಿಸಲು ಸಲಹೆ



ನೀಡಿದ್ದು, ಇಲ್ಲಿನ ಜನರಲ್ಲಿ ತಾಂತ್ರಿಕ ವಸ್ತ್ರೋತ್ಪನ್ನದ ಬಗ್ಗೆ ಅರಿವು ಮೂಡಿಸಲಿದೆ.

* ವಸ್ತ್ರೋತ್ಪನ್ನ ಖಾತೆಯ ಅಡಿಯಲ್ಲಿ ಟೆಕ್ನಾಲಜಿ ಮಿಷನ್ ಆನ್ ಟೆಕ್ನಿಕಲ್ ಟೆಕ್ಸ್‌ಟೈಲ್ ಎಂಬ ಯೋಜನೆಯನ್ನು ಸ್ಥಾಪಿಸಿದೆ.

* ಆಗ್ರೊ-ಜವಳಿ ಅನ್ನು ಭಾರತದೆಲ್ಲೆಡೆ ಹೆಚ್ಚಾಗಿ ಈಶಾನ್ಯ ಭಾರತದಲ್ಲೂ ಉತ್ತೇಜಿಸಲು ಯೋಜನೆಗಳನ್ನು ಹಮ್ಮಿಕೊಂಡಿದೆ. ಹಾಗೆಯೇ ಈಶಾನ್ಯ ಭಾರತ ಭಾಗದಲ್ಲಿ ಜಿಯೊ ಟೆಕ್ನಿಕಲ್ ಟೆಕ್ಸ್‌ಟೈಲ್ ಉತ್ತೇಜಿಸಲು ಯೋಜನೆಗಳನ್ನೂ ತಯಾರಿಸಿದೆ. ತಾಂತ್ರಿಕ ವಸ್ತ್ರೋತ್ಪನ್ನ ತಯಾರಕರಿಗೆ ಸುಲಭವಾಗಿ ಸಾಲ ಸೌಲಭ್ಯ ದೊರಕಿಸುವ ಯೋಜನೆ ಇದಾಗಿದೆ.

* ತಾಂತ್ರಿಕ ವಸ್ತ್ರೋತ್ಪನ್ನದ ಬಳಕೆ ಹಾಗೂ ಬೇಡಿಕೆ ಹೆಚ್ಚಿಸುವಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹಲವು ಯೋಜನೆಗಳನ್ನು ರೂಪಿಸಿವೆ.

* ಸೆಂಟರ್ ಫಾರ್ ಎಕ್ಸಲೆನ್ಸ್ ಸಂಸ್ಥೆಯು ಈ ವಸ್ತ್ರೋತ್ಪನ್ನದ ಉತ್ಪಾದನೆಗೆ ಸಹಾಯ ಮಾಡಲಿದ್ದು ಕಾರ್ಖಾನೆಗಳಿಗೆ ಉತ್ಪನ್ನದ ಪರೀಕ್ಷೆಗೆ, ತರಬೇತಿಗೆ ಹಾಗೂ ಅಭಿವೃದ್ಧಿಗೆ ಸಹಾಯ ಹಸ್ತ ನೀಡಲಿದೆ.

* ಪ್ರಮುಖ ತಾಂತ್ರಿಕ ಜವಳಿ ತಯಾರಿಕಾ ಯಂತ್ರಗಳ ಮೇಲೆ ಅಬ್ಕಾರಿ ಸುಂಕದಲ್ಲಿ ರಿಯಾಯಿತಿ ಇದೆ.

* ಈಶಾನ್ಯ ವಲಯದಲ್ಲಿ ಕೃಷಿ ಜವಳಿ ಬಳಕೆಯನ್ನು ಪ್ರೋತ್ಸಾಹಿಸುವ ಯೋಜನೆ ರೂಪಿಸಲಾಗಿದೆ.


* ಹೂಡಿಕೆದಾರರಿಗೆ ಸಬ್ಸಿಡಿ ಸಾಲ ಮತ್ತು ನೆರವು ನೀಡಲಾಗುತ್ತಿದೆ.

* ಉತ್ಕೃಷ್ಟತೆಯ ಕೇಂದ್ರಗಳ ಸ್ಥಾಪನೆ ಸ್ಥಾಪಿಸಲಾಗಿದೆ..

ಒಟ್ಟಾರೆ, ಜಗತ್ತಿನಲ್ಲಿ ತಾಂತ್ರಿಕ ಜವಳಿ ಒಂದು ಹೊಸ ಆಯಾಮವಾಗಿದೆ. ಈ ಉತ್ಪನ್ನಗಳನ್ನು ವೈದ್ಯಕೀಯ ವೃತ್ತಿಯಿಂದ ಹಿಡಿದು ಆಟೋಮೊಬೈಲ್ ತಂತ್ರಜ್ಞಾನದವರೆಗೂ ಬಳಸಲಾಗುತ್ತದೆ. ಭಾರತದಲ್ಲಿ ಈ ಉತ್ಪನ್ನಗಳ ತಲಾ ಬಳಕೆ ಇತರೆ ದೇಶಗಳಿಗಿಂತ ಕಮ್ಮಿ ಇರುವುದು, ಕೆಲಸಗಾರರು ಬೇಗ ಸಿಗುವುದರಿಂದ, ಕಚ್ಚಾ ವಸ್ತುಗಳು ಕೈಗೆಟಕುವುದರಿಂದ ಒಂದು ರೀತಿಯಲ್ಲಿ ಲಾಭದಾಯಕವಾಗಿದೆ. ಸರಿಯಾದ ನೀತಿ ಸರ್ಕಾರದ ಸಹಾಯದಿಂದ ಹೊಸ ಉದ್ದಿಮೆಗಳು ಉದಯಿಸಲಿವೆ. ಈ ಮೂಲಕ ಭಾರತದಲ್ಲಿ ವಸ್ತ್ರೋದ್ಯಮ ಪುನಶ್ಚೇತನಗೊಳ್ಳಲಿದೆ. ❑

# ರೇಷ್ಮೆ: ಸವಾಲು ಹಾಗೂ ಭವಿಷ್ಯದ ಹಾದಿ

* ಬಿ.ಎಸ್. ಅಂಗಡಿ
** ಕೆ.ಕೆ. ಶೆಟ್ಟಿ *** ಹೆಚ್. ನಾಗೇಶ ಪ್ರಭು



**ರೇಷ್ಮೆ ಎಳೆಯನ್ನು ವಸ್ತ್ರಗಳನ್ನಾಗಿ ಮಾಡುವ ನಿಯಮಿತ ಬಳಕೆ ಹೊರತುಪಡಿಸಿ, ಉಪ ಉತ್ಪನ್ನಗಳನ್ನು ಬಳಕೆ ಮಾಡುವುದಕ್ಕೆ ಬೇಕಾದಷ್ಟು ದಾರಿಗಳಿವೆ. ಇವುಗಳನ್ನು ದೂರದೃಷ್ಟಿ ಹಾಗೂ ನ್ಯಾಯಸಮ್ಮತವಾಗಿ ಬಳಕೆ ಮಾಡಿದಲ್ಲಿ, ರೇಷ್ಮೆ ಉತ್ಪಾದಕ ವಸ್ತುಗಳ ಮೌಲ್ಯವರ್ಧನೆಗೆ ಸಹಕಾರಿಯಾಗುತ್ತಲೇ, ಲಾಭಕ್ಕೆ ಸಂಬಂಧಿಸಿದ ಮಟ್ಟವನ್ನು ಆರೋಗ್ಯಕರವಾಗಿ ನಿರ್ವಹಿಸಬಹುದಾಗಿದೆ.**

**ವಸ್ತ್ರೋದ್ಯಮದ ರಾಣಿ ಎನಿಸಿರುವ ರೇಷ್ಮೆಯು,** ಕಾಲದ ಪರೀಕ್ಷೆಯನ್ನು ದೃಢವಾಗಿ ತಾಳಿಕೊಂಡಿದೆ. ಅಲ್ಲದೆ ಅದು ಪ್ರಪಂಚದಲ್ಲೆಲ್ಲಾ ಸಾಮಾನ್ಯ ಜವಳಿ ನಂತರದ ಅತಿಹೆಚ್ಚು ಬೇಡಿಕೆಯಿರುವ ವಸ್ತ್ರವಾಗಿ ಕಂಡುಬಂದಿದೆ. ಹೊಳಪು, ಮೃದುತ್ವ, ಹಗುರ, ತಾಪ–ಸಮಾನ ಗುಣಗಳು, ಬಣ್ಣಗಳನ್ನು ಹಿಡಿಯುವ ಅಸಾಧಾರಣ ಸಾಮರ್ಥ್ಯ, ದೀರ್ಘಬಾಳಿಕೆ ಹಾಗೂ ಸೌಂದರ್ಯಾಭಿರುಚಿಯ ಮೌಲ್ಯಗಳು ಇದಕ್ಕೆ ಕಾರಣವಾಗಿವೆ. ಅದು ತನ್ನದೇ ಆದ ವಿಶಿಷ್ಟ ಸ್ಥಾನ ಉಳಿಸಿಕೊಳ್ಳುವ ರೀತಿಯಲ್ಲಿ ಸಿಂಥೆಟಿಕ್ (ಕೃತಕ) ಹಾಗೂ ನಾನ್ ಸಿಂಥೆಟಿಕ್ (ಇತರೆ ನೈಸರ್ಗಿಕ) ನೂಲುಗಳ ಹೊಡೆತವನ್ನು ಸಹ ತಾಳಿಕೊಂಡಿದೆ. ಇದರಲ್ಲಿ ಸಹಜ ರೇಷ್ಮೆಯೆನ್ನಬಹುದಾದ ಆರ್ಥಿಕವಾಗಿ ಮಾರಾಟಕ್ಕೊಳಪಡುವ ಐದು ವೈವಿಧ್ಯಗಳಿದ್ದು, ಅವು ಮಲ್ಬರಿ, ಟ್ರಾಪಿಕಲ್ ಟಸರ್, ಓಕ್ ಟಸರ್, ಎರಿ ಮತ್ತು ಮುಗ ಎಂಬ ಹೆಸರುಳ್ಳವಾಗಿವೆ. ಇವುಗಳಲ್ಲಿ, ಮಲ್ಬರಿ (ಹಿಪ್ಪು ನೇರಳೆ) ರೇಷ್ಮೆಯು, ಹಿಪ್ಪು ನೇರಳೆ ಸೊಪ್ಪು ತಿನ್ನುವ ಬಾಂಬಿಕ್ಸ್‌ಮೊರಿ ಎಂಬ ಹುಳುವಿನಿಂದ ಉತ್ಪಾದಿತವಾಗುವಂಥದ್ದಾಗಿದೆ.

**ರೇಷ್ಮೆಯ ಐದು ಬಗೆಗಳು**

| | ಮಲ್ಬರಿ | ಟ್ರಾ. ಟಸರ್ | ಓ. ಟಸರ್ | ಎರಿ | ಮುಗ |
|---|---|---|---|---|---|
| ಚಿಟ್ಟೆ |  |  |  |  |  |
| ಮೊಟ್ಟೆ |  |  |  |  |  |
| ಸಸ್ಯ/ಆಹಾರ |  |  |  |  |  |
| ಲಾರ್ವಾ |  |  |  |  |  |
| ಕಕೂನ್‌ಗಳು |  |  |  |  |  |
| ರೇಷ್ಮೆ/ವಸ್ತ್ರ |  |  |  |  |  |

* ಮಾಜಿ ನಿರ್ದೇಶಕರು. ** ಸಹಕಾರ್ಯದರ್ಶಿ (ತಾಂತ್ರಿಕ). *** ಸದಸ್ಯ ಕಾರ್ಯದರ್ಶಿ, ಕೇಂದ್ರ ರೇಷ್ಮೆ ಮಂಡಳಿ, ಬೆಂಗಳೂರು.
E-mails : * bsangadi@gmail.com ** kks.csb@nic.in *** ms.csb@nic.in

ಮಲ್ಬರಿ ಹೊರತಾಗಿ ಇತರೆ ಹುಳುಗಳಿಂದ ಉತ್ಪಾದಿತವಾಗುವ ರೇಷ್ಮೆಯು ಹೊಸ ಅಸ್ಮಿತೆಯನ್ನು ಪಡೆದುಕೊಂಡಿದ್ದು, ಅದನ್ನು ಒಟ್ಟಾರೆಯಾಗಿ "ವನ್ಯ ರೇಷ್ಮೆಗಳು" ಎಂದು ಕರೆಯಲಾಗುತ್ತಿದೆ.

ರೇಷ್ಮೆ ಕೃಷಿಯೆನ್ನುವುದು, ರೇಷ್ಮೆಯನ್ನು ಪಡೆಯುವುದಕ್ಕೋಸ್ಕರ ಸೆರಿಸಿಜೆನಸ್ (ರೇಷ್ಮೆ ಉತ್ಪಾದಕ) ಹುಳುಗಳನ್ನು ಅಗಾಧ ಪ್ರಮಾಣದಲ್ಲಿ ಸಾಕುವುದಕ್ಕೆ ಸಂಬಂಧಪಟ್ಟಿದ್ದಾಗಿದೆ.

ರೇಷ್ಮೆ ವ್ಯವಸಾಯವು, ವಸ್ತ್ರೋದ್ಯಮದ ಘಟಕಕ್ಕೆ ಸಂಬಂಧಿಸಿದ ಅತಿ ಹೆಚ್ಚು ಶ್ರಮ ತೀವ್ರತೆಯುಳ್ಳ ಒಂದು ಉಪಘಟಕವಾಗಿದೆ. ಇದು ಕೃಷಿಕ್ಷೇತ್ರ ಹಾಗೂ ಕೃಷಿಕ್ಷೇತ್ರರಹಿತ ಚಟುವಟಿಕೆಗಳೆರಡನ್ನೂ ಜೊತೆಗೂಡಿಸಿಕೊಂಡಿದೆ. ಇವುಗಳೆಂದರೆ ರೇಷ್ಮೆಹುಳುಗಳಿಗೆ ಸಂಬಂಧಿಸಿದ ಆಹಾರಸಸ್ಯಗಳನ್ನು ಬೆಳೆಸುವುದು. ರೇಷ್ಮೆಗೂಡು (ಕಕೂನ್‌ಗಳ) ಉತ್ಪಾದನೆಗೋಸ್ಕರವೇ ರೇಷ್ಮೆ ಹುಳುಗಳನ್ನು ಸಾಕುವುದು ರೇಷ್ಮೆ ಗೂಡುಗಳನ್ನು ಬಿಚ್ಚಿ ಎಳೆಯನ್ನು ತೆಗೆಯುವುದು. ಕಕೂನ್ (ಎಳೆ ಬಿಡಿಸಿದ) ನಂತರದ ಇತರೆ ಪ್ರಕ್ರಿಯೆಗಳಾದ ಹೆಣೆಯುವಿಕೆ, ಬಣ್ಣ ಹಾಕುವಿಕೆ, ನೇಯ್ಗೆ, ಪ್ರಿಂಟಿಂಗ್ ಹಾಗೂ ಸಂಸ್ಕರಣ.

ರೇಷ್ಮೆ ವಸ್ತ್ರೋದ್ಯಮ ಕೈಗಾರಿಕೆಯ ಚಟುವಟಿಕೆಗಳು, ವಿಶ್ವಸಂಸ್ಥೆ ಸಿದ್ಧ ಪಡಿಸಿರುವ 17 ಧ್ಯೇಯೋದ್ದೇಶಗಳಲ್ಲಿ 7 ಪ್ರಭಾವವಾದ ಸುಸ್ಥಿರ ಅಭಿವೃದ್ಧಿ ಧ್ಯೇಯೋದ್ದೇಶ (ಎಸ್.ಡಿ.ಜಿ.ಎಸ್.) ಗಳೊಂದಿಗೆ ಸಂಯೋಜಿತಗೊಂಡಿದೆ. ಅವು ಬಡತನ ನಿವಾರಣೆ, ಮಹಿಳಾ ಸಶಕ್ತೀಕರಣ, ಸುಸ್ಥಿರತೆ, ಎಲ್ಲರನ್ನು ಒಳಗೊಂಡ ಆರ್ಥಿಕ ಅಭಿವೃದ್ಧಿ, ಸಮಗ್ರ ಹಾಗೂ ಉತ್ಪಾದಿತ ಉದ್ಯೋಗ, ಅರಣ್ಯ ಸಸ್ಯ ಸಂಪತ್ತನ್ನು ನವೀಕರಿಸುವುದು ಹಾಗೂ ಹೆಚ್ಚಳಗೊಂಡ ಹಸಿರು ಹೊದಿಕೆಯ ಮೂಲಕ ಭೂಮಿಯ ಸವಕಲು ತಡೆಯುವುದು. ಈ ಕೈಗಾರಿಕೆಯ ಇತರೆ ಕೆಲವು ವೈಶಿಷ್ಟ್ಯಪೂರ್ಣ ಉನ್ನತಾಂಶಗಳು ಹೀಗಿವೆ :

* ಹೆಚ್ಚಿನ ಕಾರ್ಮಿಕ ದಳ ಭಾಗವಹಿಸುವಿಕೆಯ ದರ (ಎಲ್‌ಎಫ್‌ಟಿಆರ್)ವು ಬೃಹತ್ತಾದ ಉದ್ದೇಶವನ್ನು ಹುಟ್ಟುಹಾಕುವ ಸಾಮರ್ಥ್ಯವನ್ನೊಳಗೊಂಡಿರುವುದು.
* ಮಹಿಳೆಯರ ಪಾಲ್ಗೊಳ್ಳುವಿಕೆ (7.60%) ಹಾಗೂ ಕುಟುಂಬ ಸದಸ್ಯರನ್ನೊಳಗೊಳ್ಳುವ ಮೂಲಕ, ಕುಟುಂಬಕ್ಕೆ ಹೆಚ್ಚಿನ ಆದಾಯ ಬರುವುದಕ್ಕೆ ಕಾರಣವಾಗಿರುವುದು.
* ಆದಾಯದ 60% ರಷ್ಟು ಆದಾಯವು ಬೆಳೆಗಾರರಿಗೇ ಅಂದರೆ ಪ್ರಾಥಮಿಕ ಉತ್ಪಾದಕರಿಗೆ ಹಿಂದಿರುಗುವುದು.
* ಲಾಭಾಂಶವು ಶ್ರೀಮಂತ ಬಳಕೆದಾರರಿಂದ ಬಡವರಿಗೆ ಹರಿಯಲು ಸಾಧ್ಯವಾಗಿರುವುದು (ರೈತರು, ನೂಲು ತೆಗೆಯುವವರು ಮತ್ತು ನೇಯ್ಗೆಯವರು)
* ಪರಿಸರ ಸ್ನೇಹಿ ನಿರ್ವಹಣೆಯು, ಪರಿಸರ ವೈವಿಧ್ಯತೆಯನ್ನು ರಕ್ಷಿಸುವುದಕ್ಕೆ ಸಹಕಾರಿಯಾಗಿ ಹಾಗೂ ಸ್ವಾಭಾವಿಕವಾದ ವನ್ಯ ಆಹಾರ ಸಸ್ಯಗಳನ್ನೊಳಗೊಂಡು ಅರಣ್ಯಪ್ರದೇಶಗಳ ಸಂರಕ್ಷಣೆ ನೀಡುತ್ತದೆ.
* ರೇಷ್ಮೆಯ ಉಪ ಉತ್ಪನ್ನಗಳಾದ ಸೆರಿಸಿನ್, ಪೂಪೆ ಮುಂತಾದವುಗಳ ಮೂಲಕ ಹೆಚ್ಚುವರಿ ಆದಾಯ ಹುಟ್ಟಿಸುವ, ಗರಿಷ್ಠಮಟ್ಟದ ವ್ಯಾಪಾರ ಸಾಮರ್ಥ್ಯ.


### ಸ್ಥಾನಮಾನ

ಭಾರತೀಯ ರೇಷ್ಮೆ ಉದ್ಯಮವು, ಭಾರತೀಯ ವಸ್ತ್ರೋದ್ಯಮದ ಅಂತರ್ಗತ ಭಾಗವಾಗಿದೆ. ಚೀನಾ ನಂತರದಲ್ಲಿ ಜಾಗತಿಕವಾದ ಅತಿ ಹೆಚ್ಚಿನ ಉತ್ಪಾದಕ ದೇಶವಾಗಿದ್ದು ಜಾಗತಿಕ ಉತ್ಪಾದನೆಯ ಸುಮಾರು 14% ರಷ್ಟನ್ನು ಹೊಂದಿದೆ.

### ಭಾರತೀಯ ರೇಷ್ಮೆ ಉದ್ಯಮದ ಶಕ್ತಿ ಸಾಮರ್ಥ್ಯಗಳು ಹೀಗಿವೆ

* ಚೀನಾ ನಂತರ, ಜಾಗತಿಕವಾಗಿ 2ನೇ ಅತಿ ಹೆಚ್ಚಿನ ಉತ್ಪಾದನೆಯುಳ್ಳದ್ದಾಗಿದೆ.
* ಜಾಗತಿಕವಾಗಿ ಅತಿ ಹೆಚ್ಚಿನ ಬಳಕೆದಾರ ದೇಶವಾಗಿದೆ.
* ವಾಣಿಜ್ಯಕ್ಕೆ ಸಂಬಂಧಿಸಿದ ಮಾಪನದಲ್ಲಿ ರೇಷ್ಮೆಯ ಎಲ್ಲಾ ರೀತಿಯ ಐದೂ ಬಗೆಗಳನ್ನು ಜಗತ್ತಿನಲ್ಲಿ ಉತ್ಪಾದಿಸುವ ಏಕೈಕ ದೇಶವಾಗಿದೆ.

**ಜಾಗತಿಕ ಕಚ್ಚಾ ರೇಷ್ಮೆ ಉತ್ಪಾದನೆ (2015)**




* ಪ್ರಸಿದ್ಧವಾಗಿರುವ ಚಿನ್ನದ ವರ್ಣದ 'ಮುಗ' ರೇಷ್ಮೆಯ ಉತ್ಪಾದನೆಯಲ್ಲಿ ಜಾಗತಿಕವಾಗಿ ಏಕ ಸ್ವಾಮ್ಯತೆಯನ್ನು ಹೊಂದಿದೆ.
* ಬಲಿಷ್ಠವಾದ ದಾಕ್ಷಿಣಾತ್ಯ ವಲಯದ ಕೃಷಿ ಪರಿಸರದ ಸ್ಥಿತಿ–ಗತಿಗಳು ಇಡೀ ವರ್ಷ ರೇಷ್ಮೆಯನ್ನು ಪ್ರಾಯೋಗಿಕವಾಗಿಸುವುದಕ್ಕೆ ಯೋಗ್ಯವಾಗಿರುವುದು.
* ರೇಷ್ಮೆವ್ಯವಸಾಯದ ವಿಸ್ತೀರ್ಣಕ್ಕೆ ಯೋಗ್ಯವಾದ ಭೂಮಿಯನ್ನು ಯಥೇಚ್ಛವಾಗಿ ಹೊಂದಿರುವುದು.
* ಅತ್ಯಂತ ಶ್ರೇಷ್ಠ ವಿದ್ಯಾರ್ಹತೆ ಹಾಗೂ ಅನುಭವಿ ವಿಜ್ಞಾನಿಗಳು ಹಾಗೂ ತಾಂತ್ರಿಕ ಕೌಶಲ್ಯವುಳ್ಳ ವ್ಯಕ್ತಿಗಳನ್ನುಳ್ಳ, ಜಾಗತಿಕ ಮಟ್ಟದ ಸಂಶೋಧನಾ ಸಂಸ್ಥೆಯನ್ನು ಅಭಿವೃದ್ಧಿ ಅಭಿವೃದ್ಧಿಪಡಿಸಿರುವುದು.
* ಕುಶಲ ಕೆಲಸಗಾರರನ್ನೊಳಗೊಂಡ ಮಾನವ ಸಂಪನ್ಮೂಲವನ್ನು ಸಾಕಷ್ಟು ಹೊಂದಿರುವುದು.

ದೇಶದ ಕಚ್ಚಾ ರೇಷ್ಮೆ ಉತ್ಪಾದನೆಯು 2011–12 ರ ಅವಧಿ (11ನೇ ಯೋಜನೆಯ ಮುಕ್ತಾಯ) ಯಲ್ಲಿದ್ದ 23060 ಮೆಟ್ರಿಕ್‌ಟನ್‌ನಿಂದ 2015–16ರ ಅವಧಿಗೆ 28,472 ಮೆಟ್ರಿಕ್‌ಟನ್ ವಾರ್ಷಿಕವಾಗಿ 5.4% ಸಂಯುಕ್ತ ಬೆಳವಣಿಗೆಯ ದರದಲ್ಲಿ ಬೆಳೆದಿದೆ. ಬೈವೊಲ್ಟಿನ್ ರೇಷ್ಮೆ ಉತ್ಪಾದನೆಯು ವಾರ್ಷಿಕವಾಗಿ 28% ದ್ವಿಗುಣ ಅಭಿವೃದ್ಧಿಯ

| ಪಟ್ಟಿ 4 : ರೇಷ್ಮೆ ಸರಕುಗಳ ರಫ್ತು ಮತ್ತು ಅವುಗಳ ಮೌಲ್ಯ | | | | | |
|---|---|---|---|---|---|
| ಪದಾರ್ಥಗಳು | 2011–12<br>11ನೇ ಯೋಜನೆ | 2012–13 | 2013–14 | 2014–15 | 2015–16 |
| ಸ್ವಾಭಾವಿಕ ರೇಷ್ಮೆನೂಲು | 19.68 | 21.96 | 36.25 | 25.40 | 30.32 |
| ರೇಷ್ಮೆ ಬಟ್ಟೆಗಳು | 1497.97 | 1410.31 | 1455.63 | 1465.44 | 1280.60 |
| ಸಿದ್ಧ ಉಡುಪುಗಳು | 765.83 | 787.15 | 874.00 | 1214.01 | 1078.39 |
| ರೇಷ್ಮೆ ಹಾಸುರುಳಿಗಳು | 20.08 | 21.14 | 15.71 | 15.97 | 16.88 |
| ರೇಷ್ಮೆ ತ್ಯಾಜ್ಯ | 49.77 | 62.97 | 99.30 | 109.12 | 89.80 |
| ಒಟ್ಟು | 2353.33 | 2303.53 | 2480.89 | 2829.94 | 2495.99 |

(ಮೂಲ : ಎಫ್‌ಟಿಎಸ್‌ಐ & ಎಮ್‌ಎಸ್‌ಎಫ್‌ಟಿಐ ಡಿಜಿಸಿಐಎಸ್ ಕೊಲ್ಕೊತಾ)

ದಾಖಲೆಯನ್ನು ನಿರ್ಮಿಸಿದೆ. ಅದೇ ರೀತಿಯಲ್ಲಿ, ವನ್ಯ ರೇಷ್ಮೆ ಉತ್ಪಾದನೆಯು ಆ ಅವಧಿಯಲ್ಲಿ 13.8% ಅಭಿವೃದ್ಧಿಯನ್ನು ಸಾಧಿಸಿದೆ.

### ಕಚ್ಚಾ ರೇಷ್ಮೆ ಆಮದು

ಇಲ್ಲಿ ಹೇಳಲೇಬೇಕಾದ ಗಮನಾರ್ಹ ಅಂಶವೆಂದರೆ, ಹೆಚ್ಚಳಗೊಂಡ ಆಮದು ಪರ್ಯಾಯ ಬೈವೊಲ್ಟಿನ್ ಕಚ್ಚಾ ರೇಷ್ಮೆ ಉತ್ಪಾದನೆಯು, ಕಳೆದ ಐದು ವರ್ಷಗಳಲ್ಲಿ ಹೆಚ್ಚಳಗೊಂಡಿದೆ. ಇದರ ಪರಿಣಾಮವಾಗಿ ರೇಷ್ಮೆ ಆಮದು ಗಣನೀಯವಾಗಿ ಇಳಿಕೆಗೊಂಡಿದ್ದು, ಅದು 5683 ಮೆಟ್ರಿಕ್‌ಟನ್ (2011–12) ನಿಂದ 3529 ಮೆಟ್ರಿಕ್‌ಟನ್ (2015–16) ಆಗಿದೆ. ಆಮದು ಪರ್ಯಾಯ ಬೈವೋಲ್ಟಿನ್ ಕಚ್ಚಾ ರೇಷ್ಮೆ ಉತ್ಪಾದನೆಯ ಮೂಲಕ ಭಾರತವನ್ನು ಸ್ವಯಂ – ಸಂಪೂರ್ಣವನ್ನಾಗಿಸಿ, 2019 ರ ಹೊತ್ತಿಗೆ ಆಮದು ಮಾಡಿಕೊಳ್ಳದಂತೆ ಉದ್ದೇಶಿಸಲಾಗಿದೆ. (ಮೂಲ : ಡಿಜಿಐಸಿಎಸ್; ಕೊಲ್ಕತಾ)

### ರಫ್ತು

ಜಾಗತಿಕವಾಗಿ, ಭಾರತ ದೇಶವು ಎರಡನೇ ಅತಿ ದೊಡ್ಡ ರೇಷ್ಮೆ ಉತ್ಪಾದಕ ದೇಶವಾಗಿದ್ದರೂ ಕೂಡ, ಜಾಗತಿಕ ರೇಷ್ಮೆ ಮಾರಾಟಕ್ಕೆ ಸಂಬಂಧಿಸಿದಂತೆ ಭಾರತದ ಮಾರುಕಟ್ಟೆ ಪಾಲು ಗಣನೀಯವಾಗಿಲ್ಲ (<10%) ಇದಕ್ಕೆ ಕಾರಣ ಭಾರತ ದೇಶವು, ರೇಷ್ಮೆ ಸರಕುಗಳಿಗೆ ಬೃಹತ್ತಾದ ಆಂತರಿಕ ಮಾರುಕಟ್ಟೆ ಹೊಂದಿದ್ದು, ಉತ್ಪಾದಿತಗೊಂಡ ರೇಷ್ಮೆ ಸರಕಿನ 85% ರಷ್ಟು ಆಂತರಿಕ ಮಾರುಕಟ್ಟೆಯಲ್ಲಿ ಮಾರಾಟಗೊಳ್ಳುತ್ತಿವೆ. ಆದಾಗ್ಯೂ ಭಾರತವು ರೇಷ್ಮೆ ಸರಕಿಗೆ ಸಂಬಂಧಿಸಿದ ಎಲ್ಲವನ್ನು 15% ವರೆಗೆ ರಫ್ತು ಮಾಡುತ್ತಿದೆ. ಅವು (ಮೌಲ್ಯ–ಸೇರ್ಪಡೆಯ ವಸ್ತುಗಳು ಸೇರಿದಂತೆ) ಸ್ವಾಭಾವಿಕ ರೇಷ್ಮೆ ನೂಲು, ರೇಷ್ಮೆ ವಸ್ತ್ರಗಳು, ಸಿದ್ಧ ಉಡುಪುಗಳು, ರೇಷ್ಮೆ ಕಾರ್ಪೆಟ್‌ಗಳು ಹಾಗೂ ರೇಷ್ಮೆ ತ್ಯಾಜ್ಯ. ಭಾರತ ರೇಷ್ಮೆ ಸರಕುಗಳು ಸಾಂಪ್ರದಾಯಿಕವಾಗಿ ಪ್ರಧಾನ ಮಾರುಕಟ್ಟೆಗಳಾದ ಅಮೆರಿಕ ಸಂಯುಕ್ತ ಸಂಸ್ಥಾನ ಹಾಗೂ ಯೂರೋಪಿಯನ್ ದೇಶಗಳು ಮತ್ತು ಏಷ್ಯಾ ಭಾಗದಲ್ಲಿರುವ ಸಣ್ಣ ಮಾರುಕಟ್ಟೆಗಳಿಗೆ ರಫ್ತುಗೊಳ್ಳುತ್ತಿವೆ. ಕಳೆದ ವರ್ಷಗಳಲ್ಲಿ ಉಂಟಾದ ಜಾಗತಿಕ ಆರ್ಥಿಕ ದುಸ್ಥಿತಿಯಿಂದಾಗಿ ಹಾಗೇ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ರೇಷ್ಮೆ ಸರಕುಗಳಿಗೆ ಬೇಡಿಕೆ ಕಡಿಮೆಯಾದ ಕಾರಣದಿಂದಾಗಿ ರೇಷ್ಮೆ ಸರಕುಗಳ ರಫ್ತಿನ ಆದಾಯವು ಇಳಿಕೆಗೊಂಡಿದೆ.

2015–16 ರ ಅವಧಿಯಲ್ಲಿ ರಫ್ತಿನಿಂದಾದ ಆದಾಯವು ರೂ. 2495.99 ಕೋಟಿಗಳಷ್ಟಿತ್ತು. 11ನೇ ಯೋಜನೆಯಲ್ಲಿ ರೇಷ್ಮೆ ಸರಕುಗಳ ರಫ್ತು ಮೌಲ್ಯಗಳು ಹಾಗೂ 12ನೇ ಯೋಜನೆಯ ಮೊದಲ ನಾಲ್ಕು ವರ್ಷಗಳ ಅವಧಿಯನ್ನು ಪಟ್ಟಿ 4 ರಲ್ಲಿ ನೀಡಲಾಗಿದೆ.

ಸಂಶೋಧನೆ ಹಾಗೂ ಅಭಿವೃದ್ಧಿ, ಗುಣಮಟ್ಟ, ಉತ್ಪಾದಕತೆ ಹಾಗೂ ಉದ್ಯೋಗ ಸೃಷ್ಟಿಯ ಮೇಲೆ ಮಾಡಿದ ಪರಿಣಾಮ ಕೇಂದ್ರ ರೇಷ್ಮೆ ಮಂಡಳಿ ಹಾಗೂ ಇತರೆ ರಾಜ್ಯಗಳ ಸಂಶೋಧನೆ ಹಾಗೂ ಅಭಿವೃದ್ಧಿಯ ಪ್ರಯತ್ನಗಳು ರೇಷ್ಮೆ ಉತ್ಪಾದನೆಯ ಗುಣಮಟ್ಟ, ಪ್ರಮಾಣ ಹಾಗೂ ಉತ್ಪಾದಕತೆಯಲ್ಲಿ ಗಣನೀಯ ಸುಧಾರಣೆಯನ್ನುಂಟು ಮಾಡಿವೆ ಹಾಗೆಯೇ, ಮಲ್ಬರಿ ರೇಷ್ಮೆ ಉತ್ಪಾದನೆಯು 1997 ರಲ್ಲಿ ಒಂದು ಹೆಕ್ಟೇರ್‌ಗೆ 46 ಕೆ.ಜಿ. ಇದ್ದಿದ್ದು, 2015–16 ರ ಅವಧಿಯ ಹೊತ್ತಿಗೆ ಒಂದು ಹೆಕ್ಟೇರ್‌ಗೆ 101 ಕೆ.ಜಿ.ಗೆ ಏರಿದೆ. ಇದಕ್ಕೆ ಸಂಬಂಧಿಸಿದ ರೆಂಡಿಟ್ಟಾ, ಅದೇ ಅವಧಿಯಲ್ಲಿ 8.9 ರಿಂದ 7.4 ಕ್ಕೆ ಇಳಿದಿದೆ. ಈ ರೀತಿಯ ಗಣನೀಯ ಸಾಧನೆಗಳು ಆಗಿರುವುದಕ್ಕೆ ಕಾರಣ – ಸುಧಾರಿತ ರೇಷ್ಮೆ ಹುಳುವಿನ ಆಹಾರ ಸಸ್ಯಗಳು, ಹೆಚ್ಚು ಇಳುವರಿ ನೀಡುವ ರೇಷ್ಮೆ ಹುಳುವಿನ ತಳಿಗಳು, ಗುಣಮಟ್ಟವುಳ್ಳ ರೇಷ್ಮೆಹುಳುವಿನ ಬೀಜಗಳ ಉತ್ಪಾದನೆ ಹಾಗೂ ಪೂರೈಕೆ, ಮುಂದುವರಿದ ಸಂಸ್ಕರಣೆ ಹಾಗೂ ಪೋಷಣ ಆಚರಣೆಗಳು ಹಾಗೂ ಕಕೂನೋತ್ತರ ಪ್ರಕ್ರಿಯೆಗಳಲ್ಲಾಗಿರುವ ಸುಧಾರಣೆಗಳೇ ಆಗಿವೆ.

ಭಾರತೀಯ ರೇಷ್ಮೆ ಕೈಗಾರಿಕೆಯು ಸುಮಾರು 1.2 ಮಿಲಿಯನ್‌ನಷ್ಟು ಅನುಷ್ಠಾನಗೊಳಿಸುವ ಜನರನ್ನು ಹೊಂದಿದ್ದು, 8.28 ಮಿಲಿಯನ್ ಜನರು ಉದ್ಯೋಗ ಒಳಸಾಮರ್ಥ್ಯ ಹೊಂದಿದವರನ್ನು ಒಳಗೊಂಡಿದೆ. ವಸ್ತ್ರೋದ್ಯಮ ಘಟಕದ ಶೇಕಡಾ 20 ಕ್ಕಿಂತ ಹೆಚ್ಚಿನ ಮೊತ್ತವನ್ನೊಳಗೊಂಡು, ಬೆಳವಣಿಗೆ ಹಾಗೂ ಸುಸ್ಥಿರತೆಯ ಚಲನೆಯನ್ನು ನಿರ್ವಹಣೆ ಮಾಡಿದೆ. ಇವೆಲ್ಲಾ, ತೀವ್ರತರವಾದ ಕೈಗಾರೀಕರಣ ಹಾಗೂ ಕೃಷಿಯೋಗ್ಯ ಭೂಮಿಯ ಮೇಲೆ ಹೆಚ್ಚುತ್ತಿರುವ ಒತ್ತಡವಿದ್ದಾಗ್ಯೂ ಸಹ ಮಾಡಿದ ನಿರ್ವಹಣೆಯಾಗಿದೆ.

### ಜಾಗತಿಕ ಸನ್ನಿವೇಶದಲ್ಲಿ ಭಾರತೀಯ ರೇಷ್ಮೆಯ ಸ್ಪರ್ಧಾತ್ಮಕತೆ

ಇತ್ತೀಚೆಗೆ ರೇಷ್ಮೆಕೃಷಿಗೆ ಸಂಬಂಧಿಸಿದ ಜಾಗತಿಕ ಸನ್ನಿವೇಶದಲ್ಲಿ ಭಾರಿ ಬದಲಾವಣೆಗಳು ಕಂಡುಬರುತ್ತಿವೆ. ಕೈಗಾರೀಕರಣ, ವೆಚ್ಚದ ಹರಿವು ಹೆಚ್ಚಾಗುವುದಕ್ಕೆ ಕಾರಣವಾಗಿದ್ದು ಹಾಗೂ ಕೃಷಿ ಸಂಬಂಧಿ ದುಡಿಮೆಯನ್ನು ಇತರೆ ಕೈಗಾರಿಕೆ ಹಾಗೂ ಸೇವಾ ಘಟಕಗಳ ಜೊತೆ ಮರುಜೋಡಣೆ ಮಾಡಿರುವುದರಿಂದಾಗಿ, ಅನೇಕ ದೇಶಗಳಲ್ಲಿ ರೇಷ್ಮೆ ಉತ್ಪಾದನೆಯು ಇಳಿಕೆಕೊಂಡಿರುವುದನ್ನು ನಾವು

ನೋಡುತ್ತಿದ್ದೇವೆ. (ವಿಘಟನೆಗೊಳ್ಳದ) ಸಂಯುಕ್ತ ಸೋವಿಯತ್ ರಷ್ಯಾ, ದಕ್ಷಿಣ ಕೊರಿಯಾ, ಬ್ರೆಜಿಲ್ ಹಾಗೂ ಥಾಯ್‌ಲ್ಯಾಂಡ್‌ಗಳು ಅಂತಾರಾಷ್ಟ್ರೀಯ ಸ್ಪರ್ಧಾತ್ಮಕ ಬೆಲೆಗಳಲ್ಲಿ ರೇಷ್ಮೆ ಉತ್ಪಾದನೆಯನ್ನು ತ್ವರಿತಗೊಳಿಸುವುದಕ್ಕೆ ಕಠಿಣ ಸಂದರ್ಭವನ್ನು ಎದುರಿಸುತ್ತಿವೆ. ರೇಷ್ಮೆ ಉತ್ಪಾದಿಸುವ ಇತರೆ ಯಾವುದೇ ದೇಶಕ್ಕಿಂತ ಭಾರತದಲ್ಲಿ ಸ್ಪರ್ಧಾತ್ಮಕ ಅನುಕೂಲಗಳು ತುಂಬಾ ಹೆಚ್ಚಾಗಿದೆ. ಅಂತಾರಾಷ್ಟ್ರೀಯ ರೇಷ್ಮೆ ಉತ್ಪಾದನೆಯ ಒಲವುಗಳು ಸೂಚಿಸುವಂತೆ, ಭಾರತದಲ್ಲಿ ರೇಷ್ಮೆ ವ್ಯವಸಾಯದ ಅಭಿವೃದ್ಧಿಗೆ ತುಂಬಾ ಆಶಾದಾಯಕವಾದ ವ್ಯಾಪ್ತಿಯಿದೆ.

ಜಪಾನ್‌ನಲ್ಲಿ ರೇಷ್ಮೆ ಉತ್ಪಾದನೆಯು ಸಂಪೂರ್ಣ ಇಳಿಕೆಗೊಂಡಿರುವಂತೆಯೇ, ಬಲಿಷ್ಠ ಚೀನಾ ದೇಶವು ಉತ್ಪಾದನೆಯನ್ನು ತೀವ್ರಗೊಳಿಸುವ ಸಲುವಾಗಿ, ತನ್ನ ಉತ್ಪಾದನಾ ನೆಲೆಗಳನ್ನು ಸಾಂಪ್ರದಾಯಿಕವಲ್ಲದ ಕ್ಷೇತ್ರಗಳಿಗೆ ಸ್ಥಳಾಂತರಿಸುವ ಪ್ರಯತ್ನ ಮಾಡುತ್ತಿದೆ.

ಭಾರತವು, ಚೀನಾಕ್ಕಿಂತ ಹೆಚ್ಚಿನ ಕೃಷಿ ಭೂಮಿಯನ್ನು ಹೊಂದಿದ್ದು, ವರ್ಷಪೂರ್ತಿ ಕಕೂನ್ ಉತ್ಪಾದನೆಗೆ ಬೇಕಾಗುವ, ಹವಾಮಾನದ ಸ್ಪರ್ಧಾತ್ಮಕ ಅನುಕೂಲ ಹೊಂದಿರುವುದಾಗಿದೆ (ರೇಷ್ಮೆ ಹೆಚ್ಚು ಉತ್ಪಾದನೆಗೊಳ್ಳುವ ದಕ್ಷಿಣದ ರಾಜ್ಯಗಳಲ್ಲಿ). ಈ ರೀತಿ ಭಾರತವು ತನ್ನ ಉತ್ಪಾದನೆಯನ್ನು ಮೇಲೋಯ್ಯುವುದಾದಲ್ಲಿ ಉತ್ತಮ ಭವಿಷ್ಯವನ್ನು ಹೊಂದಿದೆ. ಇದರಿಂದಾಗಿ ರಫ್ತಿನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಗಣನೀಯ ಸಾಮರ್ಥ್ಯ ಹೊಂದಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ತನ್ನದೇ ಆದ ಬ್ರಾಂಡ್ ಅಸ್ಮಿತೆಯನ್ನು ಸ್ಥಾಪನೆ ಮಾಡುತ್ತಿದೆ.

**ಪಟ್ಟಿ 3 – ಚೀನಾ ಮತ್ತು ಭಾರತ**

| ವಿವರಗಳು | ಚೀನಾ | ಭಾರತ |
|---|---|---|
| ಹವಾಮಾನದ ಸ್ಥಿತಿ–ಗತಿ | ಟೆಂಪರೇಟ್ | ಟ್ರಾಪಿಕಲ್/ ಸಬ್‌ಟ್ರಾಪಿಕಲ್/ ಟೆಂಪರೇಟ್ |
| ಉತ್ಪಾದನಾ ವ್ಯವಸ್ಥೆ | ಸಂಘಟಿತ ಬೃಹತ್ ಕಕೂನ್ ಪೂರ್ವ ಹಾಗೂ ಕಕೂನ್ ಉತ್ತರ ಘಟಕಗಳೂ | ಅಸಂಘಟಿತ ಸಣ್ಣ ಪ್ರಮಾಣ |
| ಆರ್ಥಿಕ ವ್ಯವಸ್ಥೆ | ಸರ್ಕಾರಿ ನಿಯಂತ್ರಣಕ್ಕೆ ಒಳಪಟ್ಟಿದೆ | ಮಾರುಕಟ್ಟೆಯಿಂದ ಆಗುವ ಚಲನೆ |
| ಮಲ್ಬರಿ ಪ್ರದೇಶ (ಹೆಚ್‌ಎ) | 8.22 ಲಕ್ಷ | 2.10 ಲಕ್ಷ |
| ಪೋಷಿಸಲ್ಪಡುವ ತಳಿಗಳು | ಎಲ್ಲಾ ಬೈವೋಲ್ಟಿನ್‌ಗಳು | 78% ಮಿಶ್ರತಳಿ 22% ಬೈವೋಲ್ಟಿನ್ |
| ಬೈವೋಲ್ಟಿನ್ ರೇಷ್ಮೆ ಗ್ರೇಡ್ | 6ಎ ವರೆಗೆ | 3ಎ ವರೆಗೆ |
| ಬಳಕೆದಾರರ | 80% ರಫ್ತು | 85% ದೇಸಿ, 15% ರಫ್ತು |
| ವಿನ್ಯಾಸ | 20% ದೇಸಿ | 11% ಆಮದು |
| ರಫ್ತು ಗಳಿಕೆ (ಮಿಲಿಯನ್ ಅಮೆರಿಕ ಡಾಲರ್) 2015–16 | 3068.95 | 389.53 |


ಪಟ್ಟಿ 3 ಚೀನಾ ಮತ್ತು ಭಾರತಗಳ ಬಗ್ಗೆ ತುಲನಾತ್ಮಕ ಮಾಹಿತಿಯನ್ನು ಒದಗಿಸುತ್ತದೆ.

ಮಲ್ ಬರಿ ಬೆಳವಣಿಗೆಗೆ ಸಂಬಂಧಿಸಿದ ಪ್ರದೇಶವು ಚೀನಾದಲ್ಲಿ ನಮ್ಮ ದೇಶಕ್ಕಿಂತ ಬಹುಮಟ್ಟಿಗೆ ನಾಲ್ಕರಷ್ಟಿರುವುದು ಸ್ಪಷ್ಟವಾಗಿ ಕಾಣುತ್ತಿದ್ದು ಭಾರೀ ಉತ್ಪಾದನೆಗೆ ಅದು ಕಾರಣವಾಗಿದೆ.

**ದೂರದೃಷ್ಟಿ**

ಕೇಂದ್ರ ರೇಷ್ಮೆ ಮಂಡಳಿಯು ರೇಷ್ಮೆ ಘಟಕವನ್ನು ಇಡೀ ದೇಶಾದ್ಯಂತ ಅಭಿವೃದ್ಧಿಪಡಿಸುವ ಜವಾಬ್ದಾರಿ ಹೊತ್ತಿದ್ದು, 2020 ರವೇಳೆಗೆ 8500 ಮೆಟ್ರಿಕ್‌ಟನ್‌ನಷ್ಟು ಬೈವೋಲ್ಟಿನ್ ಕಚ್ಚಾ ರೇಷ್ಮೆ ಉತ್ಪಾದಿಸುವ ಯೋಜನೆಯನ್ನು ಹೊಂದಿದೆ. ಇದರಿಂದಾಗಿ ರೇಷ್ಮೆಗೆ ಸಂಬಂಧಪಟ್ಟಂತೆ ಭಾರತವನ್ನು ಆಮದುಮುಕ್ತ ರಾಷ್ಟ್ರವನ್ನಾಗಿ ಮಾಡುವ ಉದ್ದೇಶವಿದೆ.

ಜಾಗತಿಕ ರೇಷ್ಮೆ ಮಾರುಕಟ್ಟೆಯಲ್ಲಿ ಭಾರತದೇಶವು ಮುಂಚೂಣಿಯಲ್ಲಿ ಕಾಣಿಸಿಕೊಳ್ಳುವಂತಹ ದೂರದೃಷ್ಟಿ ಹೊಂದಿದೆ. ಈ ಪ್ರಕ್ರಿಯೆಯಲ್ಲಿ, ಅದು 2030 ರ ವೇಳೆಗೆ ಒಟ್ಟಾರೆ ರೇಷ್ಮೆ ಉತ್ಪಾದನೆಯನ್ನು 60000 ಮೆಟ್ರಿಕ್‌ಟನ್‌ಗೆ ಏರಿಸಲು ಗಮನಹರಿಸಿದೆ. ಅದೇ ಸಂದರ್ಭದಲ್ಲಿ ಆಮದು ಪರ್ಯಾಯವೆನಿಸಿರುವ ಬೈವೋಲ್ಟಿನ್ ಕಚ್ಚಾ ರೇಷ್ಮೆಯನ್ನು 20000 ಮೆಟ್ರಿಕ್‌ಟನ್‌ಗೆ ಏರಿಸುವ ಇಚ್ಛೆಹೊಂದಿದೆ. ಅಲ್ಪಾವಧಿ ಹಾಗೂ ದೀರ್ಘಾವಧಿ ಉತ್ಪಾದನೆಯ ಗುರಿಯನ್ನು ಗ್ರಾಫ್‌ನಲ್ಲಿ ನೀಡಲಾಗಿದೆ.



**ಸವಾಲುಗಳು ಮತ್ತು ಭವಿಷ್ಯದ ಹಾದಿ**


**1. ಸಾಂಪ್ರದಾಯಿಕ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ನಗರೀಕರಣ**

ದೇಶದಲ್ಲಿರುವ ಸಾಂಪ್ರದಾಯಿಕ ಕ್ಷೇತ್ರಗಳಲ್ಲಿನ ತೀವ್ರಗತಿಯ ಆರ್ಥಿಕ ಅಭಿವೃದ್ಧಿಯ ಜೊತೆಯಲ್ಲಿಯೇ, ಕೈಗಾರಿಕೀಕರಣ ಹಾಗೂ ನಗರೀಕರಣ ಪ್ರಕ್ರಿಯೆಯು ಗಣನೀಯವಾಗಿ ಉತ್ಕರ್ಷಗೊಂಡಿದೆ. ಇದರ ಜೊತೆಗೆ ಮಿಳಿತಗೊಂಡಿರುವ ಭೂಮಿ ಹಾಗೂ ಶ್ರಮವೆಚ್ಚಗಳು ಅಲ್ಲಿರುವ ರೇಷ್ಮೆ ಕೃಷಿಗೆ ಸಂಬಂಧಿಸಿದ ಸಮಾನಸ್ಥಲದ ವಿಸ್ತರಣೆಗೆ ಅಡ್ಡಿಯುಂಟು ಮಾಡುತ್ತಿವೆ.

ಮಧ್ಯಪ್ರದೇಶ, ಮಹಾರಾಷ್ಟ್ರ ಮೊದಲಾದ ರಾಜ್ಯಗಳಲ್ಲಿ ಹೇರಳವಾಗಿರುವ ಸಿಕ್ಕಿರುವ ಭೂಮಿ ಹಾಗೂ ಶ್ರಮಿಕ ಸಂಪನ್ಮೂಲಗಳಲ್ಲಿ ಸಾಂಪ್ರದಾಯಿಕವಲ್ಲದ ಕ್ಷೇತ್ರಗಳಿಗೆ ಉತ್ಪಾದನಾ ನೆಲೆಗಳನ್ನು ವಿಸ್ತರಿಸುವ ಮೂಲಕ, ಖಂಡಿತವಾಗಿಯೂ ಕಚ್ಚಾ ರೇಷ್ಮೆ ಉತ್ಪಾದನೆ ಅಭಿವೃದ್ಧಿಯನ್ನು ತುಂಬಾ ಹೆಚ್ಚಿನದಕ್ಕೆ ಕೊಂಡೊಯ್ಯಬಹುದಾಗಿದೆ. ಅಂಥ ಸ್ಥಳಗಳು ಕೂಡ ರೇಷ್ಮೆ ಕೃಷಿಯನ್ನು ಅಭಿವೃದ್ಧಿಗೊಳಿಸುವ ಪ್ರಾಕೃತಿಕ ಸ್ಥಿತಿಗಳನ್ನು ಹಾಗೂ ಸಾಮಾಜಿಕ ನೆಲೆಗಳನ್ನು ಹೊಂದಿರುವಂಥವಾಗಿವೆ.

**2. ಆಮದಿಗೆ ಪರ್ಯಾಯವಾದ ಬೈವೊಲ್ಟಿನ್ ಕಚ್ಚಾ ರೇಷ್ಮೆ ಉತ್ಪಾದನೆಯನ್ನು ವೃದ್ಧಿಪಡಿಸುವುದು.**

ನಮ್ಮ ಪವರ್‌ಲೂಮ್‌ಗಳಿಗೆ ಅಗತ್ಯವಿರುವ ಬಲಿಷ್ಠ ಹಾಗೂ ದೃಢತೆಯುಳ್ಳ ಉತ್ತಮದರ್ಜೆಯ ಕಚ್ಚಾ ರೇಷ್ಮೆಯನ್ನು ಬೈವೊಲ್ಟಿನ್ ತಳಿಗಳು ಮಾತ್ರವೇ ಉತ್ಪಾದಿಸಬಲ್ಲವು. ಆದಾಗ್ಯೂ, ನಮ್ಮ ಪ್ರಾದೇಶಿಕ ಬೇಡಿಕೆಯನ್ನು ಕೂಡ ಪೂರೈಸುವುದಕ್ಕೆ ಬೇಕಾದ ಮೆಚ್ಚುಗೆಗೆ ಪಾತ್ರವಾಗಬಲ್ಲ ಗುಣಶಕ್ತಿಯುಳ್ಳ ಆಮದು ಪರ್ಯಾಯ ಬೈವೊಲ್ಟಿನ್ ಕಚ್ಚಾ ರೇಷ್ಮೆಯನ್ನು ಉತ್ಪಾದಿಸಲು ನಾವು ಅಶಕ್ತರಾಗಿದ್ದೇವೆ. ನಮ್ಮ ಪವನ್‌ಲೂಮ್‌ಗಳಿಗೆ ಇರುವ ಅಗತ್ಯಗಳನ್ನು ಪೂರೈಸುವುದಕ್ಕೆ ನಾವು ಆಮದಿನ ಮೇಲೆ ಅವಲಂಬಿತರಾಗಿದ್ದೇವೆ. ಬೈವೊಲ್ಟಿನ್ ರೇಷ್ಮೆ ಕೃಷಿಯನ್ನು ಉಷ್ಣವಲಯಕ್ಕೊಗ್ಗಿಸುವಿಕೆ ಹಾಗೂ ಜನಪ್ರಿಯಗೊಳಿಸುವಿಕೆಯು ನಮ್ಮ ದೇಶಕ್ಕೊಂದು ದೊಡ್ಡ ಸವಾಲಾಗಿದೆ.



ಬೈವೊಲ್ಟಿನ್ ರೇಷ್ಮೆ ವ್ಯವಸಾಯವು ತಾಂತ್ರಿಕ ಆಧಿಕ್ಯಕ್ಕೆ ಒಳಪಟ್ಟಿದ್ದು ಮಾತ್ರವಲ್ಲ ಅದು ಬಂಡವಾಳ ಆಧಿಕ್ಯವನ್ನು ಒಳಗೊಂಡಿರುವಂಥದ್ದು. ಈ ರೀತಿಯ ಸವಾಲಾಗಿರುವ ಪರಿಸ್ಥಿಯಲ್ಲಿ ನಾವು ಗುಣಾತ್ಮಕವೆನ್ನುವ ಬೈವೊಲ್ಟಿನ್ ಬೀಜೋತ್ಪಾದನೆಗೆ ಹೆಚ್ಚು ಬಂಡವಾಳ ಹೂಡಬೇಕಿದೆ. ಇದರಿಂದ ಪ್ರಗತಿದಾಯಕ ಕಕೂನೋತ್ತರ ಸೌಲಭ್ಯಗಳನ್ನು ಸೃಷ್ಟಿಸಬಹುದಾಗಿದೆ. ಕಾಲಪರೀಕ್ಷೆಯನ್ನು ಗೆದ್ದಿರುವ ಉಷ್ಣ ವಲಯ ಸಂಬಂಧಿ ಬೈವೊಲ್ಟಿನ್ ರೇಷ್ಮೆ ಕೃಷಿಯ ತಂತ್ರಜ್ಞಾನ ಲಭ್ಯ ಇದೆ, ಒಳಸಾಮರ್ಥ್ಯವಿರುವ ವಲಯಗಳಲ್ಲಿ ಅದನ್ನು ಭಾರಿ ಪ್ರಮಾಣದಲ್ಲಿ ವಿಸ್ತರಿಸುವ ಅಗತ್ಯವಿದೆ. ಬೈವೊಲ್ಟಿನ್ ರೇಷ್ಮೆ ಕೃಷಿ ಜನಪ್ರಿಯಗೊಳಿಸುವ ಕಾರ್ಯ ಮಾಪನ, ವೇಗ ಹಾಗೂ ಕೌಶಲಗಳೆಂಬ ಮೂರು ಸ್ತಂಭಗಳನ್ನು ಆಧರಿಸಿದೆ. ನಮ್ಮ ಬೈವೊಲ್ಟಿನ್ ಉತ್ಪಾದನೆಯನ್ನು 20000 ಮೆಟ್ರಿಕ್ ಟನ್‌ಗೆ ಏರಿಸುವಲ್ಲಿ ಗಮನಾಸಕ್ತರಾಗಿರುವಂತೆಯೇ, ನಮ್ಮ ರೈತರ, ನೂಲುವವರ ಹಾಗೂ ನೇಯ್ಗೆಯವರ ಕೌಶಲಗಳನ್ನು ಅಭಿವೃದ್ಧಿಪಡಿಸುತ್ತಾ, ತೀವ್ರಗತಿಯಲ್ಲಿ ವೈಭವದ ಉತ್ತುಂಗ ತಲುಪಿ, ಭಾರತವನ್ನು ನಿಜಕ್ಕೂ ಜಾಗತಿಕ ರೇಷ್ಮೆ ಮುಂದಾಳು ದೇಶವನ್ನಾಗಿ ಮಾಡಬೇಕಾಗಿದೆ.

**3. ನಂಬಲರ್ಹ ಬೈವೊಲ್ಟಿನ್ ವಾಣಿಜ್ಯೀಕರಣ ಬೀಜ ಉತ್ಪಾದನೆ ಮತ್ತು ಪೂರೈಸುವಿಕೆ**

ರೇಷ್ಮೆ ಹುಳುವಿನ ಬೀಜವು, ಗುಣಾತ್ಮಕವಾದ ಕಚ್ಚಾ ರೇಷ್ಮೆಯನ್ನು ಉತ್ಪಾದಿಸುವುದಕ್ಕೆ ಬೇಕಾದ ಮೂಲಭೂತ ಒಳಹರಿವಾಗಿದೆ. ಆಮದು ಪರ್ಯಾಯ ಬೈವೊಲ್ಟಿನ್ ಕಚ್ಚಾ ರೇಷ್ಮೆಯ ಉತ್ಪಾದನೆಯನ್ನು ನಮ್ಮ ದೇಶದಲ್ಲಿ ತ್ವರಿತಗೊಳಿಸುತ್ತಿರುವಂತೆಯೇ, ಅಗತ್ಯವಿರುವ ವಾಣಿಜ್ಯೀಕರಣ ಹಾಗೂ ಅದಕ್ಕನುಗುಣ ಪ್ರಮಾಣದಲ್ಲಿ ಬೈವೊಲ್ಟಿನ್ ಬೀಜವೂ ಕೂಡ ಹೆಚ್ಚಾಗಬೇಕಾಗಿದೆ.

ವಾಣಿಜ್ಯೀಕರಣ ಬೈವೊಲ್ಟಿನ್ ಬೀಜವನ್ನು ಅಗಾಧ ಪ್ರಮಾಣದಲ್ಲಿ ಉತ್ಪಾದಿಸಬೇಕೆಂದಲ್ಲಿ ರೇಷ್ಮೆಹುಳ ಬೀಜದ ಖಾಸಗಿ ಉತ್ಪಾದಕರ ಜೊತೆಗೆ ಕೈಜೋಡಿಸುವುದನ್ನು ನಿರೀಕ್ಷಿಸಲಾಗುತ್ತದೆ. ಬೈವೊಲ್ಟಿನ್ ರೇಷ್ಮೆ ಹುಳುಗಳ ಬೀಜೋತ್ಪಾದನೆಗೆ ಭಾರೀ ಪ್ರಮಾಣದ ಬಂಡವಾಳ ಹೂಡಿಕೆಯ ಅಗತ್ಯವಿದ್ದು, ಅದರ ಮೂಲಕ ಕೋಲ್ಡ್ ಸ್ಟೋರೇಜ್ ಪ್ಲಾಂಟ್‌ಗಳ ಒಳಸೌಲಭ್ಯ ಸೃಷ್ಟಿಯೂ, ಸೂಕ್ಷ್ಮ ಹವಾಮಾನ ಸ್ಥಿತಿ ಗತಿಗಳನ್ನು ನಿರ್ವಹಣೆ ಮಾಡುವ ಆಧುನಿಕ ಉಪರಣ ಸಾಧನಗಳನ್ನು, ಕಕೂನ್ ಬೀಜಗಳನ್ನು ಕೊಳ್ಳುವುದಕ್ಕೆ ಇರುವ ಅಗತ್ಯ ಆರ್ಥಿಕ ಬೆಂಬಲವನ್ನು ಹಾಗೂ ತಂತ್ರಜ್ಞಾನದ ಸ್ನೇಹ ಹಸ್ತವನ್ನು ಅಂಥ ಖಾಸಗಿ ಬೀಜೋತ್ಪಾದಕರಿಗೆ ವಿಸ್ತರಿಸುತ್ತಾ, ಅವರು ಸಾಂಪ್ರದಾಯಿಕ ಮಲ್ಟಿ ಬೈವೊಲ್ಟಿನ್‌ಗಳಿಂದ ಬೈವೊಲ್ಟಿನ್ ಉತ್ಪಾದನೆಗೆ ವರ್ಗಾಯಿಸುವುದಕ್ಕೆ ನೆರವು ನೀಡಬೇಕಾಗುತ್ತದೆ. ನಿಜವಾಗಿಯೂ 'ಶೂನ್ಯ ದೋಷ ಶೂನ್ಯ ಪರಿಣಾಮ' ಎಂಬ ಧ್ಯೇಯವಿಟ್ಟುಕೊಂಡು, ರೇಷ್ಮೆಹುಳುವಿನ ಬೀಜೋತ್ಪಾದನೆಗೆ ತೊಡಗುವುದರಿಂದ ನಮ್ಮ ದೇಶವನ್ನು ಹೊಸ ದಿಗಂತಗಳಿಗೆ ಒಯ್ಯಬಹುದಾಗಿದೆ.

**4. ಕುಸಿಯುತ್ತಿರುವ ನೀರಿನ ಮಟ್ಟ**

ಭಾರತದಲ್ಲಿನ ರೇಷ್ಮೆ ಕೃಷಿಯು, ಆಯ್ಕೆಗೊಂಡ ಪ್ರದೇಶಗಳಲ್ಲಿ ರೂಢಿಗತವಾಗಿದ್ದು, ಅದು ಹೆಚ್ಚಾಗಿ ಮಳೆಯನ್ನೇ ಅವಲಂಬಿಸಿರುತ್ತದೆ. ಆದ್ದರಿಂದ ನೀರಾವರಿಗೆ ಬೇಕಾದ ಜಲಸಂಪನ್ಮೂಲವೇ ಪ್ರಧಾನ ಕಾಳಜಿಯಾಗಿ ಮತ್ತು ಆ ಕೈಗಾರಿಕೆಗೆ ಇಳಿಕೆಯ ಸ್ಥಿತಿಯಲ್ಲಿರುವ ನೀರಿನ ಮಟ್ಟವೇ ದೊಡ್ಡ ಆತಂಕವನ್ನೊಡ್ಡಿದೆ. ಈ ಸಮಸ್ಯೆಯನ್ನು ಎದುರಿಸುವ ಸಲುವಾಗಿ, ಮಳೆ ನೀರಿನ ಸಂಗ್ರಹ ಹಾಗೂ ಜಲ ಸಂರಕ್ಷಣೆಗೆ ಹೆಚ್ಚಿನ ಒತ್ತಾಯ ಹಾಕುತ್ತಾ, ಭೂಮಿಯೊಳಗಿನ ಜಲ ಸಂಪನ್ಮೂಲಗಳು ಶೋಷಿತಗೊಳ್ಳುವುದನ್ನು ನಿವಾರಿಸಲು ಹನಿ ನೀರಾವರಿ ವ್ಯವಸ್ಥೆಯನ್ನು ಕಡ್ಡಾಯಗೊಳಿಸಲಾಗಿದೆ. ಸಾಮಾನ್ಯ ರೈತರಿಗೆ ತಂತ್ರಜ್ಞಾನವನ್ನು ವಿಸ್ತರಿಸುತ್ತಾ 'ಪ್ರತಿ ಹನಿ ಅತಿ ಬೆಳೆ' ಎಂಬರ್ಥದಲ್ಲಿ ಅನುಕೂಲಕರವಾಗಿ

ನೀರನ್ನು ಬಳಕೆ ಮಾಡುವ ಮೂಲಕ ರೇಷ್ಮೆಕೃಷಿಯನ್ನು ಉತ್ತೇಜಿಸುವ ದೃಷ್ಟಿಕೋನ ತಳೆದಿದೆ.

**5. ಪರಿವರ್ತನೆಯ ಗುರಿ**

ಗುಣಮಟ್ಟವುಳ್ಳ ವಾಣಿಜ್ಯೋದ್ದೇಶಿತ ಕಕೂನ್‌ಗಳ ಉತ್ಪಾದನೆ ಹಾಗೂ ಸುಧಾರಿತ ಯಂತ್ರೋಪಕರಣಗಳ ಬಳಕೆಯೂ ಸೇರಿದಂತೆ, ಆಧುನಿಕ ರೀತಿಯಲ್ಲಿ ನೂಲು ಪಡೆಯುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ಮಾತ್ರವೇ, ನಮ್ಮ ದೇಶದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಾತ್ಮಕವೆನ್ನುವಂಥ ಕಚ್ಚಾರೇಷ್ಮೆಯ ಉತ್ಪಾದನೆಯ ಬಗ್ಗೆ ಭರವಸೆ ಹೊಂದಬಹುದಾಗಿದೆ. ಉತ್ತಮ ದರ್ಜೆಯ ರೇಷ್ಮೆಯ ನೂಲನ್ನು ಪಡೆದುಕೊಳ್ಳುವಲ್ಲಿ ಅದಕ್ಕೆ ಸಮಪ್ರಮಾಣದಲ್ಲಿ ನೂಲು ತೆಗೆಯುವ ತಂತ್ರಜ್ಞಾನವನ್ನು ಸುಧಾರಿಸುವುದು ಮತ್ತು ಯಂತ್ರಗಳನ್ನು ಸುಧಾರಿಸುವುದೇ ಈ ಹೊತ್ತಿನ ಅಗತ್ಯವಾಗಿದೆ. ಅದಕ್ಕೆ ಸರಿಯಾಗಿ ಕೇಂದ್ರ ರೇಷ್ಮೆ ಮಂಡಳಿಯು ಈಗಾಗಲೇ ದೇಶಿ ತಂತ್ರಜ್ಞಾನವುಳ್ಳ ಸ್ವಯಂಚಾಲಿತ ರೀಲಿಂಗ್ ಯಂತ್ರವನ್ನು (ಎ.ಆರ್.ಎಂ.), ಮಲ್ಬರಿ ಕಕೂನ್‌ಗಳಿಂದ ರೇಷ್ಮೆಯನ್ನು ಪಡೆಯುವ ಸಲುವಾಗಿ ಸಿದ್ಧಪಡಿಸಿದ್ದು ಅದರಿಂದಾಗಿ ಮೇಕ್ ಇನ್ ಇಂಡಿಯಾ ಘೋಷಣೆಯನ್ನು ಉತ್ತೇಜಿಸುತ್ತಿದೆ. ಇಂಥದ್ದನ್ನು ಶೀಘ್ರ ರೀತಿಯಲ್ಲಿ ಜನಪ್ರಿಯಗೊಳಿಸಬೇಕಾಗಿದೆ. ಇದರ ಜೊತೆಗೆ, ವನ್ಯಸಿಲ್ಕ್‌ಗೆ ಸಂಬಂಧಿಸಿದ ಸ್ಪಿನ್ನಿಂಗ್ ಸಲಕರಣೆಗಳಲ್ಲಿ ಆಧುನೀಕರಣ ಅಗತ್ಯವಾಗಿದೆ.

**6. ಅನುವಂಶಿಕ ನೆಲೆಯ ಸುಧಾರಣೆ ಹಾಗೂ ಹೆಚ್ಚು ಇಳುವರಿ ನೀಡುವ ತಳಿಗಳನ್ನು ಅಭಿವೃದ್ಧಿಗೊಳಿಸುವುದು.**

ಹೆಚ್ಚು ಇಳುವರಿ ನೀಡುವಿಕೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಅಗತ್ಯವಿರುವ ಆನುವಂಶಿಕ ನೆಲೆಯು ಭಾರತದಲ್ಲಿ ತುಂಬಾ ಕಿರಿದಾಗಿರುವುದರಿಂದಾಗಿ, ಏರುಪೇರಾಗುವ ಉಷ್ಣವಲಯದ ವಾತಾವರಣದಲ್ಲಿ, ಉತ್ತಮ ರೀತಿಯಲ್ಲಿ ಉಳಿದುಕೊಳ್ಳುವುದರೊಂದಿಗೆ, ರೋಗಗಳನ್ನು ತಾಳಿಕೊಳ್ಳಬಲ್ಲ ತಳಿಗಳ ಅಗತ್ಯ ಇದೆ. ಅನುವಂಶೀಯ ಸಂಪನ್ಮೂಲಗಳ ವಿನಿಮಯಕ್ಕಾಗಿ ಅಂತಾರಾಷ್ಟ್ರೀಯ ಸಹಯೋಗ ಮಾಡಿಕೊಳ್ಳುವುದು ಮತ್ತು ದೃಢತೆಯುಳ್ಳ ತಳಿಗಳ ಅಭಿವೃದ್ಧಿಯೆಂದೇ ಇದಕ್ಕಿರುವ ಏಕೈಕ ಮಾರ್ಗವಾಗಿದೆ.

ವಾಸ್ತವವೆಂದರೆ, ಕೇಂದ್ರ ರೇಷ್ಮೆ ಮಂಡಳಿ ಈಗಾಗಲೇ ಅಂತಹ ಸಹಯೋಗತ್ವವುಳ್ಳ ಯೋಜನೆಗಳನ್ನು ಎನ್‌ಡಿಎಎಸ್, ಸುಕುಬಾ, ಜಪಾನ್, ಬಲ್ಗೇರಿಯಾ, ಉಜ್ಬೇಕಿಸ್ತಾನ್, ರುಮೇನಿಯಾ ಹಾಗೂ ಚೀನಾ ದೇಶಗಳೊಂದಿಗೆ ಪ್ರಾರಂಭ ಮಾಡಿದೆ.

**7. ಜಾಗತಿಕವಾಗಿ ಬ್ರ್ಯಾಂಡ್ ಮನ್ನಣೆ**

ಭಾರತವು ವಿಶ್ವದಲ್ಲಿ ಎರಡನೆಯ ಅತಿ ಹೆಚ್ಚು ರೇಷ್ಮೆ ಉತ್ಪಾದನೆ ಮಾಡುವ ದೇಶವಾಗಿದ್ದರೂ ಕೂಡ, ಚೀನಾ ಹಾಗೂ ಥಾಯ್‌ಲ್ಯಾಂಡ್‌ಗಳು ತಮ್ಮ ತಮ್ಮ ರೇಷ್ಮೆಗಳಿಗೆ ಪಡೆದುಕೊಂಡಿರುವಂಥ, ಅಂತಾರಾಷ್ಟ್ರೀಯ ರೇಷ್ಮೆ ಮಾರಾಟ ಹಾಗೂ ಜಾಗತಿಕ ಮನ್ನಣೆಯ ಗರಿಷ್ಠಮಟ್ಟವನ್ನು ಇನ್ನೂ ಪಡೆದುಕೊಳ್ಳಬೇಕಾಗಿದೆ.


ಒಂದು ಸಾರ್ವತ್ರಿಕ ರೇಷ್ಮೆ ಉತ್ತೇಜನಾ ಆಂದೋಲನವು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಭಾರತೀಯ ರೇಷ್ಮೆಯ ಚಿತ್ರಣವನ್ನು ಸುಧಾರಿಸುವ ಪರಿಹಾರವಾಗಿದೆ.

ಬ್ರ್ಯಾಂಡ್ ಕಟ್ಟುವ ಕ್ರಮಬದ್ಧ ಅಭ್ಯಾಸವು, ತೀರಾ ವೃತ್ತಿಪರ ರೀತಿಯಲ್ಲಿ ಅಂತಾರಾಷ್ಟ್ರೀಯ ರೇಷ್ಮೆ ಪ್ರದರ್ಶನಗಳನ್ನು ಭಾರತದಲ್ಲಿ ಏರ್ಪಡಿಸುವುದು, ಅಂತಾರಾಷ್ಟ್ರೀಯ ಪ್ರದರ್ಶನಗಳಲ್ಲಿ ಭಾರತೀಯ ರಫ್ತುದಾರರು ಭಾಗವಹಿಸುವುದು, ನವೀನ ಶೈಲಿಯನ್ನು ಗುರಿಯಾಗುಳ್ಳ ವಿಶಿಷ್ಟ ಭಾರತೀಯ ಪದಾರ್ಥಗಳನ್ನು ಸೃಷ್ಟಿಸುವುದು ಮತ್ತು ಮಾಹಿತಿ ಆಂದೋಲನಗಳನ್ನು ಸಿದ್ಧಪಡಿಸುವುದನ್ನು ಒಳಗೊಳ್ಳಬೇಕಾಗಿದೆ.

**8. ವನ್ಯ ರೇಷ್ಮೆಗೆ ಬೇಕಾದ ಒತ್ತಾಸೆ**

ಭಾರತದಲ್ಲಿ ಉತ್ಪಾದನೆಗೊಳ್ಳುವ ಇಡೀ ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ವನ್ಯ ರೇಷ್ಮೆ ಉತ್ಪಾದನೆಯು 25% ಕ್ಕಿಂತ ಕಡಿಮೆಯಿದೆ, ಇದಕ್ಕೆ ಮುಖ್ಯ ಕಾರಣ ವನ್ಯ ರೇಷ್ಮೆಗೆ ಅವಕಾಶ ನೀಡಿರುವ ತಾಣಗಳು ಬಹಳ ಮಿತಿಯಲ್ಲಿವೆ, ರೇಷ್ಮೆ ಹುಳುವಿನ ಬೀಜೋತ್ಪಾದನೆಯಲ್ಲಿ ಬೇಡಿಕೆ ಪೂರೈಕೆ ಅಂತರ ತುಂಬಾ ಇದೆ.

ಉತ್ತಮ ರೀತಿಯ ಉತ್ಪಾದಕತೆ ಹಾಗೂ ಗುಣಮಟ್ಟದ ಕಕೂನ್‌ಗಳಲ್ಲಿ



ಭರವಸೆಯಿಟ್ಟುಕೊಳ್ಳುವ ನಿಟ್ಟಿನಲ್ಲಿ, ಪ್ರಾಕೃತಿಕ ಪೋಷಕ ಸಸ್ಯ ಸಂಪತ್ತನ್ನು ಸಂರಕ್ಷಿಸುವ ಅಗತ್ಯವಿದೆ. ಅರಣ್ಯದಲ್ಲಿರುವ ವನ್ಯ ಪೋಷಕ ಸಸ್ಯಗಳಿಗೆ ಸಂಬಂಧಿಸಿದಂತೆ 'ಪ್ಲಾಂಟೇಷನ್ ಕ್ಷೇತ್ರಗಳನ್ನು' ಅರಣ್ಯದಲ್ಲಿ ಹುಟ್ಟುವಳಿ ಹಾಗೂ ಖಾಸಗಿ ಭೂಮಿಗಳಲ್ಲಿ ಕೈಗೆತ್ತಿಕೊಳ್ಳುವ ಅಗತ್ಯವೂ ಇದೆ. ಹಾಗೆಯೇ ಆಳ ಬೇರು ಇಳಿಯುವಿಕೆ, ನಿಗದಿಗಿಂತ ಮುಂಚೆಯೇ ಹೊರೆಯುವುದು ಮತ್ತು ಗರ್ಭಾವಸ್ಥೆಯ ಅವಧಿಯನ್ನು ಕಡಿಮೆ ಮಾಡುವ ಮೂಲಕ ಬೇಗ ಬೆಳೆಯುವ ಜೀನ್ ಸಂಯೋಜನೆ, ಕುಬ್ಜ ಹಾಗೂ ಪೊದೆಯಂಥ ಜೀನ್ ಸಂಯೋಜನೆ ಮೂಲಕ ಎಲೆಗಳ ಇಳುವರಿಯನ್ನು ಅಧಿಕಗೊಳಿಸುವುದು, ಜೈವಿಕ ಹಾಗೂ ಜೈವಿಕವಲ್ಲದ ಒತ್ತಡಗಳನ್ನು ನಿಭಾಯಿಸುವುದು, ಆಚರಣೆಗಳನ್ನು ಒಟ್ಟುಗೂಡಿಸುವುದು ಇಂಥವುಗಳನ್ನು ಕಂಡುಕೊಳ್ಳುವ ಮೂಲಕ ವನ್ಯ ರೇಷ್ಮೆ ಉತ್ಪಾದನೆಯನ್ನು ಸುಧಾರಿಸಬಹುದಾಗಿದೆ.

**9. ರೇಷ್ಮೆ ಕೃಷಿಯನ್ನು ಸಂಘಟಿತಗೊಳಿಸುವುದು**

ಭಾರತೀಯ ರೇಷ್ಮೆ ಕೃಷಿಯು ಸಣ್ಣ, ತೀರಾ ಅಂಚಿನಲ್ಲಿರುವ ಕೃಷಿಕಾರರು ಹಾಗೂ ಸಣ್ಣ ಪ್ರಮಾಣದ ಉತ್ಪಾದಕರಿಂದ ಕೂಡಿದ್ದಾಗಿದೆ. ಆದರೆ ಚೈನಾ ಹಾಗಲ್ಲ ; ಅದು ಸಣ್ಣ ಉತ್ಪಾದಕರನ್ನು ಹೊಂದಿರುವಂತೆಯೇ ಬೃಹತ್ ಪರಿವರ್ತನಕಾರರನ್ನು ಹೊಂದಿದೆ.

ನಾವು ಸಣ್ಣ ಹಾಗೂ ಅಂಚಿನಲ್ಲಿರುವ ಕೃಷಿಕಾರರನ್ನು ಬೆಂಬಲಿಸುವುದನ್ನು ಮುಂದುವರಿಸುತ್ತಲೇ, ಬೃಹತ್ ಪ್ರಮಾಣದ ಕೃಷಿವ್ಯವಸಾಯವು ಯಾಂತ್ರಿಕತೆ ಹಾಗೆಯೇ ಅಗತ್ಯವಿರುವ ಬೆಂಬಲಿತ ರಚನೆಯುಳ್ಳದ್ದನ್ನು ಪ್ರಾರಂಭಿಸಬಹುದಾಗಿದೆ. ಹಾಗೆಯೇ ಅದರ ಜೊತೆಗೆ ಬೃಹತ್ ಪ್ರಮಾಣದ ಪರಿವರ್ತನಾಕಾರರನ್ನು, ರೇಷ್ಮೆ ಕೃಷಿಯನ್ನು ಸಂಘಟನೆಗೊಳಿಸುವ ದಿಕ್ಕಿನಲ್ಲಿ ಸಾಧ್ಯತೆಯುಳ್ಳ ವಾಣಿಜ್ಯೋದ್ಯಮವಾಗಿ ಪ್ರಾರಂಭ ಮಾಡಬಹುದಾಗಿದೆ.

**10. ಜನಸಂಖ್ಯಾ ಬಾಹುಳ್ಯದ ಲಾಭಗಳು ಮತ್ತು ಹೊಸ ಭರವಸೆಗಳು**

ಜಾಗತಿಕ ಸನ್ನಿವೇಶದಲ್ಲಿ ಭಾರತವು ಇತರೆ ದೇಶಗಳಂತಲ್ಲದೆ ಭವಿಷ್ಯದ ವರ್ಷಗಳಲ್ಲಿ ಶೇಕಡಾ 60 ಕ್ಕಿಂತ ಹೆಚ್ಚಿನ ಯುವ ಜನಾಂಗ ಹೊಂದುತ್ತಿದೆ. (35 ವರ್ಷಗಳ ಒಳಗಿನವರು) ಅದು ಈ ರೀತಿಯ ಕೈಗಾರಿಕೆಗೆ ಒಂದು ಸೇರ್ಪಡೆ ಮಾಡುವ ಅನುಕೂಲವಾಗಿದೆ. ಸ್ತ್ರೀಯರ ಪಾತ್ರವು ಕೂಡ ಈ ಕೈಗಾರಿಕೆಯಲ್ಲಿ ಎದ್ದು ಕಾಣುತ್ತಿದ್ದು, ಅವರ ಆರ್ಥಿಕ ಸಬಲೀಕರಣದ ಪರಿಣಾಮವಾಗಿ 'ಸಬ್ ಕೆ ಸಾಥ್ ಸಬ್ ಕಾ ವಿಕಾಸ್' ವೇಗ ಪಡೆದುಕೊಳ್ಳುತ್ತಲಿದೆ.

**11. ಸಾಲಸೌಲಭ್ಯದ ಹರಿವು**

ಸಮರ್ಪಕವಾದ ಸಾಂಸ್ಥಿಕ ಸಾಲಸೌಲಭ್ಯವನ್ನು ಅಗತ್ಯವಿರುವ ಕೃಷಿಕರಿಗೆ, ನೂಲು ತೆಗೆಯುವವರಿಗೆ, ನೇಯ್ಗೆಯವರು ಮುಂತಾದವರಿಗೆ ನೀಡುವುದರಿಂದಾಗಿ ಗುಣಾತ್ಮಕತೆ ಹಾಗೂ ಉತ್ಪಾದಕತೆಯನ್ನು ಸುಧಾರಿಸಲು ಸಹಕರಿಸುವ ಮೂಲಕ ನಿವ್ವಳ ಆದಾಯವನ್ನು ಹೆಚ್ಚಿಸಬಹುದಾಗಿದೆ.

ರೇಷ್ಮೆ ಕೃಷಿಯನ್ನು ಪ್ರಧಾನ ಕೃಷಿ ಹಾಗೂ ಅದಕ್ಕೆ ಒಟ್ಟುಗೂಡಿದ ಚಟುವಟಿಕೆಗಳಿಗೆ ಒಳಪಡಿಸುವುದು ಹಾಗೂ ನೂಲು ತೆಗೆಯುವ ಘಟಕವು ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳಲ್ಲಿರುವ ಮಾನದಂಡಗಳನ್ನು ತೃಪ್ತಿಪಡಿಸಿದಾಗ ಅದು ಆದ್ಯತೆ ಘಟಕದ ಸಾಲ ಪಡೆಯಲು ಅರ್ಹವಾಗುತ್ತದೆ.

ಕೇಂದ್ರ ರೇಷ್ಮೆ ಮಂಡಳಿ (ಸಿ.ಎಸ್.ಬಿ.) ಯು, ಬ್ಯಾಂಕರ್ಸ್ ಅವೇರ್‌ನೆಸ್ ಪ್ರೋಗ್ರಾಮ್ಸ್, (ಬ್ಯಾಂಕರ್‌ಗಳ ಜಾಗೃತಿ ಕಾರ್ಯಕ್ರಮಗಳು) ಮೂಲಕ ತೆಗೆದುಕೊಂಡ ಉಪಕ್ರಮಗಳು ಕಮ್ಯುನಿಟಿ ಬೇಸ್ಡ್ ಆರ್ಗನೈಸೇಷನ್ಸ್ (ಸಮುದಾಯ ಆಧರಿತ ಸಂಸ್ಥೆ)ಗಳನ್ನು ಬೆಂಬಲಿಸಿ, ಜಾಯಿಂಟ್ ಲೈಬಲಿಟಿ ಗ್ರೂಪ್ (ಜೆಎಲ್‌ಜಿ) (ಸಹ–ಸಾಲಸೌಲಭ್ಯ ಗುಂಪು) ಎಂದು ಕಾರ್ಯಪ್ರವೃತ್ತಗೊಳ್ಳುವ ಮೂಲಕ ಸಾಂಸ್ಥಿಕ ಸಾಲಸೌಲಭ್ಯ ಪಡೆಯಲು ಅನುಕೂಲ ಉಂಟಾಗಿದೆ. ಅದು ಹೆಚ್ಚಿನ ಸಾಲಸೌಲಭ್ಯವು ಹರಿಯಲು ಸಹಕಾರಿಯಾಗಿದೆ. ಭವಿಷ್ಯದ ಉಪಕ್ರಮಗಳು, ಸಾಲ ಸೌಲಭ್ಯ ಒದಗಿಸುವವರ ಸಂವೇದನಾ ಶೀಲತೆಯನ್ನು ತೀವ್ರಗೊಳಿಸುವುದನ್ನು ಒಳಗೊಳ್ಳುವ ಮೂಲಕ ಕೃಷಿಯೇತರ ಘಟಕಗಳಿಗೆ ಹೆಚ್ಚು ಸಾಲ ನೀಡುವಂತೆ ಮಾಡುತ್ತವೆ.

ನೂಲು ತೆಗೆಯುವ ಸಮೂಹಗಳ ಜಾಗೃತಿ ಕಾರ್ಯಕ್ರಮಗಳು ನಬಾರ್ಡ್‌ನೊಂದಿಗೆ ಜೊತೆಗೂಡುವ ಮೂಲಕ, ಆ ಘಟಕದ ಆರ್ಥಿಕ ಅಗತ್ಯದ ಬಗ್ಗೆ ಉತ್ತಮ ತಿಳಿವಳಿಕೆಯನ್ನು ನೀಡಿ, ನಬಾರ್ಡ್ ಹಾಗೂ ಇತರೆ ಆರ್ಥಿಕ ಸಂಸ್ಥೆಗಳು ಕೃಷಿ ವ್ಯವಸಾಯಕ್ಕೆ ಕಾಯಿದೆ ಮಟ್ಟದ ಮಧ್ಯಪ್ರವೇಶಿಕೆಯ ಮೂಲಕ ಕ್ರೆಡಿಟ್ ಗ್ಯಾರಂಟಿ ಫಂಡ್‌ನ ಮೂಲಕ ರೇಷ್ಮೆ ಕೃಷಿಗೆ ಸಾಲಸೌಲಭ್ಯಗಳನ್ನು ಹೆಚ್ಚಿಸಬಹುದಾಗಿದೆ. ಹಾಗೆಯೇ ತ್ರಿಪಕ್ಷೀಯ ಮಾರುಕಟ್ಟೆ ಷರತ್ತುಗಳ ಪುನರ್ ಪರಿಶೀಲನೆ ಹಾಗೂ ಪುನರಾವರ್ತನೆಯ ಮೂಲಕ ರೇಷ್ಮೆ ಕೃಷಿಯ ಸಾಲವನ್ನು ಹಿಂಪಡೆಯುವುದಕ್ಕೆ, ಸಾಲ ಪ್ರಯೋಜನ ಪಡೆದವರು, ಅಭಿವೃದ್ಧಿ ಸಂಸ್ಥೆಗಳು ಹಾಗೂ ಬ್ಯಾಂಕ್ / ಆರ್ಥಿಕ ಸಂಸ್ಥೆಗಳ ಮೂರು ಪಕ್ಷಗಳ ಮಧ್ಯೆ ಒಂದು ದೃಢವಾದ ಸಂಪರ್ಕ ವ್ಯವಸ್ಥೆಯನ್ನು ಬೆಳೆಸುವ ಮೂಲಕ ಸಾಲಹಿಂಪಡೆಯುವ / ಹಣವನ್ನು ಮತ್ತೆ ಸಾಲಕ್ಕೆ ತೊಡಗಿಸುವ ಸ್ಥಿತಿಯನ್ನು ಸುಧಾರಿಸಬಹುದಾಗಿದೆ.

**12. ರೇಷ್ಮೆ ಕೃಷಿ ಅಭಿವೃದ್ಧಿಗೆ ಮಾಹಿತಿ ತಂತ್ರಜ್ಞಾನ ಹಾಗೂ ದೂರಗ್ರಾಹಿ ಅನ್ವಯಿಸುವಿಕೆ.**

ದೇಶದಲ್ಲಿ ಆಯ್ದ ರಾಜ್ಯಗಳಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಪಟ್ಟ ಹಾಗೇ ಅಸ್ತಿತ್ವದಲ್ಲಿರುವ ಒಳಸಾಮರ್ಥ್ಯದ ಪ್ರದೇಶಗಳನ್ನು ಇಸ್ರೊದ ದೂರಗ್ರಾಹಿ ಸ್ಯಾಟಲೈಟ್ ಬಿಂಬಗಳ ಮೂಲಕ ಗುರುತಿಸಲಾಗಿದೆ ಹಾಗೆಯೇ ಸಾಂಪ್ರದಾಯಿಕವಲ್ಲದ ಹೊಸ ಪ್ರದೇಶಗಳಲ್ಲೂ ಇದಕ್ಕೆ ಸಂಬಂಧಿಸಿದ ರೀತಿಯಲ್ಲೇ ಯೋಜನೆಗಳು ಜಾರಿಗೊಂಡಿರುತ್ತವೆ. ಈ ಬಳಕೆಯನ್ನು ದೇಶದುದ್ದಕ್ಕೂ ಒಂದು ಕಾಯಿದೆಯ ಉಪಕ್ರಮವನ್ನಾಗಿ ಒಳಗೊಳ್ಳುವಂತೆ ಉದ್ದೇಶಿಸಲಾಗಿದೆ. ಇದು ಮಲ್ಬರಿ ಹಾಗೂ ಮಲ್ಬರಿಯಲ್ಲದ ಘಟಕಗಳಿಗೂ ಅನ್ವಯವಾಗುತ್ತದೆ. ಮಾಹಿತಿ ತಂತ್ರಜ್ಞಾನ (ಐ.ಟಿ) ಉಪಕರಣಗಳಾದ ಆ್ಯಪ್, ನೆಟ್, ಕಿಯೋಸ್ಕ್ ಮೊದಲಾದವುಗಳನ್ನು ಸಿದ್ಧಪಡಿಸುವ ಅಗತ್ಯವಿದ್ದು, ಅದರ ಮೂಲಕ ರೈತರಿಗೆ/ ನೂಲುತೆಗೆಯುವವರಿಗೆ/ ನೇಯ್ಗೆಯವರಿಗೆ ಸರಿಯಾದ ಮಾಹಿತಿ ಒದಗಿಸುವ ಮೂಲಕ ಅವರನ್ನು ಸಶಕ್ತರನ್ನಾಗಿ ಮಾಡಬೇಕಾಗಿದೆ. ನಾರ್ತ್ ಈಸ್ಟರ್ನ್ ಸ್ಪೇಸ್ ಅಪ್ಲಿಕೇಷನ್ ಸೆಂಟರ್ (ಎನ್.ಇ.ಎಸ್.ಎ.ಸಿ.) ನೊಂದಿಗೆ 12ನೇ ಯೋಜನೆಯಲ್ಲಿ ಕೇಂದ್ರ ರೇಷ್ಮೆ ಮಂಡಳಿ ಅಭಿವೃದ್ಧಿಪಡಿಸಿದ ಸಿಲ್ಕ್ಸ್ (ಸೆರಿಕಲ್ಚರ್ ಇನ್‌ಫರ್‌ಮೇಷನ್ ಲಿಂಕೇಜ್ ನಾಲೆಡ್ಜ್ ಸಿಸ್ಟಮ್) ಎಂಬ ಪೋರ್ಟಲ್, ದೇಶದ ರೇಷ್ಮೆ ಕೃಷಿಗೆ ಸಂಬಂಧಿಸಿದಂತೆ ಉತ್ತೇಜನ ನೀಡುವಲ್ಲಿ ಬಹುದೂರ ಸಾಗಲಿದ್ದು, ಇದು ರೇಷ್ಮೆ ಕೃಷಿಯ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ದೂರಗ್ರಾಹಿ (ಆರ್. ಎಸ್.) ಹಾಗೂ ಜಿಐಎಸ್ ಉಪಕರಣಗಳ ಮೂಲಕ ಸತ್ವಶಾಲಿ ಪ್ರದೇಶಗಳನ್ನು ಗುರುತಿಸುವುದಾಗಿದೆ.



**13. ರೇಷ್ಮೆ ಕೃಷಿಯಲ್ಲಿ ಯಾಂತ್ರೀಕರಣ**

ರೇಷ್ಮ ಕೃಷಿಯಲ್ಲಿ ಯಾಂತ್ರೀಕರಣದ ಮೂಲಕ ಆಧುನಿಕತೆಯನ್ನು ತರುವ ಪ್ರಯತ್ನಗಳು ನಡೆಯುತ್ತಿದ್ದು, ಅದು ಮಲ್ಬರಿ ಬೆಳೆಯುವಿಕೆ, ರೇಷ್ಮೆ ಹುಳುಸಾಕಾಣಿಕೆ, ಬೀಜೋತ್ಪಾದನೆ, ಸೋಂಕುನಿವಾರಣೆ ಹಾಗೂ ಕಕೂನ್ ಕೊಯ್ಲುಗಳಿಗೆ ಒದಗಿಬಂದು ಅದು ಉತ್ಪಾದನಾ ಸಾಮರ್ಥ್ಯಕ್ಕೆ ಬಲನೀಡುವುದು ಮಾತ್ರವಲ್ಲ, ಕಾಲ, ಶ್ರಮ ಹಾಗೂ ಇಳಿಕೆಗೊಂಡ ಪರಿಶ್ರಮಗಳನ್ನು ತಗ್ಗಿಸುವುದಾಗಿದೆ. ಇದು ಬೃಹತ್‌ಗಾತ್ರದ ರೇಷ್ಮೆ ಕೃಷಿಗೆ ವರವಾಗಿ ಪರಿಣಮಿಸಲಿದೆ.

**14. ಬೆಲೆಗಳ ಅಸ್ಥಿರತೆ**

ಕಕೂನ್‌ಗಳಿಗೆ ಹಾಗೂ ಕಚ್ಚಾ ರೇಷ್ಮೆಗೆ ಸ್ಥಿರವಾದ ಹಾಗೂ ಫಲದಾಯಕ ಬೆಲೆಗಳು ರೈತರಿಗೆ ಹಾಗೂ ನೂಲುತೆಗೆಯುವವರಿಗೆ ದೊರೆಯುವ ಮೂಲಕ ಅವರ ಉತ್ಪಾದನೆಯಲ್ಲಿ ಭರವಸೆ ಹುಟ್ಟಿಸಬೇಕು. ಇದರಿಂದ ಅವರು ಹೆಚ್ಚಿನ ಬಂಡವಾಳ ಹೂಡುವುದಕ್ಕೆ ಹಾಗೂ ಉತ್ಪಾದನೆಗೆ ಪ್ರೋತ್ಸಾಹ ದೊರಕುತ್ತದೆ. ನ್ಯಾಯಯುತ ಬೆಲೆಗಳಿದ್ದು, ಅದಕ್ಕೆ ಮಧ್ಯಸ್ಥಿಕೆ ವಹಿಸುವವರ

ಖರ್ಚು ಕಡಿಮೆ ಇರುವುದರಿಂದ ಪ್ರೋತ್ಸಾಹ ದೊರಕುತ್ತದೆ. ಮಾರುಕಟ್ಟೆ ಸೌಲಭ್ಯಗಳನ್ನು ಹಾಗೂ ಸಾಮರ್ಥ್ಯವನ್ನು ಸುಧಾರಿಸುವ ಸಲುವಾಗಿ ಮುಂದಿನ ಮಧ್ಯ ಪ್ರವೇಶಿಕೆಯನ್ನು ಸೂಚಿಸಲಾಗಿದೆ.

* ಒಗ್ಗೂಡಿದ ರಾಷ್ಟ್ರೀಯ ಕಕೂನ್ ಮಾರಾಟ ವ್ಯವಸ್ಥೆ.
* ಸರ್ಕಾರಿ ಮಾರುಕಟ್ಟೆಗಳಲ್ಲಿ ಇ ಆಕ್ಷನ್ ಪ್ರಾರಂಭಿಸುವುದು
* ಬೆಲೆ ಸ್ಥಿರತೆಯನ್ನುಳ್ಳ ಫಂಡನ್ನು ಸೃಷ್ಟಿಸುವುದು
* ಕಕೂನ್ ಬ್ಯಾಂಕುಗಳನ್ನು ಸ್ಥಾಪಿಸುವುದು
* ನೂಲಿನ ಬ್ಯಾಂಕುಗಳನ್ನು ಸ್ಥಾಪಿಸುವುದು

**15. ಹವಾಮಾನಕ್ಕೆ ಒಗ್ಗಿಕೊಳ್ಳುವಂಥ ರೇಷ್ಮೆಕೃಷಿ**

ಹವಾಮಾನಕ್ಕೆ ಒಗ್ಗಿಕೊಳ್ಳುವಂಥ ರೇಷ್ಮೆಕೃಷಿ ಸಂಬಂಧಿ ತಂತ್ರಜ್ಞಾನಗಳನ್ನು ಹುಟ್ಟು ಹಾಕುವುದರಿಂದ ಕೃಷಿಕ್ಷೇತ್ರದ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಬಹುದಾಗಿದೆ. ಹವಾಮಾನ ಬದಲಾವಣೆಯ ಸಂದರ್ಭದಲ್ಲಿ ರೇಷ್ಮೆ ಕೃಷಿಯನ್ನು ಸುಸ್ಥಿರಗೊಳಿಸಲು ಪ್ರಾಕೃತಿಕ ಹಾಗೂ ಮಾನವ ನಿರ್ಮಿತ ಸಂಪನ್ಮೂಲಗಳನ್ನು ನಿರಂತರವಾಗಿ ನಿರ್ವಹಣೆ ಮಾಡುವುದು ಅಗತ್ಯ. ಈ ಅಭಿವೃದ್ಧಿಗೆ ಸಂಬಂಧಿಸಿದಂತೆ ಗುರುತಿಸಲ್ಪಟ್ಟ ಒತ್ತಾಸೆಯ ಪ್ರದೇಶಗಳೆಂದರೆ ಗಟ್ಟಿಯಾದ ಬೈವೊಲ್ಟಿನ್ ಬೀಜಗಳು ಹಾಗೂ ಪೋಷಣಾ ಸಸ್ಯಗಳಲ್ಲಿ ಬಗೆಬಗೆಯ ರೀತಿಯ



ಅಭಿವೃದ್ಧಿಯಾಗಿದ್ದು ಇವುಗಳು ಅನಾನುಕೂಲ ಸ್ಥಿತಿಯಲ್ಲೂ ಉಳಿಯಬಲ್ಲವಾಗಿರುತ್ತದೆ.

**16. ಉಪ ಉತ್ಪನ್ನಗಳ ಬಳಕೆ**

ರೇಷ್ಮೆಕೃಷಿ ಹೆಚ್ಚುವರಿ ಆದಾಯವನ್ನು ಹುಟ್ಟುಹಾಕುವ ಅಧಿಕ ವ್ಯಾಪ್ತಿಯನ್ನು ಹೊಂದಿದೆ. ಇದಕ್ಕೆ ಹಲವಾರು ರೀತಿಯ ಉಪ ಉತ್ಪನ್ನಗಳಾದ ರೇಷ್ಮೆ ಹುಳುವಿನ ಪ್ಯೂಪಿಯಾ, ಸೆರಿಸಿನ್, ಸಿಲ್ಕ್‌ವೇಸ್ಟ್, ಬೇಸಿನ್ ರೆಫ್ಯೂಜ್‌ಗಳು ಪರಿಣಾಮಕಾರಿಯಾಗಿ ಬಳಸಬಹುದಾಗಿದೆ.

**17. ವಸ್ತ್ರೋದ್ಯಮೇತರ ಉದ್ದೇಶಗಳಿಗೆ ರೇಷ್ಮೆ**

ರೇಷ್ಮೆ ಎಳೆಯನ್ನು ವಸ್ತ್ರಗಳನ್ನಾಗಿ ಮಾಡುವ ನಿಯಮಿತ ಬಳಕೆ ಹೊರತುಪಡಿಸಿ, ರೇಷ್ಮೆ ಕೃಷಿಯ ಉಪ ಉತ್ಪನ್ನಗಳನ್ನು ಬಳಕೆ ಮಾಡುವುದಕ್ಕೆ ಬೇಕಾದಷ್ಟು ದಾರಿಗಳಿವೆ. ಇವುಗಳನ್ನು ದೂರದೃಷ್ಟಿ ಹಾಗೂ ನ್ಯಾಯಸಮ್ಮತವಾಗಿ ಬಳಕೆ ಮಾಡಿದಲ್ಲಿ, ರೇಷ್ಮೆ ಉತ್ಪಾದಕ ವಸ್ತುಗಳ ಮೌಲ್ಯವರ್ಧನೆಗೆ ಸಹಕಾರಿಯಾಗುತ್ತಲೇ, ಲಾಭಕ್ಕೆ ಸಂಬಂಧಿಸಿದ ಮಟ್ಟವನ್ನು ಆರೋಗ್ಯಕರವಾಗಿ ನಿರ್ವಹಿಸಬಹುದಾಗಿದೆ. ಬಯೊ ಮೆಡಿಕಲ್ ವಿಜ್ಞಾನದಲ್ಲಿ ಇತ್ತೀಚೆಗೆ ಆಗಿರುವ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ರೇಷ್ಮೆಯು ಬಯೊ ಮೆಟೀರಿಯಲ್‌ಗಳಲ್ಲಿ ಉಪಯೋಗಿಸಲ್ಪಡುತ್ತಿದ್ದು, ಸ್ಪಾಂಜ್‌ಗಳು, ಫಿಲ್ಮ್‌ಗಳು, ಜೆಲ್ಲಿಗಳು, ನ್ಯಾನೊ ಪಾರ್ಟಿಕಲ್ ಹಾಗೂ ನ್ಯಾನೊ ಫಿಬ್ರಿಲ್‌ಗಳ ತಯಾರಿಕೆಯಲ್ಲಿ ಬಳಕೆಯಾಗುತ್ತಿದೆ. ಈ ರೀತಿಯ ಉನ್ನತ ಮೌಲ್ಯದ ಉತ್ಪಾದನೆಗಳು ಖಂಡಿತವಾಗಿಯೂ ರೇಷ್ಮೆಕೃಷಿ ಕೈಗಾರಿಕೆಗಳಲ್ಲಿ ಹೆಚ್ಚುವರಿ ಪ್ರಯೋಜನಗಳನ್ನುತರುತ್ತಿದೆ.

**ಸಮಾರೋಪ**

ರೇಷ್ಮೆ ಉತ್ಪಾದನೆಗಳಿಗೆ ಜಾಗತಿಕವಾಗಿ ಹಾಗೂ ಪ್ರಾದೇಶಿಕವಾಗಿ ನಿರಂತರ ಬೆಳವಣಿಗೆ ಹೊಂದುವ ಒಳಸಾಮರ್ಥ್ಯಗಳು ಇವೆ.

ಕೆಳಸ್ತರದಲ್ಲಿ ಉದ್ಯೋಗ ಒದಗಿಸುವುದು, ಗ್ರಾಮೀಣ ಹಾಗೂ ಅರೆ ಗ್ರಾಮೀಣ ಪ್ರದೇಶಗಳಲ್ಲಿ ಆದಾಯ ಹುಟ್ಟಿಸುವುದು, ಕನಿಷ್ಠ ಆದಾಯವುಳ್ಳವರು ಹಾಗೂ ಸಾಮಾಜಿಕವಾಗಿ ಅಶಕ್ತರಾದ ಗುಂಪಿನವರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಕೊಳ್ಳುವಿಕೆ, ಅಭಿವೃದ್ಧಿಯಲ್ಲಿ ಸ್ತ್ರೀಯರ ಹೆಚ್ಚಿನ ಪಾತ್ರ, ರಫ್ತುಗಳಿಕೆಗೆ ಸಂಬಂಧಿಸಿದ ಕೊಡುಗೆಗೆ ಭಾರಿ ಒಳಸಾಮರ್ಥ್ಯ ಹೊಂದಿರುವುದು – ಇಂಥ ವಿಶಿಷ್ಟ ಅಂಶಗಳು ರೇಷ್ಮೆ ಕೈಗಾರಿಕೆಯ ಆಕರ್ಷಣೀಯ ಸಂಗತಿಗಳಾಗಿವೆ. ವಿವೇಕಯುತ ದೂರದೃಷ್ಟಿಯುಳ್ಳ ಬಂಡವಾಳ ಹೂಡಿಕೆ ಹಾಗೂ ಅಭಿವೃದ್ಧಿ ಯೋಜನೆಗಳ ಮೂಲಕ ಮುಂದಿನ ವಿಸ್ತರಣೆಗೆ ಇವುಗಳನ್ನು ಬಳಸಿಕೊಳ್ಳಬಹುದಾಗಿದೆ. ❑


## ಯೋಜನಾ ಚಂದಾದಾರರಲ್ಲಿ ಕೋರಿಕೆ

ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಸೇರಿದಂತೆ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು. ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಚಂದಾದಾರರು, ಸರಿ ಇದೆಯೇ ಎಂದು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. **ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ.** ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ–ಅಂಚೆ : yojanakannada@yahoo.com ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)

# ಸೆಣಬಿಗೆ ಕಾಯಕಲ್ಪ

* ಡಾ. ಸುಬ್ರತೊ ಗುಪ್ತಾ



**ಸೆಣಬು ಮಿಲ್ ಕಾರ್ಮಿಕರ ಮತ್ತು ರೈತರ ಆದಾಯ ಹೆಚ್ಚಾಗುವಂತೆ ಉತ್ಪನ್ನ ವೈವಿಧ್ಯಮಯಗೊಳಿಸುವುದು ಮತ್ತು ಹೊಸ ಮಾರುಕಟ್ಟೆಗಳನ್ನು ಸೃಷ್ಟಿಸುವುದು ಅತ್ಯಗತ್ಯ.**

ಭಾರತದಲ್ಲಿ ಸೆಣಬು ವಲಯವನ್ನು ಸೆಣಬು ಪ್ಯಾಕೇಜಿಂಗ್ (ಮೂಟೆ) ವಸ್ತುಗಳ ಕಾಯಿದೆ, 1987 ರನ್ವಯ ರಕ್ಷಿಸಲಾಗಿದೆ. ಈ ಕಾಯಿದೆ ಬಹುಮಟ್ಟಿಗೆ ರೈತರು ಮತ್ತು ಉದ್ಯೋಗಿಗಳನ್ನು ರಕ್ಷಿಸಿದೆ, ಅದರೆ ಕೈಗಾರಿಕೆಯನ್ನು ಸ್ಪರ್ಧಾತ್ಮಕವಾಗಿ ಅಭಿವೃದ್ಧಿ ಪಡಿಸದೆ ಕ್ಷಣಿಕ ನೆಮ್ಮದಿ ಪಡೆದುಕೊಂಡಿದೆ. ತನ್ನ ಉಳಿವಿಗಾಗಿ ಒಂದೇ ಉತ್ಪನ್ನದ ಮೇಲೆ ಮತ್ತು ಒಬ್ಬನೇ ಖರೀದಿದಾರರನ ಮೇಲೆ ಹೆಚ್ಚು ಹೆಚ್ಚು ಅವಲಂಬಿತವಾಗಿದೆ ಎಂಬುದು ಈ ಲೇಖನದ ವಿಶ್ಲೇಷಣೆಯಲ್ಲಿ ಕಂಡುಕೊಳ್ಳಲಾದ ಸಂಗತಿ.

ಭಾರತದಲ್ಲಿ ಹತ್ತಿಯ ನಂತರ ಸೆಣಬು ಎರಡನೇ ಅತ್ಯಂತ ಪ್ರಮುಖವಾದ ಉತ್ಪಾದಿಸಲಾಗುತ್ತಿರುವ ನೈಸರ್ಗಿಕ ನಾರು. ಸೆಣಬಿಗೆ ಹಲವಾರು ಸಾಮಾಜಿಕ– ಆರ್ಥಿಕ ಮತ್ತು ಪರಿಸರ ಸಂಬಂಧಿ ಅನುಕೂಲಗಳಿವೆ. ಇದು ನೈಸರ್ಗಿಕವಾಗಿ ಮಣ್ಣಿನಲ್ಲಿ ಲೀನವಾಗುವಾಗುತ್ತದೆ, ಪ್ಲಾಸ್ಟಿಕ್‌ನಿಂದ ಮಾಲಿನ್ಯ ಉಂಟಾಗುವ ಹಲವಾರು ಅಳವಡಿಕೆಗಳಲ್ಲಿ ಇದನ್ನು ಪರ್ಯಾಯವಾಗಿ ಬಳಸಿಕೊಳ್ಳಬಹುದು. ಇದನ್ನು ಕೃಷಿಯಂತೆ ಬೆಳೆಯುವುದರಿಂದ, ಎಲ್ಲಿ ನಗದು ಬೆಳೆಗಳನ್ನು ಬೆಳೆಸುವುದು ಕಷ್ಟವಾಗುತ್ತದೊ ಅಂತಹ ಕಡೆ ಮತ್ತು ಹೆಚ್ಚಿನ ಮಳೆ ಬೀಳುವ ಪ್ರದೇಶ ಹಾಗೂ ತಗ್ಗು ಪ್ರದೇಶಗಳಲ್ಲಿ ಸೆಣಬು ಬೆಳೆಯುವುದರಿಂದ ರೈತರಿಗೆ ಪೂರಕ ಆದಾಯದ ಮೂಲವಾಗುತ್ತದೆ.

ಸುಮಾರು 40 ಲಕ್ಷ ರೈತರು ಸೆಣಬು ಬೆಳೆಯನ್ನು ಬೆಳೆಯುವುದರಲ್ಲಿ ನಿರತರಾಗಿದ್ದಾರೆ ಎಂದು ನಂಬಲಾಗಿದೆ. ನಾರು ಸಂಸ್ಕರಣ ಮತ್ತು ಸೆಣಬು ವಸ್ತುಗಳ ಉತ್ಪಾದನೆಯಲ್ಲಿ 3.5 ಲಕ್ಷ ಕಾರ್ಮಿಕರು ತೊಡಗಿಕೊಂಡಿದ್ದಾರೆ. ನಿರೀಕ್ಷೆಯಂತೆ ಪೂರ್ವ ಮತ್ತು ಈಶಾನ್ಯ ರಾಜ್ಯಗಳ ಕೃಷಿ ಮತ್ತು ಕೈಗಾರಿಕೆ ವಲಯಗಳ ಆರ್ಥಿಕತೆಯಲ್ಲಿ ಸೆಣಬು ಪ್ರಮುಖ ಪಾತ್ರವಹಿಸಿದೆ.

ಕಳೆದ 200 ವರ್ಷಗಳಿಂದ ನೈಸರ್ಗಿಕವಾದ ಸೆಣಬು ನಾರು ಬಳಕೆಯಾಗುತ್ತಿದ್ದು, ಪ್ಯಾಕೇಜ್ ವಸ್ತು ಮತ್ತು ಹಗ್ಗ ತಯಾರಿಸುವಲ್ಲಿ ಉಪಯೋಗಿಸಿಕೊಳ್ಳಲಾಗಿರುವುದನ್ನು ಪ್ರಮಾಣೀಕರಿಸಲಾಗಿದೆ. ನಾರು, ಹತ್ತಿಗಿಂತಲೂ ಒರಟಾಗಿರುವುದರಿಂದ ಬಟ್ಟೆ ತಯಾರಿಸಲು ಇದು ಸೂಕ್ತ ಅಲ್ಲ ಎಂದು ಪರಿಗಣಿಸಲಾಗಿದೆ, ಆದ್ದರಿಂದ ಇದರ ಮುಖ್ಯ ಉಪಯೋಗವನ್ನು ಪ್ಯಾಕಿಂಗ್‌ಗೆ ಉಳಿಸಿಕೊಳ್ಳಲಾಗಿದೆ.

ಸಿಂಥೆಟಿಕ್ ನಾರಿನ ಆಗಮನ ಮತ್ತು ಅದರ ಉತ್ಪಾದನೆ ಕಡಿಮೆ ಖರ್ಚಿನದಾಗಿದ್ದು ಮತ್ತು ನಿಗದಿತ ಅಗತ್ಯಕ್ಕೆ ಬಳಸಿಕೊಳ್ಳಬಹುದಾಗಿರುವುದರಿಂದ, ಸೆಣಬು ಬಟ್ಟೆಯನ್ನು ಪ್ಯಾಕೇಜ್ ವಸ್ತುವಾಗಿ ಬಳಸಿಕೊಳ್ಳುವುದು ಕಡಿಮೆಯಾಗುತ್ತಿದೆ.

ಅತ್ಯಂತ ಅಗ್ಗವಾದ ಪ್ಲಾಸ್ಟಿಕ್ ಪ್ಯಾಕಿಂಗ್ ವಸ್ತುಗಳು ಸೆಣಬನ್ನು ಮಾರುಕಟ್ಟೆಯಿಂದ ಹೊರದಬ್ಬಿವೆ ಮತ್ತು ಸಿಮೆಂಟ್ ಮತ್ತು ರಸಗೊಬ್ಬರ ಮೊದಲಾದ ತಯಾರಕರು ತಮ್ಮ ವಸ್ತುಗಳನ್ನು ಪ್ಯಾಕ್ ಮಾಡಲು ಸೆಣಬಿನಿಂದ ದೂರಸರಿದು ತಮ್ಮದೇ ಪ್ಯಾಕಿಂಗ್ ವಸ್ತುಗಳಿಗೆ ಬದಲಾಗಿದ್ದಾರೆ. ಸೆಣಬು ಉತ್ಪನ್ನಗಳ ಗೈರುಹಾಜರಿಯಲ್ಲಿ ಸೆಣಬು ಕಾರ್ಖಾನೆ ಮತ್ತು ಸೆಣಬು

* ಸೆಣಬು ಆಯುಕ್ತರು, ಕೇಂದ್ರ ಜವಳಿ ಸಚಿವಾಲಯ. E-mail : subratagupta65@gmail.com

| ಪಟ್ಟಿ – 1 | | | | | |
|---|---|---|---|---|---|
| ವರ್ಷ | ಒಟ್ಟು ಕಚ್ಚಾ ಸೆಣಬು (ಸಾ.ಮೆ.ಟ) | ಒಟ್ಟು ಸೆಣಬು ಉತ್ಪನ್ನ (ಸಾ.ಮೆ.ಟ) | ಒಟ್ಟು ಸರ್ಕಾರದ ಅಗತ್ಯ | ಅಗತ್ಯ / ಉತ್ಪಾದನೆ ಸರಾಸರಿ | ಅಗತ್ಯ / ಕಚ್ಚಾ ಸೆಣಬು ಸರಾಸರಿ |
| 2006–07 | 1800.0 | 1356.3 | 400.7 | 29.5% | 22.3% |
| 2007–08 | 1782.0 | 1776.0 | 557.9 | 31.4% | 31.3% |
| 2008–09 | 1476.0 | 1633.7 | 572.2 | 35.0% | 38.8% |
| 2009–10 | 1620.0 | 1323.3 | 530.7 | 40.1% | 32.8% |
| 2010–11 | 1800.0 | 1565.7 | 688.6 | 44.0% | 38.3% |
| 2011–12 | 1845.0 | 1582.4 | 864.2 | 54.6% | 46.8% |
| 2012–13 | 1674.0 | 1591.5 | 884.1 | 55.6% | 52.8% |
| 2013–14 | 1782.0 | 1527.7 | 778.1 | 50.9% | 43.7% |
| 2014–15 | 1296.0 | 1267.1 | 727.5 | 57.4% | 56.1% |
| 2015–16 | 1440.0 | 1217.2 | 829.0 | 68.1% | 57.6% |

* ಸೂಚನೆ: ಇಲ್ಲಿ ಬಿ–ಟ್ವಿಲ್ (ಮೂಲೆ ಮೂಲೆಯಾಗಿ ನೇಯುವುದು) ಸರ್ಕಾರ ಗೋಣಿ ಚೀಲಗಳನ್ನು ನೇರವಾಗಿ ಖರೀದಿ ಮಾಡಿರುವುದನ್ನು ಸೂಚಿಸುತ್ತದೆ.

ರೈತರನ್ನು ರಕ್ಷಿಸುವ ಸಲುವಾಗಿ ಸೆಣಬು ಗೋಣಿ ಚೀಲಗಳಿಗೆ ಬೇಡಿಕೆ ಕುದುರಿಸಲು ಕಾನೂನು ರಚಿಸುವ ಚಿಂತನೆ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

**ಸೆಣಬು ಪ್ಯಾಕೇಜಿಂಗ್ ವಸ್ತುಗಳ ಕಾಯಿದೆ – ವರವೇ ಅಥವಾ ಶಾಪವೇ?**

ಸೆಣಬು ಪ್ಯಾಕೇಜಿಂಗ್ ವಸ್ತುಗಳ (ಪ್ಯಾಕಿಂಗ್ ವಸ್ತುಗಳಲ್ಲಿ ಕಡ್ಡಾಯವಾಗಿ ಉಪಯೋಗಿಸುವುದು) ಕಾಯಿದೆ, 1987 ಪ್ರಕಾರ ಪ್ರತಿ ವರ್ಷ ಸರ್ಕಾರ ಯಾವ ಯಾವ ವಸ್ತುಗಳನ್ನು ಮತ್ತು ಸೆಣಬು ಪ್ಯಾಕೇಜಿಂಗ್ ವಸ್ತುಗಳನ್ನು ಯಾವ ಪ್ರಮಾಣದಲ್ಲಿ ಪ್ಯಾಕ್ ಮಾಡಬೇಕು ಎನ್ನುವ ಕಟ್ಟಾಜ್ಞೆಯನ್ನು ಹೊರಡಿಸುತ್ತದೆ.

ಕಳೆದ ಮೂರು ದಶಕಗಳಿಂದ ಈ ಕಾನೂನಿನ ಮೂಲಕ ಸೆಣಬು ಕೈಗಾರಿಕೆಗೆ ಮಹತ್ತರವಾದ ಬೆಂಬಲ ನೀಡಿದೆ.

ಇನ್ನೊಂದು ಬೃಹತ್ ಸೆಣಬು ಉತ್ಪಾದನೆ ಮಾಡುವ ದೇಶ ಬಾಂಗ್ಲಾದೇಶದಲ್ಲಿ ಇತ್ತೀಚಿನವರೆಗೂ ಇಂತಹ ಯಾವುದೇ ರಕ್ಷಣಾ ಕಾನೂನು ಇರಲಿಲ್ಲ. 2010 ರ ಅಕ್ಟೋಬರ್‌ನಲ್ಲಿ ಬಾಂಗ್ಲಾದೇಶ ಸೆಣಬು ಪ್ಯಾಕೇಜಿಂಗ್ ವಸ್ತುಗಳ ಕಾನೂನು ರಚಿಸಿದ್ದು, ಅದು 2012 ರ ಸೆಪ್ಟೆಂಬರ್‌ನಲ್ಲಿ ಜಾರಿಗೆ ಬಂದಿದೆ. ವರದಿಯಾಗಿರುವಂತೆ 2014 ಅಂತ್ಯದವರೆಗೆ ಅದರ ಅನುಷ್ಠಾನವಾಗಿರಲಿಲ್ಲ.

ಭಾರತದಂತೆ ಬಾಂಗ್ಲಾದೇಶ ಸರ್ಕಾರ ಪ್ಯಾಕಿಂಗ್ ಮಾಡಲು ಪ್ಯಾಕೇಜಿಂಗ್ ವಸ್ತುಗಳಾದ ಸೆಣಬು ಗೋಣಿಚೀಲಗಳನ್ನು ನೇರವಾಗಿ ಖರೀದಿ ಮಾಡುವುದಿಲ್ಲ. ಉಪಯೋಗದಾರರ ಅಗತ್ಯಕ್ಕೆ ಸೆಣಬು ಪ್ಯಾಕೇಜಿಂಗ್ ವಸ್ತುಗಳನ್ನು ಬಳಸಲು ಅವರ ಬೆಂಬಲ ಪರೋಕ್ಷವಾಗಿರುತ್ತದೆ.

ಬಾಂಗ್ಲಾದೇಶದಲ್ಲಿ ಸೆಣಬು ವಲಯವನ್ನು ಪರಿಣಾಮಕಾರಿಯಾಗಿ ರಕ್ಷಿಸುವ ಕಾನೂನು, ಸೆಣಬು ಪ್ಯಾಕೇಜಿಂಗ್ ಅನ್ನು ಖಾಸಗಿಯವರು ಕೊಂಡುಕೊಳ್ಳುವಂತೆ ಪ್ರೋತ್ಸಾಹಿಸುವ ಸರ್ಕಾರದ ಸಾಮರ್ಥ್ಯದ ಮೇಲೆ ಅವಲಂಬಿತವಾಗಿದೆ ಎಂಬುದನ್ನು ಸೂಚಿಸುತ್ತದೆ.

ಭಾರತದಲ್ಲಿ ಪ್ರಸ್ತುತ ಆಹಾರ ಧಾನ್ಯಗಳು ಮತ್ತು ಸಕ್ಕರೆಯನ್ನು ಸೆಣಬು ಗೋಣಿ ಚೀಲಗಳಲ್ಲಿ ಪ್ಯಾಕ್ ಮಾಡುವ ಅಗತ್ಯವಿದೆ. ಆಹಾರ ಧಾನ್ಯಗಳನ್ನು ಪ್ಯಾಕ್ ಮಾಡಲು ದೊಡ್ಡಮಟ್ಟದಲ್ಲಿ ಗೋಣಿ ಚೀಲಗಳ ಅಗತ್ಯವಿದ್ದು, ಸರ್ಕಾರ ನೇರವಾಗಿ ಸೆಣಬು ಕಾರ್ಖಾನೆಗಳಿಂದ ಸಗಟು ಖರೀದಿ ಮಾಡುತ್ತದೆ. ಪಟ್ಟಿ – 1ರಲ್ಲಿ ಜೆಪಿಎಂ ಕಾನೂನು ರಕ್ಷಣೆಯ ಪ್ರಕಾರ ಆಹಾರ ಧಾನ್ಯಗಳ ಪ್ಯಾಕೇಜಿಂಗ್‌ನಲ್ಲಿ ಕಡ್ಡಾಯವಾಗಿ ಗೋಣಿ ಚೀಲಗಳನ್ನು ಉಪಯೋಗಿಸಿದ (2006–07 ರಿಂದ 2015–16) ವಿವರಗಳಿವೆ.

ಆಹಾರ ಧಾನ್ಯಗಳು ಮತ್ತು ಸಕ್ಕರೆಯನ್ನು ಶೇಕಡ 100 ರಷ್ಟು ಪ್ಯಾಕ್ ಮಾಡುವುದು ಕಡ್ಡಾಯವಾಗಿದ್ದು ಸ್ಥಿರವಾದ ಬೇಡಿಕೆಯಿದೆ, ಆದರೆ ಆಹಾರ ಧಾನ್ಯ ಖರೀದಿ ಕ್ರಮೇಣ ಹೆಚ್ಚಿದಂತೆ ಗೋಣಿ ಚೀಲಕ್ಕೆ ಬೇಡಿಕೆಯೂ ಕ್ರಮೇಣ ಹೆಚ್ಚಿದೆ.


2006–07 ರಲ್ಲಿ ಸರ್ಕಾರ 4 ಲಕ್ಷ ಮೆಟ್ರಿಕ್ ಟನ್ ಬಿ–ಟ್ವಿಲ್ ಖರೀದಿ ಮಾಡಿದರೆ, 2015–16 ರಲ್ಲಿ ಸುಮಾರು 8.3 ಲಕ್ಷ ಮೆಟ್ರಿಕ್ ಟನ್ ಬಿ–ಟ್ವಿಲ್ ಗೋಣಿ ಚೀಲಗಳನ್ನು ಖರೀದಿ ಮಾಡಿದೆ, ದಶಕದಲ್ಲಿ ಶೇ.107 ರಷ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಕಚ್ಚಾ ಸೆಣಬು ಉತ್ಪಾದನೆ 18 ಲಕ್ಷ ಟನ್‌ಗಳಿಂದ ಸುಮಾರು 14.4 ಲಕ್ಷ ಟನ್‌ಗಳಿಗೆ ಇಳಿದಿದೆ. ಇದೇ ಅವಧಿಯಲ್ಲಿ ಸರ್ಕಾರ ಕಚ್ಚಾ ಸೆಣಬು ಉಪಯುಕ್ತತೆಯನ್ನು ಶೇ.22.3 ರಿಂದ ಶೇ. 57.6 ಕ್ಕೇರಿಸಿದೆ. ಈ ಮಧ್ಯೆ ಇದೇ ಅವಧಿಯಲ್ಲಿ ಸರ್ಕಾರ ಬಿ–ಟ್ವಿಲ್

ಖರೀದಿಯನ್ನು ಶೇ.29.5 ರಿಂದ ಶೇ.68.1 ಕ್ಕೇರಿಸಿ ಉತ್ಪನ್ನ ಮಾಡಿದ ಎಲ್ಲ ಸೆಣಬು ವಸ್ತುಗಳ ಉತ್ಪನ್ನಗಳನ್ನು ಖರೀದಿಸಿದೆ. ರೇಖಾಚಿತ್ರದಲ್ಲಿ ವರ್ಷಗಳ ಕಾಲದಲ್ಲಿ ಮೀಸಲಾತಿ ಎಷ್ಟು ಪರಿಣಾಮಕಾರಿಯಾಗಿ ಹೆಚ್ಚಾಗಿದೆ ಎಂಬುದನ್ನು ತೋರಿಸಲಾಗಿದೆ. ಇದೇ ರಕ್ಷಣಾ ಅವಧಿಯಲ್ಲಿ ಭಾರತೀಯ ಸೆಣಬು ಕೈಗಾರಿಕೆ ತನ್ನನ್ನು ಹೇಗೆ ವೈವಿಧ್ಯಮಯಗೊಳಿಸಿಕೊಂಡು, ಹೊಸ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿ ಮತ್ತು ಹೊಸ ಮಾರುಕಟ್ಟೆಯನ್ನು ಸೃಷ್ಟಿಸಿಕೊಳ್ಳುತ್ತದೆ ಎಂಬುದನ್ನು ಅಂದಾಜು ಮಾಡಲಾಗಿದೆ. ಇದಕ್ಕೆ ವಿರುದ್ಧವಾಗಿ, ಕೈಗಾರಿಕೆ ಪ್ರಗತಿಪರವಾಗಿ ಮುಂದುವರಿಯುವ ಬದಲು ತನ್ನ ಉಳಿವಿಗಾಗಿ ಜೆಪಿಎಂ ಕಾನೂನಿನ ಮೇಲೆ ಹೆಚ್ಚು ಹೆಚ್ಚು ಅವಲಂಬಿತವಾಗಿದೆ, ಮಾತ್ರವಲ್ಲ ಕೈಗಾರಿಕೆ ಕೂಡಾ ಖಾಸಗಿ ಮಾರುಕಟ್ಟೆ, ದೇಶಿ ಮತ್ತು ರಫ್ತು ಎರಡರಲ್ಲೂ ಮಾರಾಟ ಮಾಡುವ ತನ್ನ ಸಾಮರ್ಥ್ಯವನ್ನು ಕಳೆದುಕೊಂಡಿದೆ. ಪ್ರಸ್ತುತ, ಕೈಗಾರಿಕೆ ವಿಮರ್ಶಾತ್ಮಕವಾಗಿ ಒಂದೇ ಉತ್ಪನ್ನದ ಮೇಲೆ ಅಂದರೆ ಅದೇ ಆಹಾರ ಧಾನ್ಯಗಳನ್ನು ಪ್ಯಾಕ್ ಮಾಡಲು ಬೇಕಾದ ಬಿ–ಟ್ವಿಲ್ ಮೇಲೆ ಮತ್ತು ಒಬ್ಬನೇ ಖರೀದಿದಾರ, ಸರ್ಕಾರದ ಮೇಲೆ ತನ್ನ ಉಳಿವಿಗಾಗಿ ಅವಲಂಬಿತವಾಗಿದೆ.


ಬಾಂಗ್ಲಾದೇಶದ ಸೆಣಬು ಕೈಗಾರಿಕೆಗೆ ಹೋಲಿಸಿದಲ್ಲಿ ಭಾರತೀಯ ಸೆಣಬು ಕೈಗಾರಿಕೆ ಸ್ಪರ್ಧಾತ್ಮಕತೆಯ ಕೊರತೆಯನ್ನು ಎದುರಿಸುತ್ತಿದೆ. ಅದಕ್ಕೆ ಈ ಕಾನೂನು ರಕ್ಷಣೆ ಕಾರಣವಾಗಿದೆ. ಭಾರತೀಯ ಸೆಣಬು ಕೈಗಾರಿಕೆ ಸಾಕಷ್ಟು ವೈವಿಧ್ಯಮಯಗೊಳ್ಳಲು ಜೆಪಿಎಂ ಕಾಯಿದೆ ಪ್ರೋತ್ಸಾಹಯದಾಯಕವಾಗಿಲ್ಲ ಎಂಬುದು ಇಲ್ಲಿ ಸ್ಪಷ್ಟವಾಗಿದೆ. ಎಷ್ಟರ ಮಟ್ಟಿಗೆ ಹೊಸ ಉತ್ಪನ್ನಗಳ ಅಭಿವೃದ್ಧಿ ಮತ್ತು ಹೊಸ ಮಾರುಕಟ್ಟೆಯ ಸೃಷ್ಟಿ ಆಗಬೇಕಿತ್ತೊ, ಅದು ತಕ್ಕ ಮಟ್ಟಿನ ಪ್ರಮಾಣದಲ್ಲಿಯೇ ಉಳಿದಿದೆ.

ಬಾಂಗ್ಲಾದೇಶದಲ್ಲಿ ಸೆಣಬು ಕೈಗಾರಿಕೆ ಮಾರುಕಟ್ಟೆ ಬಲಗಳಿಗೆ ತೆರೆದುಕೊಂಡಿದೆ. ಬಾಂಗ್ಲಾದೇಶದ ಸೆಣಬು ಕೈಗಾರಿಕೆ ಪರಿಣಾಮಕಾರಿಯಾಗಿ (ಪಟ್ಟಿ – 2) ಕಚ್ಚಾ ಸೆಣಬು ಉತ್ಪನ್ನ ಮತ್ತು ರಫ್ತು ಎರಡು ವಿಧದಲ್ಲೂ ಭಾರತಕ್ಕಿಂತಲೂ ಉತ್ತಮವಾಗಿ ಕಾರ್ಯ ನಿರ್ವಹಿಸಿದೆ.

**ರೇಖಾ ಚಿತ್ರ – 1**




**ರೇಖಾ ಚಿತ್ರ – 2**




2008–09 ರಿಂದ ಕಚ್ಚಾ ಸೆಣಬು ಉತ್ಪಾದನೆಯ ಹೋಲಿಕೆಯನ್ನು ಅನುಕ್ರಮವಾಗಿ ಭಾರತ ಮತ್ತು ಬಾಂಗ್ಲಾದೇಶ ಮತ್ತು ಪ್ರತಿ ದೇಶ ರಫ್ತು ಮಾಡಿದ ಸೆಣಬು ವಸ್ತುಗಳ (ಐಎನ್‌ಆರ್‌ಗೆ ಪರಿವರ್ತಿಸಿ ಆಯಾಯ ವರ್ಷಗಳ ಸರಾಸರಿ ವಿನಿಮಯ ದರ), ಪ್ರಮಾಣಕ್ಕೆ ಹೋಲಿಸಲಾಗಿದೆ. ಭಾರತೀಯ ಸೆಣಬು ವಲಯಕ್ಕೆ ರಕ್ಷಣೆ ನೀಡಿದ್ದರೂ ಕೂಡಾ ಅದು ಕಚ್ಚಾ ಸೆಣಬು ಉತ್ಪಾದನೆಯಲ್ಲಿ ಕೆಳಮುಖವಾಗಿದೆ, ಆದರೆ ಬಾಂಗ್ಲಾದೇಶದಲ್ಲಿ ಉತ್ಪಾದನೆ ಹೆಚ್ಚಳವಾಗಿರುವುದು ಸ್ಪಷ್ಟವಾಗಿದೆ. ರಫ್ತಿನಲ್ಲಿ ಕೂಡಾ ಬಾಂಗ್ಲಾದೇಶ ಉತ್ತಮ ಸಾಧನೆ ಮಾಡಿ ಭಾರತಕ್ಕಿಂತಲೂ ಸ್ಥಿರವಾಗಿದೆ.

ಭಾರತೀಯ ಸೆಣಬು ಕಾರ್ಖಾನೆಗಳು ವಿದೇಶಿ ಮಾರುಕಟ್ಟೆ ಒಳಹೋಗಲು ಯಾವುದೇ ಮಹತ್ವದ ಪ್ರಯತ್ನಗಳನ್ನು ಮಾಡಿಲ್ಲ. ಇನ್ನೊಂದು ಕಡೆ ಬಾಂಗ್ಲಾದೇಶದ ಅಗ್ಗದ ವಸ್ತುಗಳು ಆಮದಾಗುತ್ತಿರುವುದರಿಂದ ಅದು ತನ್ನ ದೇಶಿ ಮಾರುಕಟ್ಟೆಯನ್ನು ಕಳೆದುಕೊಳ್ಳುತ್ತಿದೆ.

ಬಾಂಗ್ಲಾದೇಶದ ಸರ್ಕಾರ ಅನುಸರಿಸುತ್ತಿರುವ ನೀತಿಗಳಿಂದಾಗಿ ಕೈಗಾರಿಕೆಯಲ್ಲಿ ಸ್ಪರ್ಧಾತ್ಮಕತೆಯನ್ನು ಹೋಲಿಸಿಕೊಂಡರೆ ಬೃಹತ್ ಸ್ಪರ್ಧಿಗಳು ಸ್ಪಷ್ಟವಾಗಿ ಕಡಿಮೆಯಾಗುತ್ತಿದ್ದಾರೆ, ಬಾಂಗ್ಲಾದೇಶಕ್ಕೆ ಕೆಲವು ಸ್ವಾಭಾವಿಕ ವೆಚ್ಚಗಳ ಅನುಕೂಲಗಳಿವೆ ಮತ್ತು ಭಾರತೀಯ ಉತ್ಪಾದಕರು ನಿಧಾನವಾದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ವರದಿಯಂತೆ ಬಾಂಗ್ಲಾದೇಶದ ಸೆಣಬು ಕಾರ್ಖಾನೆಗಳಿಗೆ ಶೇ.15 ರಿಂದ ಶೇ.30 ರಷ್ಟು ವೆಚ್ಚದಲ್ಲಿ ಅನುಕೂಲವಿದೆ, ಅಲ್ಲಿಯ ಕಾರ್ಮಿಕರ ವೇತನಗಳು ಭಾರತಕ್ಕಿಂತಲೂ ಕನಿಷ್ಠ ಶೇ.30 ರಷ್ಟು ಕಡಿಮೆ ವೇತನವಿದೆ ಮತ್ತು ವಿದ್ಯುತ್ ದರಗಳು ಸುಮಾರು 35 ರಷ್ಟು ಕಡಿಮೆ ಇವೆ. ಅದರೊಂದಿಗೆ ಸೆಣಬು ವಸ್ತುಗಳ ರಫ್ತಿನ ಮೇಲೆ ಶೇ.10 ಅನುದಾನವಿದೆ. ಬಾಂಗ್ಲಾದೇಶ ಎಲ್ಲ ವಿದೇಶಿ ಮಾರುಕಟ್ಟೆಗಳಲ್ಲಿ ಭಾರತವನ್ನು ದರಗಳಲ್ಲಿ ದೂರವಿರಿಸಲು ಸಮರ್ಥವಾಗಿದೆ. ಆದರೆ ಭಾರತದಲ್ಲಿ ಬಾಂಗ್ಲಾದೇಶದಿಂದ ಆಮದಾಗುವ ಸೆಣಬು ವಸ್ತುಗಳಿಗೆ ಶೂನ್ಯ ಆಮದು ಸುಂಕವಿರುವುದರಿಂದ ಭಾರತೀಯ

ಸೆಣಬು ವಸ್ತುಗಳು ಭಾರತೀಯ ಮಾರುಕಟ್ಟೆಯಲ್ಲಿ ಕಡಿಮೆಯಾಗುತ್ತಿವೆ. ಪಶು ಆಹಾರ ಮತ್ತು ಕೋಳಿ ಸಾಕಾಣಿಕೆ ಕೈಗಾರಿಕೆ, ದೊಡ್ಡ ಗ್ರಾಹಕರು ಸೆಣಬು ಗೋಣಿ ಚೀಲಗಳನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡಿದ್ದಾರೆ ಎಂದು ನಂಬಲಾಗಿದೆ. ಬಾಂಗ್ಲಾದೇಶದಿಂದ ಅಗ್ಗ ಟ್ವೈನ್‌ದಾರ ಆಮದಾಗುತ್ತಿರುವುದರಿಂದ ಆಂಧ್ರ ಪ್ರದೇಶದಲ್ಲಿ ಇತ್ತೀಚಿನ ತಿಂಗಳುಗಳಲ್ಲಿ ಸೆಣಬು ದಾರದ ಮಿಲ್‌ಗಳನ್ನು ಮುಚ್ಚಲಾಗಿದೆ.

**ನಾರು ಮತ್ತು ಬಟ್ಟೆಗಳಲ್ಲಿ ಸುಧಾರಣೆ**

ಭಾರತೀಯ ಸೆಣಬು ಕೈಗಾರಿಕೆ ನಿರಂತರ ಹಿಂಜರಿಕೆಯಾಗಿರುವುದಕ್ಕೆ ಕಾರಣ ಭಾರತದಲ್ಲಿ ಉತ್ಪನ್ನವಾಗುತ್ತಿರುವ ನಾರಿನ ಗುಣಮಟ್ಟ, ಪ್ರಾಥಮಿಕವಾಗಿ ಸಾಮಾನ್ಯವಾದುದು ಮತ್ತು ಸರಾಸರಿಗಿಂತಲೂ ಕಡಿಮೆ (ಟಿಡಿ–5 ರಿಂದ ಟಿಡಿ–8) ಇದರ ಒಟ್ಟು ಉತ್ಪಾದನೆ ಮೂರನೇ ಎರಡರಷ್ಟು ಇದೆ. ಈ ಗುಣಮಟ್ಟದ ನಾರನ್ನು ಪ್ರಾಥಮಿಕವಾಗಿ ಒರಟು ದಾರ ತಯಾರು ಮಾಡಲು ಉಪಯೋಗಿಸುತ್ತಾರೆ, ಇದು ಒರಟು ಬಟ್ಟೆ ನೇಯಲು ಸೂಕ್ತವಾಗಿದ್ದು, ಇದನ್ನು ಬಿ–ಟ್ವಿಲ್ ಗೋಣಿ ಚೀಲಗಳನ್ನು ತಯಾರಿಸಲು ಬಳಸುತ್ತಾರೆ.

ವಾದ ಏನೆಂದರೆ ಭಾರತದಲ್ಲಿ ಒರಟು ನಾರನ್ನು ಉತ್ಪಾದಿಸುತ್ತಿದ್ದರೂ ಗೋಣಿ ಚೀಲಗಳನ್ನು ತಯಾರು ಮಾಡಲು ಸೆಣಬು ಮಿಲ್‌ಗಳಿಗೆ ನಿರ್ಬಂಧವಿದೆ ಮತ್ತು ಸರ್ಕಾರ ಗೋಣಿ ಚೀಲಗಳಿಗೆ ಮಾರುಕಟ್ಟೆ ಒದಗಿಸಲು ಸಹಾಯ ಮಾಡುತ್ತಿದೆ. ಈ ತರ್ಕ ಸಂಪೂರ್ಣವಾಗಿ ಸರಿಯಲ್ಲ. ಸಾಕಷ್ಟು ಬೇಡಿಕೆ ಮತ್ತು ಉತ್ತಮ ಗುಣಮಟ್ಟದ ನಾರಿಗೆ ಲಾಭಾಂಶವಿಲ್ಲ ಮತ್ತು ರೈತರು ಉತ್ತಮ ಗುಣಮಟ್ಟದ ನಾರು ಉತ್ಪಾದಿಸಲು ಯಾವುದೇ ಪ್ರೋತ್ಸಾಹಧನವಿಲ್ಲ.

ಸಗಟು ಬೇಡಿಕೆ ಇರುವುದು ಸಾಮಾನ್ಯವಾದ ಮತ್ತು ಸರಾಸರಿ ಗುಣಮಟ್ಟಕ್ಕಿಂತಲೂ ಕೆಳಗಿರುವ ನಾರಿಗೆ, ಆದ್ದರಿಂದ ರೈತರು ಹೆಚ್ಚಿನ ಜಾಗೃತಿ ತೆಗೆದುಕೊಳ್ಳಲು ಬಯಸುತ್ತಿಲ್ಲ ಮತ್ತು ಉತ್ತಮ ಗುಣಮಟ್ಟದ ನಾರನ್ನು ಉತ್ಪಾದಿಸುವ ಪ್ರಯತ್ನದ ಅಗತ್ಯವಿದೆ. ಸೆಣಬು ನಾರಿನ ಸಂಸ್ಕರಣದಲ್ಲಿ ಅತ್ಯಂತ ಉತ್ತಮವಾದ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಸಿಗಬೇಕು ಎಂಬುದು ಸೆಣಬು ಪ್ರೋತ್ಸಾಹಕ್ಕೆ ಸವಾಲಾಗಿದೆ. ಒಂದು ಕಡೆ ಗುಣಮಟ್ಟದ ನಾರು ಉತ್ಪಾದನೆ ಸುಧಾರಣೆಯಾಗಬೇಕು ಮತ್ತು ಇನ್ನೊಂದು ಕಡೆ ಉತ್ತಮ ಗುಣಮಟ್ಟದ ದಾರ ಉತ್ಪಾದನೆ ಮಾಡಲು ಸಂಸ್ಕರಣೆ ವಿಧಾನಗಳಲ್ಲಿ ಸುಧಾರಣೆಯಾಗಬೇಕು. ಇದರ ಪರಿಣಾಮ ಉತ್ತಮ ಗುಣಮಟ್ಟದ ಬಟ್ಟೆ ವಸ್ತುಗಳು ಉತ್ಪಾದನೆಯಾದರೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ವಿಧಿಸಬಹುದು. ಈ ಬದಲಾವಣೆಯಿಂದ ಸೆಣಬು ರೈತರು ತಮ್ಮ ನಾರಿಗೆ ಉತ್ತಮವಾದ ಬೆಲೆಗಳನ್ನು ಪಡೆಯಲು ಸೆಣಬು ಆರ್ಥಿಕತೆ ಅನುವು ಮಾಡಿಕೊಡುತ್ತದೆ. ಕುಶಲಕರ್ಮಿಗಳು ಮತ್ತು ಕಸಬುಗಾರರ ತಮ್ಮ ಉತ್ಪನ್ನಗಳಿಗೆ ಮೌಲ್ಯಾಧಾರಿತ ಲಾಭಾಂಶ ಪಡೆಯುವ ಮೂಲಕ ಉತ್ತಮ ಲಾಭ/ ವೇತನ ಗಳಿಸಬಹುದು.

ಹೆಚ್ಚಿನ ಗುಣಮಟ್ಟದ ನಾರಿನ ಉತ್ಪಾದನೆಗೆ ರೈತರು ಉತ್ತಮವಾದ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಅಂದರೆ ಪ್ರಮಾಣೀಕೃತ ಬೀಜಗಳು, ಸಾಲಿನಲ್ಲಿ ಬಿತ್ತನೆ ಮತ್ತು ಕಾಲಕ್ಕೆ ಸರಿಯಾಗಿ ಕಳೆ ತೆಗೆಯುವುದಕ್ಕೆ ಅವರನ್ನು ಉತ್ತೇಜಿಸಬೇಕು.

ಪ್ರಸ್ತುತ ಪದ್ಧತಿಯಂತೆ ವಿತರಣೆಮಾಡುವುದರಿಂದ ಗಿಡಗಳ ಏಕರೂಪದ ಮತ್ತು ಆರೋಗ್ಯವಂತ ಬೆಳವಣಿಗೆಗೆ ಪ್ರೋತ್ಸಾಹ ನೀಡಿದಂತಾಗುವುದಿಲ್ಲ. ಕಾಲಕ್ಕೆ ಸರಿಯಾಗಿ ಗೊಬ್ಬರ ಮತ್ತು ಕೀಟನಾಶಕಗಳು ದೊರಕುವುದು ಕೂಡಾ ಅಗತ್ಯವಾಗಿದೆ.

ನಾರು ಉತ್ಪಾದನೆಯಲ್ಲಿ ಸಂದಿಗ್ಧವಾದ ಕೊನೆಯ ಹೆಜ್ಜೆ ಏನೆಂದರೆ ಸೆಣಬು ಗಿಡದಿಂದ ಸಂಪೂರ್ಣವಾಗಿ ನಾರು ತೆಗೆಯಲು ಗಿಡವನ್ನು ನೆನೆಯಿಸಿ ಮೃದುಗೊಳಿಸುವುದು. ಗ್ರಾಮೀಣ ಭಾರತದಲ್ಲಿ ನೀರಿನ ಮೂಲಗಳು ಮಿತವಾಗಿದ್ದು, ಗುಣಮಟ್ಟದ ನೀರು ದೊರಕದಿರುವುದರಿಂದ ಗಿಡವನ್ನು ನೆನೆಯಿಸಿ ಮೃದುಗೊಳಿಸುವುದು ಕಡಿಮೆಯಾಗುತ್ತಿದೆ, ಇದರಿಂದಾಗಿ ರೈತರು ಸೆಣಬು ಗಿಡವನ್ನು ನೆನೆಯಿಸಿ ಮೃದುಗೊಳಿಸುವುದನ್ನು ಯಾಂತ್ರಿಕವಾಗಿ ರಸ್ತೆ ಬದಿ ಗುಂಡಿಗಳಲ್ಲಿ, ಕೊಳೆ ಮತ್ತು ಮಣ್ಣಿನ ನೀರಿನಲ್ಲಿ ಅನಾರೋಗ್ಯಕರವಾದ ಸ್ಥಿತಿಯಲ್ಲಿ

**ಪಟ್ಟಿ – 2**

**ಭಾರತ – ಬಾಂಗ್ಲಾದೇಶ : ಸೆಣಬು ವಸ್ತುಗಳ ಉತ್ಪಾದನೆ ಮತ್ತು ರಫ್ತು**

| | ಕಚ್ಚಾ ಸೆಣಬು ಉತ್ಪಾದನೆ ('000 ಬೇಲ್ಸ್) | | ಒಟ್ಟು ರಫ್ತು (ಮಿಲಿಯನ್ ಐಎನ್‌ಆರ್) | |
|---|---|---|---|---|
| ವರ್ಷ | ಭಾರತ | ಬಾಂಗ್ಲಾದೇಶ | ಭಾರತ | ಬಾಂಗ್ಲಾದೇಶ |
| 2008–09 | 8200 | 5172 | 12161.6 | 56045.8 |
| 2009–10 | 9000 | 5945 | 8594.6 | – |
| 2010–11 | 10000 | 7803 | 18541.5 | 90946.0 |
| 2011–12 | 10250 | 7405 | 20949.6 | 81941.4 |
| 2012–13 | 9300 | 7572 | 19918.0 | 96578.7 |
| 2013–14 | 9000 | 8000 | 21219.5 | 89172.7 |
| 2014–15 | 7200 | – | 18138.1 | 97295.9 |
| 2015–16 | 6500 | – | 18893.9 | 109565.5 |

ಕಚ್ಚಾ ಸೆಣಬು ಉತ್ಪಾದನೆ (ಭಾರತ) : ಸೆಣಬು ಸಲಹಾ ಮಂಡಳಿ
ಕಚ್ಚಾ ಸೆಣಬು ಉತ್ಪಾದನೆ (ಬಾಂಗ್ಲಾದೇಶ) : ಎಫ್‌ಎಓ
ರಫ್ತು (ಭಾರತ) : ಡಿಜಿಸಿಐ&ಎಸ್, ಕೋಲ್ಕತ್ತಾ
ರಫ್ತು (ಬಾಂಗ್ಲಾದೇಶ) : ಎಕ್ಸ್‌ಪೋರ್ಟ್ ಪ್ರಮೋಷನ್ ಬ್ಯೂರೋ ಆಫ್ ಬಾಂಗ್ಲಾದೇಶ (www.epb.gov.bd)



ಮಾಡುತ್ತಿದ್ದಾರೆ. ಇದರ ಫಲವಾಗಿ ನಾರು ಸಾಮಾನ್ಯ ಅಥವಾ ಅದಕ್ಕಿಂತಲೂ ಕಡಿಮೆ ಗುಣಮಟ್ಟದ ನಾರು ಉತ್ಪಾದನೆಯಾಗುತ್ತಿದ್ದು, ಅದು ಅತ್ಯಂತ ಉತ್ತಮವಾದ ಉತ್ಪಾದನೆಗೆ ಸೂಕ್ತವಾಗುತ್ತಿಲ್ಲ.

**ಸೆಣಬು–ಐಸಿಎಆರ್‌ಇ (ಸೆಣಬು:** ಇಂಪ್ರೂಡ್ ಕಲ್ಟಿವೇಷನ್ ಅಂಡ್ ಅಡ್ವಾನ್ಸಡ್ ರೆಟ್ಟಿಂಗ್ ಎಕ್ಸರ್‌ಸೈಜ್) ಯೋಜನೆಯನ್ನು 2015 ರಲ್ಲಿ ರೂಪಿಸಲಾಯಿತು. ಇದರ ಮುಖ್ಯ ಗುರಿ ಎಂದರೆ ಸಹಾಯಧನ ದರದಲ್ಲಿ ರೈತರಿಗೆ ಪ್ರಮಾಣೀಕೃತ ಬೀಜಗಳನ್ನು ನೀಡುವುದು, ಸಾಲು ನಾಟಿ ಮಾಡಲು ಬೀಜ ಬೈರಿಗೆಗಳು, ಆಗಾಗ ಕಳೆ ಕಿತ್ತು ಹಾಕಲು ಅಲುಬುಗಳನ್ನು ನೀಡುವುದು ಮತ್ತು ನೀರು ಮಿತವಾಗಿ ದೊರಕುವ ಸ್ಥಿತಿಯಲ್ಲಿ ಗಿಡವನ್ನು ನೆನೆಯಿಸಿ ಮೃದುಗೊಳಿಸಲು ಹಲವಾರು ಹೊಸದಾಗಿ ಅಭಿವೃದ್ಧಿ ಪಡಿಸಿದ ತಂತ್ರಜ್ಞಾನವನ್ನು ಆಳವಡಿಸಿಕೊಳ್ಳುವುದನ್ನು ಜನಪ್ರಿಯಗೊಳಿಸುವುದು.

ಗಿಡವನ್ನು ನೆನೆಯಿಸಿ ಮೃದುಗೊಳಿಸುವ ಮೂರು ತಂತ್ರಜ್ಞಾನಗಳು ಭರವಸೆಯನ್ನು ಮೂಡಿಸಿವೆ. ಮೊದಲನೆ ತಂತ್ರಜ್ಞಾನ ಆಳವಡಿಕೆ ಮಾಡಿಕೊಳ್ಳುವುದರಿಂದ ಗಿಡದಿಂದ ತೊಗಟೆಯನ್ನು ತೆಗೆದುಹಾಕಿ ಪಟ್ಟಿಗಳನ್ನು ಮಾಡುವುದು ಮತ್ತು ನಂತರ ಸಿಂಥೆಟಿಕ್ ತೊಟ್ಟಿಗಳಲ್ಲಿ ವಿವಿಧ ರೀತಿಯ ಎಂಜೈಮ್ಸ್ ಸಂಯೋಗದಲ್ಲಿ ಅವುಗಳನ್ನು ನೆನೆಯಿಸಿ ಮೃದುಗೊಳಿಸುವ ಕಾರ್ಯ ಮಾಡಬಹುದು. ನೊವೋಜೈಮ್ಸ್‌ಗಳು, ವಿಶ್ವದಲ್ಲೇ ದೊಡ್ಡಮಟ್ಟದಲ್ಲಿ ಕೈಗಾರಿಕಾ ಎಂಜೈಮ್ಸ್‌ಗಳನ್ನು ಐಜೆಐಆರ್‌ಎ ಮತ್ತು ಜೆಸಿಐ ಸಹಯೋಗದಲ್ಲಿ ತಯಾರಕರಾಗಿದ್ದಾರೆ.

ಸರ್ವೋತ್ತಮ ಉಪಾಯದಲ್ಲಿ ತಯಾರಿಸಿದ ಎಂಜೈಮ್ಸ್‌ಗಳನ್ನು ಅತ್ಯಂತ ಮಿತಿಯೊಳಗೆ ಗುಣಮಟ್ಟದ ನೀರಿನಲ್ಲಿ ಮತ್ತು ವಾರಗಳ ಕಾಲದಲ್ಲಿ (ಸಾಮಾನ್ಯವಾಗಿ 18 ರಿಂದ 22 ದಿನಗಳಲ್ಲಿ) ಗಿಡವನ್ನು ನೆನೆಯಿಸಿ ಮೃದುಗೊಳಿಸುವ ಬದಲು) ಮಾಡಬಹುದಾಗಿದೆ.

ಎರಡನೇ ತಂತ್ರಜ್ಞಾನ ಆಳವಡಿಕೆ, ಇದು ಸೆಣಬು – ಐಸಿಎಆರ್‌ಇ ಒಳಗೊಂಡಿದ್ದು ಪ್ರಯೋಗ ಹಂತದಲ್ಲಿದೆ, ಬ್ಯಾಕ್ಟೀರಿಯ ಸಹಯೋಗದಲ್ಲಿ ಅವುಗಳನ್ನು ನೈಸರ್ಗಿಕವಾದ ಸ್ವಾಭಾವಿಕವಾಗಿ ಹುಟ್ಟಿ ಬೆಳೆಯುವ ಸ್ಥಳವನ್ನೆ ಉಪಯೋಗಿಸಿ 10–12 ದಿನಗಳಲ್ಲಿ ಸಂಪೂರ್ಣವಾಗಿ ಗಿಡವನ್ನು ನೆನೆಯಿಸಿ ಮೃದುಗೊಳಿಸುವುದು, ಸಾಂಪ್ರದಾಯಿಕ ಮೂಲದಲ್ಲಿ ರೈತರಿಗೆ ದೊರಕುವ ನೀರಿಗಿಂತಲೂ ಶೀಘ್ರವಾಗಿ ಗಿಡವನ್ನು ನೆನೆಯಿಸಿ ಮೃದುಗೊಳಿಸುವುದನ್ನು ಪ್ರೋತ್ಸಾಹಿಸಲಾಗುತ್ತಿದೆ.

ಮೂರನೇ ತಂತ್ರಜ್ಞಾನ ಕೂಡಾ ಪ್ರಯೋಗ ಹಂತದಲ್ಲಿದ್ದು, ಇಲ್ಲಿ ಕೂಡಾ ಐಸಿಎಆರ್‌ಇ ಒಳಗೊಂಡಿದ್ದು ವಿವಿಧ ರೀತಿಯ ಮೈಕ್ರೋಬ್ಸ್‌ಗಳು ಇದೇ ಕಾರ್ಯ ಮಾಡುತ್ತವೆ. ಈ ಎರಡು ತಂತ್ರಜ್ಞಾನಗಳನ್ನು ಆಳವಡಿಸಿಕೊಳ್ಳುವುದು ರೈತರಿಗೆ ಸುಲಭವಾಗಿರುತ್ತದೆ. ಇವು ಈಗ ಸಾಂಪ್ರದಾಯಿಕವಾದ ಗಿಡವನ್ನು ನೆನೆಯಿಸಿ ಮೃದುಗೊಳಿಸುವ ಕೆಲಸ ಪ್ರಸ್ತುತ ಅನುಸರಿಸುತ್ತಿರುವುದಕ್ಕೆ ಹತ್ತಿರವಾಗಿವೆ. ಈ ತಂತ್ರಜ್ಞಾನಗಳಿಂದ ಗಿಡವನ್ನು ನೆನೆಯಿಸಿ ಮೃದುಗೊಳಿಸುವ ಕಾರ್ಯದ ಸಮಯವನ್ನು ಕಡಿತ ಮಾಡುವುದರೊಂದಿಗೆ ನಾರಿನ ದರ್ಜೆ ಕನಿಷ್ಠ ಒಂದರಿಂದ ಒಂದೂವರೆಗೆ ಖಾತರಿಯಾಗಿ ಸುಧಾರಣೆಯಾಗುತ್ತದೆ.

ಒಟ್ಟಿನಲ್ಲಿ ಇದೊಂದು ಉತ್ತಮವಾದ ಕೃಷಿ ವಿಜ್ಞಾನ ಪದ್ಧತಿಯಾಗಿದೆ ಮತ್ತು ಸುಧಾರಿತ ಗಿಡವನ್ನು ನೆನೆಯಿಸಿ ಮೃದುಗೊಳಿಸುವ ತಂತ್ರಜ್ಞಾನದಲ್ಲಿ ಸುಧಾರಣೆಯಾಗಿ ಉತ್ಪಾದನೆ ಕನಿಷ್ಠ ಶೇ.15 ಹೆಚ್ಚಾಗುವ ನಿರೀಕ್ಷೆಯಿದೆ. ಇದು ವೈವಿಧ್ಯಮಯ ಸುಧಾರಣೆಯಾಗಿದ್ದು, ರೈತರ ಆದಾಯ ಕನಿಷ್ಠ ಶೇ.25 ರಷ್ಟು ಹೆಚ್ಚುವ ಸಾಧ್ಯತೆಗಳಿವೆ.



ಸಾಮಾನ್ಯ ಮತ್ತು ಕಡಿಮೆ ದರ್ಜೆಯ ಸೆಣಬಿನ ಜೊತೆಗೆ ಉತ್ತಮ ದರ್ಜೆಯ ಸೆಣಬು ಬೆಳೆಯಬೇಕು. ಜೊತೆಗೆ ಸೆಣಬು ನಾರಿನ ಉತ್ಪಾದನಾ ಸಂಸ್ಕರಣೆಗೆ ಯಂತ್ರಗಳನ್ನು ಉಪಯೋಗಿಸುವುದು ಅಗತ್ಯ. ಇದು ಉತ್ತಮ ದರ್ಜೆಯ ನಾರು ಮತ್ತು ಅಂತಿಮವಾಗಿ ಹೆಚ್ಚಿನ ಮೌಲ್ಯಾಧಾರಿತ ಗೋಣಿ ತಯಾರಿಕೆಗೆ ಅನುಕೂಲವಾಗುತ್ತದೆ.

ಸಂಯುಕ್ತ ಸೆಣಬು ಮಿಲ್‌ಗಳ ಯಂತ್ರಗಳ ತಂತ್ರಜ್ಞಾನದ ಮಟ್ಟ ಹೆಚ್ಚಿನಂಶ ಹಿಂದಿನ ಬ್ರಿಟಿಷ್‌ರ ಕಾಲದ್ದಾಗಿದ್ದವು. ಸೆಣಬು ತಂತ್ರಜ್ಞಾನ ಮಿಷನ್ ಬೆಂಬಲದಿಂದ ಆಳವಡಿಸಿಕೊಂಡಿರುವ ಇತ್ತೀಚೆಗೆ ಪರಿಚಯವಾದ ಆಧುನಿಕ ಯಂತ್ರಗಳು ಕೂಡಾ 1980 ರ ದಶಕಕ್ಕೆ ಸೇರಿದವು.




ಜವಳಿ ವಲಯದ ಇತ್ತೀಚಿನ ಬೆಳವಣಿಗೆ ಇತರ ನಾರು ಅಂದರೆ ಹತ್ತಿಯನ್ನು ಆರ್ಥಿಕವಾಗಿ ಪರಿವರ್ತನೆ ಮಾಡಿದೆ ಮತ್ತು ಅದು ಸಿಂಥೆಟಿಕ್ ಸೆಣಬು ವಲಯ ಪ್ರವೇಶಿಸಿಲ್ಲ. ಇತರ ನಾರಿನ ತಂತ್ರಜ್ಞಾನ ಉಪಯೋಗದ ಸೆಣಬು ಸಂಸ್ಕರಣ ಯಂತ್ರಗಳ ಅಭಿವೃದ್ಧಿಗೆ ಹಲವಾರು ಯೋಜನೆಗಳು ಸಿದ್ಧಗೊಳ್ಳುತ್ತಿವೆ.

ಸಂಯುಕ್ತ ಮಿಲ್‌ಗಳನ್ನು ಉತ್ತಮ ರೀತಿಯ ದಾರ ಉತ್ಪಾದನೆ ಮಾಡಲು ಪ್ರೋತ್ಸಾಹಿಸಬೇಕು, ಇದು ಉತ್ತಮ ಮೌಲ್ಯದ ಉತ್ಪನ್ನಗಳನ್ನು ಮಾಡಲು ಆರಂಭದ ಅಗತ್ಯದ ವಸ್ತುಗಳಾಗಿವೆ.

ಈ ಆಧುನಿಕ ಉತ್ಪಾದನೆಯ ಕೈಗಾರಿಕೆಗಳು ಉತ್ತಮ ಗುಣಮಟ್ಟದ ಬಟ್ಟೆ ತಯಾರಿಸಲು ಸಹಾಯ ಮಾಡುವುದು

ಮಾತ್ರವಲ್ಲ, ಕೆಳ ಪ್ರವಾಹದ ಕೈಗಾರಿಕೆ ಮತ್ತು ಗ್ರಾಹಕರ ಅಗತ್ಯಗಳನ್ನು ಪೂರೈಕೆ ಮಾಡಬೇಕು, ಅಂದರೆ ಉದ್ಯೋಗ ಸೃಷ್ಟಿ ಸುಧಾರಣೆ ಮಾಡಲು ಸಹಾಯ ಮಾಡಬೇಕು.

### ಉತ್ಪನ್ನಗಳು ಮತ್ತು ಸಾಧ್ಯತೆಗಳು

ಅಸಾಂಪ್ರದಾಯಿಕ ಮತ್ತು ಮೌಲ್ಯಧರಿತ ಉತ್ಪನ್ನಗಳನ್ನು ಉಪಯೋಗಿಸಿ ಸಂಸ್ಕರಣೆ ಮಾಡಿದ ಸೆಣಬು ನಾರಿನ ದಾರ ಮತ್ತು ಬಟ್ಟೆ ಅಭಿವೃದ್ಧಿ ಪಡಿಸಿ ಮಿಶ್ರಣ ಮಾಡಿ ಬಟ್ಟೆಗಳ ತಯಾರಿ ಮಾಡಲು ಹಲವು ವರ್ಷಗಳ ಕಾಲ ಹಿಡಿದಿದೆ. ಇದರಲ್ಲಿ ವ್ಯಾಪಕವಾದ ವೈವಿಧ್ಯಮಯ ಸೆಣಬು ಕೈ ಚೀಲಗಳು / ಶಾಪಿಂಗ್ ಚೀಲಗಳು, ಮೃದುವಾದ ಲಗೇಜ್, ಪಾದರಕ್ಷೆಗಳು, ಸೆಣಬು ಅಲಂಕಾರಿಕ ವಸ್ತುಗಳು ಅಂದರೆ ಪುಷ್ಪಗುಚ್ಛಗಳು, ಸೆಣಬು ಅಭರಣಗಳು, ಗೋಡೆಗೆ ನೇತುಹಾಕುವ ಸೆಣಬು ಸೇರಿವೆ. ಸೆಣಬನ್ನು ಚಿತ್ರನೇಯ್ದ ವಸ್ತ್ರಗಳು ಮತ್ತು ಮನೆ ಸಜ್ಜುಗೊಳಿಸುವ ವಸ್ತುಗಳನ್ನು ತಯಾರು ಮಾಡಲು ಬಳಸುತ್ತಾರೆ.

ಸೆಣಬು ನೆಲಹಾಸುಗಳು – ಕೈಯಿಂದ ನೇಯ್ದ ಹೊದಿಕೆಗಳು ಮತ್ತು ಕಾರ್ಪೆಟ್ ವಿಶೇಷವಾಗಿ ಪಾಶ್ಚಿಮಾತ್ಯ ಮತ್ತು ಮಧ್ಯ ಪ್ರಾಚ್ಯ ದೇಶಗಳಲ್ಲಿ ಜನಪ್ರಿಯವಾಗಿವೆ.

ಕಡಿಮೆ ವ್ಯಾಪ್ತಿಯಲ್ಲಿ, ಇತರ ವಸ್ತುಗಳಾದ ಸೆಣಬು ಕಸ ಬಳಸಿ ಕೈಯಿಂದ ಮಾಡಿದ ಕಾಗದ, ಊಟದ ಟೇಬಲ್ ವಸ್ತುಗಳು, ಟೇಬಲ್ ಚಾಪೆಗಳು, ಮಲಗುವ ಕೊಠಡಿ/ ಡ್ರಾಯಿಂಗ್ ಕೊಠಡಿ ವಸ್ತುಗಳು ಅಂದರೆ ಕುಶನ್ ಕವರ್, ಹಾಸಿಗೆ, ಟಿವಿ ಕವರ್ ಮತ್ತು ಕಚೇರಿಯಲ್ಲಿ ಉಪಯೋಗಿಸುವ ವಸ್ತುಗಳಾದ ಪೆನ್ ಸ್ಟ್ಯಾಂಡ್, ಬರೆಯುವ ವಸ್ತುಗಳನ್ನು ಇಡುವ ತಟ್ಟೆ, ಫೈಲ್ ಕವರ್, ಕ್ಯಾಲೆಂಡರಗಳು ಹೆಚ್ಚು ಜನಪ್ರಿಯವಾಗಿವೆ. ಪರಿಸರದ ಬಗ್ಗೆ ಕಾಳಜಿ ವಹಿಸುವ ಜನರಲ್ಲಿ, ಅದರಲ್ಲೂ ಸ್ವಲ್ಪ ಹೆಚ್ಚಿಗೆ ಹಣ ನೀಡಲು ಸಿದ್ಧವಾಗಿರುವವರು, ಸಿಂಥೆಟಿಕ್‌ಗೆ ಪರ್ಯಾಯವಾಗಿ ಸೆಣಬು ಉತ್ಪನ್ನಗಳನ್ನು ನಿಧಾನವಾಗಿ ತಮ್ಮ ಆಯ್ಕೆಯನ್ನಾಗಿ ಮಾಡಿಕೊಳ್ಳುತ್ತಿದ್ದಾರೆ.

ಸಣ್ಣ ಕೈಗಾರಿಕಾ ವರ್ಗದಲ್ಲಿ ಸೆಣಬಿನ ವೈವಿಧ್ಯಮಯ ಉತ್ಪನ್ನಗಳಾದ ಚೀಲಗಳು, ಮನೆ ಅಲಂಕಾರಿಕ ವಸ್ತುಗಳು, ಸಾಧನಗಳು ಮುಂತಾದವು ಸೇರಿವೆ. ಇವು ಸೆಣಬು ಬೆಳೆಯುವ ಪ್ರದೇಶಗಳಲ್ಲಿ ವಾಸ ಮಾಡುವ ಜನರು ಸ್ವಉದ್ಯೋಗ ಮಾಡಲು, ವಿಶೇಷವಾಗಿ ಸ್ವಸಹಾಯ ಗುಂಪುಗಳನ್ನು ಅವರವರೇ ಸಂಘಟಿಸಿಕೊಂಡಿರುವ ಮಹಿಳೆಯರಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿದೆ,

ಅಂತಾರಾಷ್ಟ್ರೀಯ ಖ್ಯಾತಿಯ ಬ್ರಾಂಡ್‌ಗಳಾದ ಹಾರೋಡ್ಸ್, ಸಾಲ್ವೋರ್ ಫೆರ್‌ಗ್ಯಾಮೊ, ಮಾರ್ಕ್ಸ್ & ಸ್ಪೆನ್ಸರ್ ಮತ್ತು ಐಕೆಇಎ ಸೆಣಬು ಮತ್ತು ಸೆಣಬು ಮಿಶ್ರಣ ಮಾಡಿದ ಬಟ್ಟೆಗಳ ಉತ್ಪನ್ನಗಳನ್ನು ಮಾರುಕಟ್ಟೆ ಮಾಡುತ್ತಿದ್ದಾರೆ.

ಆರ್ಥಿಕ ವಲಯದಲ್ಲೂ, ಪ್ರಸಿದ್ಧಿ ಪಡೆದಿರುವ ಶಾಪಿಂಗ್ ಸರಣಿ ಹೊಂದಿರುವ ವಾಲ್‌ಮಾರ್ಟ್ ಮತ್ತು ಕೆರೇಫೋರ್ ಮತ್ತು ಬ್ರಿಟಿಷ್ ಹೈಪರ್ ಮಾರುಕಟ್ಟೆಗಳಾದ ಟೆಸ್ಕೊ, ಎಎಸ್‌ಡಿಎ, ವೈಯಿಟ್‌ರೋಸ್ ಮತ್ತು ಸೈನ್ಸ್‌ಬರಿ ಇವರು ಸೆಣಬು ಶಾಪಿಂಗ್ ಚೀಲಗಳನ್ನು ಮಾರಾಟ ಮಾಡುತ್ತಿದ್ದಾರೆ.

ಇಂದಿನ ಅಗತ್ಯ ಎಂದರೆ ಹೆಚ್ಚು ಹೆಚ್ಚು ವಿನ್ಯಾಸಗಳನ್ನು ಸೃಷ್ಟಿಸಿ ಮತ್ತು ಬದಲಾಗುತ್ತಿರುವ ಗ್ರಾಹಕರ ಅಭಿರುಚಿಗೆ ತಕ್ಕಂತೆ ವಿನ್ಯಾಸಗಳನ್ನು ರೂಪಿಸಿ, ಉತ್ತಮ ಗುಣಮಟ್ಟದ ವಸ್ತುಗಳನ್ನು ಮತ್ತು ಪಾಶ್ಚಿಮಾತ್ಯ ಮಾರುಕಟ್ಟೆಗೆ ವೈವಿಧ್ಯಮಯ ಉತ್ಪನ್ನಗಳನ್ನು ನೀಡಬೇಕು. ಭಾರತೀಯ ಬ್ರಾಂಡ್‌ಗಳಾದ ಗ್ಲೋಸ್ಟರ್ ಲೈಫ್‌ಸ್ಟೈಲ್, ಅಂಗೇಸ್, ಕ್ಲಬ್, ಅರರ್ಬರ್, ಬಾಲಿಫ್ಯಾಬ್ಸ್ ಇವರು ಈ ಮಾರುಕಟ್ಟೆಗೆ ಒಳದಾರಿಗಳನ್ನು ಮಾಡಿಕೊಂಡಿದ್ದಾರೆ.

ನೇಯ್ದ ಬಟ್ಟೆಗಳ ಹೊರತಾಗಿ, ಅತಿ ಮುಖ್ಯವಾಗಿ ಉಪಯೋಗಿಸುವ ಉತ್ಪನ್ನ ಒರಟು ವೈವಿಧ್ಯದ ಸೆಣಬು ನಾರುಗಳನ್ನು ನೇಯ್ಗೆ ಮಾಡದ ಬಟ್ಟೆಗಳ ರೂಪದ ಭಾಗವಾಗಿರುವ ತಾಂತ್ರಿಕ ಜವಳಿ ಭಾಗದಲ್ಲಿ ಬಳಸುತ್ತಿದ್ದಾರೆ.

ನೇಯ್ಗೆ ಮಾಡದ ಸೆಣಬು ಬಟ್ಟೆಗಳನ್ನು ಮನೆಯ ಇನ್ಸುಲೇಷನ್, ಹವಾನಿಯಂತ್ರಣ ಮತ್ತು ಅಟೊಮೊಬೈಲ್ ಒಳಾಂಗಣದಲ್ಲಿ ಉಪಯೋಗಿಸುತ್ತಿದ್ದಾರೆ. ಸಂಯುಕ್ತ ವಸ್ತುಗಳಾದ ನೇಯ್ದ ಮತ್ತು ನೇಯ್ಗೆ ಮಾಡದ ಸೆಣಬು ನಾರನ್ನು ವಿಶೇಷವಾಗಿ ಕಟ್ಟಡದ ವಸ್ತುಗಳಾಗಿ,



ಅಟೊ ಟ್ರಿಮ್ಸ್ ಮತ್ತು ಪೀಠೋಪಕರಣ ಕೈಗಾರಿಕೆಯಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಇಲ್ಲಿ ಒರಟು ನಾರನ್ನೇ ಉಪಯೋಗಿಸುತ್ತಾರೆ ಅಥವಾ ಒರಟು ದಾರದಲ್ಲಿ ಹೆಣೆಯಲು ಉಪಯೋಗಿಸುತ್ತಾರೆ. ಇವು ನೇಯ್ಗೆ ಮಾಡದ ಮತ್ತು ನೇಯ್ದ ಸೆಣಬು ಭೂ ಜವಳಿ (ಜೆಜಿಟಿ) ಉತ್ಪನ್ನಗಳಿಗೆ ಹೋಗುತ್ತದೆ. ಕೆಲವು ಹೊಸತನದ ತಾಂತ್ರಿಕ ಜವಳಿಯಿದೆ, ಈ ವಿಶೇಷವಾದ ಬಟ್ಟೆಯ ವಿನ್ಯಾಸ ಮತ್ತು ತಯಾರಿಕೆ ಮಾಡುವುದರಿಂದ ಕೆಲವು ಮಣ್ಣಿನ ಸಂಬಂಧಿ ಸಮಸ್ಯೆಗಳನ್ನು, ರಸ್ತೆ ನಿರ್ಮಾಣದಲ್ಲಿ ಆಳವಡಿಕೆ, ನದಿ ದಂಡೆ ರಕ್ಷಣೆ, ತಗ್ಗು ನಿರ್ವಹಣೆ ಮತ್ತು ರೈಲು ಹಳಿ ನಿರ್ಮಾಣಕ್ಕೂ ಬಳಸಿಕೊಳ್ಳಬಹುದು.

ಸೆಣಬು ಭೂ ಜವಳಿ ಪರಿಸರ ಸ್ನೇಹಿ ಮತ್ತು ಜೈವಿಕವಾಗಿ ಕೊಳೆಯುವುದರಿಂದ ಅದನ್ನು ದೇಶದಾದ್ಯಂತ ಸಿವಿಲ್ ಇಂಜಿನಿಯರಿಂಗ್ ಕಾಮಗಾರಿಯಲ್ಲಿ ಬಳಸಿಕೊಳ್ಳಲು ಜವಳಿ ಸಚಿವಾಲಯ ನಿರ್ಧರಿಸಿದೆ. ದೇಶದಲ್ಲಿ ಸೆಣಬು ಭೂ ಜವಳಿಯನ್ನು 210 ಕ್ಕೂ ಹೆಚ್ಚು ವಿಧದ ಹವಾಮಾನ ಮತ್ತು ಮಣ್ಣಿನ ಪರಿಸ್ಥಿತಿಯಲ್ಲಿ ಉಪಯೋಗಿಸಿಕೊಳ್ಳಬಹುದು.

ಜೆಜಿಟಿ ತನ್ನ ಕಾರ್ಯವನ್ನು ಸಾಧಿಸಿದ ನಂತರ ಅದು ಜೈವಿಕವಾಗಿ ಕೊಳೆಯುವುದು ಇತರ ಭೂ ಜವಳಿ ಮಾದರಿಗಳಿಗಿಂತಲೂ ದೊಡ್ಡ ಅನುಕೂಲ. ಜಾಗತಿಕ ಕಾಳಜಿ ಮತ್ತು ಪರಿಸರ ಸಂರಕ್ಷಿಸುವ ದೃಷ್ಟಿಯಿಂದ ಜೆಜಿಟಿಯ ಬಲವಾದ ಪರಿಸರ ಹೊಂದಾಣಿಕೆ ಗುಣ ಇದ್ದು, ಅದು ನೀತಿ ನಿರೂಪಕರು ಮತ್ತು ಇಂಜಿನಿಯರುಗಳು ಎಲ್ಲರಿಗೂ ವಿವಿಧ ರೀತಿಯ ಸಿವಿಲ್ ಇಂಜಿನಿಯರಿಂಗ್ ಭೂ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಿಕೊಡುವ ನೈಸರ್ಗಿಕವಾದ ಆಯ್ಕೆಯಾಗಿದೆ.

(48ನೇ ಪುಟಕ್ಕೆ)

# ಭಾರತದ ಜವಳಿ ಮತ್ತು ಉಡುಪು ರಫ್ತು – ಸವಾಲು

* ಅದಿತಿ ದಾಸ್ ರಾವತ್



ಕ್ಯಾಲಿಕೊ, ಪಜಮಾ, ಮಸ್ಲಿನ್, ಗಿಂಗಹಾಮ್, ಶಾಲ್, ಡಂಗರೆ, ಚಿನ್ಸ್ ಮತ್ತು ಖಾಕಿ ಮೊದಲಾದ ಬಟ್ಟೆಯ ಹೆಸರುಗಳು ಆಂಗ್ಲ ಭಾಷೆಯಲ್ಲೂ ಅದೇ ರೀತಿ ಉಳಿದುಕೊಂಡಿರುವುದು ಭಾರತದ ಜವಳಿಯ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಕೈಗಾರಿಕೀಕರಣಕ್ಕಿಂತ ಮೊದಲೇ ಭಾರತವು ಜವಳಿ ವ್ಯಾಪಾರದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದಿತ್ತು. ಸುಲ್ತಾನರ ಅಧಿಕಾರಾವಧಿಯಲ್ಲಿ ಮಾರುಕಟ್ಟೆಯಲ್ಲಿ ಆಕರ್ಷಕ ಜವಳಿ ಮಾರಾಟವಾಗುತ್ತಿದ್ದ ಬಗ್ಗೆ ಇಬನ್ ಬುಟುಟಾ ಸೇರಿದಂತೆ ಅನೇಕ ವಿದೇಶಿ ಪ್ರವಾಸಿಗರು ವಿವರಣೆ ನೀಡಿದ್ದಾರೆ. ಪ್ರಾಚೀನ ಕಾಲದಲ್ಲಿ ಭಾರತೀಯ ಜವಳಿಯು ಚೀನಾ, ಇಂಡೋನೇಶಿಯಾ ಮತ್ತು ರೋಮನ್ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟು ಹೊಂದಿತ್ತು. ಕಾಲಾನುಕಾಲಕ್ಕೆ ರೋಮನ್ ವ್ಯಾಪಾರಿಗಳ ಜಾಗವನ್ನು ಅರಬ್ ವ್ಯಾಪಾರಿಗಳು ತುಂಬಿದರೆ, 15ನೇ ಶತಮಾನದ ಅಂತ್ಯದಲ್ಲಿ ವಾಸ್ಕೋಡಗಾಮಾ ಭಾರತಕ್ಕೆ ಕಾಲಿಟ್ಟ ಬಳಿಕ ಪೋರ್ಚುಗೀಸ್ ವ್ಯಾಪಾರಿಗಳು ಭಾರತದ ಜವಳಿ ವ್ಯಾಪಾರದಲ್ಲಿ ತೊಡಗಿಕೊಂಡರು. ಕಾಲಾನಂತರದಲ್ಲಿ ಅಂದರೆ 16ನೇ ಶತಮಾನದಲ್ಲಿ ಉಪಖಂಡದಲ್ಲಿ ಐರೋಪ್ಯ ಕಂಪನಿಗಳು ಸ್ಥಾಪನೆಯಾಗಿ ದೊಡ್ಡ ಮಟ್ಟದಲ್ಲಿ ಲಾಭ ಗಳಿಸುವ ವಾಣಿಜ್ಯ ಸಂಪರ್ಕದ ಭಾಗವಾಗಿ ಬಿಟ್ಟವು. ವಿಶ್ವದ ಅತಿ ದೊಡ್ಡ ಜವಳಿ ರಫ್ತು ದೇಶವಾಗಿದ್ದ ಭಾರತ 18 ಮತ್ತು 19ನೇ ಶತಮಾನದಲ್ಲಿ ಈ ವ್ಯಾಪಾರದಲ್ಲಿ ಅತ್ಯುನ್ನತ ಮಟ್ಟಕ್ಕೆ ಏರಿತು.

ಮೊಘಲ್ ಆಡಳಿತದ ಅವಧಿಯಲ್ಲಿ ಭಾರತವು ಚಿನ್ನ, ಕಚ್ಚಾ ರೇಷ್ಮೆ, ದಂತ ಮತ್ತು ಅಮೂಲ್ಯ ಹರಳುಗಳು, ಮಲ್ – ಚಿನ್ನ ಹಾಗೂ ಬೆಳ್ಳಿಯ ಕುಸುರಿಯ ಬಟ್ಟೆಗಳ ಪ್ರಮುಖ ರಫ್ತು ದೇಶವಾಗಿತ್ತು. ನಾನಾ ರೀತಿಯ ಜವಳಿ, ನೀಲಿ, ಮಸಾಲೆ ಪದಾರ್ಥ ಸೇರಿದಂತೆ ನಾನಾ ಸರಕುಗಳು ದೊಡ್ಡ ಪ್ರಮಾಣದಲ್ಲಿ ಭಾರತದಿಂದ ರಫ್ತಾಗುತ್ತಿದ್ದವು. ಭೂ ಮಾರ್ಗವು ಅಸುರಕ್ಷಿತ ಹಾಗೂ ಸೀಮಿತವಾಗಿದ್ದ ಹಿನ್ನೆಲೆಯಲ್ಲಿ ಸಮುದ್ರ ಮತ್ತು ನದಿ ಮೂಲಕ ಸಾಗಾಣೆ ವಾಣಿಜ್ಯ ಉದ್ದೇಶದಿಂದ ಹೆಚ್ಚು ಲಾಭದಾಯಕವಾಗಿದ್ದವು. ಆಗ್ನೇಯ ಏಶಿಯಾ ರಾಷ್ಟ್ರಗಳಿಗೆ ಭಾರತದ ಜವಳಿಯು ಹಿಂದೂ ಮಹಾ ಸಾಗರದ ಮೂಲಕವೇ ಸಾಗಾಣಿಕೆಯಾಗುತ್ತಿತ್ತು.

ಅಗ್ಗ ಮಾತ್ರವಲ್ಲ ಸುಂದರವಾಗಿ ಇದ್ದುದರಿಂದಲೇ ಭಾರತೀಯ ಬಟ್ಟೆಗಳನ್ನು ವಿದೇಶಿ ಮಾರುಕಟ್ಟೆಗಳು ಖರೀದಿಸುತ್ತಿದ್ದವು. ಈ ಮಾರುಕಟ್ಟೆಗಳ ನಿರ್ದಿಷ್ಟ ಅವಶ್ಯಕಗಳಿಗೆ ಅನುಗುಣವಾಗಿ ಭಾರತೀಯ ವಿನ್ಯಾಸಕಾರರು ಬಟ್ಟೆ ಸಿದ್ಧ ಪಡಿಸುತ್ತಿದ್ದರು, ಮಾತ್ರವಲ್ಲ ಹೊಸ ನೇಯ್ಗೆ ಮತ್ತು ವಿನ್ಯಾಸದಲ್ಲಿ ಪ್ರಯೋಗವನ್ನು ಕೂಡ ಮಾಡುತ್ತಿದ್ದು, ಇದು ಜವಳಿ ರಫ್ತು ವ್ಯಾಪಾರ ದೀರ್ಘ ಕಾಲ ಉಳಿಯುವಂತೆ ಮಾಡಿತು. ಭಾರತೀಯ ನೇಕಾರರು ಮತ್ತು ಬಟ್ಟೆಗೆ ವರ್ಣ ನೀಡುವ ಉದ್ಯಮಗಳು ಬದಲಾಗುತ್ತಿರುವ ಬೇಡಿಕೆಗೆ ಅನುಗುಣವಾಗಿ ಕ್ಷಿಪ್ರಗತಿಯಲ್ಲಿ ತಮ್ಮ ತಂತ್ರಗಳನ್ನು ಬದಲಾಯಿಸಿಕೊಂಡು ಪೂರಕ ವಾತಾವರಣ ನಿರ್ಮಾಣ ಮಾಡಿಕೊಂಡವು. ಕ್ಯಾಲಿಕೊ, ಪಜಮಾ, ಮಸ್ಲಿನ್, ಗಿಂಗಹಾಮ್, ಶಾಲ್, ಡಂಗರೆ, ಚಿನ್ಸ್ ಮತ್ತು ಖಾಕಿ ಮೊದಲಾದ ಬಟ್ಟೆಯ ಹೆಸರುಗಳು ಆಂಗ್ಲ ಭಾಷೆಯಲ್ಲೂ ಅದೇ ರೀತಿ ಉಳಿದುಕೊಂಡಿರುವುದು ಭಾರತದ ಜವಳಿಯ ಜನಪ್ರಿಯತೆಗೆ ಸಾಕ್ಷಿಯಾಗಿದೆ.


* ವ್ಯಾಪಾರ ಸಲಹೆಗಾರರು, ಕೇಂದ್ರ ಜವಳಿ ಸಚಿವಾಲಯ E-mail : adrout@nic.in

## ಜಾಗತಿಕ ವ್ಯಾಪಾರ : ಪ್ರವೃತ್ತಿ

ಭಾರತೀಯ ಜವಳಿ ಉದ್ಯಮ ಇತಿಹಾಸದಿಂದಲೂ ಏರಿಳಿತಕ್ಕೆ ಸಾಕ್ಷಿಯಾಗಿದೆ. ವಸಾಹತುಶಾಹಿ ಕಾಲದಲ್ಲಿ ಭಾರತವು ಯಂತ್ರದಿಂದ ನೇಯ್ದ ಕಡಿಮೆ ಬೆಲೆಯ ಜವಳಿಯ ರಫ್ತು ದೊಡ್ಡ ಪ್ರಮಾಣದಲ್ಲಿ ಹೆಚ್ಚಿತು ಮತ್ತು ಮನೆಯಲ್ಲಿ ನೇಯ್ಗೆಯಿಂದ ತಯಾರಾಗುವ ಬಟ್ಟೆ ಕಡಿಮೆಯಾಗಿ ನೇಕಾರರು ನಿರ್ಗತಿಕರಾಗುವಂತೆ ಮಾಡಿತು. ತೀರಾ ಇತ್ತೀಚಿನ ಸಮಯದಲ್ಲಿ ಜಾಗತೀಕರಣ ಮತ್ತು ಬಹು ಉತ್ಪಾದನಾ ಕೇಂದ್ರಗಳ ಹಾಗೂ ಏಕೀಕೃತ ಜಾಗತಿಕ ಪೂರೈಕೆ ವ್ಯವಸ್ಥೆಯು ಹೊಸ ಸವಾಲುಗಳನ್ನು ತಂದೊಡ್ಡಿದೆ. ಆದಾಗ್ಯೂ ಭಾರತೀಯ ಕೈಮಗ್ಗ ಉತ್ಪನ್ನಗಳ ಕುರಿತ ಪ್ರಶಂಸೆ ಇನ್ನೂ ಉಳಿದುಕೊಂಡಿದ್ದು, ತನ್ನದೇ ಆದ ಮಾರುಕಟ್ಟೆಯನ್ನು ಹೊಂದಿದೆ.

ಕಳೆದ ಕೆಲವು ವರ್ಷಗಳಿಂದ ಪ್ರಮುಖ ಮುಂದುವರಿದ ದೇಶಗಳ ಆರ್ಥಿಕತೆಯ ಪ್ರಗತಿ ನಿಧಾನಗತಿಯನ್ನು ಪಡೆದುಕೊಂಡಿದ್ದು, ಮುಂದುವರಿದ ದೇಶಗಳು ಸರಾಸರಿ ಪ್ರಗತಿಯನ್ನು ಕಾಣುವಂತಾಗಿದೆ. ಈ ವರ್ಷ ವಿಶ್ವ ವ್ಯಾಪಾರ ಪ್ರಗತಿಯು ನಿಧಾನಗತಿಯಲ್ಲೇ ಇರುವ ನಿರೀಕ್ಷೆಯಿದ್ದು 2015ರ ಶೇ. 2.8ರ ಪ್ರಗತಿಯನ್ನಷ್ಟೇ ಈ ವರ್ಷವೂ ದಾಖಲಿಸುವ ನಿರೀಕ್ಷೆಯಿದೆ. ಮುಂದುವರಿದ ದೇಶಗಳ ರಫ್ತು ಪ್ರಮಾಣ ಈ ವರ್ಷ ಸಾಮಾನ್ಯವಾಗಿರುವ ನಿರೀಕ್ಷೆಯಿದ್ದು, ಏಷ್ಯಾದ ದೇಶಗಳ ಸರಕು ಆಮದು ಬೇಡಿಕೆ ಏರಿಕೆ ಕಾಣಲಿದೆ ಎಂದು ಡಬ್ಲ್ಯೂಟಿಓ ವರದಿ ಅಭಿಪ್ರಾಯ ಪಟ್ಟಿದೆ. ಡಬ್ಲ್ಯೂಟಿಓ ಆರ್ಥಿಕ ತಜ್ಞರ ಪ್ರಕಾರ 2017 ರಲ್ಲಿ ವಿಶ್ವ ವ್ಯಾಪಾರ ಪ್ರಗತಿ ಶೇ. 3.6ಕ್ಕೆ ಏರಲಿದೆ.

ಪ್ರಸಕ್ತ ವಿಶ್ವ ವ್ಯಾಪಾರ ಸನ್ನಿವೇಶ ಅತ್ಯಂತ ಸವಾಲುದಾಯಕವಾಗಿದೆ. ಅಮೆರಿಕ ಮತ್ತು ಐರೋಪ್ಯ ಒಕ್ಕೂಟವು ನಮ್ಮ ಜವಳಿ ಮತ್ತು ಉಡುಪು ಕ್ಷೇತ್ರದ ಪ್ರಮುಖ ಸಾಂಪ್ರದಾಯಿಕ ಮಾರುಕಟ್ಟೆಯಾಗಿ ಉಳಿದಿರುವ ಹೊರತಾಗಿಯೂ ಭಾರತದ ಜವಳಿ ವ್ಯಾಪಾರ ಗಣನೀಯವಾಗಿ ಹೊಸ ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳತ್ತ ಹೊರಳಿದೆ. ಹಲವು ಹೊಸ ಆರ್ಥಿಕ ಶಕ್ತಿಗಳು ಕಿರು ಆರ್ಥಿಕತೆಯ ಸನ್ನಿವೇಶದಿಂದಾಗಿ ಸವಾಲು ಎದುರಿಸುತ್ತಿವೆ. ಬ್ರೆಜಿಲ್, ಭಾರತ, ಇಂಡೋನೇಶಿಯಾ, ಮೆಕ್ಸಿಕೊ, ರಷ್ಯಾ ಒಕ್ಕೂಟ, ದಕ್ಷಿಣ ಆಫ್ರಿಕ ಮತ್ತು ಟರ್ಕಿಯಂತಹ ಪ್ರವರ್ಧಮಾನಕ್ಕೆ ಬರುತ್ತಿರುವ ಎಲ್ಲಾ ಆರ್ಥಿಕ ಶಕ್ತಿಗಳು 2016ರಲ್ಲಿ ಸಾಮಾನ್ಯ ಪ್ರಗತಿಯನ್ನು ದಾಖಲಿಸುವ ಹಾಗೂ ಸ್ವಲ್ಪ ಮಟ್ಟಿಗೆ ಚೀನಾದ ಆರ್ಥಿಕ ಪ್ರಗತಿ ಮತ್ತೆ ಹಳಿಗೆ ಬರುವ ಸಾಧ್ಯತೆಗಳಿದ್ದರೂ ದೀರ್ಘಕಾಲದಿಂದ ಕಂಡು ಬಂದಿರುವ ದುರ್ಬಲ ಪ್ರಗತಿ ಇನ್ನೂ ಹಾಗೆಯೇ ಉಳಿಯುವ ಸಾಧ್ಯತೆಯಿದೆ.



ಈ ದೃಷ್ಟಿಕೋನದಲ್ಲಿ ಹೇಳುವುದಾದರೆ ಚೀನಾದ ನಿಧಾನಗತಿಯ ಆರ್ಥಿಕ ಪ್ರಗತಿ, ಪ್ರವರ್ಧಮಾನಕ್ಕೆ ಬರುತ್ತಿರುವ ರಾಷ್ಟ್ರಗಳು ಹಾಗೂ ಅಭಿವೃದ್ಧಿ ಹೊಂದುತ್ತಿರುವ ಚಿಕ್ಕ ದೇಶಗಳು ಹಾಗೂ ಆರ್ಥಿಕತೆಯ ಸ್ಥಿತ್ಯಂತರದಲ್ಲಿರುವ ದೇಶಗಳ ಮೇಲೆ ಗಣನೀಯ ಪ್ರಭಾವ ಬೀರಲಿದೆ ಎಂದು ಅಂದಾಜಿಸಲಾಗಿದೆ. ಜೊತೆಗೆ ಇದು ಅಭಿವೃದ್ಧಿ ಹೊಂದಿದ ದೇಶಗಳ ಅದರಲ್ಲೂ ಯೂರೋ ವಲಯದ ದೇಶಗಳ ಆರ್ಥಿಕ ಪ್ರಗತಿಯನ್ನು ದುರ್ಬಲಗೊಳಿಸುವ ಆತಂಕ ಎದುರಾಗಿದೆ. ಚಾರಿತ್ರಿಕವಾಗಿ ಹೇಳುವುದಾದರೆ ಜವಳಿ ಉದ್ಯಮದ ಅಭಿವೃದ್ಧಿಯು ಮಹಿಳೆಯರು ಮತ್ತು ಕಡಿಮೆ ಕೌಶಲ್ಯ ಹೊಂದಿರುವ ಜನರಿಗೆ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ದೊರಕಿಸಿಕೊಡುವ ಮೂಲಕ ಕೈಗಾರಿಕೀಕರಣದ ಅಡಿಗಲ್ಲಾಗಿದೆ. ಚೀನಾದ ಆರ್ಥಿಕತೆಯಲ್ಲಿ ಜವಳಿ ಚಿಕ್ಕ ಭಾಗವಾಗಿದ್ದು, ಇತರ ಉತ್ಪಾದನಾ ಕ್ಷೇತ್ರಗಳಲ್ಲಿನ ಉತ್ತಮ ಕೌಶಲ್ಯಪೂರ್ಣ ಉದ್ಯೋಗಗಳತ್ತ ಅದು ಸ್ಥಿತ್ಯಂತರ ಹೊಂದುತ್ತಿದೆ. ಅದರಲ್ಲೂ ಮುಖ್ಯವಾಗಿ ಸೇವಾ ಕ್ಷೇತ್ರವು ಅಲ್ಲಿ ವೇಗವಾಗಿ ವಿಸ್ತರಣೆಯಾಗುತ್ತಿದ್ದು, ಇದು ಜಾಗತಿಕ ಜವಳಿ ವ್ಯಾಪಾರಕ್ಕೆ ಹೊಸ ಆಯಾಮವನ್ನು ನೀಡಲಿದೆ. ಚೀನಾವು ಅತಿ ದೊಡ್ಡ ರಫ್ತು ರಾಷ್ಟ್ರವಾಗಿ ಮುಂದುವರಿದರೂ ಭಾರತವು ಈಗಿನ ಸನ್ನಿವೇಶದ ಲಾಭವನ್ನು ಪಡೆದುಕೊಂಡು ಇನ್ನಷ್ಟು ಬೆಳವಣಿಗೆ ಕಾಣಲು ಸಾಧ್ಯವಿದೆ. ಆರ್‌ಟಿಎ ಕೂಡ ವ್ಯಾಪಾರ ವಿಭಜನೆ ಮಾಡುವ ಸಾಮರ್ಥ್ಯವನ್ನು ಹೊಂದಿದ್ದು, ಇದು ನಮಗೆ ಲಾಭದಾಯಕ ಆಗದಿರಬಹುದು.



## ಜಾಗತಿಕ ಜವಳಿ ರಫ್ತು

ಪ್ರಸಕ್ತ ಜಾಗತಿಕ ಉಡುಪು ಮಾರುಕಟ್ಟೆಯು 750 ಶತಕೋಟಿ ಅಮೆರಿಕನ್ ಡಾಲರ್ ವ್ಯಾಪಾರ ಮೌಲ್ಯದ ಮೂಲಕ 1,100 ಶತ ಕೋಟಿ ಅಮೆರಿಕನ್ ಡಾಲರ್ ಇದೆ ಎಂದು ಅಂದಾಜಿಸಲಾಗಿದೆ. ಐರೋಪ್ಯ ಒಕ್ಕೂಟ ಬಹು ದೊಡ್ಡ ಗ್ರಾಹಕ ಮಾರುಕಟ್ಟೆಯಾಗಿದ್ದು, ವಾರ್ಷಿಕ 350 ಶತ ಕೋಟಿ ಅಮೆರಿಕನ್ ಡಾಲರ್ ವ್ಯವಹಾರ ನಡೆಸುತ್ತಿದೆ. ಜಾಗತಿಕ ಜವಳಿ ಮತ್ತು ಉಡುಪು ವಲಯವು ಸಿಎಜಿಆರ್ ಶೇ. 5ರಷ್ಟು ಪ್ರಗತಿಯೊಂದಿಗೆ 2025ರೊಳಗೆ 2,100 ಶತ ಕೋಟಿ ಅಮೆರಿಕನ್ ಡಾಲರ್ ಗಾತ್ರಕ್ಕೆ ಬೆಳೆಯಲಿದೆ ಎಂದು ಅಂದಾಜಿಸಲಾಗಿದೆ.

ಒಟ್ಟು ಶೇ. 35–39 ಪಾಲಿನೊಂದಿಗೆ ವಿಶ್ವದ ಅತಿ ದೊಡ್ಡ ಉಡುಪು ರಫ್ತು ರಾಷ್ಟ್ರ ಚೀನಾ ಆಗಿದೆ. ಉಳಿದಂತೆ ಐರೋಪ್ಯ ಒಕ್ಕೂಟ, ಬಾಂಗ್ಲಾದೇಶ, ಹಾಂಕಾಂಗ್, ವಿಯೆಟ್ನಾಂ, ಭಾರತ, ಟರ್ಕಿ, ಇಂಡೋನೇಶಿಯಾ, ಅಮೆರಿಕ ಮತ್ತು ಕಾಂಬೋಡಿಯಾ ಉಳಿದ ಸ್ಥಾನಗಳಲ್ಲಿದೆ. ಶೇ. 35–38ರೊಂದಿಗೆ ಐರೋಪ್ಯ ಒಕ್ಕೂಟ ವಿಶ್ವದ ಅತಿ ದೊಡ್ಡ ಉಡುಪು ಆಮದು ಶಕ್ತಿಯಾಗಿದ್ದು, ಅಮೆರಿಕ ಶೇ. 18, ಜಪಾನ್ ಸುಮಾರು ಶೇ. 6 ಮತ್ತು ಹಾಂಕಾಂಗ್ ಉಳಿದ ಸ್ಥಾನದಲ್ಲಿದೆ. ಉಳಿದಂತೆ ಕೆನಡಾ, ರಷ್ಯಾ, ದಕ್ಷಿಣ ಕೊರಿಯಾ, ಆಸ್ಟ್ರೇಲಿಯಾ, ಸ್ವಿಜರ್‌ಲ್ಯಾಂಡ್ ಮತ್ತು ಚೀನಾ ಉಳಿದ ಸ್ಥಾನಗಳಲ್ಲಿದೆ. ಆದರೆ ಈ ಏಳು ಆಮದು ದೇಶಗಳು ವಿಶ್ವ ಉಡುಪು ಆಮದು ಕ್ಷೇತ್ರದಲ್ಲಿ ಕೇವಲ ಚಿಕ್ಕ ಪಾಲನ್ನು ಮಾತ್ರ ಹೊಂದಿವೆ.

ಮುಂದಿನ ಐದು ವರ್ಷಗಳವರೆಗೆ ಜವಳಿ ಮತ್ತು ಉಡುಪು ಪೂರೈಕೆಯ ಕ್ಷೇತ್ರದಲ್ಲಿ ಚೀನಾದ ಏಕ ಸ್ವಾಮ್ಯ ಮುಂದುವರಿಯಲಿದೆ. ಜವಳಿ ಮಿಲ್‌ಗಳ ನಿರ್ಮಾಣ, ಆಧುನೀಕರಣ, ಉನ್ನತೀಕರಣ,

ಸೌಲಭ್ಯ ಕ್ಷೇತ್ರಕ್ಕೆ ಹೂಡಿಕೆಯನ್ನು ಆಕರ್ಷಿಸಲು ಚೀನಾ ಯಶಸ್ವಿಯಾಗಿದೆ. ಜೊತೆಗೆ ವಿಶ್ವದ ಪ್ರಮುಖ ಜವಳಿ ಯಂತ್ರೋಪಕರಣಗಳ ಆಮದುದಾರನಾಗಿ ಮುಂದುವರಿದಿದೆ. ಆದ್ದರಿಂದ ವಿಸ್ತಾರವಾಗುತ್ತಿರುವ ವಿಶ್ವ ಮಾರುಕಟ್ಟೆಯ ಅವಶ್ಯಕತೆ ಇರುವುದರಿಂದ ಜೊತೆಗೆ ಆಂತರಿಕ ಬೇಡಿಕೆ ಹೆಚ್ಚುತ್ತಿರುವುದು ಒಟ್ಟಾರೆಯಾಗಿ ಜಾಗತಿಕ ಮಾರುಕಟ್ಟೆ ಕುಸಿತವನ್ನು ತಡೆಯುವ ಸಾಧ್ಯತೆ ಹೆಚ್ಚಿದೆ.

### ಭಾರತದ ಜವಳಿ ಮತ್ತು ಉಡುಪು ರಫ್ತು

ಡಬ್ಲ್ಯೂಟಿಓ 2015ರ ಅಂತಾರಾಷ್ಟ್ರೀಯ ವ್ಯಾಪಾರ ಅಂಕಿ ಅಂಶಗಳ ಪ್ರಕಾರ, 2014ರಲ್ಲಿ ಒಟ್ಟು ಜಾಗತಿಕ ವಹಿವಾಟಿನಲ್ಲಿ ಶೇ. 5.8ರ ಪಾಲಿನೊಂದಿಗೆ ಜವಳಿ ರಫ್ತಿನಲ್ಲಿ ಭಾರತ ಮೂರನೇ ಸ್ಥಾನದಲ್ಲಿತ್ತು. 2014ರಲ್ಲಿ ಒಟ್ಟು ಮಾಡಲಾದ 41 ಶತ ಕೋಟಿ ಅಮೆರಿಕನ್ ಡಾಲರ್ ಮೌಲ್ಯದ ರಫ್ತಿನಲ್ಲಿ 18.3 ಶತ ಕೋಟಿ ಅಮೆರಿಕನ್ ಡಾಲರ್ ಜವಳಿ ರಫ್ತಿನದ್ದಾಗಿತ್ತು. ವಿಶ್ವದ ಒಟ್ಟು ಜವಳಿ ವ್ಯಾಪಾರ 314 ಶತ ಕೋಟಿ ಅಮೆರಿಕನ್ ಡಾಲರ್ ಆಗಿದೆ.

ವಿಶ್ವದ ಒಟ್ಟು ಉಡುಪು (ಆರ್‌ಎಂಜಿ) ರಫ್ತಿನಲ್ಲಿ ಶೇ. 3.7%ರ ಪಾಲಿನೊಂದಿಗೆ ಭಾರತ ಆರನೇ ಸ್ಥಾನದಲ್ಲಿದೆ. 2014ರಲ್ಲಿ ಒಟ್ಟು ಮಾಡಲಾದ 41 ಶತ ಕೋಟಿ ಅಮೆರಿಕನ್ ಡಾಲರ್ ಮೌಲ್ಯದ ರಫ್ತಿನಲ್ಲಿ ಉಡುಪು (ಆರ್ ಎಂಜಿ) ಪಾಲು 18 ಶತ ಕೋಟಿ ಅಮೆರಿಕನ್ ಡಾಲರ್ ಆಗಿತ್ತು. ವಿಶ್ವದ ಒಟ್ಟು ಉಡುಪು ವ್ಯಾಪಾರ 483 ಶತ ಕೋಟಿ ಅಮೆರಿಕನ್ ಡಾಲರ್ ಮೌಲ್ಯದ್ದಾಗಿದೆ.

ಭಾರತದ ಜವಳಿ ಕೈಗಾರಿಕೆಯ ರಫ್ತಿನಿಂದ ಬಂದ ಆದಾಯ ಒಟ್ಟಾರೆ ದೇಶದ ಆರ್ಥಿಕ ಪ್ರಗತಿಯನ್ನು ಇನ್ನಷ್ಟು ಮೌಲ್ಯಯುತ ಹಾಗೂ ಸುಭದ್ರಗೊಳಿಸಲು ನೆರವಾಗಿದೆ. ಆದಾಗ್ಯೂ ಜಾಗತಿಕ ಮಾರುಕಟ್ಟೆಯ ದುರ್ಬಲ ಸನ್ನಿವೇಶ ಮತ್ತು ವಿದ್ಯುತ್ ವೆಚ್ಚ, ಸಾಗಾಣಿಕೆ ವೆಚ್ಚ ಏರಿಕೆ, ಕಠಿಣ ಕಾರ್ಮಿಕ ಕಾನೂನಿನಂತಹ ದೇಶೀಯ ಸವಾಲುಗಳ ಹೊರತಾಗಿಯೂ ಉಳಿದ ಕ್ಷೇತ್ರಗಳಿಗೆ ಹೋಲಿಸಿದರೆ ಭಾರತದ ಜವಳಿ ಉದ್ಯಮದ ರಫ್ತು 2015–16ರಲ್ಲಿ ಶೇ. 14ರ ಪ್ರಗತಿ ದಾಖಲಿಸಿದೆ.



### ಹೊಸ ಉತ್ಪಾದನಾ ಕೇಂದ್ರಗಳು

ಕೌಶಲ್ಯಪೂರಿತ ಉದ್ಯೋಗಿಗಳು ಮತ್ತು ಕಡಿಮೆ ಕಾರ್ಮಿಕ ವೆಚ್ಚವನ್ನು ಒದಗಿಸುವ ಬಾಂಗ್ಲಾದೇಶ ಮತ್ತು ವಿಯೆಟ್ನಾಂನಂತಹ ದೇಶಗಳ ಮುಂದೆ ಅಗ್ಗದಲ್ಲಿ ಕಾರ್ಮಿಕರ ಅಲಭ್ಯತೆಯಿಂದ ಭಾರತದ ಸ್ಪರ್ಧಾತ್ಮಕ ಲಾಭವು ನಿಧಾನವಾಗಿ ಕಳೆದು ಹೋಗುತ್ತಿದೆ.

ಬಾಂಗ್ಲಾದೇಶದ ರಫ್ತು ಆಧರಿತ ಕೈಗಾರಿಕಾ ಕ್ಷೇತ್ರವು ದೇಶದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಡಿಪಿ) ಶೇ. 25ಕ್ಕಿಂತಲೂ ಹೆಚ್ಚು ಪಾಲು ನೀಡುತ್ತಿದ್ದು, ಜಾಗತಿಕ ಉತ್ಪಾದನಾ ಕೇಂದ್ರವಾಗಿ ಅಭಿವೃದ್ಧಿ ಮುಂದುವರಿಯುವ ನಿರೀಕ್ಷೆಯನ್ನು ಹುಟ್ಟಿಸಿದೆ. ಬಾಂಗ್ಲಾದೇಶ ಮತ್ತು ವಿಯೆಟ್ನಾಂ ಹೊರತಾಗಿ ಕಾಂಬೋಡಿಯಾ, ಇಥಿಯೊಪಿಯಾ ಮತ್ತು ಮ್ಯಾನ್ಮಾರ್ ಕೂಡ ವಿಶ್ವ ಆರ್‌ಎಂಜಿ ವ್ಯಾಪಾರದಲ್ಲಿ ಹೊಸ ಸ್ಪರ್ಧಾಳುಗಳಾಗುವ ಸಾಮರ್ಥ್ಯ ಹೊಂದಿವೆ.

ಮ್ಯಾನ್ಮಾರ್‌ನ ಉಡುಪು ಕೈಗಾರಿಕೆ ಮುಂದಿನ ವರ್ಷಗಳಲ್ಲಿ ಗಣನೀಯ ಪ್ರಗತಿ ಸಾಧಿಸುವ ಅಂದಾಜಿದೆ. 2015ರ ಮಧ್ಯಭಾಗದವರೆಗೆ ಅಲ್ಲಿ ಜವಳಿ ಕೈಗಾರಿಕೆಯಲ್ಲಿ 2,30,000 ಉದ್ಯೋಗಿಗಳಿದ್ದರೆ, 2020ರೊಳಗೆ ಇದು 1.5 ದಶ ಲಕ್ಷ ಉದ್ಯೋಗಾವಕಾಶ ಸೃಷ್ಟಿಸುವ ನಿರೀಕ್ಷೆಯಿದೆ.

ಜವಳಿ ಮತ್ತು ಉಡುಪು ಕೈಗಾರಿಕೆಗಾಗಿ ರಾಷ್ಟ್ರೀಯ ರಫ್ತು ಕಾರ್ಯತಂತ್ರ 2015–19 ಎಂಬ ಯೋಜನೆಯನ್ನು ಮ್ಯಾನ್ಮಾರ್ ಹಾಕಿಕೊಂಡಿದ್ದು, ಇದು ಕಟ್ಟಿಂಗ್, ಮೇಕಿಂಗ್ ಮತ್ತು ಪ್ಯಾಕೇಜಿಂಗ್ (ಸಿಎಂಪಿ) ಆಧಾರಿತ ವ್ಯವಸ್ಥೆಯಿಂದ ಎಫ್‌ಓಬಿ (ಫ್ರೀ–ಆನ್–ಬೋರ್ಡ್) ಆಧರಿತ ವ್ಯವಸ್ಥೆಗೆ ಹೊರಳುವಂತೆ ಮಾಡುವ ಉದ್ದೇಶ ಹೊಂದಿದ್ದು, ಆ ಮೂಲಕ ಹೊಲಿಗೆ ಉತ್ಪನ್ನಗಳ ಗುಣಮಟ್ಟ ಸುಧಾರಣೆ ಹಾಗೂ ಉತ್ಪಾದನೆ ಹೆಚ್ಚಳದ ಮೂಲಕ ರಫ್ತು ಮಾರುಕಟ್ಟೆಯನ್ನು ಕಟ್ಟಿಕೊಳ್ಳುವ ಗುರಿಯನ್ನು ಹೊಂದಿದೆ.



ಕಚ್ಚಾ ಪದಾರ್ಥ, ಕಡಿಮೆ ವೇತನ ಮತ್ತು ಕಡಿಮೆ ವಿದ್ಯುತ್ ದರದ ಮೂಲಕ ಇಥಿಯೊಪಿಯಾ ಕೂಡ ಜವಳಿ ಕೈಗಾರಿಕೆಯಲ್ಲಿ ಸಮರ್ಥ ಸ್ಪರ್ಧೆ ನೀಡುವ ನಿಟ್ಟಿನಲ್ಲಿ ಅವಶ್ಯಕವಾದ ಎಲ್ಲಾ ಸೌಕರ್ಯಗಳನ್ನು ಹೊಂದಿದೆ. ಅಲ್ಲಿ ಜವಳಿ ಉದ್ಯಮಕ್ಕೆ ಅತ್ಯಗತ್ಯವಾಗಿ ಬೇಕಾದ ಹತ್ತಿಯನ್ನು ಸ್ಥಳೀಯವಾಗಿ ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸುತ್ತಿರುವುದು ಹಾಗೂ ಜವಳಿ ಕಾರ್ಖಾನೆಗಳು ದೇಶೀಯ ಹತ್ತಿಯ ಮೇಲೆ ಅವಲಂಬಿತವಾಗಿರುವುದು ಒಟ್ಟಾರೆ ಜವಳಿ ಕೈಗಾರಿಕೆ ಗಣನೀಯ ಪ್ರಗತಿ ಸಾಧಿಸುವ ಸಾಮರ್ಥ್ಯಕ್ಕೆ ದಾರಿ ಮಾಡಿಕೊಟ್ಟಿದೆ. ಜೊತೆಗೆ ವಿದೇಶಿ ಹೂಡಿಕೆದಾರರನ್ನು ಆಕರ್ಷಿಸುವ ಗುರಿಯೊಂದಿಗೆ ಜವಳಿ ಉದ್ಯಮವನ್ನು ಆಧುನೀಕರಣಗೊಳಿಸುವ ನಿಟ್ಟಿನಲ್ಲಿ ಇಥಿಯೋಪಿಯಾ ಸಕ್ರಿಯವಾಗಿ ಮುಂದಾಗಿದೆ.

ಎಜಿಓಎ (ದಿ ಆಫ್ರಿಕನ್ ಗ್ರೋತ್ ಆಂಡ್ ಅಪರ್ಚುನಿಟಿ ಆಕ್ಟ್), ಸಿಓಎಂಇಎಸ್‌ಎ (ದಿ ಕಾಮನ್ ಮಾರ್ಕೆಟ್ ಆಫ್ ಈಸ್ಟರ್ನ್ ಆಂಡ್ ಸದರ್ನ್ ಆಫ್ರಿಕಾ) ಮತ್ತು ಹಲವಾರು ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೂಲಕ ಹೊಸ ರಫ್ತು ಅವಕಾಶವನ್ನು ಇಥಿಯೊಪಿಯಾ ಸೃಷ್ಟಿಸಿಕೊಂಡಿದೆ. ಶಸ್ತ್ರಾಸ್ತ್ರ ಹೊರತು ಪಡಿಸಿ ಉಳಿದೆಲ್ಲವೂ (ಎವರಿಥಿಂಗ್ ಬಟ್ ಆರ್ಮ್ಸ್) ಒಪ್ಪಂದದ ಭಾಗವಾಗಿರುವ ಇಥಿಯೊಪಿಯಾ, ಈ ಮೂಲಕ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ಲಭ್ಯವಾಗುವ ಐರೋಪ್ಯ ಮಾರುಕಟ್ಟೆಗೆ ಪ್ರವೇಶಿಸುವ ಅವಕಾಶ ಪಡೆದಿದೆ.

ವಿಶ್ವ ಬ್ಯಾಂಕ್ ಬಿಡುಗಡೆ ಮಾಡಿದ ದತ್ತಾಂಶಗಳ ಪ್ರಕಾರ, ಬಾಂಗ್ಲಾದೇಶ,

ಕಾಂಬೋಡಿಯಾ, ಇಥಿಯೋಪಿಯಾ, ಮ್ಯಾನ್ಮಾರ್ ಮತ್ತು ವಿಯೆಟ್ನಾಂಗಳ 2015ರ ವಾರ್ಷಿಕ ಜಿಡಿಪಿ ದರ ಅನುಕ್ರಮವಾಗಿ ಶೇ. 6.6, ಶೇ. 7, ಶೇ. 9.6, ಶೇ. 7 ಮತ್ತು ಶೇ. 6.7 ಆಗಿದೆ. ಈ ದೇಶಗಳು ಹೊಸ ಉತ್ಪಾದಕ ಮತ್ತು ರಫ್ತು ಆಧರಿತ ಕೇಂದ್ರಗಳಾಗಿದ್ದು, ಉದ್ಯೋಗಾವಕಾಶ ಸೃಷ್ಟಿಸುವ ಸಾಮರ್ಥ್ಯದ ಮೂಲಕ ಚೀನಾದ ಹೊರತಾಗಿ ಹೂಡಿಕೆ ಮತ್ತು ಉತ್ಪಾದನೆಯ ಲಾಭವನ್ನು ತನ್ನೆಡೆಗೆ ಸೆಳೆಯುವ ಸಾಮರ್ಥ್ಯ ಹೊಂದಿದೆ. ಆಗ್ನೇಯ ಏಷ್ಯಾ ವಲಯವು ಮುಂದಿನ ವರ್ಷಗಳಲ್ಲಿ ದೊಡ್ಡ ಸಂಖ್ಯೆಯ ಗ್ರಾಹಕ ವರ್ಗವನ್ನು ಹೊಂದುವ ಸಾಧ್ಯತೆ ಹೆಚ್ಚಿದೆ.

ಟೆಕ್ಸ್‌ಟೈಲ್ ಇಂಟೆಲಿಜೆನ್ಸ್ ಲಿಮಿಟೆಡ್ 2016ರ ಪ್ರಕಾರ, 2000ರಲ್ಲಿ ಜಾರಿಗೆ ಬಂದ ದಿ ಆಫ್ರಿಕನ್ ಗ್ರೋತ್ ಆಂಡ್ ಅಪಾರ್ಚುನಿಟಿ ಆಕ್ಟ್ ಬಳಿಕ ಆಫ್ರಿಕಾದ ಜವಳಿ ರಫ್ತು ಮಾರುಕಟ್ಟೆ ಗಣನೀಯ ಪ್ರಗತಿ ಕಂಡಿದೆ. ಈ ಕಾಯ್ದೆಯನ್ನು, ಕೆಲವೊಂದು ನಿರ್ದಿಷ್ಟ ಉಪ–ಸಹಾರಾ ಆಫ್ರಿಕಾ ದೇಶಗಳಿಗೆ ತೆರಿಗೆ ರಹಿತ ಮತ್ತು ಸ್ವತಂತ್ರ ಪಾಲು ಆಧಾರದಲ್ಲಿ ಅಮೆರಿಕದ ಮಾರುಕಟ್ಟೆಗೆ ಜವಳಿ ರಫ್ತು ಮಾಡುವ ಮೂಲಕ ಒಟ್ಟಾರೆ ಜವಳಿ ಉತ್ಪಾದನೆ ಕ್ಷೇತ್ರಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ವಿನ್ಯಾಸಗೊಳಿಸಲಾಗಿದೆ. ಈ ಕಾಯ್ದೆಯ ಅನುಷ್ಠಾನದ ಬಳಿಕ ಹಲವಾರು ಉಪ–ಸಹಾರಾ ದೇಶಗಳಿಂದ ಜವಳಿ ರಫ್ತು ಪ್ರಮಾಣ ಹೆಚ್ಚಿದೆ.

ಕಾಯ್ದೆ ಪರಿಣಾಮವಾಗಿ ಈ ವಲಯದಲ್ಲಿ ಜವಳಿ ಉತ್ಪಾದನೆ ಹೆಚ್ಚಿದ್ದು, ಈ ಮೂಲಕ ಆಮದು ಜವಳಿ ಸಾಮಗ್ರಿಗೆ ಹೆಚ್ಚಿನ ಬೇಡಿಕೆ ಉಂಟಾಗಿದೆ. ಆದಾಗ್ಯೂ, ನೂಲುವುದು, ನೇಯ್ಗೆ, ಬಣ್ಣಗಾರಿಕೆ ಮತ್ತು ಉತ್ಪನ್ನವನ್ನು ಪರಿಪೂರ್ಣಗೊಳಿಸುವ ಸೌಲಭ್ಯಗಳ ಮೂಲಕ, ಕೆಲವೊಂದು ನಿರ್ದಿಷ್ಟ ಜವಳಿಯನ್ನು ಈ ವಲಯದ (ಅಥವಾ



ಅಮೆರಿಕ) ಸಾಮಗ್ರಿಗಳಿಂದ ಉತ್ಪಾದಿಸುವ ಮೂಲಕ, ಅಮೆರಿಕದ ಮಾರುಕಟ್ಟೆಯು ಬಯಸುವ ಗುಣಮಟ್ಟವನ್ನು ಖಾತರಿ ಮಾಡಿಕೊಳ್ಳುವ ಮೂಲಕ ಉಪ–ಸಹಾರಾ ಆಫ್ರಿಕಾದಲ್ಲಿ ಜವಳಿ ಕೈಗಾರಿಕೆಗೆ ಬೇಕಾದ ಕಚ್ಚಾ ವಸ್ತುಗಳ ಪೂರೈಕೆ ಸಂಕೋಲೆಯನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸುವ ಗುರಿಯನ್ನು ಈ ಕಾಯ್ದೆ ಹೊಂದಿದೆ.

ನೈಜಿರಿಯಾ ಮತ್ತು ಇಥಿಯೊಪಿಯಾ ರೀತಿಯಲ್ಲೇ ಅವಶ್ಯಕ ಸಾಮಗ್ರಿ ಹಾಗೂ ಕೃಷಿಯನ್ನು ಹೊರತು ಪಡಿಸಿದ ಸಂಪನ್ಮೂಲಗಳನ್ನು ಪಡೆಯುವ ಸೂಕ್ತ ಕಾರ್ಯತಂತ್ರವನ್ನು ಅಳವಡಿಸಿಕೊಂಡರೆ ಆಫ್ರಿಕಾ ಜವಳಿ ಕ್ಷೇತ್ರದಲ್ಲಿ ಅಭೂತಪೂರ್ವ ಪ್ರಗತಿ ಸಾಧಿಸುವ ಎಲ್ಲಾ ಸಾಮರ್ಥ್ಯವನ್ನು ಹೊಂದಲಿದೆ. ಆಫ್ರಿಕಾದ ಜಿಡಿಪಿಗೆ ಶೇ. 50ರಷ್ಟು ಕೊಡುಗೆ ನೀಡುವ 11 ದೇಶಗಳಲ್ಲಿ ಸುಮಾರು 15 ದಶ ಲಕ್ಷ ಮಧ್ಯಮ ವರ್ಗದ ಜನರಿದ್ದು, ಇದು 2030ರೊಳಗೆ 42 ದಶ ಲಕ್ಷಕ್ಕೆ ಏರಲಿದೆ ಎಂದು ತಿಳಿದು ಬಂದಿದೆ.

ಆದರೆ ಆಫ್ರಿಕಾದಲ್ಲಿ ಭದ್ರತೆಯ ಅಪಾಯಗಳು ಕೂಡ ಸವಾಲಾಗಿದ್ದು, ಜೊತೆಗೆ ರಾಜಕೀಯ ಅತಂತ್ರತೆ ಮತ್ತು ಆರೋಗ್ಯ ಸಮಸ್ಯೆ, ಸಾಕಷ್ಟು ನೀರು ಮತ್ತು ವಿದ್ಯುತ್ ಲಭ್ಯತೆ ಸೇರಿದಂತೆ ಹಲವಾರು ಮೂಲಸೌಕರ್ಯ ಸಮಸ್ಯೆಗಳು ಇಲ್ಲಿವೆ.

**ಭಾರತದ ಜವಳಿ ಮತ್ತು ಉಡುಗೆ ಕ್ಷೇತ್ರದ ಹೊಸ ಮಾರುಕಟ್ಟೆಗಳು ಯಾವುವು?**

ಆಸಕ್ತಿದಾಯಕ ವಿಷಯವೆಂದರೆ ಬಾಂಗ್ಲಾದೇಶದ ಜೊತೆಗಿನ ಎಸ್‌ಎಎಫ್‌ಟಿಎ ಹೊರತು ಪಡಿಸಿದರೆ ನಾವು ರಫ್ತು ಮಾಡುವ 10 ಪ್ರಮುಖ ಜವಳಿ ರಫ್ತು ಮಾರುಕಟ್ಟೆ ದೇಶಗಳ ಜೊತೆಗೆ ಭಾರತವು ಎಫ್‌ಟಿಎ ಅಥವಾ ಪಿಟಿಎ ಹೊಂದಿಲ್ಲ.


ವಿಶ್ವ ಆರ್ಥಿಕತೆ ಪ್ರಗತಿಯ ಬದಲಾಗುತ್ತಿರುವ ಆಯಾಮಗಳನ್ನು ನೋಡಿಕೊಂಡು ವೈವಿಧ್ಯಮಯ ಮಾರುಕಟ್ಟೆ ಆಧಾರಿತ ರಫ್ತು ಬೆಳವಣಿಗೆ ಸ್ಥಿರವಾಗಿರುವುದನ್ನು ಖಾತರಿ ಮಾಡುವಲ್ಲಿ ಇದು ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ತಮ್ಮ ಜವಳಿಗೆ ಭರವಸೆದಾಯಕ ಮಾರುಕಟ್ಟೆಯನ್ನು ಒದಗಿಸುವ ದೇಶ ಅಥವಾ ವಲಯಗಳ ಜೊತೆಗೆ ಮಾತುಕತೆ ನಡೆಸುವುದು ಅವಶ್ಯಕವಾಗಿದೆ.



ಅಂತಾರಾಷ್ಟ್ರೀಯ ಮಟ್ಟದಲ್ಲಿ ಹತ್ತಿ ಉಣ್ಣೆಯಂತಹ ನೈಸರ್ಗಿಕ ಬಟ್ಟೆಯ ಬದಲಾಗಿ ಪ್ರಾಥಮಿಕವಾಗಿ ಮಾನವ ನಿರ್ಮಿತ ಬಟ್ಟೆಗೆ ಹೆಚ್ಚು ಬೇಡಿಕೆ ಇದೆ. ಇದರಿಂದ ಚಿಕ್ಕ ಉದ್ದಿಮೆಗಳು ಕಚ್ಚಾ ಸಾಮಗ್ರಿಯ ಬೆಲೆಯ ಏರಿಳಿತ ಹಾಗೂ ಕಾರ್ಮಿಕ ವೆಚ್ಚದಿಂದ ಅತಂತ್ರ ಸ್ಥಿತಿಗೆ ಬೀಳುವ ಸಾಧ್ಯತೆಯಿದೆ. ಇದರ ಹೊರತಾಗಿ ವಿದೇಶಿ ಮಾರುಕಟ್ಟೆಯ ಜೊತೆಗೆ ಸ್ಪರ್ಧೆಯನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಬದಲಾಗುತ್ತಿರುವ ಫ್ಯಾಶನ್ ಟ್ರೆಂಡ್ ಮತ್ತು ನಾನಾ ವಯೋವರ್ಗದ ಗ್ರಾಹಕರ ಆಯ್ಕೆಯ ಆದ್ಯತೆಗೆ ಕ್ಷಿಪ್ರಗತಿಯಲ್ಲಿ ಸ್ಪಂದಿಸಿ ಅವಶ್ಯಕ ನೀತಿಯನ್ನು ಅಳವಡಿಸಿಕೊಳ್ಳಬೇಕಾಗಿದೆ.

ಭಾರತದ ರಫ್ತಿಗೆ ದಕ್ಷಿಣ ಅಮೆರಿಕ ಮತ್ತು ಯೂರೋಪ್‌ನಂತಹ ಸಾಂಪ್ರದಾಯಿಕವಾಗಿ ಅಭಿವೃದ್ಧಿ ಹೊಂದಿದ ಮಾರುಕಟ್ಟೆಗಳಿಂದ ಬೇಡಿಕೆ ಇದ್ದು, ಟಿಪಿಪಿಯ ಅನುಮೋದನೆಯಾಗದಿದ್ದರೆ, ಬೇಡಿಕೆ ಇಳಿಮುಖವಾಗಿ ವ್ಯಾಪಾರ ದೃಷ್ಟಿಯಿಂದ ಬಹು ದೊಡ್ಡ ಸವಾಲು ಎದುರಾಗುವ ಸಾಧ್ಯತೆಯಿದೆ. ಇದಕ್ಕೆ ಹೋಲಿಸಿದರೆ ಮುಂದಿನ ಪ್ರಗತಿಯು ತುಲನಾತ್ಮಕವಾಗಿ ಹೆಚ್ಚಿನ ಪ್ರಗತಿ ದರವನ್ನು ಹೊಂದಿರುವ ಅಭಿವೃದ್ಧಿ ಹೊಂದುತ್ತಿರುವ ಮತ್ತು ಪ್ರವರ್ಧಮಾನಕ್ಕೆ ಬರುತ್ತಿರುವ ಆರ್ಥಿಕ ಶಕ್ತ ದೇಶಗಳ ಮೇಲೆ ಅವಲಂಬಿತವಾಗಿದೆ.

ಪ್ರವರ್ಧಮಾನಕ್ಕೆ ಬರುತ್ತಿರುವ ಹೊಸ ಆರ್ಥಿಕ ಶಕ್ತ ದೇಶಗಳಲ್ಲಿ ಪ್ರಬಲ ಮಧ್ಯಮ ವರ್ಗ ತಲೆಯೆತ್ತಿದ್ದು, ಇದರಿಂದ ಬೇಡಿಕೆ ಹೆಚ್ಚಿ ದೀರ್ಘಾವಧಿಯಲ್ಲಿ ಪ್ರಗತಿ ಇನ್ನಷ್ಟು ಏರಿಕೆಯಾಗಲಿದೆ. ಬದಲಾದ ಮಾರುಕಟ್ಟೆಗಳ ಆಯಾಮದ ಹಿನ್ನೆಲೆಯಲ್ಲಿ ಲ್ಯಾಟಿನ್ ಅಮೆರಿಕ, ಆಸಿಯಾನ್, ಯುರೇಶಿಯಾ, ಡಬ್ಲ್ಯೂಎಎನ್‌ಎ ಮತ್ತು ಟರ್ಕಿ, ಕೆನಡಾ ಮತ್ತು ಆಸ್ಟ್ರೇಲಿಯಾದಂತಹ ಇತರ ಮಾರುಕಟ್ಟೆಗಳ ಬಗ್ಗೆ ಹೆಚ್ಚು ಗಮನ ಹರಿಸಲೇಬೇಕಾದ





ಕಾರ್ಯತಂತ್ರ ಅನುಸರಿಸಬೇಕಾಗಿದೆ. ಗ್ರಾಫ್ 1 ಇದನ್ನು ತೋರಿಸುತ್ತದೆ. ಗ್ರಾಫ್ 2 ಪ್ರವೃತ್ತಿ ವಿಶ್ಲೇಷಣೆಯನ್ನು ತೋರಿಸುತ್ತದೆ.

ಪಶ್ಚಿಮ ಏಷ್ಯಾ ಮತ್ತು ದಕ್ಷಿಣ ಆಫ್ರಿಕಾ ವಲಯ(ಡಬ್ಲ್ಯೂಎಎನ್‌ಎ)ವು ದೊಡ್ಡ ಪ್ರಮಾಣದಲ್ಲಿ ಪ್ರಗತಿ ಕಾಣುತ್ತಿರುವ ವಲಯವಾಗಿದೆ. ಭಾರತವು ಇಸ್ರೇಲ್ ಜೊತೆಗೆ ಎಫ್‌ಟಿಎ ಕುರಿತು ಸಂಧಾನ ನಡೆಸುವ ಯತ್ನಗಳನ್ನು ಆರಂಭಿಸಿದೆ. ಇಸ್ರೇಲ್ ಉಡುಪು ಕೈಗಾರಿಕೆಯು ಪ್ರಮುಖವಾಗಿ ತನ್ನ ನೂಲು ಮತ್ತು ನೇಯ್ದ ಬಟ್ಟೆಯ ಅವಶ್ಯಕತೆಗಳಿಗಾಗಿ ಬಹುತೇಕ ಆಮದನ್ನೇ ನೆಚ್ಚಿಕೊಂಡಿದೆ. ಉಡುಪು ಆಮದಿನಲ್ಲಿ ಇಸ್ರೇಲ್ ಸಿಎಜಿಆರ್ ಶೇ. 5ರ ಪ್ರಗತಿಯನ್ನು (2015ರಲ್ಲಿ 1.5 ಶತ ಕೋಟಿ ಅಮೆರಿಕನ್ ಡಾಲರ್) ದಾಖಲಿಸಿದ್ದು, ಭಾರತವು ಕೇವಲ ಶೇ.1ರಷ್ಟು ಪಾಲನ್ನು ಮಾತ್ರ ಹೊಂದಿದೆ. ಇಸ್ರೇಲ್ ಜವಳಿ ಕೈಗಾರಿಕೆಗೆ ಭಾರತದ ಆಮದು (2015ರಲ್ಲಿ 0.2 ಶತ ಕೋಟಿ ಅಮೆರಿಕನ್ ಡಾಲರ್) ಶೇ. 6ರಷ್ಟಿದೆ.

ಆಫ್ರಿಕಾ ಖಂಡದಲ್ಲಿ ಇಜಿಪ್ತ್ ಅತಿ ದೊಡ್ಡ ಹತ್ತಿ ಮತ್ತು ಜವಳಿ ಕೇಂದ್ರವಾಗಿದೆ. ಇಜಿಪ್ತ್ ಆರ್ಥಿಕತೆಯ ಬಹು ದೊಡ್ಡ ಭಾಗವಾಗಿರುವ ಜವಳಿ ಕೈಗಾರಿಕೆ ಕೂಡ ನೂಲು, ಬಟ್ಟೆ ಮತ್ತು ಇತರ ಜವಳಿ ಸಾಮಗ್ರಿಗಳಿಗಾಗಿ ಆಮದನ್ನೇ ಅವಲಂಬಿಸಿದೆ. ಇಜಿಪ್ತ್‌ನ ಉಡುಪು ಆಮದು 2015ರಲ್ಲಿ ದಾಖಲೆಯ ಸಿಎಜಿಆರ್ ಶೇ. 17%ರಷ್ಟಾಗಿತ್ತು (0.2 ಶತ ಕೋಟಿ ಅಮೆರಿಕನ್ ಡಾಲರ್) ಮತ್ತು ಇದರಲ್ಲಿ ಭಾರತದ ಪಾಲು ಶೇ. 1 ಮಾತ್ರ ಆಗಿದೆ. ಬಟ್ಟೆಯಿಂದ ಹಿಡಿದು ಸಿದ್ಧ ಉಡುಪು ಉತ್ಪನ್ನ ಮತ್ತು ಉತ್ಪಾದನೆ, ವಿನ್ಯಾಸ ಸಿದ್ಧಪಡಿಸುವಿಕೆ, ಹರಡುವಿಕೆ, ಕತ್ತರಿಸುವಿಕೆ, ಹೊಲಿಗೆ ಮತ್ತು ಪ್ಯಾಕೇಜ್ ತನಕ ಉತ್ಪಾದನೆಯ ಎಲ್ಲಾ ಹಂತಗಳಲ್ಲಿ ಜವಳಿ ಕೈಗಾರಿಕೆಯು ಲಂಬಾತ್ಮಕ ಏಕೀಕೃತ ಕಾರ್ಯ ನಿರ್ವಹಣೆ ಮಾದರಿ (ವರ್ಟಿಕಲ್ ಇಂಟಿಗ್ರೇಟೆಡ್ ಫಂಕ್ಷನಿಂಗ್ ಮಾಡೆಲ್)ಯನ್ನು ಹೊಂದಿದೆ. ಜವಳಿ ಆರ್ಥಿಕತೆಯು ಮುಖ್ಯವಾಗಿ ಹತ್ತಿಯ ಮೇಲೆ ಆಧಾರಿತವಾಗಿದ್ದರೂ, ಇತ್ತೀಚಿನ ದಿನಗಳಲ್ಲಿ ಮಾನವ ನಿರ್ಮಿತ ಬಟ್ಟೆಯ (ಎಂಎಂಎಫ್) ಜವಳಿ ಕ್ಷೇತ್ರ ಇತ್ತೀಚೆಗೆ ದೇಶದಲ್ಲಿ ಹೆಚ್ಚುತ್ತಿದೆ. ಎಂಎಂಎಫ್ ಆಮದು ಪ್ರಮಾಣವು ನಿಧಾನವಾಗಿ ಏರಿಕೆ ಆಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ಇಜಿಪ್ತನ ಸಿಎಜಿಆರ್ ಎಂಎಂಎಫ್ ಆಮದು ಪ್ರಮಾಣವು ಶೇ. 3ರನ್ನು ತಲುಪಿದೆ. ಇದರಲ್ಲಿ ಭಾರತವು ಪ್ರಮುಖ ಪೂರೈಕೆದಾರ ದೇಶವಾಗಿದೆ. 2015ರಲ್ಲಿ ಇಜಿಪ್ತ್ ನ ಜಿಡಿಪಿ ದರ ಶೇ. 4.2ರಷ್ಟಿದ್ದು, ಇಜಿಪ್ತ್ ನ ಉತ್ಪಾದನೆ ರಫ್ತು ಕೇಂದ್ರದಲ್ಲಿ ಹೂಡಿಕೆ ಇದೇ ರೀತಿ ಮುಂದುವರಿಯುವ ನಿರೀಕ್ಷೆಯಿದೆ.

ಭಾರತದ ಮಾನವ ನಿರ್ಮಿತ ಬಟ್ಟೆಯ ಜವಳಿಗೆ ಟರ್ಕಿ ಪ್ರಮುಖ ಮಾರುಕಟ್ಟೆಯಾಗಿದೆ. ದೇಶೀಯವಾಗಿ ಕಚ್ಚಾ ಸಾಮಗ್ರಿಗಳ ಉತ್ಪಾದನೆ ಮತ್ತು ದಾರ, ನೂಲು ಮತ್ತು ಬಟ್ಟೆ ಸೇರಿದತೆ ಜವಳಿ ಕ್ಷೇತ್ರಕ್ಕೆ ಬೇಕಾದ ಸಾಮಗ್ರಿಗಳ ಪೂರೈಕೆ ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ. ಇದರಿಂದಾಗಿ ರಫ್ತು ಮಾಡುವ ಜವಳಿಗಾಗಿ ಕಚ್ಚಾ ಸಾಮಗ್ರಿಗಳನ್ನು ಗಣನೀಯ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬೇಕಾಗಿದೆ. ಟರ್ಕಿಯ ಜಿಡಿಪಿಯಲ್ಲಿ ವ್ಯಾಪಾರ ಶೇ. 58ರ ಪಾಲು ಹೊಂದಿದೆ. ಟರ್ಕಿಯು ಆಮದು ಮಾಡಿಕೊಳ್ಳುವ ಜವಳಿ ಮತ್ತು ಉಡುಪಿನ ಮೌಲ್ಯ ಸುಮಾರು 2.9 ಶತಕೋಟಿ ಅಮೆರಿಕನ್ ಡಾಲರ್ ಆಗಿದ್ದರೂ ನಕಾರಾತ್ಮಕ



ಪ್ರಗತಿಯನ್ನು ತೋರಿಸುತ್ತಿದೆ. ಆದ್ದರಿಂದ ಟರ್ಕಿಯತ್ತ ಹೆಚ್ಚು ಗಮನ ಹರಿಸುವುದು ಉಪಯೋಗಕಾರಿ. ಯಾಕೆಂದರೆ ಈಗ ಟರ್ಕಿಯ ಜೊತೆಗಿನ ಜವಳಿ ವ್ಯಾಪಾರದಲ್ಲಿ ಭಾರತದ ಪಾಲು ಶೇ. 2–3ರಷ್ಟು ಮಾತ್ರವಿದೆ.

ಕೆಲವು ವರ್ಷಗಳಿಂದ ಲ್ಯಾಟಿನ್ ಅಮೆರಿಕದ ಜೊತೆಗೆ ಭಾರತದ ಸಂಬಂಧ ಉತ್ತಮಗೊಂಡಿದ್ದು ಇದು ವ್ಯಾಪಾರ ಮತ್ತು ಹೂಡಿಕೆಯ ಹೊರತಾಗಿ ವಿದ್ಯುತ್, ಜ್ಞಾನದ ಹಂಚಿಕೆ, ಬಹುರಾಷ್ಟ್ರಗಳ ವೇದಿಕೆಯಾದಂತಹ ಜಿ–20, ಬ್ರಿಕ್ಸ್ ಮತ್ತು ಐಬಿಎಸ್‌ಎ (ಭಾರತ, ಬ್ರೆಜಿಲ್, ದಕ್ಷಿಣ ಆಫ್ರಿಕಾ) ಮೊದಲಾದವುಗಳಿಗೆ ವಿಸ್ತರಣೆಯಾಗಿದೆ. ಭಾರತವು ಮೆರ್ಕೋಸುರ್ ಮತ್ತು ಚಿಲಿಯ ಜೊತೆಗೆ ಆದ್ಯತಾ ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ. ಇದರಿಂದ ಭಾರತದಲ್ಲಿ ವ್ಯಾಪಾರಿ ಸಮುದಾಯ ಮತ್ತು ಎಲ್‌ಎಸಿ (ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್) ವಲಯಕ್ಕೆ ದೊಡ್ಡ ಅವಕಾಶವನ್ನು ಒದಗಿಸಿಕೊಟ್ಟಿದೆ.

ಜವಳಿ ವ್ಯಾಪಾರದ ದೃಷ್ಟಿಯಿಂದ ನೋಡುವುದಾದರೆ ಮೆಕ್ಸಿಕೊ, ಪೆರು ಮತ್ತು ಚಿಲಿ ಮಹತ್ವದ್ದಾಗಿದ್ದು, ಮೆಕ್ಸಿಕೊ ಮತ್ತು ಚಿಲಿ ಅನುಕ್ರಮವಾಗಿ ಜವಳಿ ಮತ್ತು ಉಡುಪು ಆಮದಿನ ಅತಿ ದೊಡ್ಡ ದೇಶಗಳಾಗಿವೆ. 2015ರಲ್ಲಿ ಮೆಕ್ಸಿಕೊ, ಚಿಲಿ ಮತ್ತು ಪೆರು ಮಾಡಿಕೊಂಡ ಒಟ್ಟು ಸಿದ್ಧ ಉಡುಪು ಮತ್ತು ಗೃಹ ಜವಳಿ ಪ್ರಮಾಣ (ವಿಶ್ವ ಸಂಸ್ಥೆಯ ಕಾಮ್ ಟ್ರೇಡ್ ಪ್ರಕಾರ) ಅನುಕ್ರಮವಾಗಿ 4.1, 3.1 ಮತ್ತು 0.7 ಶತಕೋಟಿ ಅಮೆರಿಕನ್ ಡಾಲರ್ ಆಗಿತ್ತು. ಎಲ್‌ಎಸಿ ದೇಶಗಳಲ್ಲಿ ಸ್ಥಳೀಯ ಕೈಗಾರಿಕೆಗಳು ಅಷ್ಟೇನೂ ಸ್ಪರ್ಧಾತ್ಮಕವಾಗಿಲ್ಲ ಎಂಬುದು ಇಲ್ಲಿ ಗಮನಾರ್ಹ. ಜೊತೆಗೆ ಈ ದೇಶಗಳು ಚೀನಾದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಲು ಯತ್ನಿಸುತ್ತಿವೆ. ಆದಾಗ್ಯೂ, ಈ ಮಾರುಕಟ್ಟೆಗಳಲ್ಲಿ ಭಾರತದ ಪಾಲು ಕೇವಲ ಶೇ. 1 ಆಗಿದೆ ಮತ್ತು ಚಿಲಿಯಲ್ಲಿ ಸಿದ್ಧ ಉಡುಪು ಮತ್ತು ಜವಳಿಯ ಪಾಲು ಶೇ. 4, ಮೆಕ್ಸಿಕೊ ಜೊತೆ ಶೇ. 3 ಮತ್ತು ಪೆರುವಿನ ಜೊತೆ ಶೇ. 2ರ ಮಾತ್ರ ಆಗಿದೆ. ಇದು ಸಮಗ್ರ ವ್ಯಾಪಾರ ಪ್ರಗತಿಗೆ ಅವಕಾಶ ಇರುವುದರ ಸಂಕೇತವಾಗಿದೆ.

**ಇತರ ಅಭಿವೃದ್ಧಿ ಹೊಂದಿದ ಮಾರುಕಟ್ಟೆಗಳು: ಒಸಿಯಾನಿಯಾ ಮತ್ತು ಕೆನಡಾ**

ಸಾಂಪ್ರದಾಯಿಕ ಮಾರುಕಟ್ಟೆಗಳತ್ತ ಗಮನ ನೀಡುವಾಗ (ಅಭಿವೃದ್ಧಿ ಹೊಂದಿದ ದೇಶಗಳು) ಮೌಲ್ಯಾಧಾರಿತ ಉತ್ಪನ್ನಗಳಾಗಿ(ಸಿದ್ಧ ಉಡುಪು) ರಫ್ತು ಮುಂದುವರಿಯುತ್ತಿದೆ. ಸರಕು ರೀತಿಯ ಜವಳಿ ಇಳಿಮುಖವಾಗಿದ್ದು, ತಾಂತ್ರಿಕ ಜವಳಿ ಕೈಗಾರಿಕೆ ದೊಡ್ಡ ಪ್ರಮಾಣದಲ್ಲಿ ವಿಸ್ತರಣೆಯಾಗುತ್ತಿರುವ ಕೆನಡಾವು ಒಂದು ಮಾರುಕಟ್ಟೆಯಾಗಿದೆ. ಇತ್ತೀಚಿನ ದತ್ತಾಂಶಗಳ ಪ್ರಕಾರ ತಾಂತ್ರಿಕ ಅಥವಾ ಟೆಕ್ನಿಕಲ್ ಜವಳಿ ರಫ್ತು 2015ರಲ್ಲಿ ಇದ್ದ 8.6 ಶತ ಕೋಟಿ ಅಮೆರಿಕನ್ ಡಾಲರ್‌ನಿಂದ 2016ರಲ್ಲಿ 9.3 ಶತ ಕೋಟಿ ಅಮೆರಿಕನ್ ಡಾಲರ್ ಆಗಲಿದೆ ಎಂದು ಅಂದಾಜಿಸಲಾಗಿದೆ. ತಾಂತ್ರಿಕ ಜವಳಿ ಕೈಗಾರಿಕೆ ಕ್ಷೇತ್ರದಲ್ಲಿ ಅಪ್ಲಿಕೇಶನ್ ಮತ್ತು ತಂತ್ರಜ್ಞಾನಗಳು ನಿರಂತರವಾಗಿ ಬದಲಾಗುತ್ತಲೇ ಇದೆ. ಆದ್ದರಿಂದ ರಫ್ತು ಕೂಡ ಬದಲಾಗುವ ಸಾಧ್ಯತೆ ಇದ್ದೇ ಇದೆ. ಅಂತಿಮ ಬಳಕೆದಾರ ಕೈಗಾರಿಕೆಯಿಂದಾಗಿ ಉತ್ತರ ಅಮೆರಿಕವು ತಾಂತ್ರಿಕ ಜವಳಿಯ ಅತಿ ದೊಡ್ಡ ವಲಯವಾರು ಗ್ರಾಹಕನಾಗಿದೆ. ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ (ಸಿಇಪಿಎ) ಕುರಿತು ಸಂಧಾನ ನಡೆಯುತ್ತಿರುವ ಕೆನಡಾಕ್ಕೆ ತಾಂತ್ರಿಕ ಜವಳಿ ರಫ್ತು ಕುರಿತ ಅವಕಾಶಗಳನ್ನು ಭಾರತ ಕಂಡುಕೊಳ್ಳಬಹುದಾಗಿದೆ.

ಭಾರತದ ಜವಳಿ ಕೈಗಾರಿಕೆ ಕ್ಷೇತ್ರದಲ್ಲಿ ತಾಂತ್ರಿಕ ಜವಳಿ ಕ್ಷೇತ್ರವು ಅತಿ ವೇಗದಿಂದ ಬೆಳೆಯುವ ವಲಯವಾಗಿದೆ. ಪ್ರಸಕ್ತ ವಿಶ್ವದಲ್ಲಿ ಬಳಕೆಯಾಗುವ ಒಟ್ಟು ತಾಂತ್ರಿಕ ಜವಳಿಯ ಪೈಕಿ ಶೇ. 9ರಷ್ಟು ಭಾರತದ ಉತ್ಪನ್ನಗಳಾಗಿವೆ ಎಂದು ಅಂದಾಜಿಸಲಾಗಿದೆ. ಈ ಕ್ಷೇತ್ರದಲ್ಲಿ ಭಾರತದ ಮಾರುಕಟ್ಟೆ ಪಾಲು 2013ರಲ್ಲಿ 11.6 ಶತ ಕೋಟಿ ಅಮೆರಿಕನ್ ಡಾಲರ್ ಆಗಿದ್ದರೆ, 2017ರೊಳಗೆ ಇದು 26 ಶತಕೋಟಿ ಅಮೆರಿಕನ್ ಡಾಲರ್‌ಗೆ ತಲುಪುವ ನಿರೀಕ್ಷೆಯಿದೆ ಎಂದು ಐಟಿಎ ಟೆಕ್ನಿಕಲ್ ಟೆಕ್ಸ್‌ಟೈಲ್ಸ್ ಟಾಪ್ ಮಾರ್ಕೆಟ್ ರಿಪೋರ್ಟ್, 2016ರ ವರದಿ ತಿಳಿಸಿದೆ.

ಆಸ್ಟ್ರೇಲಿಯಾದಲ್ಲಿ ಬಳಕೆಗೆ ಸಿದ್ಧವಾಗಿರುವ ಜವಳಿ, ಉಡುಪು, ಕಾರ್ಪೆಟ್, ಪಾದರಕ್ಷೆ ಮತ್ತು ತಾಂತ್ರಿಕ (ಸೌಂದರ್ಯೇತರ) ಜವಳಿಯಾದ ಅಟೊಮೊಟಿವ್ ಅನ್ವಯಿಕಗಳಿಗೆ ಬೇಕಾಗುವ ಜವಳಿ ಸೇರಿದಂತೆ ಜವಳಿ, ಉಡುಪು ಮತ್ತು ಪಾದರಕ್ಷೆ (ಟಿಸಿಎಫ್) ಉತ್ಪಾದನೆ ಕೈಗಾರಿಕೆಯು ವೈವಿಧ್ಯಮಯವಾಗಿದೆ. ಆಸ್ಟ್ರೇಲಿಯಾದ ಸಿದ್ಧ ಉಡುಪಿನ ಮಾರುಕಟ್ಟೆ ಸಿಎಜಿಆರ್ ಶೇ. 5ರೊಂದಿಗೆ ಈಗಿನ 25 ಶತ ಕೋಟಿ ಅಮೆರಿಕನ್ ಡಾಲರ್‌ನಿಂದ 2025ರೊಳಗೆ 45 ಶತ ಕೋಟಿ ಅಮೆರಿಕನ್ ಡಾಲರ್‌ಗೆ ತಲುಪಲಿದೆ ಎಂದು ಅಂದಾಜಿಸಲಾಗಿದೆ. ಈಗ ಆಸ್ಟ್ರೇಲಿಯಾದ ಜೊತೆಗೆ ನಡೆಯುತ್ತಿರುವ ಸಿಇಸಿಎ ಮಾತುಕತೆಯೊಂದಿಗೆ ಈ ಮಾರುಕಟ್ಟೆಗಳಲ್ಲಿ ಭಾರತ ಅವಕಾಶಗಳನ್ನು ಹುಟ್ಟು ಹಾಕಬೇಕಾಗಿದೆ. ❑

# ಯೋಜನಾ

# ನವೆಂಬರ್ 2016 ಸಂಚಿಕೆಯ ವಿಷಯ

# ತೆರಿಗೆ ಸುಧಾರಣೆ

ಹೆಮ್ಮೆ

# ಏರುತಿಹುದು ಹಾರುತಿಹುದು ನೋಡು ನಮ್ಮ ಬಾವುಟ

* ಪ್ರಕಾಶ್ ಜೋಶಿ ಗುಡಗೇರಿ



ರಾಷ್ಟ್ರಗೀತೆಯನ್ನು ಹಾಡಲು ಯಾವ ನಿಯಮ – ಕಟ್ಟುಪಾಡುಗಳು ಇವೆಯೋ ಅದೇ ರೀತಿಯಾಗಿ ರಾಷ್ಟ್ರಧ್ವಜ ತಯಾರಿಕೆಯಲ್ಲಿ ಸಹ ಧ್ವಜ ಸಂಹಿತೆ ಇರುತ್ತದೆ. ಇದನ್ನು ಪರಿಪಾಲನೆ ಮಾಡಿ ತ್ರಿವರ್ಣ ಧ್ವಜವನ್ನು ಸಿದ್ಧಗೊಳಿಸಲಾಗುತ್ತದೆ. ಇದೊಂದು ಬಹುಕಷ್ಟದ ಮತ್ತು ಸೂಕ್ಷ್ಮಾತಿಸೂಕ್ಷ್ಮ ಪ್ರಕಿಯೆಯಾಗಿದೆ.

ನಮ್ಮ ರಾಷ್ಟ್ರ ಧ್ವಜವು ನಮ್ಮ ದೇಶದ ಸ್ವಾತಂತ್ರ್ಯದ ಸಂಕೇತವಾಗಿದೆ. ಜಾಗೃತ ರಾಷ್ಟ್ರದ ದಿವ್ಯ ಜ್ಯೋತಿ ಎನಿಸಿದೆ. ವಿವಿಧ ಸಂಸ್ಕೃತಿ ಪರಂಪರೆಯ ನಾಗರಿಕರನ್ನು ಒಂದೆ ಸೂರಿನ ಧ್ವಜದಡಿ ತಂದು ದೇಶದ ಏಕತೆಯನ್ನು ಸಾರುವ ಪವಿತ್ರ ಸಾಧನವಾಗಿದೆ. ರಾಷ್ಟ್ರಧ್ವಜದ ಮಾನ ನಮ್ಮ ಇಡೀ ದೇಶದ ಮಾನವಾಗಿದೆ. ಅದಕ್ಕೆ ಸಲ್ಲಿಸುವ ಗೌರವ ದೇಶಕ್ಕೆ ಸಲ್ಲಿಸುವ ಗೌರವವಾಗಿದೆ. ಇದರಲ್ಲಿ ದೇಶ ಭಕ್ತಿ ಅಡಗಿದೆ. ಅದರ ಹಿರಿಮೆ ಗರಿಮೆಯನ್ನು ಎಷ್ಟು ವರ್ಣಿಸಿದರೂ ಕಡಿಮೆಯೆ.

ಪ್ರತಿಯೊಂದು ದೇಶಕ್ಕೂ ತನ್ನದೇ ಆದ ರಾಷ್ಟ್ರಧ್ವಜವಿರುತ್ತದೆ. ಭಾರತದ ರಾಷ್ಟ್ರ ಧ್ವಜವನ್ನು ಸಿದ್ಧಪಡಿಸುವ ಸಂಸ್ಥೆ ಕರ್ನಾಟಕದ ಹುಬ್ಬಳ್ಳಿಯಲ್ಲಿದೆ. ಹುಬ್ಬಳ್ಳಿಯ ಬೆಂಗೇರಿ ಬಡಾವಣೆಯಲ್ಲಿ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘ ಹತ್ತಾರು ವರ್ಷಗಳಿಂದ ಸದ್ದಿಲ್ಲದೆ ಇಂತಹ ಪವಿತ್ರ ಕಾಯಕದಲ್ಲಿ ತೊಡಗಿದೆ.

ರಾಷ್ಟ್ರದ ಸಾರ್ವಭೌಮತ್ವ, ಸಂಸ್ಕೃತಿ ಮತ್ತು ಆಶೋತ್ತರಗಳನ್ನು ಬಿಂಬಿಸುವ ದೇಶದ ತ್ರಿವರ್ಣ ಧ್ವಜ ಇಲ್ಲಿ ತಯಾರಾಗುತ್ತವೆ. ದೇಶದ ಸಂಸತ್‌ಭವನ, ರಾಷ್ಟ್ರಪತಿ ಭವನ, ರಕ್ಷಣಾಪಡೆ, ದೆಹಲಿಯ ಕೆಂಪುಕೋಟೆ, ವಿವಿಧ ರಾಜ್ಯಾಡಳಿತಗಳ ಸೌಧ, ಸರ್ಕಾರಿ ಕಚೇರಿ ಮತ್ತು ವಿದೇಶಗಳಲ್ಲಿರುವ ರಾಯಭಾರಿ ಕಚೇರಿಗಳ ಮೇಲೆ ಹಾರಾಡುವ ಧ್ವಜಗಳು ಬೆಂಗೇರಿಯಲ್ಲಿ ತಯಾರಾದ ಧ್ವಜಗಳಾಗಿವೆ. ಇಂತಹ ರಾಷ್ಟ್ರಪ್ರೇಮದ ಕೆಲಸ ಅರ್ಪಣಾ ಭಾವದಿಂದ ಇಲ್ಲಿ ನಡೆಯುತ್ತಿರುವದು ವಿಶೇಷ. ಇದಕ್ಕಾಗಿ ಅನೇಕರು ಶ್ರಮವಹಿಸಿ ದುಡಿಯುತ್ತಿದ್ದಾರೆ.

ರಾಷ್ಟ್ರಗೀತೆಯನ್ನು ಹಾಡಲು ಯಾವ ನಿಯಮ–ಕಟ್ಟುಪಾಡುಗಳು ಇವೆಯೋ ಅದೇ ರೀತಿಯಾಗಿ ರಾಷ್ಟ್ರಧ್ವಜ ತಯಾರಿಕೆಯಲ್ಲಿ ಸಹ ಧ್ವಜ ಸಂಹಿತೆ ಇರುತ್ತದೆ. ಇದನ್ನು ಪರಿಪಾಲನೆ ಮಾಡಿ ತ್ರಿವರ್ಣ ಧ್ವಜವನ್ನು ಸಿದ್ಧಗೊಳಿಸಲಾಗುತ್ತದೆ. ಇದೊಂದು ಬಹುಕಷ್ಟದ ಮತ್ತು ಸೂಕ್ಷ್ಮಾತಿಸೂಕ್ಷ್ಮ ಪ್ರಕಿಯೆಯಾಗಿದೆ. ರಾಷ್ಟ್ರಧ್ವಜಕ್ಕೆ ಅಗತ್ಯವಾದ ಹತ್ತಿಯ ಆಯ್ಕೆ, ಅದನ್ನು ಹಂಜಿಯಾಗಿ ಪರಿವರ್ತಿಸಿ, ನೂಲನ್ನು ಸಿದ್ಧಪಡಿಸಿ, ಬಟ್ಟೆ ತಯಾರಿಸುವ ಒಂದು ಹಂತದ ಚಟುವಟಿಕೆಯ ನಂತರ, ಬಟ್ಟೆಗೆ ಬಣ್ಣ ಹಾಕುವಿಕೆ, ಹೊಲೆಯುವಿಕೆ ಹಾಗೂ ಮಾರುಕಟ್ಟೆಗೆ ಕಳುಹಿಸುವಂತಹ ಎಲ್ಲ ಪ್ರಕ್ರಿಯೆಗಳು ಈ ಸಂಘ ಆಶ್ರಯದಲ್ಲಿ ನಡೆಯುತ್ತಿವೆ. ರಾಷ್ಟ್ರಧ್ವಜ ತಯಾರಿಕೆಯ ವಿವಿಧ ಹಂತಗಳು ಬಹು ಸಂಸ್ಥೆಗಳ ಸಹಭಾಗಿತ್ವದಲ್ಲಿ ಜರುಗುತ್ತವೆ. ಆದರೆ ಈ ಸಂಸ್ಥೆಯ ಎಲ್ಲ ಚಟುವಟಿಕೆಗಳು ಒಂದೇ ಸೂರಿನಡಿ, ಅದು ಖಾದಿ ಗ್ರಾಮೋದ್ಯೋಗ ಸಂಘದ ಆಶ್ರಯದಲ್ಲಿ ನಡೆಯುತ್ತಿವೆ. ಹೀಗಾಗಿ ರಾಷ್ಟ್ರಧ್ವಜ ತಯಾರಿಕೆಯಲ್ಲಿ ಬೆಂಗೇರಿಗೆ ವಿಶೇಷ ಮಹತ್ವವಿದೆ.

ಧ್ವಜ ತಯಾರಿಕೆಯಲ್ಲಿ ಸಾಂವಿಧಾನಿಕ ರೀತಿ ನೀತಿಗಳಿವೆ. ಭಾರತ ಧ್ವಜ ಸಂಹಿತೆ ಮತ್ತು ಭಾರತೀಯ ಗುಣಮಟ್ಟ ಪ್ರಮಾಣ ಸಂಸ್ಥೆಯು ನಿಗದಿಪಡಿಸಿದ ಅಂಶಗಳನ್ನು ಅನುಸರಿಸಿಕೊಂಡು ನೈಸರ್ಗಿಕ ಬಣ್ಣ ಬಳಸಿ, ಸಮಾನ ಅಳತೆಯಲ್ಲಿರುವಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಧ್ವಜದ ಬಟ್ಟೆ ಖಾದಿಯದ್ದಾಗಿರಬೇಕು. ಖಾದಿ ಬಟ್ಟೆಗಾಗಿ ನಿರ್ದಿಷ್ಟ ಪಡಿಸಿದ ನಂಬರಿನ ನೂಲನ್ನು ಉಪಯೋಗಿಸಬೇಕು. ನೇಯ್ಗೆಗೆ ಚರಕಾದ

* ಹಿರಿಯ ಪತ್ರಕರ್ತರು.

ಕೈಮಗ್ಗವನ್ನೇ ಬಳಸಬೇಕು . ಪ್ರತಿಯೊಂದು ಇಂಚು ಬಟ್ಟೆಯಲ್ಲಿ 42 ಹಾಸು ಹಾಗೂ 40 ಹೊಕ್ಕುಗಳಿರಬೇಕು. ಮತ್ತು ಚೌರಸ ಇಂಚು ಬಟ್ಟೆಯಲ್ಲಿ 40 ಎಳೆಗಳಿರಬೇಕು. ಆಯತಾಕಾರದ ಧ್ವಜದಲ್ಲಿ ಕೇಸರಿ, ಬಿಳಿ ಬಣ್ಣ ಹಸಿರು ಮೂರು ವರ್ಣಗಳ ಪಟ್ಟಿಗಳು ಸಮ ಅಗಲ ಹೊಂದಿರಬೇಕು. ಉದ್ದ– ಅಗಲಗಳು 3:2 ರ ಅನುಪಾತದಲ್ಲಿರಬೇಕು. ಬಿಳಿ ಪಟ್ಟಿಯ ಅಶೋಕ ಚಕ್ರವು ಎರಡೂ ಅಂಚುಗಳನ್ನು ಸ್ಪರ್ಶಿಸುವ ವ್ಯಾಸ ಹೊಂದಿರಬೇಕು. ಇದು ನೀಲ ವರ್ಣದಲ್ಲಿದ್ದು, ಧ್ವಜದ ಎರಡೂ ಬದಿಗೂ ಮುದ್ರಿತವಾಗಬೇಕು. ಚಕ್ರಕ್ಕೆ 24 ಅರೆಗಳು ಇರಬೇಕು. ಧ್ವಜ ಹೊಲಿಯುವ ದಾರ, ಅದಕ್ಕೆ ಹಾಕುವ ಹುರಿ, ಅಂಚಿನಲ್ಲಿ ಕಟ್ಟುವ ಕಟ್ಟಿಗೆ ಕುಣಿಕೆ, ಎಲ್ಲವೂ ನಿರ್ದಿಷ್ಟ ಆಕಾರ ಹಾಗೂ ಅಳತೆಯಲ್ಲಿರಬೇಕು. ಅಂದಾಗ ಮಾತ್ರ ಅದಕ್ಕೆ ಮನ್ನಣೆ ದೊರೆಯುತ್ತದೆ. ಆದ್ದರಿಂದ ಇಲ್ಲಿ ನಿಷ್ಕಾಳಜಿಗೆ ಅವಕಾಶವಿಲ್ಲ. ಇದು ಸುಲಭದ ಕೆಲಸವಲ್ಲ.

ಹತ್ತಿಯಿಂದ ಅರಳೆ, ನೂಲು ತಯಾರಿಕೆ ಹಾಗೂ ಧ್ವಜಕ್ಕೆ ಬೇಕಾದ ನಿರ್ದಿಷ್ಟ ಪಡಿಸಿದ ಬಟ್ಟೆಯು ಸಂಯುಕ್ತ ಸಂಘದ ವ್ಯಾಪ್ತಿಗೆ ಬರುವ ಬಾಗಲಕೋಟೆ ಜಿಲ್ಲೆಯ ತುಳಸಿಗೇರಿ ಹಾಗೂ ಜಾಲಿಹಾಳದ ಗ್ರಾಮೋದ್ಯೋಗ ಘಟಕದಲ್ಲಿ ಸಿದ್ಧಗೊಳ್ಳುತ್ತದೆ. ಅದಕ್ಕಾಗಿ 50 ಕೈಮಗ್ಗಗಳನ್ನು ಮೀಸಲಾಗಿಡಲಾಗಿದೆ. ಅಲ್ಲಿ 400 ಕ್ಕೂ ಅಧಿಕ ಖಾದಿ ಕಾರ್ಯಕರ್ತರು ದುಡಿಯುತ್ತಾರೆ. ಹೀಗೆ ಸಿದ್ಧಗೊಂಡು ಪ್ರಮಾಣೀಕೃತವಾಗಿ ಬಂದ ಬಟ್ಟೆಯು ಬೆಂಗೇರಿ ಘಟಕದಲ್ಲಿ ಧ್ವಜವಾಗಿ ರೂಪಾಂತರಗೊಳ್ಳುತ್ತದೆ.

ಬಟ್ಟೆಯನ್ನು ಬ್ಲೀಚಿಂಗ್ ಮಾಡಿ, ಬಣ್ಣ ಹಾಕಿ ಅಶೋಕ ಚಕ್ರ ಮುದ್ರಿಸಿ, ಹೊಲಿಗೆ ಹಾಕಿ ನಂತರ ಇಸ್ತ್ರಿ ಮಾಡಿ ಮಾರಾಟಕ್ಕೆ ಬಿಡುಗಡೆ ಮಾಡುವಂತಹ ಕಾರ್ಯಗಳು ಹುಬ್ಬಳ್ಳಿಯಲ್ಲಿ ನಡೆಯುತ್ತವೆ. ಒಟ್ಟಾರೆ 250



ಕಾರ್ಮಿಕರು ತಿರಂಗಾ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಆರು ಎಳೆಗಳನ್ನು ಸೇರಿಸಿ ಹೊಸೆದ ದಾರದಿಂದಲೇ ತ್ರಿವರ್ಣದ ಬಟ್ಟೆಗಳನ್ನು ಒಂದಕ್ಕೊಂದು ಜೋಡಿಸಲಾಗುತ್ತದೆ. ಈ ಹೊಲಿಗೆಗಾಗಿ ವಿಶೇಷ ಹೊಲಿಗೆ ಯಂತ್ರಗಳನ್ನು ಬಳಸಲಾಗುತ್ತದೆ. ಹೊಲಿಗೆ ಲಾಕ್ ಪದ್ಧತಿಯಲ್ಲಿ ಆಗುವದರಿಂದ ಒಂದು ಎಳೆ ಕಿತ್ತರೂ ಯಾವುದೇ ಕಾರಣಕ್ಕೂ ಇಡೀ ಹೊಲಿಗೆ ನುಣಚಿಕೊಳ್ಳುವದಿಲ್ಲ. ಧ್ವಜವನ್ನು ಸ್ತಂಭದ ಮೇಲೆ ಹಾರಿಸುವದಕ್ಕಾಗಿ ನೂಲಿನ ಹಗ್ಗ ಅಳವಡಿಕೆಗೆ ಒಂದು ಬದಿಯಲ್ಲಿ ಡಕ್ ಬಟ್ಟೆಯನ್ನು ಆಧಾರವಾಗಿ ಹಾಕಲಾಗುತ್ತದೆ. ಇದು ಬಹು ಶಕ್ತಿಯುತವಾಗಿರುತ್ತದೆ. ಕೇಸರಿ ಪಟ್ಟಿಯ ಮೇಲ್ಭಾಗದಲ್ಲಿ ಸಾಗವಾನಿ ಕಟ್ಟಿಗೆಯಿಂದ ತಯಾರಿಸಿದ ಟಾಗಲ್ ಅಳವಡಿಸಲಾಗುತ್ತದೆ. ಟಾಗಲ್ ಅಳವಡಿಕೆಗೆ ಕಲ್ನಾರಿನಿಂದ ತಯಾರಿಸಿದ ಹಗ್ಗವನ್ನು ಉಪಯೋಗಿಸಲಾಗುತ್ತದೆ.

ತ್ರಿವರ್ಣ ಧ್ವಜದ ಬಿಳಿ ಪಟ್ಟಿಯ ಮಧ್ಯದ ಎರಡೂ ಬದಿಯಲ್ಲಿ ನೀಲ ವರ್ಣದಲ್ಲಿ ಅಶೋಕ ಚಕ್ರವು ಸ್ಕ್ರೀನ್ ಪ್ರಿಟಿಂಗ್‌ದಿಂದ ಮುದ್ರಣವಾಗುತ್ತದೆ. ಅಶೋಕಚಕ್ರ ಮುದ್ರಣಗೊಂಡ ನಂತರ, ಧ್ವಜವನ್ನು ಒಣಗಿಸಲಾಗುತ್ತದೆ. ನಂತರ 140 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಕ್ಯೂರಿಂಗ್ ಯಂತ್ರದಲ್ಲಿ ಹಾಕಿ ಹೊರತೆಗೆಯಲಾಗುತ್ತದೆ. ಈ ರೀತಿ ಧ್ವಜ ತಯಾರಾಗಿ ಆಕಾಶದಲ್ಲಿ ಹಾರಾಟಕ್ಕೆ ಸಿದ್ಧವಾಗುವ ವೇಳೆಗೆ 18 ಬಾರಿ ಪರಿವೀಕ್ಷಣೆಗೆ ಒಳಗಾಗುತ್ತದೆ. ದೇಶದ ಎಲ್ಲ ರಾಜ್ಯಗಳಿಗೂ ಈ ಸಂಘದಲ್ಲಿ ಸಿದ್ಧಗೊಂಡ ರಾಷ್ಟ್ರಧ್ವಜಗಳು ಈ ಸಂಘದಿಂದ, ಖಾದಿ ಭವನ ಹಾಗೂ ಮಾರಾಟ ಮಳಿಗೆಗಳ ಮೂಲಕ ಪೂರೈಕೆಯಾಗುತ್ತವೆ. ಸಂಸದೀಯ ವ್ಯವಹಾರಗಳ ಸಚಿವಾಲಯ ಇಲ್ಲಿಂದ ಪಡೆದ ರಾಷ್ಟ್ರಧ್ವಜಗಳನ್ನು ರಕ್ಷಣಾ ಇಲಾಖೆ, ಅರೆ ಸೇನಾ ಪಡೆಗೆ ಕಳುಹಿಸಿದರೆ, ವಿದೇಶಾಂಗ ಸಚಿವಾಲಯ ಹೊರ ದೇಶಗಳ ಭಾರತೀಯ ರಾಯಭಾರಿ ಕಚೇರಿಗಳಿಗೆ ಕಳುಹಿಸುತ್ತದೆ.

ಈ ಸಂಸ್ಥೆಯಲ್ಲಿ ಒಂಭತ್ತು ಅಳತೆಯ ತ್ರಿವರ್ಣಧ್ವಜಗಳು ತಯಾರಾಗುತ್ತವೆ. ದೊಡ್ಡದಾದ ಅಂದರೆ 6300 ಮಿ.ಮಿ ಉದ್ದ ಹಾಗೂ 4200 ಮಿ.ಮಿ ಅಗಲದ ಧ್ವಜವಿದ್ದು, ಅತೀ ಚಿಕ್ಕದೆಂದರೆ 150 X 100 ಮಿ.ಮಿ ಗಾತ್ರದ್ದಾಗಿದೆ. ಈ




ಪೈಕಿ 1350 X 900 ಮಿ.ಮೀ ಹಾಗೂ 900 X 600 ಮಿ.ಮೀ ಅಳತೆಯ ಧ್ವಜಕ್ಕೆ ದೇಶಾದಂತ್ಯ ಹೆಚ್ಚಿನ ಬೇಡಿಕೆಗಳು ಬರುತ್ತವೆ. ಕರ್ನಾಟಕ ಸರ್ಕಾರದ ಆರ್‌ಡಿಪಿಆರ್ ಸಚಿವಾಲಯವು ಪ್ರತಿ ಗ್ರಾಮ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗಳಲ್ಲಿ 3 ರಿಂದ 4 ತಿಂಗಳಿಗೊಮ್ಮೆ ರಾಷ್ಟ್ರಧ್ವಜ ಬದಲಾಯಿಸುವದನ್ನು ಕಡ್ಡಾಯಗೊಳಿಸಿರುವದರಿಂದ ಈ ಸಂಸ್ಥೆಗಳು ವರ್ಷದಲ್ಲಿ ಕನಿಷ್ಠ 3 ರಾಷ್ಟ್ರಧ್ವಜವನ್ನು ಖರೀದಿಸಬೇಕಾಗುವದರಿಂದ ಬೇಡಿಕೆ ಹೆಚ್ಚಲಿದೆ ಎಂಬ ಆಶಯವನ್ನು ಸಂಘ ವ್ಯಕ್ತಪಡಿಸುತ್ತದೆ.

**ಸಂಘದಲ್ಲಿ ಸಿದ್ಧಗೊಳ್ಳುವ 9 ವಿವಿಧ ಧ್ವಜಗಳ ಅಳತೆ ಮಿ.ಮೀಗಳಲ್ಲಿ**

| | ಉದ್ದ | | ಅಗಲ |
|---|---|---|---|
| 1 | 6300 | X | 4200 |
| 2 | 3600 | X | 2400 |
| 3 | 2700 | X | 1800 |
| 4 | 1800 | X | 1200 |
| 5 | 1350 | X | 900 |
| 6 | 900 | X | 600 |
| 7 | 450 | X | 300 |
| 8 | 225 | X | 150 |
| 9 | 150 | X | 100 |

ಮಹಾತ್ಮಾ ಗಾಂಧೀಜಿಯವರ ತತ್ವಗಳನ್ನು ಆಚರಣೆ ತರುವ ಉದ್ದೇಶದಿಂದ



ಬೆಂಗೇರಿಯಲ್ಲಿರುವ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘವು ಸಮಾನ ಮನಸ್ಕ ಗಾಂಧಿವಾದಿಗಳ ಸಹಕಾರದಿಂದ ಹಿರಿಯ ಗಾಂಧಿವಾದಿ ದಿ. ವೆಂಕಟೇಶ ಮಾಗಡಿ ಅವರ ನೇತೃತ್ವದಲ್ಲಿ 1957 ರಲ್ಲಿ ಪ್ರಾರಂಭವಾಯಿತು. 17 ಎಕರೆ ವಿಸ್ತೀರ್ಣ ಹೊಂದಿರುವ ಸಂಘವು ತನ್ನ ವ್ಯಾಪ್ತಿಯಲ್ಲಿ 51 ಖಾದಿ ಗ್ರಾಮೋದ್ಯೋಗ ಸಂಘಗಳನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹೊಂದಿದೆ. ಸಂಯುಕ್ತ ಸಂಘದಿಂದ ಬಟ್ಟೆ ಶರ್ಟ್, ಟವೆಲ್, ಹೊದಿಕೆ ಹಾಗೂ ಅಲ್ಯೂಮಿನಿಯಮ್ ಪಾತ್ರೆ ಸಾಬೂನು, ಫಿನಾಯಿಲ್, ಊದಿನಕಡ್ಡಿ, ಕಬ್ಬಿಣದ ಮಂಚ, ಅಲ್ಮೇರಾ, ಜೇನುತುಪ್ಪ, ಕೈಯಿಂದ ಮಾಡಿದ ಕಾಗದ ಮುಂತಾದ ವಸ್ತುಗಳು ಕಳೆದ ಆರು ದಶಕಗಳಿಂದ ಇಲ್ಲಿ ತಯಾರಾಗುತ್ತಿವೆ. ಈ ಘಟಕದಲ್ಲಿ ರಾಷ್ಟ್ರಧ್ವಜ ತಯಾರಿಕೆ ಸಾಕಾರಗೊಂಡಿದ್ದು 2004 ರಲ್ಲಿ. ನಂತರ 2006 ರಲ್ಲಿ ಕೇಂದ್ರ ಸರ್ಕಾರದ ಆಧೀನ ಸಂಸ್ಥೆಯಾದ ಭಾರತೀಯ ಗುಣಮಟ್ಟ ಪ್ರಮಾಣ ಸಂಸ್ಥೆಯು ಧ್ವಜ ತಯಾರಿಕೆಗೆ ಅನುಮತಿ ನೀಡಿತು. ಅಲ್ಲಿಂದ ರಾಷ್ಟ್ರಧ್ವಜ ತಯಾರಿಸುವ ಪ್ರಕ್ರಿಯೆ ಅವ್ಯಾಹತವಾಗಿ ಈ ಸಂಸ್ಥೆಯಿಂದ ನಡೆಯುತ್ತಿದೆ.

2006 ರಿಂದ 2016 ರ ಆಗಸ್ಟ್ ಅಂತ್ಯದವರೆಗೆ 9.95 ಕೋಟಿ ರೂ. ಮೌಲ್ಯದ ವಿವಿಧ ಅಳತೆಯ 2.06 ಲಕ್ಷ ಧ್ವಜಗಳನ್ನು ಮಾರಾಟ ಮಾಡಿದೆ. ಪ್ರಸಕ್ತ (2016–17) ಅರ್ಧ ವರ್ಷದಲ್ಲೇ ದಾಖಲೆಯ 1.10 ಕೋಟಿ ರೂ. ಮೌಲ್ಯದ




12,000 ಧ್ವಜಗಳನ್ನು ಮಾರಾಟ ಮಾಡಿದೆ. ಕಳೆದ ಇಡೀ ವರ್ಷ (2015–16) ದಲ್ಲಿ 1.54 ಕೋಟಿ ಮೌಲ್ಯದ 22,60 ಧ್ವಜಗಳನ್ನು ಮಾರಾಟ ಮಾಡಲಾಗಿದೆ. ರಾಷ್ಟ್ರೀಯ ಖಾದಿ ಆಯೋಗವು ರಾಷ್ಟ್ರಧ್ವಜ ತಯಾರಿಕೆಗೆ 60 ಹೊಲಿಗೆ ಯಂತ್ರ ಬಾಯಿಲರ್ ಸೇರಿದಂತೆ ವಿವಿಧ ಯಂತ್ರಗಳ ಖರೀದಿಗೆ 52 ಲಕ್ಷ ರೂಗಳ ವಿಶೇಷ ಅನುದಾನ ನೀಡಿದೆ.ಒಟ್ಟಾರೆ ಈ ಸಂಸ್ಥೆ ಜನರಲ್ಲಿ ರಾಷ್ಟ್ರಾಭಿಮಾನ ಮೂಡಿಸುವ ಕಾರ್ಯದಲ್ಲಿ ತೊಡಗಿಕೊಂಡಿದೆ. ❑

## ಸೆಣಬಿಗೆ ಕಾಯಕಲ್ಪ

(39ನೇ ಪುಟದಿಂದ)

**ಜೆಪಿಎಂ ಕಾಯಿದೆಯಾಚೆಯ ನೋಟ**

ಸೆಣಬಿನ ಅವಕಾಶಗಳಿಗೆ ಕೊನೆಯೇ ಇಲ್ಲ. ತಂತ್ರಜ್ಞಾನ ಮತ್ತು ಉತ್ಪನ್ನಗಳಿವೆ. ಇಲ್ಲಿ ಎದ್ದು ಕಾಣುತ್ತಿರುವ ಕೊರತೆ ಎಂದರೆ ಈ ಉತ್ಪನ್ನಗಳನ್ನು ಅವುಗಳ ಸ್ಥಾನದಲ್ಲಿರಿಸಿ ಈ ವಲಯಕ್ಕೆ ಚಾಲನೆ ನೀಡಿ ಉತ್ತಮ ಮೌಲ್ಯದ ವಸ್ತುಗಳನ್ನು ಉತ್ಪಾದಿಸುವ ಮೂಲಕ ಹೆಚ್ಚಿನ ಆದಾಯ ಮೂಲ ಸೃಷ್ಟಿಸುವ ಉದ್ಯಮಶೀಲತೆ. ಉದಾಹರಣೆಗೆ ಬಾಂಗ್ಲಾದೇಶದಲ್ಲಿ ಸೆಣಬು ವಲಯ ತನ್ನ ಪಾಡಿಗೆ ತಾನು ಬೆಳೆಯಲು ಅವಕಾಶ ಮಾಡಿಕೊಟ್ಟಿದೆ. ಇಂತಹ ನೀತಿಯಿಂದಾಗಿ ಕಚ್ಚಾ ಸೆಣಬು ಉತ್ಪಾದನೆ ಮತ್ತು ರಫ್ತು ಬೆಳೆಯುತ್ತಿದೆ.


ಮಾರುಕಟ್ಟೆ ಸ್ಪರ್ಧೆಯಿಂದಾಗಿ ಬಾಂಗ್ಲಾದೇಶದಲ್ಲಿ ಸೆಣಬು ಕೈಗಾರಿಕೆ ಸ್ಪರ್ಧಾತ್ಮಕವಾಗಿದೆ. ಒಮ್ಮೆ ಅವರು ಒಂದು ಮಟ್ಟದಲ್ಲಿ ಸಾಧನೆ ಮಾಡಿದರೆ, ಬಾಂಗ್ಲಾದೇಶ ಸರ್ಕಾರ ಬೆಂಬಲಕ್ಕೆ ನಿಂತು ಪ್ಯಾಕೇಜಿಂಗ್ ಮಾಡುವುದನ್ನು ಕಡ್ಡಾಯ ಮಾಡುತ್ತದೆ ಎಂದು ಊಹಿಸಿಕೊಂಡರೆ, ಅದು ಉಳಿದ ಬೆಂಬಲವನ್ನು ಕೈಗಾರಿಕೆಗೆ ನೀಡುತ್ತದೆ. ಇದರಿಂದಾಗಿ ಖಾಸಗಿ ಸೆಣಬು ಮಿಲ್‌ಗಳು ಕೂಡಾ ಮಾರುಕಟ್ಟೆಯಲ್ಲಿ ಸ್ಪರ್ಧಿಸಬಹುದಾಗಿವೆ. ಭಾರತ ಸರಿಯಾಗಿ ಇದಕ್ಕೆ ವಿರುದ್ಧವಾದ ದಾರಿಯನ್ನು ಅನುಸರಿಸುತ್ತಿದೆ. ಜೆಪಿಎಂ ಕಾಯಿದೆ ಕೈಗಾರಿಕೆಗೆ ಸಗಟು ಬೆಂಬಲ ನೀಡುತ್ತಿದೆ: ಮಿಕ್ಕಿರುವುದನ್ನು ಇತರ ಉತ್ಪನ್ನಗಳಿಗೆ ನೀಡುತ್ತಿದೆ. ಕೈಗಾರಿಕೆ ತನ್ನ ಉಳಿವಿಕೆಗಾಗಿ ಹೆಚ್ಚು ಹೆಚ್ಚು ಕಾನೂನಿನ ಮೇಲೆ ಅವಲಂಬಿತವಾಗಿದೆ ಮತ್ತು ದರಗಳನ್ನು ಹೇರುವ ಆಡಳಿತ ಕ್ರಮದಿಂದಾಗಿ ಸ್ಪರ್ಧಾಕತೆಯನ್ನು ನಾಶ ಮಾಡಿದೆ. ಆದ್ದರಿಂದ ಜೆಪಿಎಂ ಕಾನೂನು ನೀಡುವ ರಕ್ಷಣೆಯನ್ನು ಹೊಸ ನೋಟದಲ್ಲಿ ನೋಡಲು ಸಮಯ ತೆಗೆದುಕೊಳ್ಳಬೇಕಾಗಿದೆ ಮತ್ತು ವಲಯದ ಬೆಳವಣಿಗೆ ಮತ್ತು ಸ್ಪರ್ಧಾತ್ಮಕತೆ ಪ್ರೋತ್ಸಾಹ ಆಳವಡಿಸಿಕೊಳ್ಳಲು ಒಂದು ಕ್ರಮವನ್ನು ಅನುಸರಿಸಬೇಕಾಗಿದೆ.

ಮೌಲ್ಯಾಧರಿತ ಸೆಣಬು ಉತ್ಪನ್ನಗಳನ್ನು ಹೆಚ್ಚಿಸುವುದು, ಸೆಣಬು ಮಿಲ್ ಕಾರ್ಮಿಕರ ಮತ್ತು ರೈತರ ಆದಾಯ ಹೆಚ್ಚಾಗುವಂತೆ ಉತ್ಪನ್ನ ವೈವಿಧ್ಯಮಯಗೊಳಿಸುವುದು ಮತ್ತು ಹೊಸ ಮಾರುಕಟ್ಟೆಗಳನ್ನು ಸೃಷ್ಟಿಸುವುದು ಅತ್ಯಗತ್ಯ. ಎಲ್ಲಿಯವರೆಗೆ ಭಾರತೀಯ ಸೆಣಬು ಕೈಗಾರಿಕೆ ಜೆಪಿಎಂ ಕಾನೂನಿಗಿಂತ ಆಚೆಗೆ ಮತ್ತು ಜಾಗತಿಕ ಸ್ಪರ್ಧೆಯತ್ತ ನೋಟ ಹರಿಸುವುದಿಲ್ಲವೋ, ಅಲ್ಲಿಯವರೆಗೆ ಇದು ಸಾಧ್ಯವಾಗುವುದಿಲ್ಲ. ಕೈಗಾರಿಕೆಯ ರೂಪಾಂತರ ಸಮಯದಲ್ಲಿ ಜೆಪಿಎಂ ಕಾನೂನಿನ ರಕ್ಷಣೆ ಅಗತ್ಯವಾಗಿದೆ.

ಕಾನೂನಿನಡಿಯಲ್ಲಿ ಮೀಸಲಾತಿ ಕ್ರಮೇಣವಾಗಿ ಕಡಿಮೆಯಾಗುವುದರ ಜೊತೆಗೆ ಕೈಗಾರಿಕೆ ಅಧುನೀಕರಣಕ್ಕೆ ಬೆಂಬಲ ಮತ್ತು ವೈವಿಧ್ಯತೆಯ ಸೆಣಬು ವಲಯವನ್ನು ಉಳಿಸಬಹುದಾಗಿದೆ. ಇದು ಅಗತ್ಯವಾಗಿದ್ದು, ಆದರೆ ಸದ್ಯ ಸಾಧ್ಯವಾಗಲಾರದು, ಕೈಗಾರಿಕೆಯಲ್ಲಿ ಸಾಕಷ್ಟು ಆಸಕ್ತಿಯಿರುವವರು ಜಾಗತಿಕ ಮಾರುಕಟ್ಟೆಯ ಮೇಲೆ ಪ್ರಭಾವ ಬೀರುವ ಪ್ರಯತ್ನದತ್ತ ಗಮನಹರಿಸಬೇಕು ಮತ್ತು ವಿವಿಧ ಮಾದರಿ ರಾಜ್ಯಗಳ ಬೆಂಬಲಕ್ಕೆ ಪ್ರಭಾವ ಬೀರಬೇಕು – ಅದು ಆಧುನೀಕರಣಕ್ಕೆ ಸಹಾಯಕವಾಗಿರಬೇಕು, ವೈವಿಧ್ಯತೆಯನ್ನು ಪ್ರೋತ್ಸಾಹಿಸು–ವಂತಿರಬೇಕು. ಇದು ಭಾರತೀಯ ಸೆಣಬು ತಯಾರಕರು ಜಾಗತಿಕವಾಗಿ ಸ್ಪರ್ಧಿಸುವಂತೆ ಮಾಡುತ್ತದೆ. ❑

# ಗಾಂಧಿ – ಚರಕ – ಸ್ವಾವಲಂಬನೆ

* ಡಾ. ಹೊ. ಶ್ರೀನಿವಾಸಯ್ಯ



"ಖಾದಿಯು ಬಹುದೊಡ್ಡ ಧ್ಯೇಯ ಸಾಧಿಸುತ್ತದೆ. ವರ್ಷದಲ್ಲಿ ಕನಿಷ್ಠ ನಾಲ್ಕು ತಿಂಗಳು ನಿರುದ್ಯೋಗಿಗಳಿಗೂ ಲಕ್ಷಾಂತರ ಜನರಿಗೆ ಅದು ಕೆಲಸ ಒದಗಿಸುತ್ತದೆ. ಚರಕವು ಅಸಂಖ್ಯ ಬಡ ಸ್ತ್ರೀಯರ ಗೌರವವನ್ನು ಉಳಿಸುತ್ತದೆ ಮತ್ತು ಹೆಚ್ಚಿಸುತ್ತದೆ".

– ಗಾಂಧೀಜಿ

ಮಹಾತ್ಮ ಗಾಂಧಿ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ತಂದು–ಕೊಟ್ಟರಲ್ಲದೆ ಸತ್ಯ ಮತ್ತು ಅಹಿಂಸೆ ಮೂಲಕ ಜಗತ್ತಿನಲ್ಲಿ ಶಾಂತಿ ಸ್ಥಾಪಿಸಿದರು. ಭಾರತದಲ್ಲಿ ಬಡತನ ನಿವಾರಣೆಗಾಗಿ, ಸ್ವಾವಲಂಬಿ ಬದುಕಿಗಾಗಿ ಹಗಲು ರಾತ್ರಿ ದುಡಿದರು. ಭಾರತ ದೇಶಕ್ಕೆ ಬ್ರಿಟಿಷರು ವ್ಯಾಪಾರಕ್ಕಾಗಿ ಬಂದವರು, ದೇಶವನ್ನು ಲೂಟಿ ಮಾಡಿದ್ದಲ್ಲದೆ ಭಾರತೀಯರ ಬಲಹೀನತೆಯನ್ನು ಅರಿತು ನಮ್ಮಲ್ಲಿಯೇ ದ್ವೇಷ ಬೆಳೆಸಿ ಆರ್ಥಿಕ ಸ್ವಾತಂತ್ರ್ಯವನ್ನು ಕಿತ್ತುಕೊಂಡರು. ಭಾರತೀಯ ವಸ್ತುಗಳಿಗೆ ಪ್ರಪಂಚದಾದ್ಯಂತ ಬೇಡಿಕೆ ಇದ್ದ ಕಾಲ ಒಂದಿತ್ತು.

ನಮ್ಮ ದೇಶದಲ್ಲಿ ಇಂಗ್ಲೀಷ್ ಭಾಷೆ, ಸಂಸ್ಕೃತಿಯನ್ನು ತಂದ ಮೆಕಾಲೆ 1832 ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣ ಜ್ಞಾಪಿಸಿಕೊಂಡರೆ ಆಶ್ಚರ್ಯವಾಗುತ್ತದೆ. ಅದರ ಸಾರಾಂಶ ಹೀಗಿದೆ "ನಾನು ಭಾರತ ದೇಶದ ತುಂಬಾ ಓಡಾಡಿದ್ದೇನೆ. ಆ ದೇಶ ಸಂಪದ್ಭರಿತವಾಗಿದೆ ಜನ ಸತ್ಯವಂತರು, ಬುದ್ಧಿವಂತರು, ಜ್ಞಾನವಂತರು, ಉತ್ತಮ ಸಂಸ್ಕೃತಿಯನ್ನು ಹೊಂದಿರುವರು ಎಲ್ಲದರಲ್ಲೂ ಸ್ವಾಭಿಮಾನಿಗಳು. ಇಂತಹವರನ್ನು ನಾವು ಆಳುವುದು ಕಷ್ಟ. ಇದಕ್ಕೆ ನಾನು ಒಂದು ಸಲಹೆ ಮಾಡುತ್ತೇನೆ. ಅವರ ಬೆನ್ನು ಮೂಳೆ ಮುರಿಯಿರಿ, ನಮ್ಮ ಭಾಷೆ, ವಸ್ತುಗಳು ಅವರಿಗಿಂತ ಉತ್ತಮ ಎಂಬ ಭಾವನೆ ಬರುವ ಹಾಗೆ ಮಾಡಿದರೆ, ಅವರು ಸುಲಭವಾಗಿ ಬ್ರಿಟಿಷರ ಗುಲಾಮರಾಗುತ್ತಾರೆ. ನಮ್ಮ ಅವಲಂಬಿಗಳಾಗುತ್ತಾರೆ."

ಆತನ ಭಾಷಣದಂತೆ, ನಾವು ಈ ದಿನ ಇಂಗ್ಲಿಷನ್ನು ನಮ್ಮ ಭಾಷೆಯನ್ನಾಗಿ ಮಾಡಿಕೊಂಡಿದ್ದೇವೆ. ಬಟ್ಟೆ ಮತ್ತು ವಸ್ತುಗಳು ಆ ದೇಶದಿಂದ ಆಮದು ಮಾಡಿಕೊಳ್ಳುತ್ತೇವೆ. ಅವರ ಸಂಸ್ಕೃತಿಯನ್ನು ನಮ್ಮ ಸಂಸ್ಕೃತಿಯನ್ನಾಗಿ ಮಾಡಿಕೊಂಡಿದ್ದೇವೆ. ಅವುಗಳಿಗೆ ಪೂರ್ಣ ರೀತಿಯಲ್ಲಿ ಗುಲಾಮರಾಗಿದ್ದೇವೆ.

ಗಾಂಧೀಜಿಯವರು, ನಮ್ಮ ದೇಶದ ರಾಜಕೀಯ ಗುರುಗಳು. ಗುರಿಯನ್ನು ಅರಿತು ಯಾರೇ ರಾಜ್ಯ ಆಳಿದರೂ, ನಾವು ಸ್ವತಂತ್ರವಾಗಿ ಬದುಕಬೇಕೆಂದು ಅರಿತು, ಆಹಾರ, ಬಟ್ಟೆಗಳನ್ನು ನಾವೇ ತಯಾರಿಸಿ ಸ್ವಾವಲಂಬಿಗಳಾಗಿ ಬದುಕಲು ದಾರಿ ತೋರಿಸಿದರು.

ನಮ್ಮ ಆಹಾರವನ್ನು ನಾವೇ ಬೆಳೆಯಬೇಕು. ನಮ್ಮ ಬಟ್ಟೆಯನ್ನು ನಾವೇ ಮಾಡಿಕೊಳ್ಳಬೇಕೆಂದು ತಿಳಿಸಿದರು. ಭಾರತದಲ್ಲೆಲ್ಲಾ ಸಂಚರಿಸಿದರು. ಅವರಿಗೆ ನಮ್ಮ ದೇಶದಲ್ಲಿ ಬಟ್ಟೆ ಮಾಡುವ ಯೋಚನೆ ಬಂದಾಗ ಅದೃಷ್ಟವಶಾತ್ ಹಿಂದಿನ ಕಾಲದಲ್ಲಿ ಬಟ್ಟೆ ಮಾಡಿಕೊಳ್ಳುತ್ತಿದ್ದ 'ಚರಕ' ಸಿಕ್ಕಿತು. ಹಿಂದಿನ ಕಾಲದವರೊಡನೆ ಚರ್ಚಿಸಿ, ಚರಕವನ್ನು ತಂದು ತಾವೂ ಕಲಿತರು, ಹಂಜಿ ಮಾಡುವುದರಿಂದ ನೇಯುವವರೆಗೆ ಅಭ್ಯಾಸ ಮಾಡಿದರು. ಇದು, ಸ್ವಾತಂತ್ರ್ಯ ಚಳವಳಿಗೆ ದಾರಿದೀಪವಾಯಿತು. ಚರಕದಿಂದ ಬಟ್ಟೆ ಮಾಡಿ, ಅದನ್ನೇ ಹೊದಿಕೆ ಆಗಿ ಉಪಯೋಗಿಸಿದರು. ಹೊರದೇಶದ ಬಟ್ಟೆ ಸುಟ್ಟು ಭಾರತದಲ್ಲಿ ತಯಾರಾದ ಖಾದಿಗೆ ಪ್ರಾಮುಖ್ಯತೆ ಕೊಟ್ಟರು. ಹತ್ತಿ ಇಂಗ್ಲೆಂಡಿಗೆ ಹೋಗಿ, ಅಲ್ಲಿ ಗಿರಣಿಗಳಲ್ಲಿ ಬಟ್ಟೆಯಾಗಿ ಭಾರತಕ್ಕೆ ಬರುತ್ತಿತ್ತು. ಚಳವಳಿ ಪರಿಣಾಮ ಹೊರದೇಶದ ಬಟ್ಟೆ ಆಮದು ನಿಂತಿತು. ಅಲ್ಲಿಯ ಗಿರಣಿಗಳನ್ನು ಮುಚ್ಚಬೇಕಾಯಿತು. ಅಲ್ಲಿಯ ಜನ ಕೆಲಸವಿಲ್ಲದೆ ನಿರುದ್ಯೋಗಿಗಳಾದರು. ಭಾರತದಲ್ಲಿ ಹಳ್ಳಿಯ ಜನ ವರ್ಷದಲ್ಲಿ 4 ತಿಂಗಳು ಬಿಡುವಿನ ದಿನಗಳಲ್ಲಿ ಖಾದಿ

* ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ (ರಿ), ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560 001. E-mail : gandhibhavanbangalore@gmail.com

ಬಟ್ಟೆ ತಯಾರು ಮಾಡಲು ವೇಳೆಯನ್ನು ಉಪಯೋಗಿಸಿಕೊಂಡು, ಬಡತನವನ್ನು ಕಡಿಮೆ ಮಾಡಲು ಉಪಯೋಗವಾಯಿತು.

ಖಾದಿ ಬಟ್ಟೆ ದೇಶದ ಉಡುಪಾಗಿ ಬೆಳೆಯಿತು. ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಅಹಿಂಸಾ ವಸ್ತ್ರವಾಯಿತು. ಖಾದಿಯನ್ನು ಬೆಳೆಸಲು ಗಾಂಧೀಜಿಯವರು ದೇಶದಲ್ಲೆಲ್ಲಾ ಪ್ರಚಾರ ಮಾಡಿದ್ದಲ್ಲದೆ, ಹಣ ಸಂಗ್ರಹಣೆ ಮಾಡಿದರು. ಖಾದಿ ಸ್ವಾತಂತ್ರ್ಯ ಹೋರಾಟದ ಚಿಹ್ನೆಯಾಯಿತು. ಖಾದಿ ಕೆಲಸ ಮಾಡಿದವರೆಲ್ಲಾ ಸ್ವಾತಂತ್ರ್ಯ ಹೋರಾಟಗಾರರೆಂದು ಗಾಂಧೀಜಿಯವರು ಘೋಷಿಸಿದರು. ಅವರ ದರ್ಶನಕ್ಕೆ ಬರಬೇಕಾದರೆ ಖಾದಿ ಬಟ್ಟೆ ಹಾಕಿರಬೇಕು. ಖಾದಿ ಬಟ್ಟೆ ಹಾಕಿಕೊಳ್ಳುವವರು ಎಂದರೆ ಸ್ವಾತಂತ್ರ್ಯ ಚಳವಳಿ ಎಂಬ ಭಾವನೆ ಬರುವ ಹಾಗೆ ಮಾಡಿದರು.

ಚರಕವು ವ್ಯಾಪಾರೀ ಯುದ್ಧದ ಸಂಕೇತವಾಗಲಿಲ್ಲ. ಶಾಂತಿ ಚಿಹ್ನೆ ವಿಶ್ವದ ಯಾವ ದೇಶದವರನ್ನೂ ಕೆಟ್ಟ ದೃಷ್ಟಿಯಿಂದ ನೋಡಲಿಲ್ಲ. ಸೌಹಾರ್ದ, ಸ್ವಾವಲಂಬನೆಯ ಸಂದೇಶವನ್ನು ಸಾರುತ್ತದೆ. ಬೇರೆಯವರ ರಕ್ಷಣೆ ಬೇಕಿಲ್ಲ. ತಮ್ಮತಮ್ಮ ಮನೆಗಳಲ್ಲಿ ಅಡಿಗೆ ಮಾಡಿ ಊಟ ಮಾಡುವಂತೆ ಮತ್ತು ಬಟ್ಟೆಗಾಗಿ ನೂಲನ್ನು ತೆಗೆಯುವುದು ಜನತೆಯ ಧಾರ್ಮಿಕ ಕರ್ತವ್ಯ. ನಿರ್ಧಾರ ಮಾತ್ರ ಅದಕ್ಕೆ ಬೇಕು. ಗಾಂಧಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಖಾದಿ ಬೆಳೆಸಲು ಪಣತೊಟ್ಟರು. ಚರಕವನ್ನು ತಿರುಗಿಸುವಾಗ ಏಕಾಗ್ರತೆ ಬರುತ್ತದೆ ಎಂದರು. ಅದರ ಪ್ರತಿಯೊಂದು ಸುತ್ತಿನಲ್ಲೂ ಶಾಂತಿ ಸೌಹಾರ್ದತೆ ಪ್ರೇಮಗಳ ಧಾರೆ ಹರಿಯುತ್ತದೆ ಎಂದರು. ಗಾಂಧೀಜಿಯವರು ಮೊದಲು ಮಾಡಿ ತೋರಿಸಿದರು, ನೀವು ಮಾಡಿ ಎಂದು ಯಾವಾಗಲೂ ಹೇಳುತ್ತಿರಲಿಲ್ಲ. "ನನ್ನ ಜೀವನವೇ ನನ್ನ ಸಂದೇಶ" ಎಂದು ಧೈರ್ಯವಾಗಿ ಹೇಳಿದರು. ಜನತೆಗೆಂದು ಹೃದಯದಲ್ಲಿ ಬೇರೂರಿದ ಸರಳತೆಯನ್ನು ಆದರ್ಶವಾಗಿಟ್ಟುಕೊಂಡು ಅದಕ್ಕೆ ಅನುಗುಣವಾಗಿ ನಡೆದುಕೊಂಡರು. ಪ್ರಬಲ ರಾಷ್ಟ್ರಗಳು ತಮ್ಮ ಸೈನ್ಯ ಬಲದಿಂದ, ತ್ಯಾಗದಿಂದ, ದುರ್ಬಲ ರಾಷ್ಟ್ರಗಳನ್ನು ರಕ್ಷಿಸಬಹುದು. ಚರಕದ ಸಂಪೂರ್ಣ ವಿಜಯದಿಂದ ಅಂತಹ ಬದಲಾವಣೆ ಸಾಧ್ಯ ಎಂದರು ಗಾಂಧೀಜಿ. ಅನ್ನ ಬಟ್ಟೆಗಳ ವಿಷಯದಲ್ಲಿ ಸ್ವಯಂ ಪೂರ್ಣವಾದ



ಹೊರಗಿನ ಅವಶ್ಯಕತೆ ಅಗತ್ಯತೆಗಳಿಗೆ ಬಲಿ ಬೀಳದ ಭಾರತ ಇಂತಹ ಸಂದೇಶವನ್ನು ಸಾರಬಹುದು ಎಂದು ಗಾಂಧೀಜಿ ಘೋಷಿಸಿದರು. ಗಾಂಧೀಜಿಯವರು ಮಧುರೆಯಲ್ಲಿ ಇದ್ದಾಗ 1920 ರಲ್ಲಿ ರೈಲುಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಒಬ್ಬ ಹೆಣ್ಣು ಮಗಳು ಅರ್ಧ ಸೀರೆಯುಟ್ಟು, ಅದೇ ಸೀರೆಯ ಮತ್ತೊಂದು ಅರ್ಧ ಭಾಗ ಬಿಸಿಲಿಗೆ ಒಣಗಲು ಒಂದು ಮರಕ್ಕೆ ಕಟ್ಟಿದ್ದ ದೃಶ್ಯ ನೋಡಿದರು. ಅದನ್ನು ಕಂಡು ಗಾಂಧೀಜಿ ತನ್ನ ಜೊತೆಯಲ್ಲಿ ಇದ್ದವರನ್ನು ಕೇಳಿದರು "ಇದು ಏತಕ್ಕೆ ಕಟ್ಟಿದ್ದಾಳೆ" ಎಂದು, ಆತ ಹೇಳಿದ "ಆ ಹೆಂಗಸಿಗೆ ಇರುವುದು ಒಂದೇ ಸೀರೆ, ಅರ್ಧ ಒಗೆದು ಅರ್ಧ ಉಟ್ಟಿದ್ದಾಳೆ". ಗಾಂಧೀಜಿಯವರು ವಾಪಸ್ ಕೊಠಡಿಗೆ ಬಂದ ತಕ್ಷಣ ತಲೆ ಬೋಳಿಸಿಕೊಂಡರು. ಅವರ ಮಿತ್ರರಿಗೆ ಹೇಳಿ ಎರಡು ತುಂಡು ಬಟ್ಟೆ ತರಿಸಿಕೊಂಡರು. ಅವರು ಉಡುತ್ತಿದ್ದ ಗುಜರಾತಿ ಉಡುಪನ್ನು ಪೂರ್ಣವಾಗಿ ತೆಗೆದು ಒಂದು ತುಂಡು ಬಟ್ಟೆ ಉಟ್ಟರು. ಇನ್ನೊಂದು ಬಟ್ಟೆಯನ್ನು ಹೊದ್ದುಕೊಂಡರು. ಸಮಾರಂಭಕ್ಕೆ ಹೋಗಲು ಹೊರಗೆ ಬಂದಾಗ ಅವರ ಗುರುತು ಸಿಗಲಿಲ್ಲ. ಅಲ್ಲಿದ್ದವರು ತಕ್ಷಣ ಕೇಳಿದರು "ಇದೇಕೆ ಇಷ್ಟು ಬದಲಾವಣೆ" ಎಂದರು. ಆಗ ಗಾಂಧೀಜಿಯವರು ಭಾರತದಲ್ಲಿ ಎಲ್ಲಿಯವರೆಗೆ ಒಬ್ಬ ಹೆಣ್ಣು ಮಗಳಿಗೆ ಒಂದೇ ಸೀರೆಯು ಇರುತ್ತದೆಯೊ ಅಲ್ಲಿಯವರೆಗೆ ಇದೇ ಉಡುಗೆ ಎಂದು ಸಭೆಗೆ ಹೊರಟರು. ಅನೇಕರಿಗೆ ಗುರುತು ಸಿಗಲಿಲ್ಲ. ಕೇಳಲು ಹೆದರಿಕೆ, ಕೊನೆಯ ಉಸಿರು ಇರುವವರೆಗೆ ಆ ಉಡುಗೆಯನ್ನು ಉಟ್ಟಿದ್ದರು. ಅದೇ ಉಡುಗೆ ಸರಳತೆಗೆ ಮಾರ್ಗದರ್ಶನವಾಯಿತು. ಇಂಗ್ಲೆಂಡಿಗೆ ಹೋದಾಗ ಅಲ್ಲಿನ ರಾಣಿಯನ್ನು, ಚಕ್ರಾಧಿಪತಿಯನ್ನು ನೋಡಲು ಅದೇ ಉಡುಪಿನಲ್ಲಿ ಹೋದರು. ಯಾರೋ ಕೇಳಿದ್ದಕ್ಕೆ ಹೇಳಿದರು, ಅವರು ಮೈಮೇಲೆ ನಾಲ್ಕು ಜನಕ್ಕೆ ಆಗುವಷ್ಟು ಬಟ್ಟೆಯನ್ನು ಉಟ್ಟಿದ್ದಾರೆ ಎಂದರು.

ಅವರು ಸರಳವಾಗಿ ಇರಬೇಕೆಂದು ತೋರಿಸಿದ್ದಾರೆ. ನಮ್ಮಲ್ಲಿ ಜನ ಸೆಕೆಯಲ್ಲೂ ಉಲ್ಲನ್ ಸೂಟ್ ಮತ್ತು ಟೈ ಹಾಕುವ ಜನರಿದ್ದಾರೆ. ಖಾದಿ ತೊಟ್ಟಾಗ ದೇಶದ ಭಕ್ತಿ; ನಮ್ಮ ದೇಶದ್ದು ಎಂಬ ಭಾವನೆ ಬರುತ್ತದೆ.

ಗಾಂಧೀಜಿಯವರು ಇಂಗ್ಲೆಂಡಿಗೆ ಹೋಗಿದ್ದಾಗ ಭಾರತಕ್ಕೆ ಬಟ್ಟೆ ಕೊಡುತ್ತಿದ್ದ ಗಿರಣಿಗಳನ್ನು ನೋಡಲು ಹೋದರು. ಸಾವಿರಾರು ಕೆಲಸಗಾರರು ಗಾಂಧೀಜಿಯವರನ್ನು ನೋಡಲು ಬಂದಿದ್ದರು ಎಲ್ಲರೂ ಘೋಷಣೆ ಕೂಗಿದರು. ಆದರೆ ಗಾಂಧೀಜಿ ನಗುತ್ತಲೇ ಇದ್ದರು. ನಿಮ್ಮ ಸ್ವದೇಶಿ ಬಟ್ಟೆಯ ಉತ್ಪಾದನೆ ಪ್ರಾರಂಭಿಸಿದ ಮೇಲೆ (ಅಂದರೆ ಖಾದಿ) ಇಲ್ಲಿ ಜನ ನಿರುದ್ಯೋಗಿಗಳಾಗಿದ್ದಾರೆ ಎಂದು ಘೋಷಣೆ ಮಾಡಿದರು. ಗಾಂಧೀಜಿಯವರ ಕಣ್ಣಿನಲ್ಲಿ ನೀರು ಬಂತು. ಆಗ ಅಲ್ಲಿಯ ನಾಯಕ ಕೇಳಿದ "ಏಕೆ ಅಳುತ್ತಿದ್ದೀರಿ" ಎಂದು ಆಗ ಅವರು ಹೇಳಿದರು "ನಿಮ್ಮಲ್ಲಿ ಸಾವಿರಾರು ಜನ ನಿರುದ್ಯೋಗಿಗಳಿದ್ದಾರೆ ಆದರೆ ಭಾರತದಲ್ಲಿ ಲಕ್ಷಾಂತರ ಜನ ನಿರುದ್ಯೋಗಿಗಳು ಹೊಟ್ಟೆಗಿಲ್ಲದೆ ಸಾಯುತ್ತಿದ್ದರು. ಈಗ ಅವರ ಮನೆಯಲ್ಲಿ ಬಟ್ಟೆ ಕೊಡಿಸಲು ಕಾಸು ಸಂಪಾದನೆ ಮಾಡಿ ಬದುಕುತ್ತಿದ್ದಾರೆ. ಅಲ್ಲಿನ ಪರಿಸ್ಥಿತಿ ಜ್ಞಾಪಕಕ್ಕೆ ಬಂತು ಎಂದರು. ಆಗ ನಾಯಕ ನಿಂತು ಹೇಳಿದ "ನೀವು ಮಾಡಿದ್ದು ತಪ್ಪೇನೂ ಇಲ್ಲ" ಕೆಲಸಗಾರರಿಗೆ ಉದ್ಯೋಗ ಸಿಕ್ಕಿತಲ್ಲ. ನಿಮ್ಮ ದೇಶದಲ್ಲಿ ಇದ್ದರೆ ನಾನೂ ಅದನ್ನೇ ಮಾಡುತ್ತಿದ್ದೆ ಎಂದ. ಆಗ ಅಲ್ಲಿ ಎಲ್ಲರೂ ಗಾಂಧೀಜಿಯವರಿಗೆ ಜಯಕಾರ ಕೂಗಿದರು. ಅವರು ಗಾಂಧೀಜಿಯವರನ್ನು ದ್ವೇಷಿಸಲಿಲ್ಲ, ಇದು ನಿಜವಾದ "ಅಹಿಂಸಾ" ನಡವಳಿಕೆ. ಎರಡೂ ಕಡೆ ಸಮಾಧಾನ. ಯಾರೂ ಯಾರನ್ನೂ ದ್ವೇಷಿಸಲಿಲ್ಲ. ಹಾಗೆ ಖಾದಿ ರಾಷ್ಟ್ರದ ವಸ್ತ್ರವಾಯಿತು, ಖಾದಿ ಧರಿಸಿದವರು ದೇಶಪ್ರೇಮಿಯಾದರು, ಆ ಕ್ಷೇತ್ರದಲ್ಲಿ ಕೆಲಸ ಮಾಡುವ ಸ್ವಾತಂತ್ರ್ಯ ಹೋರಾಟಗಾರನಾದ. ಅಂದಿನ ದಿನ ಖಾದಿ ಟೋಪಿ ಹಾಕಿದವರು ಪೊಲೀಸ್‌ನಿಂದ ಏಟು ತಿನ್ನಬೇಕಾಗಿತ್ತು. ಆದರೆ ಈಗ ಅದಕ್ಕೆ ಗೌರವ. ಇಂಗ್ಲೆಂಡಿನಲ್ಲಿ ದುಂಡು ಮೇಜಿನ ಸಭೆಗೆ ಗಾಂಧೀಜಿ ಅದೇ ಉಡುಪಿನಲ್ಲಿ ಹೋಗಿದ್ದರು. ಮಿಲ್ಲುಗಳು ಬರುವುದಕ್ಕೆ ಮುಂಚೆ ದೇಶದ ಎಲ್ಲಾ ಕಡೆ ಚರಕದ ರೀತಿಯ ಕೈ ಯಂತ್ರಗಳು ಇದ್ದವು. ಅದರಿಂದ ಸ್ವದೇಶದ ಬಟ್ಟೆ ಮಾಡಿಕೊಳ್ಳುತ್ತಿದ್ದರು. ಅದು

ಭಾರತದಲ್ಲೂ ಇತ್ತು. ಇತ್ತೀಚಿನವರೆಗೆ ಹಳ್ಳಿಗಳಲ್ಲಿ ಕುರಿ ಉಣ್ಣೆ ಮತ್ತು ಹತ್ತಿಯಿಂದ ಬೇಕಾದ ಹೊದಿಕೆ ಮಾಡಿಕೊಳ್ಳುತ್ತಿದ್ದರು. ಕುರಿಗಳಿರುವವರು ಉಣ್ಣೆಯನ್ನು ಕತ್ತರಿಸಿ ನೇಯುವವರಿಗೆ ಕೊಡುತ್ತಿದ್ದರು. ಅವರು ಅದರಿಂದ ದಾರ ಮಾಡಿ ನೇಯುವವರಿಗೆ ಕೊಡುತ್ತಿದ್ದರು. ಅವರು ಬಟ್ಟೆ ನೇಯ್ದು ಕೊಡುತ್ತಿದ್ದರು, ಅದಕ್ಕೆ ಭತ್ತ, ರಾಗಿಯನ್ನು ಕೂಲಿ ರೂಪದಲ್ಲಿ ಕೊಡುತ್ತಿದ್ದರು.

ನಾನು 1954 ರಲ್ಲಿ ಜರ್ಮನಿಗೆ ಹೋದಾಗ ಖಾದಿಯನ್ನು ಹಾಕಿಕೊಂಡು ಹೋದೆ. ಆಗ ಒಂದು ದಿನ ನನ್ನ ಜರ್ಮನಿ ಸ್ನೇಹಿತರು ಮನೆಗೆ ಊಟಕ್ಕೆ ಕರೆದರು. ಅವರ ಪತ್ನಿಯ ಪರಿಚಯವಾಯಿತು ನನ್ನ ಬಟ್ಟೆಯನ್ನು ನೋಡಿ, ನಿಮ್ಮ ಬಟ್ಟೆ ಏಕೆ ಇಷ್ಟು ದಪ್ಪ ಇದೆ ಎಂದು ಪ್ರಶ್ನಿಸಿದಳು. ಅದು ಖಾದಿಯ ದಾರದಿಂದ ತಯಾರಿಸಿದೆ ಎಂದು ವಿವರಿಸಿದೆ. ಅವಳು ಅದು ಸರಿ ಎಂದು ತಕ್ಷಣ ಎದ್ದು ಹೋಗಿ ಅವಳ ತಾಯಿ ನೂತ, ನೇಯ್ದ ಬಟ್ಟೆ ತುಂಡನ್ನು ತಂದಳು, ನಗುನಗುತ್ತಾ ಹೇಳಿದಳು ಇದು ನನ್ನ ತಾಯಿ ನೂತು, ನೇಯ್ದ ಬಟ್ಟೆ, ಇದನ್ನು ಅವರು ಉಪಯೋಗಿಸುತ್ತಿದ್ದರು ನನಗೂ ಆನಂದವಾಯಿತು. ಅದು ಜರ್ಮನಿಯ ಖಾದಿ ಬಟ್ಟೆ. ಗಾಂಧೀಜಿಯವರು ಚರಕವನ್ನು ಸ್ವಾತಂತ್ರ್ಯದ ಚಿನ್ಹೆಯನ್ನಾಗಿ ಉಪಯೋಗಿಸಿದರು. ಆಗಿನ ಕಾಂಗ್ರೆಸ್ ಸಭಾ ಭವನದಲ್ಲಿ ಚಿಹ್ನೆಯಾಗಿ ಉಪಯೋಗಿಸಿದರು. ಗಾಂಧೀಜಿ ಸುಮ್ಮನೆ ಕುಳಿತಿರುತ್ತಿರಲಿಲ್ಲ, ಯಾರೇ ಬರಲಿ ಚರಕದಿಂದ ನೂಲು ತೆಗೆಯುತ್ತಲೇ ಮಾತನಾಡುತ್ತಿದ್ದರು. ಒಂದು ನಿಮಿಷ ಕೂಡ ಹಾಳು ಮಾಡುತ್ತಿರಲಿಲ್ಲ. ಯಾರಾದರೂ ಸಂಭಾಷಣೆಗೆ ಬಂದರೆ ನೂಲು ತೆಗೆಯುತ್ತಲೇ ಮಾತನಾಡುತ್ತಿದ್ದರು. ರೈಲಿನಲ್ಲಿ ಪ್ರಯಾಣ ಮಾಡುವಾಗಲೂ ಕೈಯಿಂದ ದಾರ ತೆಗೆಯುತ್ತಿದ್ದರು, ಇನ್ನೊಬ್ಬರನ್ನು ನೀವು ಹೀಗೆ ಮಾಡಿ ಎಂದು ಕೇಳಲಿಲ್ಲ. ಮಕ್ಕಳು ಅವರನ್ನು ಕಾಣಲು ಬಂದರೆ ಅವರ ಬಟ್ಟೆ ವಿಚಾರ ಕೇಳುತ್ತಿದ್ದರು. ಜೊತೆಗೆ ಮುಂದಿನ ಸಾರಿ ಬಂದಾಗ ಖಾದಿ ಬಟ್ಟೆ ಹಾಕಿಕೊಂಡು ಬರಬೇಕೆಂದು ಹೇಳುತ್ತಿದ್ದರು. ಅದರ ಮಹತ್ವವನ್ನು ತಿಳಿಸುತ್ತಿದ್ದರು. ಭಾರತದ ಯಾವ ಸಮಾರಂಭಕ್ಕಾದರೂ ಕರೆದ ತಕ್ಷಣ ಬರುತ್ತಿದ್ದರು.

ಬೆಂಗಳೂರಿನ ಕೋಟೆಯಲ್ಲಿ ಖಾದಿ ಭಂಡಾರ ಆರಂಭಿಸಲು ಆಹ್ವಾನಿಸಿದಾಗ



ಒಪ್ಪಿ ಬಂದರು. ಬಂದ ತಕ್ಷಣ ಬಿಲ್ಲಿನ ಪುಸ್ತಕ ಕೇಳಿ ತೆಗೆದುಕೊಂಡರು. ಕತ್ತರಿ ಹಿಡಿದುಕೊಂಡು ಪ್ರಾರಂಭ ಮಾಡಿ ಯಾರ್ಯಾರಿಗೆ ಎಷ್ಟು ಬಟ್ಟೆಬೇಕು ಕತ್ತರಿಸಿ ಬಿಲ್ಲು ಹಾಕುತ್ತೇನೆಂದು ಹೇಳಿದರು ಇದನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು. ಉದ್ಘಾಟನೆ ಸಮಾರಂಭದ ಆಯಿತು ಎಂದರು. ತಕ್ಷಣ ಎಲ್ಲರೂ ಬಟ್ಟೆಯನ್ನು ಕೊಂಡರು. ಆಗ ಗಾಂಧೀಜಿ ಕತ್ತರಿಸಿ, ಬಿಲ್ಲು ಹಾಕಿ ಮ್ಯಾನೇಜರ್‌ಗೆ ಕೊಟ್ಟರು. ಖಾದಿ ಬಟ್ಟೆ ಮಹತ್ವದ ವಿಚಾರದ ಮಾತನ್ನು ಹೇಳಿ ಹೊರಟೇಬಿಟ್ಟರು.

ಖಾದಿಯ ಬಗ್ಗೆ ಗಾಂಧೀಜಿಯವರ ಮಾತನ್ನು ಕೇಳಬೇಕು. "ಖಾದಿಯು ಬಹುದೊಡ್ಡ ಧ್ಯೇಯ ಸಾಧಿಸುತ್ತದೆ. ವರ್ಷದಲ್ಲಿ ಕನಿಷ್ಠ ನಾಲ್ಕು ತಿಂಗಳು ನಿರುದ್ಯೋಗಿಗಳಿಗೂ ಲಕ್ಷಾಂತರ ಜನರಿಗೆ ಅದು ಕೆಲಸ ಒದಗಿಸುತ್ತದೆ. ನೂಲುವುದರಿಂದ ದೊರೆಯುವ ಉತ್ಪನ್ನವನ್ನು ಬಿಟ್ಟರೂ ಆ ಕೆಲಸ ಅವರಿಗೆ ಪ್ರತಿಫಲವಾಗಿ ಪರಿಣಮಿಸುತ್ತದೆ. ಯಾಕೆಂದರೆ ಲಕ್ಷಾಂತರ ಜನ ನಿರುದ್ಯೋಗಿಗಳಾಗಿಬಿಟ್ಟಿದ್ದಾರೆ. ಅವರು ಆಧ್ಯಾತ್ಮಿಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಸಾಯುತ್ತಾರೆ. ಚರಕವು ಅಸಂಖ್ಯ ಬಡ ಸ್ತ್ರೀಯರ ಗೌರವವನ್ನು ಉಳಿಸುತ್ತದೆ ಮತ್ತು ಹೆಚ್ಚಿಸುತ್ತದೆ. ಆದುದರಿಂದ ಗಿರಣಿ ಬಟ್ಟೆಯನ್ನು ಪುಕ್ಕಟೆಯಾಗಿ ಕೊಟ್ಟರೂ ಜನರು ತಮ್ಮ ಒಳಿತಿಗಾಗಿ ಅದನ್ನು ಸ್ವೀಕರಿಸಬಾರದು. ಅವರ ಪರಿಶ್ರಮದ ಫಲವಾದ ಖಾದಿಯಿಂದಲೇ ಅವರ ಕ್ಷೇಮ". ಈ ಮಾತು ಸೂಕ್ತ ಮತ್ತು ಸತ್ಯ, ನಾನು ಹಿಂದೆ ಹುಬ್ಬಳ್ಳಿಯ ಖಾದಿ ಉತ್ಪನ್ನ ಕ್ಷೇತ್ರಕ್ಕೆ ಭೇಟಿ ಕೊಟ್ಟಾಗ ಅಲ್ಲಿ ಒಬ್ಬಳು 75–76 ವರ್ಷದ ಮುದುಕಿ ದಾರ ನೂಲುತ್ತಿದ್ದಳು. ಆಗ ಆಕೆಗೆ "ನಿನ್ನ ವಯಸ್ಸಿಗೆ ಸರ್ಕಾರ ಪೆನ್ಷನ್ ಕೊಡುತ್ತದಲ್ಲ ನೀನು ಏಕೆ ಇಲ್ಲಿ ದುಡಿಯಬೇಕು" ಎಂದು ಕೇಳಿದೆ. ಆಕೆಯ ಉತ್ತರವೇನು ಗೊತ್ತಾ? "ಸ್ವಾಮಿ, ಸ್ವತ: ಮಾರಾಟ ಮಾಡಿ ಸ್ವಾವಲಂಬಿಗಳಾಗಿದ್ದೇವೆ. ಸರ್ಕಾರ ಕೊಡುವ ಭಿಕ್ಷೆ ತೆಗೆದುಕೊಂಡು, ಬದುಕಬೇಕಾ? ಅವರ ಹಂಗು ಬೇಡ ಬುದ್ಧಿ" ಎಂದು ನನಗೆ ಕೆನ್ನೆಗೆ ಹೊಡೆದಹಾಗೆ ಹೇಳಿದಳು.

ಒಬ್ಬ ಪಂಚಾಯಿತಿ ಅಧ್ಯಕ್ಷೆಯಾಗಿದ್ದ ಹೆಣ್ಣು ಮಗಳು ಮಗ್ಗದಲ್ಲಿ ಬಟ್ಟೆ ನೇಯುತ್ತಿದ್ದಳು ಆಕೆಯನ್ನು ಕೇಳಿದೆ" ನೀವು ಪಂಚಾಯಿತಿ ಅಧ್ಯಕ್ಷರು, ಎಲ್ಲರೂ ಕಾರಿನಲ್ಲಿ ಓಡಾಡಿದರೆ "ನೀವು ಬಟ್ಟೆಯನ್ನು ನೇಯುತ್ತೀರಲ್ಲ" ಎಂದೆ. ಆಕೆಯ ಉತ್ತರ "ಹೀಗಿತ್ತು" ರಾಯರೇ; ನನಗೆ ಗಂಡ ಮತ್ತು ಇಬ್ಬರು ಮಕ್ಕಳು ಇದ್ದಾರೆ. ಅವರು ಅವರವರ ಕೆಲಸ ಮಾಡುತ್ತಾರೆ. ನಾನು ಮನೆ ಸಂಸಾರ ನೀಗಲು ದುಡಿಯುತ್ತಾ ಆನಂದವಾಗಿದ್ದೇನೆ. ಪಂಚಾಯಿತಿ ಅಧ್ಯಕ್ಷರ ಕೆಲಸ ಎರಡೂವರೆ ವರ್ಷ; ಆಮೇಲೆ? ದುಡಿಯುತ್ತಿರಬೇಕು. ಇಲ್ಲಿ ಸಾಕಾದರೆ ಮನೆಗೆ ಹೋಗಿ ಅಡಿಗೆ ಮಾಡಿ ಊಟ ಮಾಡುತ್ತೇನೆ, "ಆನಂದವಾಗಿ ಇದ್ದೇನೆ" ಎಂದು ಹೇಳಿದಾಗ ನನಗೆ ಸಂತಸವಾಯಿತು. ಆಕೆಯನ್ನು ಬೆಂಗಳೂರಿಗೆ ಕರೆದು ಗಾಂಧಿ ಭವನದಲ್ಲಿ ಸನ್ಮಾನ ಮಾಡಿದೆವು. ಬೆಂಗಳೂರಿನಲ್ಲಿ ಆಗಿದ್ದರೆ ಸ್ಥಿತಿಯೇ ಬೇರೆ? ಖಾದಿಯ ಉತ್ಪಾದನೆಯಲ್ಲಿ ತೃಪ್ತಿಯಿದೆ ಎಂದು ತೋರಿಸುತ್ತದೆ. ಈ ಬಗ್ಗೆ ಬರೆಯುತ್ತ ಹೋದರೆ ಕೊನೆಯಿಲ್ಲ. ಬೆಂಗಳೂರಿನ ನಮ್ಮ ಬಿ.ಇ.ಎಸ್., ಶಾಲೆಯಲ್ಲಿ 1800 ಮಕ್ಕಳು 60 ಜನ ಶಿಕ್ಷಕರು ಮತ್ತು 6 ಜನ ಆಯಾಗಳಿದ್ದಾರೆ. ಬುಧವಾರ ಮತ್ತು ಶನಿವಾರ ಎಲ್ಲ ಮಕ್ಕಳು ಖಾದಿ ಬಟ್ಟೆ ತೊಟ್ಟು ಬರುತ್ತಾರೆ. ಉಪಾಧ್ಯಾಯಿನಿಯರು, ಆಯಾಗಳು ಎರಡು ದಿನವೂ ಖಾದಿ ಸೀರೆ ಉಟ್ಟು ಬರುತ್ತಾರೆ. ಇದು ಹೆಮ್ಮೆಯ ವಿಷಯ. ಶ್ರೀಯುತ ಪಾಟೀಲ ಪುಟ್ಟಪ್ಪನವರು ಇದನ್ನು ಉದ್ಘಾಟಿಸಿದರು. ನಂತರ ಅವರ ಕಾನೂನು ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ತಿಳಿಸಿದರು. ಕುಲಪತಿಗಳಿಂದ ಜವಾನನವರೆಗೆ ಖಾದಿ ತೊಡುವುದಲ್ಲದೆ ಎಲ್ಲಾ ಕಾನೂನು ಕಾಲೇಜುಗಳಲ್ಲೂ ಸೋಮವಾರ ಖಾದಿ ಬಟ್ಟೆ ತೊಡುತ್ತಾರೆ. ಈಗ ಖಾದಿಗೆ ಹೆಚ್ಚು ಬೇಡಿಕೆ ಬರುತ್ತಿದೆ. ಅನೇಕ ಶಾಲೆಗಳಲ್ಲಿ ವಾರಕ್ಕೆ ಒಂದು ದಿನ ಖಾದಿ ಬಟ್ಟೆ ಹಾಕಲು ಪ್ರಯತ್ನಿಸುತ್ತಿದ್ದಾರೆ. ಈ ವಿಚಾರವನ್ನು ಪ್ರಧಾನ ಮಂತ್ರಿಗಳಿಗೆ ತಿಳಿಸಿ, ಎಲ್ಲ ಸರ್ಕಾರಿ ಶಾಲೆಗಳಲ್ಲಿ ವಾರಕ್ಕೆ ಒಂದು ದಿನ ಖಾದಿ ಹಾಕುವಂತೆ ಕೇವಲ ಒಂದು ಪತ್ರ ಬರೆದೆ. ಅದನ್ನು ಅವರು ಕೇಂದ್ರ ಸರ್ಕಾರದ ಶಾಲಾ ಮಂತ್ರಿಗಳಿಗೆ ಕಳುಹಿಸಿ ಕ್ರಮತೆಗೆದುಕೊಳ್ಳಲು ಪತ್ರ ಬರೆದಿದ್ದಾರೆ. ಹೀಗೆ ಖಾದಿಯಲ್ಲಿ ಎಲ್ಲರೂ ತೊಡಗಿದರೆ ಭಾರತದಲ್ಲಿ ಬಡತನ ಮಾಯವಾಗುತ್ತದೆ. ❑

# ಮೈಸೂರು ರೇಷ್ಮೆಯ ನವಿರು

* ನೀಲಾ ಮಂಜುನಾಥ್



ಇಡೀ ದೇಶದಲ್ಲಿ ಕೆಎಸ್ಐಸಿ, ನೂಲಿನಿಂದ ನೇಯ್ಗೆವರೆಗೆ ರೇಷ್ಮೆ ಉತ್ಪಾದನೆಯ ಸಂಪೂರ್ಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಮತ್ತು ಪರಂಪರೆಯನ್ನು ಅನುಸರಿಸುತ್ತಿರುವ ಏಕೈಕ ಸಂಸ್ಥೆಯಾಗಿದೆ.

ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿ., (ಕೆಎಸ್ಐಸಿ) 1980ರಲ್ಲಿ ಕಂಪನಿಗಳ ಕಾಯಿದೆ ಅಡಿಯಲ್ಲಿ ಸ್ಥಾಪನೆಗೊಂಡಿತು. ಆದರೆ ಅದರ ಉತ್ಪನ್ನವಾದ ಮೈಸೂರು ರೇಷ್ಮೆಯ ಇತಿಹಾಸ ಅದಕ್ಕಿಂತ ಬಹಳ ಹಳೆಯದು, ಟಿಪ್ಪು ಸುಲ್ತಾನನ ಕಾಲಕ್ಕೆ ಹೋಗುತ್ತದೆ. ಟಿಪ್ಪು 17ನೆಯ ಶತಮಾನದಲ್ಲಿ ಮೈಸೂರು ಆಳುತ್ತಿದ್ದ. ಅವನು ರೇಷ್ಮೆ ಹುಳ ಸಾಕಣೆಯನ್ನು ವ್ಯಾಪಕವಾಗಿ ಮಾಡುವಂತೆ ಕೃಷಿಕರನ್ನು ಪ್ರೋತ್ಸಾಹಿಸಿದ. ಮೈಸೂರು, ಕೊಳ್ಳೇಗಾಲ, ಚಾಮರಾಜನಗರ, ರಾಮನಗರ, ಬೆಂಗಳೂರು ಮತ್ತು ಕೋಲಾರಗಳಂತಹ ಹಳೆಯ ಮೈಸೂರು ಪ್ರದೇಶಗಳ ಮಣ್ಣು–ಹವಾಮಾನ ಪರಿಸ್ಥಿತಿಗಳು ಹಿಪ್ಪುನೇರಳೆ ಗಿಡಗಳನ್ನು ಬೆಳೆಯುವುದಕ್ಕೆ ಮತ್ತು 'ಮೈಸೂರು ರೇಷ್ಮೆ ಹುಳಗಳ ಗೂಡು' ಎಂದು ಕರೆಯಲ್ಪಡುವ ರೇಷ್ಮೆ ಗೂಡುಗಳನ್ನು ಸಾಕುವುದಕ್ಕೆ ಅನುಕೂಲಕರವಾಗಿವೆ. ಅಂದಿನ ದಿನಗಳಲ್ಲಿ ರೇಷ್ಮೆ ಎಳೆಯನ್ನು ಸುತ್ತುವುದು ಮತ್ತು ನೇಯುವುದನ್ನು ಹಲವಾರು ಕುಟುಂಬಗಳು ತಮ್ಮಷ್ಟಕ್ಕೆ ಗುಡಿ ಕೈಗಾರಿಕೆ ಎಂದು ಮಾಡಿಕೊಂಡು ಬರುತ್ತಿದ್ದರು. ಆದರೆ ಇದು 1912ರಲ್ಲಿ ಬದಲಾಯಿತು. ರೇಷ್ಮೆ ನೂಲಿನ ಉತ್ಪಾದನೆ ಒಂದು ವ್ಯವಸ್ಥಿತ ಮಾರ್ಗವನ್ನು ಕಂಡುಕೊಂಡಿತು. ಅದರ ನೆಲೆ ಮೈಸೂರಿನ ಮನಂತವಾಡಿ ರಸ್ತೆಯಲ್ಲಿ ಈಗಲೂ ಇರುವ ರೇಷ್ಮೆ ನೇಯುವ ಕಾರ್ಖಾನೆಯೇ ಆಗಿತ್ತು.

ಈ ಕಾರ್ಖಾನೆಯನ್ನು ಆಗಿನ ಮೈಸೂರು ಅರಸರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದರು. ಉದ್ದೇಶ, ಅರಸು ಮನೆತನಕ್ಕೆ ಬೇಕಾದ ರೇಷ್ಮೆ ವಸ್ತ್ರಗಳನ್ನು ತಯಾರಿಸುವುದು. ಮುಂದೆ 1929ರಲ್ಲಿ ರೇಷ್ಮೆಯ ಹಲವಾರು ನಮೂನೆಗಳನ್ನು ಸ್ವಿಟ್ಜರ್ಲ್ಯಾಂಡಿಗೆ ತೆಗೆದುಕೊಂಡು ಹೋಗಿ ಅಲ್ಲಿ ವಿದ್ಯುತ್ ಮಗ್ಗಗಳನ್ನು ಬಳಸಿ ಅವುಗಳಿಂದ ಕ್ರೇಪ್ ರೇಷ್ಮೆಯ ತಯಾರಿಕೆಯ ಸಾಧ್ಯತೆಗಳ ಬಗ್ಗೆ ಪರೀಕ್ಷೆಗಳನ್ನು ನಡೆಸಲಾಯಿತು. ಈ ಪ್ರಯೋಗ ಯಶಸ್ವಿಯಾಯಿತು. ಮಗ್ಗಗಳನ್ನು ಆಮದು ಮಾಡಿಕೊಂಡು ಮೈಸೂರಿನಲ್ಲಿ ಸ್ಥಾಪಿಸಲಾಯಿತು. ಭಾರತದಲ್ಲಿ ಅಪ್ಪಟವಾದ ಉತ್ತಮ ಗುಣಮಟ್ಟದ ದೇಶೀಯ ರೇಷ್ಮೆ ಎಳೆಯನ್ನು ಬಳಸಿಕೊಂಡು ಕೃತಕ ರೇಷ್ಮೆ ತಯಾರಿಸುವ ಇತಿಹಾಸ ಆರಂಭವಾದದ್ದೇ ಆಗ. ಇದಕ್ಕೆ ಬಹಳ ಪ್ರಶಂಸೆ ದೊರೆಯಿತು. ಭಾರತದ 'ರೇಷ್ಮೆಗಳ ಮಹಾರಾಣಿ' ಎಂಬ ಪಟ್ಟ ದೊರೆಯಿತು. ಭಾರತ ಸ್ವತಂತ್ರವಾದ ನಂತರ ಮೈಸೂರು ರೇಷ್ಮೆ ನೇಯುವ ಕಾರ್ಖಾನೆಯನ್ನು ಮೈಸೂರು ಸರ್ಕಾರದ ರೇಷ್ಮೆ ಸಾಕಣೆ ನಿರ್ದೇಶನಾಲಯದ ಅಡಿಯಲ್ಲಿ ತರಲಾಯಿತು. ಅಂದಿನಿಂದ ಅದನ್ನು ಒಂದು ಇಲಾಖೆಯ ಅಂಗವಾಗಿ ನಡೆಸಿಕೊಂಡು ಬರಲಾಗುತ್ತಿದೆ. 1980ರಲ್ಲಿ ಅದು ಕಂಪನಿ ಕಾಯಿದೆಯ ಅಡಿಯಲ್ಲಿ ಕಾರ್ಪೊರೇಷನ್ ಆಯಿತು. ಇಡೀ ದೇಶದಲ್ಲಿ ಕೆಎಸ್ಐಸಿ ನೂಲಿನಿಂದ ನೇಯ್ಗೆವರೆಗೆ ರೇಷ್ಮೆ ಉತ್ಪಾದನೆಯ ಸಂಪೂರ್ಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಮತ್ತು ಪರಂಪರೆಯನ್ನು ಅನುಸರಿಸುತ್ತಿರುವ ಏಕೈಕ ಸಂಸ್ಥೆಯಾಗಿದೆ. ಅದರ ಚಟುವಟಿಕೆಯ ಸ್ಥೂಲನೋಟ ಮುಂದಿದೆ.

- ❖ ಮೈಸೂರಿನ ರೇಷ್ಮೆ ನೇಯ್ಗೆ ಕಾರ್ಖಾನೆಯನ್ನು ಅಂದಿನ ಮೈಸೂರು

* ವ್ಯವಸ್ಥಾಪಕ ನಿರ್ದೇಶಕರು. ಕೆ.ಎಸ್.ಐ.ಸಿ. E-mail : ksicsilk@gmail.com

ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಂದ 1912ನೇ ಸಾಲಿನಲ್ಲಿ ಅರಸು ಮನೆತನದ ಕುಟುಂಬ ಸದಸ್ಯರ ಬಳಕೆಗಾಗಿ ರೇಷ್ಮೆ ವಸ್ತ್ರಗಳನ್ನು ತಯಾರಿಸುವ ಉದ್ದೇಶದೊಂದಿಗೆ ಸ್ಥಾಪಿತವಾಯಿತು.

- ❖ ಪ್ರಸ್ತುತ ಕಂಪನಿಯು ಮೈಸೂರಿನಲ್ಲಿ ರೇಷ್ಮೆ ನೇಯ್ಗೆ ಕಾರ್ಖಾನೆ ಮತ್ತು ಟಿ. ನರಸೀಪುರದಲ್ಲಿ ರೇಷ್ಮೆ ನೂಲು ಸುತ್ತುವ ಘಟಕಗಳನ್ನು ಒಳಗೊಂಡಿರುತ್ತದೆ.
- ❖ ಮೈಸೂರಿನ ರೇಷ್ಮೆ ನೇಯ್ಗೆ ಕಾರ್ಖಾನೆಯು 138 ಪವರ್ ಲೂಮ್‌ಗಳ ಸಾಮರ್ಥ್ಯದೊಂದಿಗೆ ಸ್ಥಾಪಿತವಾಗಿದ್ದು, ಏಕ ಪಾಳಿ ಆಧಾರದಲ್ಲಿ ಪ್ರತಿ ತಿಂಗಳು 35,000 ಮೀಟರ್‌ನಷ್ಟು ವಸ್ತ್ರವನ್ನು ಉತ್ಪಾದಿಸಲಾಗುತ್ತಿದೆ.
- ❖ ಟಿ. ನರಸೀಪುರದಲ್ಲಿ ರೇಷ್ಮೆ ನೂಲು ಸುತ್ತುವುದನ್ನು 6 ಸೆಮಿ ಆಟೋಮೆಟಿಕ್ ರೀಲಿಂಗ್ ಮೆಷಿನ್‌ಗಳ ಸಾಮರ್ಥ್ಯದೊಂದಿಗೆ ಸ್ಥಾಪಿಸಲಾಯಿತು. ಈ ರೀಲಿಂಗ್ ಮೆಷಿನ್‌ಗಳು ಮಾಸಿಕ 2.5 MT ನಷ್ಟು ಕಚ್ಚಾ ರೇಷ್ಮೆ ನೂಲನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿವೆ.
- ❖ ಕಂಪನಿಯು ಒಟ್ಟು 640 ನೌಕರರ ಸಾಮರ್ಥ್ಯವನ್ನು ಹೊಂದಿದೆ.
- ❖ ಕಂಪನಿಯು ಬೆಂಗಳೂರು, ಮೈಸೂರು, ಚನ್ನಪಟ್ಟಣ, ದಾವಣಗೆರೆ, ಚೆನ್ನೈ ಮತ್ತು ಹೈದರಾಬಾದ್ ನಗರಗಳನೊಳಗೊಂಡಂತೆ ಒಟ್ಟು 18 ಮಾರಾಟ ಮಳಿಗೆಗಳನ್ನು ಹೊಂದಿದೆ. ಕಂಪನಿ ಉತ್ಪನ್ನಗಳನ್ನು ತನ್ನ ಸ್ವಂತ ಮಾರಾಟ ಮಳಿಗೆಗಳ ಮೂಲಕ ಮಾರಾಟ ಮಾಡುತ್ತಿದೆ.
- ❖ ಮೂಲ ಮೈಸೂರು ರೇಷ್ಮೆ ಸೀರೆಗಳನ್ನು ತಯಾರಿಸುವುದು ಮತ್ತು ಅವುಗಳನ್ನು ಮಾರಾಟ ಮಾಡುವುದು ಕೆಎಸ್‌ಐಸಿಯ ಉದ್ದೇಶವಾಗಿದೆ.



- ❖ ಬಳಕೆದಾರರ ಅಭಿರುಚಿಗೆ ತಕ್ಕಂತೆ ಒದಗಿಸುವುದು ಕೆಎಸ್‌ಐಸಿಯು ಅಭಿಮತ ಹಾಗೂ ಅದರಂತೆ ಸರಿಸಾಟಿಯಿಲ್ಲದ ಗುಣಮಟ್ಟ, ಮುದ್ರಿತ ಮತ್ತು ಡೈ ಮಾಡಿದ ಸೀರೆಗಳನ್ನು ಉತ್ಪಾದಿಸುತ್ತದೆ ಮತ್ತು ವೈವಿಧ್ಯಮಯ ವಿನ್ಯಾಸದ ಸಂಯೋಜನೆಗಳು ಅಂದರೆ;
  - ➢ ಎಂಬ್ರಾಯಿಡರಿ ವಿನ್ಯಾಸದ ಸೀರೆ.
  - ➢ ಬಿಗ್ ಬುಟ್ಟಾ ಪಲ್ಲು ಜರಿ.
  - ➢ ರಿಚ್ ಪಲ್ಲು ಸೀರೆ.
  - ➢ ಜವಾರ್ ಬಾರ್ಡರ್ ಸೀರೆ.
  - ➢ ಸ್ಮಾಲ್ ಮ್ಯಾಂಗೊ ಸೀರೆ.
  - ➢ ಜರಿ ಮುದ್ರಿತ ಸೀರೆ.
  - ➢ ಟಿಶ್ಯು ಸೀರೆ.
  - ➢ ಸಾಂಪ್ರದಾಯಿಕ ಜರಿ ಸೀರೆ.
  - ➢ ಮ್ಯಾಂಗೊ ಬಾರ್ಡರ್ ಸೀರೆ.
  - ➢ ಸನ್‌ರೈಸ್ ವಿನ್ಯಾಸ ಸೀರೆ.
  - ➢ ಬುಟ್ಟಾ ಪಲ್ಲು ಸೀರೆ.
  - ➢ ಡಬಲ್ ಲೈನ್ ಚೆಕ್ಸ್ ಸೀರೆ.
  - ➢ ಎಲ್ಲಿ ಸೀರೆ
- ❖ ತಯಾರಿಸಿದ ಸೀರೆಗಳನ್ನು ಪರಿಸರಸ್ನೇಹಿ ಡೈನಿಂದ ಕಣ್ಮನ ತಣಿಸುವ ಬಣ್ಣಗಳೊಂದಿಗೆ ಮುದ್ರಿಸಿ, ಡೈ ಮಾಡಲಾಗುತ್ತದೆ ಮತ್ತು ವಿವಿಧ ಹಂತಗಳಲ್ಲಿ ವಿವಿಧ ರಾಸಾಯಿನಿಕಗಳನ್ನು ಬಳಸಲಾಗುತ್ತದೆ. ಇದು ರೇಷ್ಮೆ ತಯಾರಿಕಾ ಪ್ರಮಾಣಗಳ ಅನುಸಾರ ರೇಷ್ಮೆ ಮೆರುಗು ಮತ್ತು ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಸಹಕಾರಿಯಾಗಿದೆ.
- ❖ ಪರಂಪರಾಗತ ತಯಾರಿಕಾ ಪದ್ಧತಿ, ವಸ್ತ್ರ ವಿನ್ಯಾಸದಲ್ಲಿನ ಟ್ವಿಸ್ಟ್ ಪ್ಯಾಟರ್ನ್‌ನೊಂದಿಗೆ ಇಂದು ಭಾರತದಲ್ಲಿ ಲಭ್ಯವಿರುವ ಸೊಗಸಾದ ಮೈಸೂರು ಸಿಲ್ಕ್ ಸೀರೆಗಳಾಗಿವೆ. ಮೈಸೂರು ಸಿಲ್ಕ್ ಬಗ್ಗೆ ಬಾಯಿ ಮಾತಲ್ಲಿ ಹೊಗಳುವುದಕ್ಕಿಂತ ಧರಿಸಿದಾಗಲೇ ಅದರ ಸೂಕ್ಷ್ಮತೆಯ ಅರಿವಾಗುವುದು. ಪ್ರತಿ ಮೀ.ಗೆ 65 ರಿಂದ 70 ಗ್ರಾಂ.ವುಳ್ಳ ಕೆಎಸ್‌ಐಸಿ ಮೈಸೂರು ಸಿಲ್ಕ್ ಸೀರೆಗಳು ಅತ್ಯುತ್ತಮ ಶೋಭೆಯನ್ನು ನೀಡುತ್ತವೆ. ಕ್ರೇಪ್ ಸೀರೆಗಳ ಅಂಚು ಮತ್ತು ಪಲ್ಲುವನ್ನು ಅದ್ಭುತ ವಿನ್ಯಾಸದ ಜರಿಯ ಸೂಕ್ಷ್ಮ ನೂಲುಗಳಿಂದ ಹೆಣೆಯಲಾಗುತ್ತಿದೆ.
- ❖ ನಿಗಮವು ಉತ್ತಮ ಗುಣಮಟ್ಟದ ಗೂಡನ್ನು ಖರೀದಿಸಲು ಶಿಡ್ಲಘಟ್ಟ ಮತ್ತು ರಾಮನಗರಗಳಲ್ಲಿ ರೇಷ್ಮೆ ಗೂಡು ಮಾರುಕಟ್ಟೆ ಒದಗಿಸಿದ್ದು, ರೇಷ್ಮೆ ಬೆಳೆಗಾರರು/ರೇಷ್ಮೆ ನೂಲುದಾರರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಅವರನ್ನು ಉತ್ತೇಜಿಸುತ್ತಾ ಬಂದಿದೆ.
- ❖ ಮಾರುಕಟ್ಟೆ ವಿಭಾಗದವರು ನೀಡಿದ ಇಂಡೆಂಟ್ಸ್ ಆಧಾರದ ಮೇಲೆ ಮೈಸೂರಿನ ರೇಷ್ಮೆ ನೇಯ್ಗೆ ಕಾರ್ಖಾನೆಯಲ್ಲಿ ವಸ್ತ್ರಗಳ ತಯಾರಿಕೆಯನ್ನು ಕೈಗೊಳ್ಳಲಾಗುತ್ತದೆ. ಸಿದ್ಧ ವಸ್ತ್ರಗಳು ವಿಭಿನ್ನ ಶ್ರೇಣಿ ಮತ್ತು ವಿನ್ಯಾಸದಲ್ಲಿ ಜರಿ ರೂಪ ಪಡೆಯುತ್ತವೆ.
- ❖ ಸೀರೆಗಳಲ್ಲಿ ಬಳಸಿರುವ ಜರಿಯು ಉತ್ತಮ ಗುಣಮಟ್ಟದ್ದಾಗಿದ್ದು, ಇದರಲ್ಲಿ ಶೇ.0.65ರಷ್ಟು ಚಿನ್ನ ಮತ್ತು ಶೇ.65ರಷ್ಟು ಬೆಳ್ಳಿಯಿರುತ್ತದೆ. ದೇಶದ ಇತರೆ ಜರಿ ಸೀರೆಗಳಿಗಿಂತ ಇದು ಅತ್ಯುತ್ತಮ ಜರಿಯಾಗಿದೆ.

ರಾಷ್ಟ್ರೀಯ ಉತ್ಪಾದನಾ ಪರಿಷತ್, 2005ರ ಒಂದು ಅಧ್ಯಯನದ ನಂತರ ಉತ್ಪಾದನಾ ನಿಯಮಾವಳಿಗಳನ್ನು ಪರಿಷ್ಕರಿಸಿದೆ. ಅದರ ಅನುಸಾರ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

❖ ಉತ್ಪಾದನೆಯಲ್ಲಿ ಸುಧಾರಣೆ ತರಲು ಕಾರ್ಮಿಕರಿಗೆ ಉಲ್ಲಾಸದಾಯಕ ತರಬೇತಿ ನೀಡಲಾಗುತ್ತದೆ.

❖ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಹಳೆಯ ಮಗ್ಗಗಳ ಬದಲಿಗೆ ಹೊಸ ಮಗ್ಗಗಳನ್ನು ಸ್ಥಾಪಿಸಲಾಗಿದೆ.

❖ ಹೆಚ್ಚಾಗಿ ಗ್ರಾಹಕಸ್ನೇಹಿ ವರ್ತನೆ ಅಳವಡಿಸಿಕೊಳ್ಳಲು ಸಹಕಾರಿಯಾಗುವಲ್ಲಿ ಮಾರಾಟ ಸಹಾಯಕರಿಗೆ ತರಬೇತಿ ನೀಡಲಾಗುತ್ತದೆ.

❖ ವೃತ್ತಿಪರ ವಿನ್ಯಾಸಕಾರರ ಸಹಕಾರದೊಂದಿಗೆ ಜರಿ ಮತ್ತು ಮುದ್ರಿತ ಸೀರೆಗಳಲ್ಲಿ ಹೊಸ ಹೊಸ ವಿನ್ಯಾಸಗಳನ್ನು ಪರಿಚಯಿಸಲಾಗಿದೆ.

❖ ಮಾರುಕಟ್ಟೆಯ ಅವಶ್ಯಕತೆಯ ಅನುಸಾರ ಉತ್ಪಾದನೆ ಮಾಡಲಾಗುತ್ತಿದೆ.

❖ ಗ್ರಾಹಕರ ಪ್ರತಿಕ್ರಿಯೆಯನ್ನು ನಿರಂತರವಾಗಿ ಸಂಗ್ರಹಿಸಲಾಗುತ್ತಿದೆ.

❖ ಕೆಎಸ್‌ಐಸಿ, ISO 9001–2008 ಗುಣಮಟ್ಟದ ಪ್ರಮಾಣಪತ್ರ ಹಾಗೂ ಮೆ. TUV ರೈನ್‌ಲ್ಯಾಂಡ್‌ನಿಂದ ಆಂತರಿಕ ನಿರ್ವಹಣಾ ಪದ್ಧತಿಗಾಗಿ ISO 14001–2004 ಮತ್ತು OSHAS 18001–2005 ಸಂಯೋಜಿತ ಪ್ರಮಾಣ ಪತ್ರವನ್ನು ಪಡೆದುಕೊಂಡಿದೆ.

❖ ಮೈಸೂರ್ ಸಿಲ್ಕ್ ಜಿಯೋಗ್ರಾಫಿಕಲ್ ಇಂಡಿಕೇಷನ್ ಆಗಿ ನೊಂದಾಯಿಸಲ್ಪಟ್ಟಿದೆ ಮತ್ತು ಕೆಎಸ್‌ಐಸಿ GI-11 'ಮೈಸೂರ್ ಸಿಲ್ಕ್' ಸೋಲ್ ಪ್ರೊಪ್ರೈಟರ್ ಆಗಿ ಹೊರಹೊಮ್ಮಿದೆ. ಅಂದರೆ, ವರ್ತಕರು, ಮರ್ಚೆಂಟ್ಸ್ ಅಥವಾ ನೊಂದಾಯಿಸಲ್ಪಡದ ತಯಾರಕರು ಮೈಸೂರು ಸಿಲ್ಕ್ ಬ್ರಾಂಡ್ ಹೆಸರು ಬಳಸುವುದನ್ನು ನಿಷೇಧಿಸಲಾಗಿದೆ.

❖ ಸ್ಪರ್ಧಾತ್ಮಕರನ್ನು ಮೈಸೂರು ಸಿಲ್ಕ್ ಅನುಕರಿಸುವುದರಿಂದ ತಡೆಯಲು ಕೆಎಸ್‌ಐಸಿ ತನ್ನ ಜರಿ ಸೀರೆಗಳ ಮೇಲೆ ವಿಶೇಷ ಕೋಡ್, ಏಕೈಕ ಸಂಖ್ಯೆ ಮತ್ತು ಹಾಲೋಗ್ರಾಮ್ ಗುರುತಿನ ಚಿಹ್ನೆಯನ್ನು ಬಳಸುತ್ತಿದೆ.

❖ ಕೆಎಸ್‌ಐಸಿ, ವಿಶ್ವದ ಯಾವುದೇ ಭಾಗದಿಂದ ಮೈಸೂರ್ ಸಿಲ್ಕ್ ಸೀರೆಗಳನ್ನು ಖರೀದಿಸಲು ಅನುವಾಗುವಂತೆ ತನ್ನ ವೆಬ್‌ಸೈಟ್ www.ksicsilk.com ಮೂಲಕ ಆನ್‌ಲೈನ್ ಶಾಪಿಂಗ್ ಸೌಲಭ್ಯವನ್ನು ತೆರೆದಿದೆ.

❖ ಇತ್ತೀಚೆಗೆ ಮೈಸೂರಿನ ರೇಷ್ಮೆ ನೇಯ್ಗೆ ಕಾರ್ಖಾನೆಯಲ್ಲಿ 10 ಇ–ಜಾಕ್ವಾರ್ಡ್ ಮಗ್ಗಗಳನ್ನು ಅನುಷ್ಠಾನಗೊಳಿಸಲಾಗಿದೆ ಮತ್ತು ಟಿ. ನರಸೀಪುರದಲ್ಲಿ ಒಂದು ಆಟೋಮೆಟಿಕ್ ರೀಲಿಂಗ್ ಮೆಷಿನ್ ಸ್ಥಾಪಿಸಲು ಉದ್ದೇಶಿಸಲಾಗಿದೆ (ಎಆರ್‌ಎಂ–ಬಜೆಟ್ ಪ್ರತಿಯಾಗಿ ಸೆಂಟ್ರಲ್ ಸಿಲ್ಕ್ ಬೋರ್ಡ್ ಮತ್ತು ರೇಷ್ಮೆ ಇಲಾಖೆಯ ಸಬ್ಸಿಡಿಯೊಂದಿಗೆ).

**ವಿಂಟೇಜ್ ಸೀರೆ ಪ್ರದರ್ಶನ**

ಗ್ರಾಹಕರ ವಿಶ್ವಾಸವನ್ನು ಗಳಿಸಲು ವಿಂಟೇಜ್ ಮೈಸೂರು ರೇಷ್ಮೆ ಸೀರೆಗಳನ್ನು ಸಂಗ್ರಹಿಸಲಾಗುತ್ತಿದೆ – ಅವುಗಳು ಮೈಸೂರಿನ ರೇಷ್ಮೆ ನೇಯ್ಗೆ ಕಾರ್ಖಾನೆಯಲ್ಲಿ 1976ಕ್ಕೂ ಪೂರ್ವದಲ್ಲಿ ತಯಾರಾಗಿರಬೇಕು. ಸಂಸ್ಥೆಯ ತಾಂತ್ರಿಕ ಸಮಿತಿಯು ಸೊಗಸಾಗಿ ನಿರ್ವಹಿಸಿದ ಮೂರು ಅತ್ಯುತ್ತಮ ಸೀರೆಗಳನ್ನು ಆಯ್ಕೆಮಾಡಿಕೊಳ್ಳುತ್ತದೆ ಮತ್ತು ವಾರ್ಷಿಕವಾಗಿ ಹಮ್ಮಿಕೊಳ್ಳುವ ವಿಂಟೇಜ್ ಸೀರೆ ಪ್ರದರ್ಶನದ ಮೂಲಕ ವಿಜಯಶಾಲಿಗಳಾದವರಿಗೆ ಪ್ರಶಸ್ತಿ ಪದಕಗಳನ್ನು ನೀಡಲಾಗುತ್ತದೆ. ಈ ಸ್ಪರ್ಧೆಯು 2005–06 ನೇ ಸಾಲಿನಿಂದ ನಿರಂತರವಾಗಿ ನಡೆಯುತ್ತಾ ಬಂದಿದೆ.

ಕೆಎಸ್‌ಐಸಿಯು ಉತ್ತಮ ಗುಣಮಟ್ಟದ ಶುದ್ಧ ನೈಸರ್ಗಿಕ ರೇಷ್ಮೆ ಮತ್ತು ಶೇ.100ರಷ್ಟು ಶುದ್ಧ ಚಿನ್ನದ ಜರಿ ಬಳಸಿಕೊಂಡು ತನ್ನ ಸೀರೆಗಳನ್ನು ತಯಾರಿಸುವುದರಿಂದ ದೀರ್ಘಾವಧಿ ಬಳಕೆಯ ನಂತರವೂ ಅವುಗಳ ಸೊಗಸು ಮಾಸುವುದಿಲ್ಲ.

ಸಾಮಾಜಿಕ ಜವಾಬ್ದಾರಿಗಳ ಹಿನ್ನೆಲೆಯಲ್ಲಿ ಸಂಸ್ಥೆ ಮುಂದಿನ ಕ್ರಮಗಳನ್ನು ಅನುಸರಿಸುತ್ತಿದೆ:



❖ ಕಳೆದ 10 ವರ್ಷಗಳಿಂದ ಬಿಬಿಎಂಪಿಗೆ ಸೇರಿದ ಬೆಂಗಳೂರಿನ ಎಂ.ಜಿ. ರಸ್ತೆಯ ಮೇಯೋ ಹಾಲ್ ಬಳಿ ಇರುವ ಪಾರ್ಕ್‌ವೊಂದನ್ನು ದತ್ತು ತೆಗೆದುಕೊಂಡಿದೆ.

❖ ಮೈಸೂರು ಮೃಗಾಲಯದಲ್ಲಿ ಪ್ರಾಣಿಗಳನ್ನು ದತ್ತು ತೆಗೆದುಕೊಂಡಿದೆ. (ಒಂದು ಆನೆ ಮತ್ತು ಒಂದು ಜಿರಾಫೆ).

❖ ಮೆ. ಕ್ಲಾಸಿಕ್ ಇಂಡಿಯಾ ಲಿ. ಮೂಲಕ ಹೆಚ್‌ಐವಿ ಮಕ್ಕಳಿಗೆ ಹಣಕಾಸು ಸಹಾಯ ಒದಗಿಸುವ ಪ್ರಾಯೋಜಿತ ಕಾರ್ಯಕ್ರಮವೊಂದನ್ನು ದತ್ತು ತೆಗೆದುಕೊಂಡಿದೆ.

❖ ಕಳೆದ 10 ವರ್ಷಗಳಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಪದವಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಮತ್ತು ಮೇಲ್ಪಟ್ಟ ಅಂಕ ಗಳಿಸಿದ ನಿಗಮದ ನೌಕರರ ಮಕ್ಕಳಿಗೆ ಪ್ರತಿ ವರ್ಷ ವಿದ್ಯಾರ್ಥಿವೇತನ ನೀಡುವ ಕಾರ್ಯಕ್ರಮವನ್ನು ನಡೆಸುತ್ತಿದೆ.

❖ ಶಿಕ್ಷಣದಲ್ಲಿ ಪ್ರಶಂಸಾರ್ಹ ಸಾಧನೆಗೈದ ಬಡ ಮಕ್ಕಳ ಉನ್ನತ ಶಿಕ್ಷಣದ ವೆಚ್ಚವನ್ನು ಭರಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದೆ.

❖ ಪರಿಸರ ಸಂರಕ್ಷಣೆಯ ಸಲುವಾಗಿ ನಿಗಮ ಸೋಲಾರ್ ವಾಟರ್ ಹೀಟರ್, ಪ್ರವಾಹ ಸಂಸ್ಕರಣ ಘಟಕಗಳನ್ನು ಸ್ಥಾಪಿಸಿದೆ ಹಾಗೂ ಮಳೆ ನೀರು ಕೊಯ್ಲು ಅಳವಡಿಕೆ, ಪರಿಸರಸ್ನೇಹಿ ಪೇಪರ್ ಬ್ಯಾಗ್‌ಗಳ ಬಳಕೆ ಮತ್ತು ಕಾರ್ಖಾನೆಯ ಆವರಣದೊಳಗೆ ಸಸಿಗಳ ನೆಡುವಿಕೆಯ ಕಾರ್ಯಕ್ರಮಗಳನ್ನು ಕೈಗೊಂಡಿದೆ. ❑

# ಕರ್ನಾಟಕದಲ್ಲಿ ಕೈಮಗ್ಗ ಮತ್ತು ಜವಳಿ ಉದ್ದಿಮೆ

* ಆರ್. ಗಿರೀಶ್



ಜಾಗತೀಕರಣದಿಂದ ಉದ್ಭವಿಸುವ ಸವಾಲುಗಳು ಹಾಗೂ ಅವಕಾಶಗಳನ್ನು ಉಪಯೋಗಿಸಿಕೊಂಡು ಹೊಸ ಯೋಜನೆಗಳ ಆರಂಭ, ಮಾರ್ಪಾಟು ಹಾಗೂ ಪರಿಶೀಲನೆ ಮತ್ತು ಉನ್ನತೀಕರಣ ಕೈಗೊಳ್ಳುವುದು ಕರ್ನಾಟಕ ಕೈಮಗ್ಗ ಮತ್ತು ಜವಳಿ ಇಲಾಖೆಯ ಧ್ಯೇಯವಾಗಿದೆ.

ಕರ್ನಾಟಕದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯು ಪ್ರತ್ಯೇಕವಾಗಿ 1992–93ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿದ್ದು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಸಚಿವಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಅಲ್ಲದೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ಮತ್ತು ಕಾವೇರಿ ಹ್ಯಾಂಡ್‌ಲೂಮ್ಸ್ ಫೆಡೆರೇಶನ್‌ಗಳು ಸಹ ಇಲಾಖೆಯ ಅಧೀನದಲ್ಲಿರುತ್ತವೆ. ಕೈಮಗ್ಗ ಮತ್ತು ಜವಳಿ ಇಲಾಖೆಯು ಈ ಮುಂದಿನ ಧ್ಯೇಯ ಮತ್ತು ಬದ್ಧತೆಗಳನ್ನು ಹೊಂದಿರುತ್ತದೆ.

### ಧ್ಯೇಯ ಮತ್ತು ಬದ್ಧತೆ

ರಾಜ್ಯದಲ್ಲಿ ಜವಳಿ ಕ್ಷೇತ್ರವನ್ನು ಸಶಕ್ತ ಹಾಗೂ ಸರ್ವತೋಮುಖ ಅಭಿವೃದ್ಧಿಪಡಿಸುವುದು ಮುಖ್ಯ ಧ್ಯೇಯವಾಗಿದೆ. ಕೈಮಗ್ಗ, ವಿದ್ಯುತ್‌ಮಗ್ಗ, ರೇಷ್ಮೆ, ಉಣ್ಣೆ, ಮಿಲ್ಸ್ ಹಾಗೂ ಸಿದ್ಧ ಉಡುಪು ವಲಯಗಳ ಸರ್ವತೋಮುಖ ಅಭಿವೃದ್ಧಿಗೆ ಹಾಗೂ ಬೆಳವಣಿಗೆಗೆ ಕಾರ್ಯನಿರತವಾಗುವುದು. ಜವಳಿ ಕ್ಷೇತ್ರದ ಭಾಗಿದಾರರ ಸಮಸ್ಯೆಗಳನ್ನು ಸತತವಾಗಿ ವಿಚಾರ ವಿನಿಮಯದೊಂದಿಗೆ ತಿಳಿದುಕೊಂಡು ಸಮಸ್ಯೆಗಳ ಪರಿಹಾರಕ್ಕಾಗಿ ಸೂಕ್ತ ಮಾರ್ಗದರ್ಶನ ಹಾಗೂ ಪರಿಣಾಮಕಾರಿಯಾಗಿ ಸಾಮರ್ಥ್ಯ ವೃದ್ಧಿಪಡಿಸುವುದು. ಮೂಲಭೂತ ಸೌಲಭ್ಯ, ಮಾರುಕಟ್ಟೆ, ತಂತ್ರಜ್ಞಾನ ಉನ್ನತೀಕರಣ, ತರಬೇತಿ, ಸಂಶೋಧನೆ ಮತ್ತು ಅಭಿವೃದ್ಧಿ, ಹಣಕಾಸು, ವಿನ್ಯಾಸ ಅಳವಡಿಕೆ, ಕಚ್ಚಾಮಾಲು ಪೂರೈಕೆ, ರಫ್ತು ಇತ್ಯಾದಿ ಕ್ಷೇತ್ರಗಳ ವಿವಿಧ ವಲಯಗಳಿಗೆ ಸಹಾಯ ಮಾಡುವುದು ಇಲಾಖೆಯ ಉದ್ದೇಶವಾಗಿದೆ.

ವಿವಿಧ ನೀತಿಗಳ ಅನುಷ್ಠಾನ, ಕಾರ್ಯಕ್ರಮ ಮತ್ತು ಯೋಜನೆ ಹಾಗೂ ಸರ್ಕಾರ ಪ್ರಾಯೋಜಿತ ಎಲ್ಲಾ ಘೋಷಣೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಹಾಗೂ ಈ ಬಗ್ಗೆ ಮೇಲು ಉಸ್ತುವಾರಿ ವಹಿಸುವುದು. ಜಾಗತೀಕರಣದಿಂದ ಉದ್ಭವಿಸುವ ಸವಾಲುಗಳು ಹಾಗೂ ಅವಕಾಶಗಳನ್ನು ಉಪಯೋಗಿಸಿಕೊಂಡು ಹೊಸ ಯೋಜನೆಗಳ ಆರಂಭ, ಮಾರ್ಪಾಟು ಹಾಗೂ ಪರಿಶೀಲನೆ ಮತ್ತು ಉನ್ನತೀಕರಣ ಕೈಗೊಳ್ಳುವುದು. ಪಾರಂಪರಿಕ ವಿವಿಧ ನೇಯ್ಗೆ ವಿನ್ಯಾಸಗಳನ್ನು ಮುಂದುವರಿಸುವುದು ಹಾಗೂ ಈ ವಿನ್ಯಾಸಗಳ ಅಭಿವೃದ್ಧಿ ಮತ್ತು ಪುನಶ್ಚೇತನ ಕೈಗೊಳ್ಳುವುದು. ನೇಕಾರರ ಕುಶಲತೆ ಮತ್ತು ಕಾರ್ಯದಕ್ಷತೆಗಳನ್ನು ಉತ್ತೇಜಿಸಲು ಪ್ರಶಸ್ತಿ ನೀಡಿ ಗೌರವಿಸುವುದು ಇಲಾಖೆಯ ಕಾರ್ಯಕ್ರಮಗಳಲ್ಲಿ ಸೇರಿದೆ.

ಈ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಸರ್ವ ಸಹಾಯ ಪ್ರಯತ್ನ ಮಾಡುವುದು. ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನೀತಿ, ಕಾರ್ಯಕ್ರಮ ಮತ್ತು



* ಜವಳಿ ಅಭಿವೃದ್ಧಿ ಆಯುಕ್ತರು, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ಸರ್ಕಾರ. E-mail : texcomgok@gmail.com / pdsvntex@gmail.com

| ಪಟ್ಟಿ 1 (ಅ) : ಕೇಂದ್ರ ಸರ್ಕಾರ 2009–10ನೇ ಸಾಲಿನಲ್ಲಿ ನಡೆಸಿದ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಹಾಗೂ ಮಗ್ಗಗಳ ವಿವರ | | | | |
|---|---|---|---|---|
| ಕ್ರ.ಸಂ. | ವಿವರಗಳು | ಗ್ರಾಮೀಣ | ನಗರ | ಒಟ್ಟು |
| 1 | ಒಟ್ಟು ನೇಕಾರರ ಕುಟುಂಬಗಳು | 33854 | 3826 | 37680 |
| 2 | ನೇಕಾರರ ಜನಸಂಖ್ಯೆ | | | |
| ಅ | ಪುರುಷರು | 61632 | 6447 | 68079 |
| ಆ | ಮಹಿಳೆಯರು | 60056 | 6203 | 66259 |
| | **ಒಟ್ಟು** | **121688** | **12650** | **134338** |
| 3 | ನೇಕಾರಿಕೆಯಲ್ಲಿ ತೊಡಗಿರುವವರು | | | |
| ಅ | ನೆಯ್ಗೆ ಕೆಲಸ ಮಾಡುವವರು | 35894 | 4038 | 39932 |
| ಆ | ಪೂರಕ ಕೆಲಸ ಮಾಡುವವರು | 33762 | 3125 | 36917 |
| | **ಒಟ್ಟು ನೇಕಾರರು** | **69686** | **7163** | **76849** |
| 4 | ಮಗ್ಗಗಳು | | | |
| ಅ | ಕಾರ್ಯನಿರತ | 30394 | 4212 | 34606 |
| ಆ | ನಿಷ್ಕ್ರೀಯ | 5268 | 614 | 5882 |
| | **ಒಟ್ಟು** | **35662** | **4826** | **40486** |
| **5** | **ನೇಕಾರಿಕೆಯಲ್ಲಿ ನಿರತರಾದ ಕುಟುಂಬಗಳ ವಾರ್ಷಿಕ ತಲಾದಾಯ (ರೂ.)** | **24840** | **25405** | **24897** |

ಯೋಜನೆಗಳ ಪ್ರಕಟಣೆ ರೂಪಿಸುವುದು ಹಾಗೂ ಅನುಷ್ಠಾನಗೊಳಿಸುವುದು ಇಲಾಖೆಯ ಉದ್ದೇಶವಾಗಿದೆ.

### ವ್ಯಾಪ್ತಿ

ಗಣತಿ ಪ್ರಕಾರ ರಾಜ್ಯದಲ್ಲಿರುವ ನೇಕಾರರ ವಿವರಗಳು, ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳ ವಿವರಗಳು ಮುಂದಿನಂತಿವೆ. ಈ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 613 ಕೈಮಗ್ಗ ಮತ್ತು 109 ವಿದ್ಯುತ್ ಮಗ್ಗಗಳ ಸಹಕಾರ ಸಂಘಗಳು ನೋಂದಣಿಯಾಗಿದ್ದು, ಅವುಗಳಲ್ಲಿ 453 ಕೈಮಗ್ಗ ಮತ್ತು 90 ವಿದ್ಯುತ್ ಮಗ್ಗ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. 2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ನಡೆಸಿದ ಕೈಮಗ್ಗ ಗಣತಿಯನ್ವಯ ರಾಜ್ಯದಲ್ಲಿ 40486 ಕೈಮಗ್ಗಗಳಿದ್ದು ಇವುಗಳಲ್ಲಿ 34606 ಮಗ್ಗಗಳು ಕಾರ್ಯನಿರತವಾಗಿರುತ್ತವೆ. ಗಣತಿಯಂತೆ 37680 ನೇಕಾರರ ಕುಟುಂಬಗಳಿದ್ದು, 76849 ಮಂದಿ ನೇಕಾರಿಕೆ ಹಾಗು ಪೂರಕ ಕೆಲಸದಲ್ಲಿ ತೊಡಗಿಸಿಕೊಂಡಿರುತ್ತಾರೆ.

| ಪಟ್ಟಿ–2(ಅ) : ನೊಂದಣಿಯಾಗಿರುವ ನೇಕಾರರ ಸಹಕಾರ ಸಂಘಗಳು | | | | |
|---|---|---|---|---|
| ವಲಯ | ಒಟ್ಟು | ಕಾರ್ಯನಿರತ | ಸ್ಥಗಿತ | ಸಮಾಪನೆ |
| ಹತ್ತಿ ಕೈಮಗ್ಗ | 322 | 227 | 73 | 22 |
| ರೇಷ್ಮೆ ಕೈಮಗ್ಗ | 104 | 88 | 14 | 2 |
| ಉಣ್ಣೆ ಕೈಮಗ್ಗ | 187 | 138 | 47 | 2 |
| **ಒಟ್ಟು ಕೈಮಗ್ಗ ಸಹಕಾರ ಸಂಘಗಳು** | **613** | **453** | **134** | **26** |
| ವಿದ್ಯುತ್ ಮಗ್ಗ | 109 | 90 | 19 | 0 |
| **ಒಟ್ಟು** | **722** | **543** | **153** | **26** |
| **ಸದಸ್ಯರುಗಳು** | **181956** | **136288** | **36873** | **8795** |

| ಪಟ್ಟಿ – 1 (ಆ) : 1995–96ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ನಡೆಸಿದ ವಿದ್ಯುತ್‌ಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿರುವ ವಿದ್ಯುತ್‌ಮಗ್ಗ ನೇಕಾರರ ವಿವರಗಳು | | |
|---|---|---|
| ಕ್ರ.ಸಂ. | ವಿವರಗಳು | ಸಂಖ್ಯೆ |
| 1 | ಒಟ್ಟು ನೇಕಾರರ ಕುಟುಂಬಗಳು | 30988 |
| 2 | ನೇಕಾರರ ಜನಸಂಖ್ಯೆ | 127535 |
| 3 | ಮಗ್ಗಗಳು | 88566 |

1995–96ರಲ್ಲಿ ನಡೆಸಿದ ವಿದ್ಯುತ್‌ಮಗ್ಗ ಗಣತಿಯಂತೆ 88,556 ವಿದ್ಯುತ್‌ಚಾಲಿತ ಮಗ್ಗಗಳು ಇರುತ್ತವೆ. ಅಲ್ಲದೆ 65 ಜವಳಿ ಗಿರಣಿಗಳು ಮತ್ತು ಸುಮಾರು 3600 ಸಿದ್ಧ ಉಡುಪು ಘಟಕಗಳು ಕಾರ್ಯನಿರತವಾಗಿವೆ.

| ಪಟ್ಟಿ–2(ಆ) : ಕರ್ನಾಟಕದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ವಿವರಗಳು | | |
|---|---|---|
| ಕ್ರ.ಸಂ. | ವಿವರಗಳು | ಸಂ. |
| 1 | ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ | 10 |
| 2 | ಸ್ವಂತ ಬಂಡವಾಳದೊಂದಿಗೆ ಕಾರ್ಯನಿರ್ವಹಿಸುತ್ತಿರುವ ನೂಲಿನ ಗಿರಣಿಗಳ ಸಂಖ್ಯೆ | 4 |
| 3 | ಗುತ್ತಿಗೆ ಆಧಾರದ ಮೇಲೆ ಕಾರ್ಯ–ನಿರ್ವಹಿಸುತ್ತಿರುವ ನೂಲಿನ ಗಿರಣಿಗಳ ಸಂಖ್ಯೆ | 3 |
| 4 | ಸ್ಥಗಿತಗೊಂಡಿರುವ ನೂಲಿನ ಗಿರಣಿಗಳ ಸಂಖ್ಯೆ | 2 |
| 5 | ಸಮಾಪನಗೊಂಡ ನೂಲಿನ ಗಿರಣಿಗಳ ಸಂಖ್ಯೆ | 1 |

2016–17ನೇ ಸಾಲಿಗೆ ಜವಳಿ ಕ್ಷೇತ್ರದ ಅಭಿವೃದ್ಧಿಗಾಗಿ ಈ ಮುಂದಿನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.


**1. ವಸತಿ ಕಾರ್ಯಾಗಾರ**

ವಸತಿ ಕಾರ್ಯಾಗಾರ ಯೋಜನೆಯಡಿ ಒಟ್ಟು ರೂ.2,50,000/–ಗಳ ಘಟಕ ವೆಚ್ಚದಲ್ಲಿ ಸಾಮಾನ್ಯ ಫಲಾನುಭವಿಗಳಿಗೆ ರೂ.1,00,000 ಸಹಾಯಧನ ಹಾಗೂ ರೂ.1,20,000 ಸಾಲ ಮತ್ತು ಫಲಾನುಭವಿಗಳ ವಂತಿಕೆ ರೂ.30,000 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ.2,25,000/– ಸಹಾಯಧನ ಹಾಗೂ ರೂ.25,000/– ಸಾಲ ನೀಡಿ ವಸತಿ ಸೌಲಭ್ಯ ಒದಗಿಸಲು ಕ್ರಮವಹಿಸಲಾಗುತ್ತಿದೆ. 2016–17ನೇ ಸಾಲಿಗೆ ರೂ.771.91 ಲಕ್ಷಗಳ ಅನುದಾನ ಹಾಗೂ ರೂ.238.09 ಲಕ್ಷಗಳ ಸಾಲದ ಬಾಬ್ತು ಸೇರಿ ಒಟ್ಟು ರೂ.1000.00 ಲಕ್ಷಗಳ ಆಯವ್ಯಯ ಒದಗಿಸಲಾಗಿದ್ದು, 998 ವಸತಿ ಕಾರ್ಯಾಗಾರಗಳ ನಿರ್ಮಾಣದ ಕಾರ್ಯ ಕೈಗೊಳ್ಳಲು ಉದ್ದೇಶಿಸಲಾಗಿದೆ.

**2. ನೇಕಾರರ ವಿಶೇಷ ಪ್ಯಾಕೇಜ್**

**ಅ. ಕೈಮಗ್ಗ ನೇಕಾರರ ಏಳಿಗೆ ನಿಧಿ ಯೋಜನೆ:**

ಈ ಯೋಜನೆಯಡಿಯಲ್ಲಿ ನೇಕಾರರ ದುಡಿಮೆಯಿಂದ ಶೇಕಡ 8 ರಷ್ಟನ್ನು ಕಟಾಯಿಸಿ ರಾಜ್ಯ ಸರ್ಕಾರದಿಂದ ಶೇಕಡ 8ರಷ್ಟು ಸಮ ಚಂದಾವನ್ನು ಸೇರಿಸಿ ಸಂಬಂಧಪಟ್ಟ ತಾಲ್ಲೂಕು ಖಜಾನೆಯಲ್ಲಿ ನೇಕಾರರ ಖಾತೆಗೆ ಜಮಾ ಮಾಡಲಾಗುವುದು. ಜಮೆಯಾದ ಮೊತ್ತಕ್ಕೆ ರಾಜ್ಯ ಸರ್ಕಾರದ ವತಿಯಿಂದ ವಾರ್ಷಿಕ ಶೇಕಡ 12 ರಷ್ಟು ಬಡ್ಡಿ ನೀಡಲಾಗುವುದು ಈ ಯೋಜನೆಯಡಿಯಲ್ಲಿ ಅಳವಡಿಕೆಯಾದ ಫಲಾನುಭವಿ ಮದುವೆ, ಮನೆ ಕಟ್ಟಡ, ವೈದ್ಯಕೀಯ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮುಂಗಡವನ್ನು ಪಡೆಯಬಹುದಾಗಿದೆ. ಈ ಯೋಜನೆಯಲ್ಲಿ ಅಳವಡಿಸಲಾದ ಫಲಾನುಭವಿಗಳು 15 ವರ್ಷಗಳ ನಂತರ ಅಥವಾ ನೇಕಾರರ ವೃತ್ತಿ ಮಾಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಅಥವಾ ಅವನಿಗೆ 60 ವರ್ಷ ತುಂಬಿದ ನಂತರ ಪಾವತಿಯಾದ ಪೂರ್ತಿ ಹಣವನ್ನು ಬಡ್ಡಿ ಸಮೇತ ಹಿಂದಿರುಗಿಸಲಾಗುವುದು.



2016–17ನೇ ಸಾಲಿಗೆ ಈ ಯೋಜನೆಯಡಿ ರೂ.80.00 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದೆ.

**ಆ. ಗುಂಪು ವಿಮಾ ಯೋಜನೆ:**

ಕೈಮಗ್ಗ ನೇಕಾರರ ವಿಮಾ ಸೌಲಭ್ಯ ಒದಗಿಸುವುದರೊಂದಿಗೆ ಕೈಮಗ್ಗ ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಈ ಯೋಜನೆಯಡಿ ಒದಗಿಸಲಾಗುವುದು. ಕೇಂದ್ರ ಸರ್ಕಾರವು ಕೈಮಗ್ಗ ನೇಕಾರರ ಸಾಮಾಜಿಕ ಭದ್ರತೆಗಾಗಿ ಕೆ.ಹೆಚ್.ಡಿ.ಸಿ., ಸಹಕಾರ ಸಂಘಗಳು ಹಾಗೂ ಖಾಸಗಿ ವಲಯದ ನೇಕಾರರಿಗೆ ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆ ಎಂಬ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯನ್ನು ಭಾರತೀಯ ಜೀವವಿಮಾ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯಡಿ 18 ರಿಂದ 60 ವರ್ಷದೊಳಗಿನ ಎಲ್ಲ ಅರ್ಹ ಪುರುಷ ಮತ್ತು ಮಹಿಳಾ ನೇಕಾರರನ್ನು ನೊಂದಾಯಿಸಲಾಗುವುದು. ನೊಂದಾಯಿತ ಪ್ರತಿ ನೇಕಾರರ ವಿಮಾ ಕಂತಿನಲ್ಲಿ ರೂ.40/–ನ್ನು ರಾಜ್ಯ ಸರ್ಕಾರದ ವತಿಯಿಂದ ಪಾವತಿಸಲಾಗುವುದು.

ಈ ಯೋಜನೆಯಡಿ ಸದಸ್ಯತ್ವ ಪಡೆದ ನೇಕಾರರು ಸ್ವಾಭಾವಿಕವಾಗಿ ಮೃತರಾದಲ್ಲಿ ರೂ.60,000.00, ಅಫಘಾತದಿಂದ ಮೃತರಾದಲ್ಲಿ ರೂ.1,50,000.00 ಗಳನ್ನು ವಿಮಾ ಪರಿಹಾರವಾಗಿ ಮೃತರ ನಾಮನಿರ್ದೇಶಿತರಿಗೆ ಹಾಗೂ ಅಫಘಾತದಿಂದ ಖಾಯಂ ಅಂಗವಿಕಲತೆ ಹೊಂದಿದಲ್ಲಿ ರೂ.75,000.00 ವಿಮಾ ಪರಿಹಾರವನ್ನು ಒದಗಿಸಲಾಗುತ್ತದೆ.

2016–17ನೇ ಸಾಲಿನಲ್ಲಿ 45000 ನೇಕಾರರನ್ನು ಅಳವಡಿಸುವ ಗುರಿ ಹೊಂದಿದ್ದು, ರೂ.20.00 ಲಕ್ಷಗಳ ಆಯವ್ಯಯ ಒದಗಿಸಲಾಗಿದೆ.

**ಇ. ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ:**

2016–17ನೇ ಸಾಲಿಗೆ ರೂ.65.00 ಲಕ್ಷಗಳ ಆಯವ್ಯಯ ಒದಗಿಸಲಾಗಿದೆ. ಸದರಿ ಅನುದಾನದಲ್ಲಿ ಸೇಲಂನಲ್ಲಿರುವ ಕೈಮಗ್ಗ ತರಬೇತಿ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕದ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಬಾಬ್ತು ರೂ.2.00 ಲಕ್ಷಗಳನ್ನು, ರೂ.43.00 ಲಕ್ಷಗಳನ್ನು ಮೃತ ನೇಕಾರರ ಅಂತ್ಯ ಸಂಸ್ಕಾರ, ನೇಕಾರರ ಹೃದಯ, ಕಿಡ್ನಿ ಮತ್ತು ಕ್ಯಾನ್ಸರ್‌ಗೆ ಸಂಬಂಧ ಕಾಯಿಲೆಗಳಿಗೆ ವೆಚ್ಚ ಮಾಡಿದ ವೈದ್ಯಕೀಯ ವೆಚ್ಚ ಮರುಪಾವತಿ ಹಾಗು ವಿದ್ಯಾರ್ಥಿ ವೇತನ ಬಾಬ್ತು ಮರುಪಾವತಿಸಲಾಗುವುದು. ರೂ.3.00 ಲಕ್ಷಗಳನ್ನು ಸಹಕಾರ ಸಂಘಗಳಿಗೆ ನಬಾರ್ಡ್ ಪುರ್ನಧನ ಯೋಜನೆಯಡಿ ಪಡೆದ ಸಾಲದ ಮೇಲಿನ ಬಡ್ಡಿ ಸಹಾಯಧನಕ್ಕಾಗಿ, ರೂ.16.00 ಲಕ್ಷಗಳನ್ನು ರಾಜ್ಯಮಟ್ಟದ ಕೈಮಗ್ಗ ಮೇಳದ ಆಯೋಜನೆಗಾಗಿ ಹಾಗೂ ರೂ.1.00 ಲಕ್ಷವನ್ನು ಕೈಮಗ್ಗ ನೇಕಾರರ ಪ್ರವಾಸಕ್ಕಾಗಿ ಬಳಸಲು ಉದ್ದೇಶಿಸಲಾಗಿದೆ.

**ಈ. ಕೈಮಗ್ಗ ಉತ್ಪನ್ನಗಳ ಮಾರುಕಟ್ಟೆ ಸಹಾಯ (20% ರಿಬೇಟ್) :**

ಕೈಮಗ್ಗ ಉತ್ಪನ್ನಗಳ ಉತ್ಪಾದನೆ ಹೆಚ್ಚಿಸಿ ನೇಕಾರರಿಗೆ ನಿರಂತರ ಉದ್ಯೋಗ ಒದಗಿಸುವ ಉದ್ದೇಶದಿಂದ ರಾಜ್ಯದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಮತ್ತು ಕಾವೇರಿ ಹ್ಯಾಂಡ್‌ಲೂಮ್ಸ್ ಸಂಸ್ಥೆಯ ವಾರ್ಷಿಕ ನಿಗದಿಪಡಿಸಿದ 180 ದಿನಗಳಲ್ಲಿ ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳ ಮೇಲೆ 20% ರಿಬೇಟ್‌ನ್ನು ರಾಜ್ಯ ಸರ್ಕಾರದ ವತಿಯಿಂದ ಮರುಪಾವತಿಸಲಾಗುವುದು.

2016–17ನೇ ಸಾಲಿಗೆ ರೂ.600.00 ಲಕ್ಷಗಳ ಆಯವ್ಯಯವನ್ನು ಕೈಮಗ್ಗ ಸಹಕಾರ ಸಂಘಗಳು, ಕಾವೇರಿ ಹ್ಯಾಂಡ್‌ಲೂಮ್ಸ್, ಉಣ್ಣೆ ನೇಕಾರರ ಮಹಾಮಂಡಳ, ಬೆಂಗಳೂರು ಹಾಗೂ ಖಾದಿಯೇತರ ಉಣ್ಣೆ ನೇಕಾರರ ಮಹಾಮಂಡಳ, ಚಳ್ಳಕೆರೆ ಸಂಸ್ಥೆಗಳಿಗೆ ರಿಬೇಟ್ ಭರಿಸಲು ಆಯವ್ಯಯ ನಿಗದಿಪಡಿಸಲಾಗಿದೆ.

**2ಆ. ವಿಶೇಷ ಘಟಕ ಯೋಜನೆ :**

ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿಗಳಿಗೆ ತರಬೇತಿ ನೀಡಿ

## ಕೈಮಗ್ಗ ಮತ್ತು ಜವಳಿ ಇಲಾಖೆ

## 2016–17ನೇ ಸಾಲಿನ ಯೋಜನಾವಾರು ಆಯವ್ಯಯ ವಿವರಗಳು

| ಕ್ರಮ ಸಂಖ್ಯೆ | ಯೋಜನೆಯ ವಿವರಗಳು | ಲೆಕ್ಕ ಶೀರ್ಷಿಕೆ | ಆಯವ್ಯಯ (ರೂ.ಲಕ್ಷಗಳಲ್ಲಿ) | | |
|---|---|---|---|---|---|
| | | | ರಾಜ್ಯದ ಪಾಲು) | ಕೇಂದ್ರದ ಪಾಲು | ಒಟ್ಟು |
| 1 | 2 | 3 | 4 | 5 | 6 |
| | ರಾಜ್ಯ ವಲಯ ಯೋಜನೆಗಳು | | | | |
| 1 | ವಸತಿ ಕಾರ್ಯಗಾರ–ಅನುದಾನ ಅ) ಇತರೆ ವೆಚ್ಚ | 2851–00–103–0–55–106 | 771.91 | | 771.91 |
| | ಆ) ವಿಘಯೋ | –422 | 162.89 | | 162.89 |
| | ಇ) ಗಿಉಯೋ | –423 | 65.20 | | 65.20 |
| | **ಒಟ್ಟು** | | **1000.00** | | **1000.00** |
| 2 | ನೇಕಾರರ ವಿಶೇಷ ಪ್ಯಾಕೇಜ್ ಅ) ಇತರೆ ವೆಚ್ಚ | 2851–00–103–0–62–059 | 10375.80 | | 10375.80 |
| | ಇ) ವಿಘಯೋ | –422 | 2198.87 | | 2198.87 |
| | ಈ) ಗಿಉಯೋ | –423 | 880.33 | | 880.33 |
| | **ಒಟ್ಟು** | | **13455.00** | | **13455.00** |
| 3 | ನೇಕಾರರ ವಿಶೇಷ ಪ್ಯಾಕೇಜ್–ಕೆಹೆಚ್‌ಡಿಸಿ–ಅ) ಇತರೆ ವೆಚ್ಚ | 2851–00–103–0–69–059 | 1853.00 | | 1853.00 |
| | ಇ) ವಿಘಯೋ | –422 | 391.00 | | 391.00 |
| | ಈ ಗಿಉಯೋ | –423 | 156.00 | | 156.00 |
| | **ಒಟ್ಟು** | | **2400.00** | | **2400.00** |
| 4 | ವಿದ್ಯುತ್‌ಮಗ್ಗ ಸ.ಸಂ.ಗಳಿಗೆ ಶೇರು ಹಣ ಸಹಾಯ | 4851–00–108–0–01–211 | 5.00 | | 5.00 |
| 5 | ಸಿದ್ಧ ಉಡುಪು ನೀತಿ ಅನುಷ್ಠಾನ– ಅ) ಇತರೆ ವೆಚ್ಚ | 2852–08–202–7–01–059 | 5789.00 | | 5789.00 |
| | ಆ) ವಿಘಯೋ | –422 | 1222.00 | | 1222.00 |
| | ಇ) ಗಿಉಯೋ | –423 | 489.00 | | 489.00 |
| | **ಒಟ್ಟು** | | **7500.00** | | **7500.00** |
| 6 | 2016–17ನೇ ಸಾಲಿಗೆ(2014–15ನೇ ಸಾಲಿನಲ್ಲಿ ಬಾಕಿ ಇರುವ ವಿಶೇಷ ಘಟಕ ಯೋಜನೆ) | 2851–00–001–0–06–422 | 1770.00 | | 1770.00 |
| | 2016–17ನೇ ಸಾಲಿಗೆ(2014–15ನೇ ಸಾಲಿನಲ್ಲಿ ಬಾಕಿ ಇರುವ ಗಿರಿಜನ ಉಪ ಯೋಜನೆ) | –423 | 794.00 | | 794.00 |
| | **ಒಟ್ಟು** | | 2564.00 | | 2564.00 |
| | **ಒಟ್ಟು ಮೊತ್ತ** | | **26924.00** | | **26924.00** |

ಇವರುಗಳಿಗೆ ಜವಳಿ ಕ್ಷೇತ್ರದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಲು ವಿನೂತನವಾಗಿ ಯೋಜನೆಯನ್ನು ರೂಪಿಸಲಾಗಿರುತ್ತದೆ. ಈ ಯೋಜನೆಯಡಿ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ತರಬೇತಿ, ಕಾರ್ಯಾಗಾರ, ಸಾಮೂಹಿಕ ಸೌಲಭ್ಯ ಕೇಂದ್ರಗಳು, ಸುಧಾರಿತ ಮಗ್ಗ ಮತ್ತು ಸಲಕರಣೆಗಳು, ದುಡಿಮೆ ಬಂಡವಾಳ, ಶೇರು ಬಂಡವಾಳ, ಹೊಸ ಸದಸ್ಯರುಗಳಿಗೆ ಶೇರು, ಮಗ್ಗಪೂರ್ವ ಸೌಲಭ್ಯಗಳು, ಸಂಚಾರಿ ಮಾರುಕಟ್ಟೆ ವಾಹನ ಮುಂತಾದ ಸೌಲಭ್ಯಗಳನ್ನು ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

2016–17ನೇ ಸಾಲಿಗೆ ರೂ.2198.87 ಲಕ್ಷಗಳನ್ನು 1575 ಪರಿಶಿಷ್ಟ ಜಾತಿ ನಿರುದ್ಯೋಗಿಗಳನ್ನು ನೇಕಾರಿಕೆ ವೃತ್ತಿಯಲ್ಲಿ ತೊಡಗಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಆಯವ್ಯಯ ಒದಗಿಸಲಾಗಿದೆ.

**2ಇ. ಗಿರಿಜನ ಉಪ ಯೋಜನೆ :**

ಪರಿಶಿಷ್ಟ ಪಂಗಡದ ನಿರುದ್ಯೋಗಿಗಳಿಗೆ ತರಬೇತಿ ನೀಡಿ ಇವರುಗಳಿಗೆ ಜವಳಿ ಕ್ಷೇತ್ರದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಲು ವಿನೂತನವಾಗಿ ಯೋಜನೆಯನ್ನು ರೂಪಿಸಲಾಗಿರುತ್ತದೆ. ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ತರಬೇತಿ, ಕಾರ್ಯಾಗಾರ, ಸಾಮೂಹಿಕ ಸೌಲಭ್ಯ ಕೇಂದ್ರಗಳು, ಸುಧಾರಿತ ಮಗ್ಗ ಮತ್ತು ಸಲಕರಣೆಗಳು, ದುಡಿಮೆ ಬಂಡವಾಳ, ಶೇರು ಬಂಡವಾಳ, ಹೊಸ ಸದಸ್ಯರುಗಳಿಗೆ ಶೇರು, ಮಗ್ಗಪೂರ್ವ ಸೌಲಭ್ಯಗಳು, ಸಂಚಾರಿ ಮಾರುಕಟ್ಟೆ ವಾಹನ



ಮುಂತಾದ ಸೌಲಭ್ಯಗಳನ್ನು ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

2016–17ನೇ ಸಾಲಿಗೆ, ಗಿರಿಜನ ಉಪಯೋಜನೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂ.880.33 ಲಕ್ಷಗಳನ್ನು 289 ಪರಿಶಿಷ್ಟ ಪಂಗಡದ ನಿರುದ್ಯೋಗಿಗಳನ್ನು ನೇಕಾರಿಕೆ ವೃತ್ತಿಯಲ್ಲಿ ತೊಡಗಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಆಯವ್ಯಯ ಒದಗಿಸಲಾಗಿದೆ.

**3. ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ (ಕೆ.ಹೆಚ್.ಡಿ.ಸಿ)**

2016–17ನೇ ಸಾಲಿಗೆ ರೂ.2400.00 ಲಕ್ಷಗಳ ಆಯವ್ಯಯ ಒದಗಿಸಲಾಗಿದೆ. ರೂ.1853.00 ಲಕ್ಷಗಳನ್ನು ಸಾಮಾನ್ಯ ಕಾರ್ಯಕ್ರಮಗಳು, ರೂ.391.00 ಲಕ್ಷಗಳನ್ನು ವಿಶೇಷ ಘಟಕ ಯೋಜನೆ ಮತ್ತು ರೂ.156.00 ಲಕ್ಷಗಳನ್ನು ಗಿರಿಜನ ಉಪಯೋಜನೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಒದಗಿಸಲಾಗಿದೆ.

**4. ನೂತನ ಜವಳಿ ನೀತಿ ಅನುಷ್ಠಾನ**

2016–17 ಸಾಲಿಗೆ ರೂ.7500.00 ಲಕ್ಷಗಳ ಆಯವ್ಯಯ ಒದಗಿಸಲಾಗಿದ್ದು, ಇದರಲ್ಲಿ ರೂ.350.00 ಲಕ್ಷಗಳನ್ನು 5250 ಪರಿಶಿಷ್ಟ ಜಾತಿ ಫಲಾನುಭವಿಗಳ, ರೂ.150.00 ಲಕ್ಷಗಳನ್ನು 2250 ಪರಿಶಿಷ್ಟ ಪಂಗಡದ ಫಲಾನುಭವಿಗಳ ಹಾಗೂ ರೂ.1000.00 ಲಕ್ಷಗಳನ್ನು 14900 ಸಾಮಾನ್ಯ ವರ್ಗದ ಫಲಾನುಭವಿಗಳ ಸಿದ್ಧ ಉಡುಪು ತರಬೇತಿಗಾಗಿ, ರೂ.3711.00 ಲಕ್ಷಗಳನ್ನು ಜವಳಿ ಘಟಕಗಳಿಗೆ ಪ್ರೋತ್ಸಾಹನ ಮತ್ತು ಉತ್ತೇಜನಗಳಿಗಾಗಿ, ರೂ.1200.00 ಲಕ್ಷಗಳನ್ನು ಮೆಗಾ ಪ್ರಾಜೆಕ್ಟ್ ಸ್ಥಾಪನೆಗಾಗಿ, ರೂ.789.00 ಲಕ್ಷಗಳನ್ನು ಗ್ರೀನ್ ಫೀಲ್ಡ್ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆಗಾಗಿ ಹಾಗೂ ರೂ.300.00 ಲಕ್ಷಗಳನ್ನು ಯೋಜನಾ ನಿರ್ವಹಣಾ ವೆಚ್ಚಕ್ಕಾಗಿ ಆಯವ್ಯಯ ನಿಗದಿಪಡಿಸಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

**5. ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಶೇರು ಬಂಡವಾಳ ಹೂಡಿಕೆ ಯೋಜನೆ**

2016–17ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ಆಯವ್ಯಯ ಒದಗಿಸಿ ಇದನ್ನು 5 ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ.

2016–17ನೇ ಸಾಲಿಗೆ (2014–15ನೇ ಸಾಲಿನಲ್ಲಿ ಬಾಕಿ ಇರುವ ವಿಶೇಷ ಘಟಕ ಯೋಜನೆ ರೂ. 1770.00 ಲಕ್ಷ ಹಾಗೂ ಗಿರಿಜನ ಉಪ ಯೋಜನೆ ರೂ.794.00 ಲಕ್ಷ) 2013ರ ಸಮಾಜ ಕಲ್ಯಾಣ ಇಲಾಖೆ ಕಾಯ್ದೆಯಡಿ ಬರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಸತಿ ನಿಲಯ ಹಾಗು ಆಶ್ರಮ ಶಾಲೆಗಳಿಗೆ ಬೆಡಶೀಟ್ ಮತ್ತು ಬ್ಲಾಂಕೆಟ್ ಮತ್ತು ಕಾರ್ಪೆಟ್ ಒದಗಿಸಲಾಗುವುದು. ❑


ಅಭಿವೃದ್ಧಿ ಪಥ

## ಆನ್‌ಲೈನ್ ಪೋರ್ಟಲ್

ಕೈಮಗ್ಗ ಬಟ್ಟೆಗಳ ಪ್ರದರ್ಶನ ಮತ್ತು ಮಾರಾಟಗಳಿಗೆ ಅನುಕೂಲವಾಗುವಂತೆ, ಮಳಿಗೆ ಹಂಚಿಕೆ ಮಾಡುವ ಆನ್‌ಲೈನ್ ಪೋರ್ಟಲ್ ಅನ್ನು ಕೇಂದ್ರ ಜವಳಿ ಸಚಿವಾಲಯ ಇತ್ತೀಚೆಗೆ ಆರಂಭಿಸಿದೆ. ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿ ಆಶ್ರಯದಲ್ಲಿ ವಾರ್ಷಿಕ ಸುಮಾರು 340 ಮಾರಾಟ ಉತ್ಸವಗಳು ನಡೆಯುತ್ತವೆ. ಈ ಸಂದರ್ಭಗಳಲ್ಲಿ ನೇಕಾರರಿಗೆ / ಸಂಘಟನೆಗಳಿಗೆ ಪಾರದರ್ಶಕವಾಗಿ ಮಳಿಗೆ ವಿತರಣೆ ಆಗುವಂತೆ ನೋಡುಕೊಳ್ಳುವುದು ಇದರ ಉದ್ದೇಶ. ನಿಯತಕಾಲಿಕೆಗಳಲ್ಲಿನ ಜಾಹಿರಾತನ್ನು ನೋಡಿ, ನೇಕಾರರು / ಸಂಘಟನೆಗಳು ಮಳಿಗೆಗಾಗಿ ಆನ್‌ನೈಲ್ ಪೋರ್ಟಲ್‌ನಲ್ಲಿ ಮೊದಲ ಬಾರಿ ಅರ್ಜಿ ಹಾಕಿಕೊಳ್ಳುವಾಗ ಲಾಗಿನ್ ಹಾಗೂ ಪಾಸ್‌ವರ್ಡ್ ದೊರಕುತ್ತದೆ. ನಂತರದ ಸಂದರ್ಭದಲ್ಲಿ ಈ ಮಾಹಿತಿ ಅಪ್‌ಡೇಟ್ ಆಗುತ್ತಲೇ ಇರುತ್ತದೆ.

# ರೇಷ್ಮೆ ಉತ್ಪಾದನೆ; ಮುಂಚೂಣಿಯಲ್ಲಿ ಕರ್ನಾಟಕ

* ಎನ್. ವಾಯ್. ಚಿಗರಿ



**2015-16 ನೇ ಸಾಲಿನಲ್ಲಿ ದೇಶದ 27 ರಾಜ್ಯಗಳ ಒಟ್ಟು ಕಚ್ಚಾ ರೇಷ್ಮೆ ಉತ್ಪಾದನೆಯು 20,433 ಮೆ.ಟನ್ ಆಗಿದ್ದರೆ ಅದರಲ್ಲಿ ಕರ್ನಾಟಕದ ಪಾಲು 9823 ಮೆ.ಟನ್ ಇದ್ದು, ರೇಷ್ಮೆ ಉತ್ಪಾದನೆಯಲ್ಲಿ ತನ್ನ ಅಗ್ರಸ್ಥಾನವನ್ನು ಉಳಿಸಿಕೊಂಡಿದೆ.**

ರೇಷ್ಮೆ ಎಂದ ತಕ್ಷಣ ಜಾಗತಿಕ ಮಟ್ಟದಲ್ಲಿ ಎಲ್ಲರೂ ಜ್ಞಾಪಿಸಿಕೊಳ್ಳುವುದು ಚೀನಾ ದೇಶ. ಕ್ರಿ.ಪೂ. 2700ರಲ್ಲಿ ಚೀನಾದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ದಾಖಲಿಸಲಾಗಿದೆ. ಚೀನಾದಿಂದ ಟಿಬೆಟ್, ಉಜ್ಬೇಕಿಸ್ತಾನ ಮಧ್ಯಪೂರ್ವ ರಾಷ್ಟ್ರಗಳ ಮೂಲಕ ಯೂರೋಪ್ ದೇಶಗಳಿಗೆ ರೇಷ್ಮೆ ಕೃಷಿಯು ಹಬ್ಬಿರುತ್ತದೆ. ಏಶಿಯಾ ಖಂಡದಿಂದ ಯೂರೋಪ್ ಖಂಡಕ್ಕೆ ರೇಷ್ಮೆಯು ಸಾಗಿದ ದಾರಿಯನ್ನು "ಆರು ಸಾವಿರ ಮೈಲುಗಳ ರೇಷ್ಮೆ ರಸ್ತೆ" ಎಂದು ಕರೆಯುತ್ತಾರೆ. ರೇಷ್ಮೆ ಕಸುಬಿನ ಬಗ್ಗೆ ಚೀನಾ ದೇಶದಂತೆ ಭರತಖಂಡದಲ್ಲಿ ಸ್ಪಷ್ಟ ಉಲ್ಲೇಖವಿಲ್ಲದಿದ್ದರೂ ಇದು ಹಿಮಾಲಯ ಪರ್ವತಗಳ ಅಡಿಯಲ್ಲಿ ಪ್ರಾರಂಭವಾಯಿತೆಂದು ಹೇಳಬಹುದು. ಈ ಪ್ರದೇಶವು ಭಾರತವನ್ನು ಒಳಗೊಂಡಿದೆ. ಇದಕ್ಕೆ ಉದಾಹರಣೆ: ಉತ್ತರಭಾರತದ ಜಮ್ಮು-ಕಾಶ್ಮೀರ, ಹರಿಯಾಣ, ಪಂಜಾಬ್ ಹಾಗೂ ಇತರ ರಾಜ್ಯಗಳಲ್ಲಿ ಹಿಪ್ಪುನೇರಳೆ ಮರಗಳು ಸ್ವಾಭಾವಿಕವಾಗಿ ಬೆಳೆದಿರುವುದರಿಂದ ಗಮನಿಸಬಹುದಾಗಿದೆ.


ಜಾಗತಿಕ ಮಟ್ಟದಲ್ಲಿ ರೇಷ್ಮೆ (ಮಲ್ಬರಿ ಸಿಲ್ಕ್) ಉತ್ಪಾದನೆಯಲ್ಲಿ ಚೀನಾ ಪ್ರಥಮ ಸ್ಥಾನದಲ್ಲಿದ್ದರೆ ಭಾರತ ಎರಡನೇ ಸ್ಥಾನದಲ್ಲಿದೆ. ಭಾರತದಲ್ಲಿ ಮೊಟ್ಟಮೊದಲು ಬಂಗಾಳದಲ್ಲಿ ರೇಷ್ಮೆ ಕಸುಬು ಪ್ರಾರಂಭವಾಗಿದ್ದರೂ ಸಹ ಕರ್ನಾಟಕವು ಇಂದಿಗೂ ರೇಷ್ಮೆ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ.

ಮುಂದೆ ವಿವರಿಸಿರುವ ನಾಲ್ಕು ಜಾತಿಯ ರೇಷ್ಮೆಯನ್ನು ಭಾರತದಲ್ಲಿ ಉತ್ಪಾದಿಸಲಾಗುತ್ತಿದೆ. * ಮುಗ ತಳಿ ರೇಷ್ಮೆಯು ಆಸ್ಸಾಂ ರಾಜ್ಯದ ಬ್ರಹ್ಮಪುತ್ರಾ ಕಣಿವೆಯಲ್ಲಿ ಉತ್ಪಾದನೆಯಾಗುತ್ತಿದ್ದು, ಜಗತ್ತಿನ ಇನ್ನಾವ ರಾಷ್ಟ್ರದಲ್ಲಿ ಈವರೆಗೆ ಮುಗ ರೇಷ್ಮೆ ಉತ್ಪಾದಿಸಲಾಗುತ್ತಿಲ್ಲ. * ಟಸರ್ ರೇಷ್ಮೆಯನ್ನು ಬಿಹಾರ್, ಮಧ್ಯಪ್ರದೇಶ, ಒಡಿಶಾ ರಾಜ್ಯಗಳಲ್ಲಿ ಪ್ರಮುಖವಾಗಿ ಉತ್ಪಾದಿಸಲಾಗುತ್ತಿದೆ. * ಅದರಂತೆ ಈಶಾನ್ಯ ರಾಜ್ಯಗಳಲ್ಲಿ ಎರಿ ರೇಷ್ಮೆಯು ಪ್ರಮುಖವಾಗಿ ಉತ್ಪಾದನೆಯಾಗುತ್ತಿದೆ. ಇದರ ಕೋಶವನ್ನು ಆಹಾರವನ್ನಾಗಿ ಉಪಯೋಗಿಸುತ್ತಾರೆ. * ಹಿಪ್ಪುನೇರಳೆ ರೇಷ್ಮೆ (ಮಲ್ಬರಿ ಸಿಲ್ಕ್) ಪ್ರಮುಖವಾಗಿ ಕರ್ನಾಟಕ, ಬಂಗಾಳ, ಜಮ್ಮು-ಕಾಶ್ಮೀರ, ಆಂಧ್ರಪ್ರದೇಶ, ಹಾಗೂ ತಮಿಳುನಾಡಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ಮಹಾರಾಷ್ಟ್ರ, ಮಧ್ಯಪ್ರದೇಶ ಹಾಗೂ ದೇಶದ ಇತರೇ ರಾಜ್ಯಗಳಲ್ಲಿ ಅಲ್ಪ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತಿದೆ.

### ಇತಿಹಾಸ

ಕರ್ನಾಟಕದಲ್ಲಿ (ಹಳೇ ಮೈಸೂರು ಪ್ರಾಂತ) ಮೊಟ್ಟಮೊದಲು ರೇಷ್ಮೆ ಕೃಷಿಯನ್ನು 1785 ರಲ್ಲಿ ಅಂದಿನ ಮೈಸೂರು ಆಳರಸರಾದ ಟಿಪ್ಪುಸುಲ್ತಾನರು ಮೊಟ್ಟಮೊದಲು ಪ್ರಾರಂಭಿಸಿದರು. ಇವರು ಸಪ್ಟೆಂಬರ್-1786ರಲ್ಲಿ ರೇಷ್ಮೆ ಬೀಜ ಹಾಗೂ ಹುಳು ಸಾಕಾಣಿಕೆಯ ಪರಿಣಿತರನ್ನು ಕರೆತರಲು ಪಶ್ಚಿಮ ಬಂಗಾಳಕ್ಕೆ ಜನರನ್ನು ಕಳುಹಿಸಿಕೊಟ್ಟರು. (Kirk Patrick 1811,418-419) ಅಲ್ಲದೇ, ಇವರು ರೇಷ್ಮೆ ಹುಳು ಸಾಕಾಣಿಕೆಯ ಬಗ್ಗೆ ಯುದ್ಧಭೂಮಿಯಿಂದಲೇ ಸಲಹೆಗಳನ್ನು ನೀಡುತ್ತಿದ್ದರೆಂದು ಉಲ್ಲೇಖಿಸಲಾಗಿದೆ. ಈ ರೀತಿಯಿಂದ ತಂದಿರುವ ರೇಷ್ಮೆ ಬೀಜವು ಈವತ್ತಿನ ಮೈಸೂರು ಶುದ್ಧ ತಳಿಯಾಗಿ

* ರೇಷ್ಮೆ ಕೃಷಿ ತಜ್ಞರು, ನಿವೃತ್ತ ಉಪನಿರ್ದೇಶಕರು, ರೇಷ್ಮೆ ಇಲಾಖೆ. Email : chigariny.seri@gmail.com




ಅಭಿವೃದ್ಧಿಹೊಂದಿತು. (ಶರ್ಮಾರಾವ್ 1936, ಎ,27)

1793–94 ರಲ್ಲಿ ಟಿಪ್ಪುಸುಲ್ತಾನರು ಅವರ ಅಧೀನ ಸಂಸ್ಥಾನದಲ್ಲಿ 21 ರೇಷ್ಮೆ ಸಂತಾನ ಅಭಿವೃದ್ಧಿ ಕೇಂದ್ರ (Breeding Stations) ಗಳನ್ನು ಪ್ರಾರಂಭಿಸಿದರು. ಇದನ್ನು "ಮೈಸೂರಿನ ಪ್ರಥಮ ರೇಷ್ಮೆ ಅಭಿವೃದ್ಧಿ ಯೋಜನೆ" ಎಂದು ಗುರುತಿಸಲಾಗಿದೆ. ರೇಷ್ಮೆ ಕೃಷಿಯ ಬಗ್ಗೆ ಟಿಪ್ಪು ಸುಲ್ತಾನರಿಗೆ ಎಷ್ಟು ಆಸಕ್ತಿ ಇತ್ತು ಎನ್ನುವುದರ ಬಗ್ಗೆ ಅವರ ವೈರಿಪಡೆಯ ಬ್ರಿಟಿಷ್ ಸೈನ್ಯಾಧಿಕಾರಿ ತಮ್ಮ ದಿನಚರಿಯಲ್ಲಿ ಈ ರೀತಿಯಾಗಿ ಉಲ್ಲೇಖಿಸಿದ್ದಾರೆ.Though it was unsuccessful persuit of Sultan he was more enquiring about Sericulture In War field. (S R Charsley 1982)

ಕರ್ನಾಟಕದಲ್ಲಿ ರೇಷ್ಮೆ ಉಗಮ ಮತ್ತು ಬೆಳವಣಿಗೆಯು 1785 ರಿಂದ 1840ರವರೆಗೆ ಟಿಪ್ಪುಸುಲ್ತಾನರ ಅವಧಿಯಲ್ಲಿ ಆಯಿತು ಅಲ್ಲದೇ ಮೈಸೂರು ರೇಷ್ಮೆಯನ್ನು ಮೊಟ್ಟಮೊದಲಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ (ಯೂರೋಪ್ ರಾಷ್ಟ್ರಗಳಿಗೆ) ಪರಿಚಯಿಸಿದ ಖ್ಯಾತಿ ಇವರಿಗೆ ಸಲ್ಲುತ್ತದೆ.

1841 ರಲ್ಲಿ ರೇಷ್ಮೆ ಗೂಡು ಹಾಗೂ ರೇಷ್ಮೆಯನ್ನು ಸಂತೆಯಲ್ಲಿ ಮಾರಾಟ ಮಾಡಲಾಗುತ್ತಿತ್ತು. (Gegoghegen 1872, 94)

ಕ್ಲೋಸಪೇಟ್ (ಇಂದಿನ ರಾಮನಗರ) ಸಂತೆಯಲ್ಲಿ ರೇಷ್ಮೆ ಗೂಡು ಹಾಗೂ ಕಚ್ಚಾ ರೇಷ್ಮೆಯ ವಹಿವಾಟಾಗುತ್ತಿತ್ತು. ಈ ಮಾರುಕಟ್ಟೆಗಳು ನಿಜವಾಗಿ ಇಲಾಖೆಯ ಅತೀ ಮುಖ್ಯವಾದ ಅಂಗವಾಗಿದ್ದವು.

1820 ರಲ್ಲಿ ಚನ್ನಪಟ್ಟಣದಲ್ಲಿ ಕಚ್ಚಾರೇಷ್ಮೆಯ ಮಾರಾಟದ ಬಗ್ಗೆ ಹಾಗೂ 1832ರಲ್ಲಿ ಮೈಸೂರು ರೇಷ್ಮೆ ದರ ನಿಗದಿಯಾಗಿರುವ ಬಗ್ಗೆ ಉಲ್ಲೇಖಿಸಲಾಗಿದೆ. (S R Charsley 1982).

ಕರ್ನಾಟಕದಲ್ಲಿ ರೇಷ್ಮೆ ಇಲಾಖೆಯನ್ನು 1914 ರಲ್ಲಿ ಪ್ರಾರಂಭಿಸಲಾಯಿತು. ಮೊದಲನೆಯ ಜಾಗತಿಕ ಯುದ್ಧದ ಅವಧಿಯಲ್ಲಿ ಮೈಸೂರು ಪ್ರಾಂತದಲ್ಲಿ ಮೊಟ್ಟಮೊದಲು ಕೆಲವೊಂದು ಮಾರುಕಟ್ಟೆಗಳು ಪ್ರಾರಂಭವಾದವು. (Tariff Board 1940,195) ಆದರೆ 2 ನೇ ಜಾಗತಿಕ ಯುದ್ಧದಲ್ಲಿ ಕೇವಲ ಮೂರು ಮಾರುಕಟ್ಟೆಗಳು ಕೆಲಸ ನಿರ್ವಹಿಸಿದ್ದು, ಅದರಲ್ಲಿ ಚನ್ನಪಟ್ಟಣ ಮಾರುಕಟ್ಟೆಯು ಒಂದಾಗಿತ್ತು. ಅದರ ಉಸ್ತುವಾರಿಗಾಗಿ ಒಬ್ಬ ಅಧಿಕಾರಿಯನ್ನು ನೇಮಿಸಲಾಗಿತ್ತು. 1820ರಲ್ಲಿ ಚನ್ನಪಟ್ಟಣದ ಮಾರುಕಟ್ಟೆಯಿಂದ ರೇಷ್ಮೆ ವಹಿವಾಟಾಗಿದ್ದು, 1832 ರಲ್ಲಿ ಮೈಸೂರು ರೇಷ್ಮೆಗೆ ದರ ನಿಗದಿಯಾಗಿರುವ ಬಗ್ಗೆ ಉಲ್ಲೇಖವಿದೆ. (Tariff Board 1935,501)

ಜಾಗತಿಕ ಯುದ್ಧಗಳ ಪರಿಣಾಮ ರೇಷ್ಮೆ ಗೂಡು ಹಾಗೂ ಕಚ್ಚಾ ರೇಷ್ಮೆಯ ದರವನ್ನು ನಿಯಂತ್ರಿಸಲು ಸರ್ಕಾರದ ಮಧ್ಯಪ್ರವೇಶ ಅನಿವಾರ್ಯವಾಯಿತು. ಪ್ರಾಥಮಿಕವಾಗಿ ವಹಿವಾಟು ನಡೆಸುತ್ತಿದ್ದ 51 ಮಾರುಕಟ್ಟೆಗಳಲ್ಲಿಯೇ ಗೂಡನ್ನು ವಿಲೇವಾರಿ ಮಾಡಬೇಕೆಂದು ಆದೇಶಿಸಲಾಯಿತು. (Manyam 1947,32). ಜಾಗತಿಕ ಯುದ್ಧದ ನಂತರ ಬೆಲೆ ನಿಯಂತ್ರಣ ಮುಕ್ತಾಯವಾದ ಕಾರಣ ಅನೇಕ ಮಾರುಕಟ್ಟೆಗಳು ಮುಚ್ಚಲ್ಪಟ್ಟವು.

1950 ರ ಮಧ್ಯದ ಅವಧಿಯಲ್ಲಿ ಹೊಸ ಮತ್ತು ಈವರೆಗೂ ನಡೆದುಕೊಂಡು ಬಂದಿರುವ ಮಾರುಕಟ್ಟೆಯ ವ್ಯವಸ್ಥೆಯು ರೂಪಗೊಂಡಿತು. ಇದರಿಂದ ಕಾನೂನಿನ ಪ್ರಕಾರ ಅವಕಾಶವನ್ನು ಕಲ್ಪಿಸಿ Mysore Silk worm, Seed Cocoon (Control of Distribution) Act No.1952 ಮೂಲಕ ರೂಪಿಸಲಾಯಿತು.

ಹಾಲಿ Karnataka Silkworm Seed, Cocoon, Silk Yarn (Regulation of Production, Supply,Distribution and Sale) Act 1959 Section 10 ರ ಪ್ರಕಾರ 54 ಮಾರುಕಟ್ಟೆಗಳು ಕೆಲಸ ನಿರ್ವಹಿಸುತ್ತಿವೆ. ಈ ಪೈಕಿ 10 ಮಾರುಕಟ್ಟೆಗಳು ಮೈಸೂರು ಬಿತ್ತನೆ ವಲಯದಲ್ಲಿ 8 ದ್ವಿತಳಿ ಬಿತ್ತನೆ ವಲಯದಲ್ಲಿ 1 ದ್ವಿತಳಿ ಸಂಕರಣ ಮಾರುಕಟ್ಟೆ ಹಾಗೂ 35 ಮಿಶ್ರತಳಿ ಗೂಡಿನ ಮಾರುಕಟ್ಟೆಗಳನ್ನು ಗುರುತಿಸಿ ಕೆಲಸ ನಿರ್ವಹಿಸುತ್ತಿವೆ. ಆದಾಗ್ಯೂ ಬಿತ್ತನೆ ವಲಯಗಳ ಮಾರುಕಟ್ಟೆಗಳನ್ನು ಹೊರತುಪಡಿಸಿ ಎಲ್ಲ ಮಿಶ್ರತಳಿ ಮಾರುಕಟ್ಟೆಗಳಲ್ಲಿ ದ್ವಿತಳಿ ಗೂಡಿನ ವಹಿವಾಟು ಮಾಡಲಾಗುತ್ತಿದೆ.

ಮೇಲೆ ವಿವರಿಸಿರುವಂತೆ ಪ್ರಾಯೋಗಿಕವಾಗಿ ಕರ್ನಾಟಕ ರಾಜ್ಯದ ನಾಡಿನ ಕೆಲವೊಂದು ಭಾಗಗಳಲ್ಲಿ ಟಸರ್ ಹಾಗೂ ಎರಿ ರೇಷ್ಮೆಯನ್ನು ಬೆಳೆಯಲಾಗುತ್ತಿತ್ತು. ಆದರೆ ಇಂದು ಸಂಪೂರ್ಣವಾಗಿ ಹಿಪ್ಪುನೇರಳೆ ರೇಷ್ಮೆಯನ್ನು ಉತ್ಪಾದಿಸಲಾಗುತ್ತಿದೆ. ಈ ರೇಷ್ಮೆಯು ಬೋಂಬ್ಯಾಕ್ಸ ಮೋರಿ ಎಂಬ ಹುಳದಿಂದ ಹಿಪ್ಪುನೇರಳೆ (ಮಲ್ಬರಿ) ಸೊಪ್ಪನ್ನು ತಿಂದು ರೇಷ್ಮೆಯನ್ನು ಕೊಡುತ್ತದೆ. ಈ ಹುಳುವಿಗೆ ಹಿಪ್ಪುನೇರಳೆ (ಮಲ್ಬರಿ) ಏಕೈಕ ಆಹಾರ ಸಸ್ಯವಾಗಿದ್ದರಿಂದ ಈ ರೇಷ್ಮೆಗೆ ಹಿಪ್ಪುನೇರಳೆ ರೇಷ್ಮೆ / ಮಲ್ಬರಿ ಸಿಲ್ಕ್ ಎಂದು ಕರೆಯುತ್ತಾರೆ.

2015–16 ರ ಇಲಾಖಾ ಅಂಕಿ–ಅಂಶಗಳ ಪ್ರಕಾರ 87,598 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಇದ್ದು, ಅದರಲ್ಲಿ 1,23,442 ಜನ ರೈತರು ಬೆಳೆಗಾರರಾಗಿದ್ದಾರೆ. ಇದೇ ಸಾಲಿನಲ್ಲಿ 70,436 ಮೆಟ್ರಿಕ್ ಟನ್ ಗೂಡಿನ ಉತ್ಪಾದನೆಯಾಗಿದ್ದು, ಅದರಲ್ಲಿ 8852 ಮೆ. ಟನ್ ಗೂಡು ದ್ವಿತಳಿ (ಬೈವೋಲ್ಟೈನ್) ಆಗಿರುತ್ತದೆ. ಇದೇ ಸಾಲಿನಲ್ಲಿ ಉತ್ಪಾದನೆಯಾದ ಒಟ್ಟು ಕಚ್ಚಾ ರೇಷ್ಮೆಯು 9823 ಮೆ. ಟನ್ ಆಗಿದ್ದರೆ ಅದರಲ್ಲಿ ಬೈವೋಲ್ಟೈನ್ ನ ಪಾಲು 1934 ಮೆ.ಟನ್ ಇರುತ್ತದೆ. ಇದು 2001–02 ನೇ ಸಾಲಿನಲ್ಲಿ ಕೇವಲ 394 ಮೆ. ಟನ್ ಉತ್ಪಾದನೆಯಾಗಿದೆ. ಇದನ್ನು ಗಮನಿಸಿದರೆ ರಾಜ್ಯದಲ್ಲಿ ಬೈವೋಲ್ಟೈನ್ ಗೂಡು ಹಾಗೂ ರೇಷ್ಮೆ ಉತ್ಪಾದನೆಯಲ್ಲಿ ಗಣನೀಯ ಪ್ರಗತಿಯಾಗಿರುವುದನ್ನು ಗಮನಿಸಬಹುದಾಗಿದೆ. ಅಲ್ಲದೇ ನಿಗದಿತ ಪ್ರದೇಶದ ಉತ್ಪಾದನೆ (Unit Area Production) ಹೆಕ್ಟೇರ್‌ಗೆ 2000–01 ರಲ್ಲಿ 509 ಕೆ.ಜಿ.ಗೂಡು ಉತ್ಪಾದನೆಯಾಗಿದ್ದರೆ 2015–16 ರಲ್ಲಿ 804 ಕೆ.ಜಿ. ಗೂಡಿನ ಉತ್ಪಾದನೆ ಇರುತ್ತದೆ. 2015–16 ನೇ ಸಾಲಿನಲ್ಲಿ ಒಟ್ಟು 6518 ಜನ ರೇಷ್ಮೆ ನೂಲು ಬಿಚ್ಚಾಣಿಕೆದಾರರಿದ್ದಾರೆ.

2015–16 ನೇ ಸಾಲಿನಲ್ಲಿ ದೇಶದ ಒಟ್ಟು 27 ರಾಜ್ಯಗಳ ಕಚ್ಚಾ ರೇಷ್ಮೆ ಉತ್ಪಾದನೆಯು 20,433 ಮೆ.ಟನ್ ಆಗಿದ್ದರೆ ಅದರಲ್ಲಿ ಕರ್ನಾಟಕದ ಪಾಲು 9823 ಮೆ. ಟನ್ ಇದ್ದು, ರೇಷ್ಮೆ ಉತ್ಪಾದನೆಯಲ್ಲಿ ತನ್ನ ಅಗ್ರಸ್ಥಾನವನ್ನು ಉಳಿಸಿಕೊಂಡಿದೆ. ಕರ್ನಾಟಕದಲ್ಲಿ ರೇಷ್ಮೆ ಉತ್ಪಾದನೆಯಲ್ಲಿ ಎಲ್ಲ ಜಿಲ್ಲೆಗಳು ತೊಡಗಿದ್ದರೂ ಸಹ ಪ್ರಮುಖ ಪಾತ್ರ ವಹಿಸಿರುವ ಜಿಲ್ಲೆಗಳೆಂದರೆ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು, (ನಗರ ಮತ್ತು ಗ್ರಾಮಾಂತರ), ತುಮಕೂರು, ಮಂಡ್ಯ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳು. ನಂತರ ಹೊಸ ಪ್ರದೇಶಗಳಾದ ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲಿಯೂ ಸಹ ರೇಷ್ಮೆ ಕೃಷಿ ಕೈಗೊಳ್ಳಲಾಗುತ್ತಿದೆ. ಅದರಂತೆ ಮುಂಬೈ–ಕರ್ನಾಟಕದ ಹಾಗೂ ಹೈದ್ರಾಬಾದ–ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ರೇಷ್ಮೆ ಕೃಷಿ ಇದೆ.

ರೇಷ್ಮೆ ಕಸುಬು ಒಂದು ಗುಡಿಕೈಗಾರಿಕೆಯಾಗಿದೆ. ರೈತರು ಉತ್ಪಾದಿಸುವ



ರೇಷ್ಮೆ ಗೂಡನ್ನು ಹಳ್ಳಿಗಳಲ್ಲಿಯೇ ನೂಲು ಬಿಚ್ಚಾಣಿಕೆಗಾಗಿ ಉಪಯೋಗಿಸಲಾಗುತ್ತಿದೆ. ಆದ್ದರಿಂದ, ಇದು ಒಂದು ಕೃಷಿ ಆಧರಿತ ಗುಡಿ–ಕೈಗಾರಿಕೆ. ಅಲ್ಲದೇ ರೇಷ್ಮೆ ಕಸುಬು ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾಗಿದೆ. ಏಕೆಂದರೆ, ರೇಷ್ಮೆ ಕಸುಬಿನಲ್ಲಿ ತೊಡಗಿರುವ ಶೇ. 50–60 ರಷ್ಟು ರೈತರು ಸಣ್ಣ, ಅತೀಸಣ್ಣ ಮತ್ತು ಮಧ್ಯಮ ವರ್ಗದ ರೈತರಾಗಿರುತ್ತಾರೆ. ಹಾಗೂ 1 ಎಕರೆ ಪ್ರದೇಶದಲ್ಲಿ ವಾರ್ಷಿಕ 5–6 ಬೆಳೆ ತೆಗೆಯಬಹುದಾಗಿದ್ದು, ವರ್ಷವಿಡಿ ಸಂಪಾದನೆ ಮಾಡಬಹುದಾಗಿದೆ. ಆದರೆ ಇತರೇ ಕೃಷಿ ಬೆಳೆಗಳು ವಾರ್ಷಿಕವಾಗಿ 1 ಅಥವಾ 2 ಆಗಿದ್ದು, ಅದೂ ಸಹ ಋತುಮಾನ ಆಧರಿತವಾಗಿರುತ್ತದೆ. ಆದರೆ ರೇಷ್ಮೆ ಕಸಬು ಮಾತ್ರ ವರ್ಷವಿಡಿ ಕೈಗೊಳ್ಳಬಹುದಾಗಿದೆ. ರೇಷ್ಮೆ ಕಸುಬಿನ ಕೊನೆಯ ಉತ್ಪನ್ನವಾದ ಬಟ್ಟೆ ಅಥವಾ ರೇಷ್ಮೆಯ ಬೆಲೆಯ ಕನಿಷ್ಠ ಶೇ.50 ರಷ್ಟು ಹಣ ರೈತರಿಗೆ ದೊರೆಯುತ್ತದೆ. ಇದು ಇನ್ನಾವ ಕೃಷಿಯ ಬೆಳೆಯಲ್ಲಿ ನಿರೀಕ್ಷಿಸಲಾಗುವುದಿಲ್ಲ. ಈಗಿನ ದರಕ್ಕೆ 1 ಎಕರೆ ಹಿಪ್ಪುನೇರಳೆ ಪ್ರದೇಶದಿಂದ ವರ್ಷಕ್ಕೆ ಕನಿಷ್ಠ 1 ಲಕ್ಷ ರೂ. ಆದಾಯವನ್ನು ಪಡೆಯಬಹುದಾಗಿದೆ. ಈ ಕಸುಬಿನ ಜೊತೆಗೆ ಉಳಿದಿರುವ ಹಿಪ್ಪುನೇರಳೆ ಸೊಪ್ಪನ್ನು ಉಪಯೋಗಿಸಲು ಕುರಿ, ಮೇಕೆ, ಹಸು ಇತ್ಯಾದಿ ಜಾನುವಾರುಗಳನ್ನು ಸಾಕಾಣಿಕೆ ಮಾಡಿ ಲಾಭ ಪಡೆಯಬಹುದಾಗಿದೆ. ಇದಕ್ಕೆ ಮಾದರಿಯಾಗಿರುವ ಜಿಲ್ಲೆ ಎಂದರೆ ಕೋಲಾರ (Silk and Milk goes together).

ಈ ಕಸುಬು ಕುಟುಂಬ ಸದಸ್ಯರಿಗೆ ಲಿಂಗ ಹಾಗೂ ವಯಸ್ಸಿನ ತಾರತಮ್ಯವಿಲ್ಲದೇ ಕೆಲಸವನ್ನು ಒದಗಿಸಿಕೊಡುತ್ತದೆ. ಅಂದರೆ 1 ಹೆಕ್ಟೇರ್ ಹಿಪ್ಪುನೇರಳೆ ಪ್ರದೇಶವು 13 ಜನರಿಗೆ ಸತತವಾಗಿ ಉದ್ಯೋಗವನ್ನು ಒದಗಿಸಿಕೊಡಬಹುದಾಗಿದೆ. ಅಲ್ಲದೇ ಉಳಿದಿರುವ ಹಿಪ್ಪುನೇರಳೆ ಕಡ್ಡಿಯನ್ನು ಉರುವಲಾಗಿ ಅಥವಾ ಕಾಂಪೋಸ್ಟ ತಯಾರಿಸಲು ಉಪಯೋಗಿಸಬಹುದಾಗಿದೆ. ಅಲ್ಲದೇ ಹುಳುವಿನ ಪಿಕ್ಕೆಯು ಉತ್ಕೃಷ್ಟವಾದ ಕಾಂಪೋಸ್ಟ ಗೊಬ್ಬರವಾಗುತ್ತದೆ. ಈ ಕಸುಬಿನಿಂದ ರೈತರ ಆರ್ಥಿಕ ಸುಧಾರಣೆ ಅಲ್ಲದೇ ಶೈಕ್ಷಣಿಕ ಹಾಗೂ ಸಾಮಾಜಿಕ ಸುಧಾರಣೆಗೆ ಕಾರಣವಾಗಿದೆ.

ರೇಷ್ಮೆ ಉದ್ಯಮ ಒಳ್ಳೆಯ ಉದ್ಯೋಗ ಅವಕಾಶವನ್ನು ಕಲ್ಪಿಸಬಹುದಾಗಿದೆ. ರೈತರ ಮಟ್ಟದಲ್ಲಿ ಹಿಪ್ಪುನೇರಳೆ ಬೇಸಾಯ, ಹುಳು ಸಾಕಾಣಿಕೆ, ಮನೆ ಸ್ವಚ್ಛಗೊಳಿಸುವುದು, ಹಣ್ಣು ಹುಳು ಬಿಡುವುದು, ಗೂಡು ಬಿಡಿಸಿ ವಿಂಗಡಿಸುವಂತಹ ಕೆಲಸಗಳಿರುತ್ತವೆ. ಅದರಂತೆ, ಬಿತ್ತನೆ ಕೋಠಿಯಲ್ಲಿ ಗೂಡು ಸಾಗಾಣಿಕೆ, ಗೂಡು ವಿಂಗಡಿಕೆ, ಗೂಡು ಕತ್ತರಿಸುವಿಕೆ, ಗೂಡು ಶೇಖರಣೆ, ಚಿಟ್ಟೆ ಜೋಡಣೆ ಹಾಗೂ ವಿಂಗಡಣೆ, ಮೊಟ್ಟೆ ತೊಳೆಯುವುದು ಹಾಗೂ ವಿತರಿಸುವ ಕೆಲಸಗಳಿರುತ್ತವೆ. ಅಲ್ಲದೇ, ರೇಷ್ಮೆ ನೂಲು ಬಿಚ್ಚಾಣಿಕೆದಾರರ ಘಟಕದಲ್ಲಿ ಗೂಡು ಸಾಗಾಣಿಕೆ, ವಿಂಗಡಣೆ, ಗೂಡು ಕುದಿಸುವಿಕೆ, ನೂಲು ಬಿಚ್ಚುವುದು, ಕೋಶ ಮತ್ತು ಜೂಟ್ ಸಂಗ್ರಹಿಸುವುದು, ಸ್ವಚ್ಛತಾ ಕಾರ್ಯ, ರೀ–ರೀಲಿಂಗ್ ಮಾಡುವುದು, ಲಡಿಗಳನ್ನು ತಯಾರಿಸುವುದು, ಸಂಗ್ರಹಿಸುವುದು ಹಾಗೂ ಮಾರಾಟ ಮಾಡುವ ಕೆಲಸಗಳಿರುತ್ತವೆ. ರೇಷ್ಮೆ ಹುರಿ ಮಾಡುವದು, ನೇಯುವುದು, ಹಾಗೂ ವಸ್ತ್ರಗಳ ಮಾರಾಟ ಮಾಡುವಂತಹ ಕೆಲಸಗಳಿರುತ್ತವೆ.

ಒಂದು ಹೆಕ್ಟೇರ್ ಪ್ರದೇಶ ಹಿಪ್ಪುನೇರಳೆಯ ರೇಷ್ಮೆ ಕಸುಬು ತೋಟ ನಿರ್ವಹಣೆಯಿಂದ ವಸ್ತ್ರ ಮಾರಾಟದವರೆಗೆ ಪೂರ್ಣ ಅಥವಾ ಅರೆಕಾಲಿಕವಾಗಿ 56 ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುತ್ತದೆ. ಇದರಲ್ಲಿ ಶೇ.60–70 ರಷ್ಟು ಚಟುವಟಿಕೆಗಳನ್ನು ಮಹಿಳೆಯರೇ ನಿರ್ವಹಿಸುತ್ತಾರೆ. ಈ ಕಚ್ಚಾ ರೇಷ್ಮೆಯನ್ನು ಉಪಯೋಗಿಸುವ ಪ್ರಮುಖ ರಾಜ್ಯಗಳೆಂದರೆ, ತಮಿಳುನಾಡು, ಆಂಧ್ರಪ್ರದೇಶ, ಗುಜರಾತ್, ರಾಜಸ್ಥಾನ, ಉತ್ತರಪ್ರದೇಶದ ವಾರಾಣಾಸಿ. ಕರ್ನಾಟಕದ ರೇಷ್ಮೆಯ ಗುಣಮಟ್ಟವು ತನ್ನದೇ ಆದ ಛಾಪನ್ನು ಮೂಡಿಸಿದ್ದು, ಈ ರಾಜ್ಯಗಳಿಂದ ಹೆಚ್ಚಿನ ಬೇಡಿಕೆ ಇರುತ್ತದೆ. ಇದು ರಾಜ್ಯದಲ್ಲಿ ರೇಷ್ಮೆ ಕೃಷಿಯ ಉತ್ತೇಜನಕ್ಕೆ ಮುಖ್ಯ ಕಾರಣವಾಗಿದೆ.

ರೇಷ್ಮೆಯನ್ನು ವಿಶೇಷವಾಗಿ ಶ್ರೀಮಂತ ದೇಶ, ರಾಜ್ಯ, ಅಥವಾ ಜನರು ಇಚ್ಛೆ ಪಡುವುದರಿಂದ ಆರ್ಥಿಕತೆಯ ದೃಷ್ಟಿಯಿಂದ

ಶ್ರೀಮಂತ ವರ್ಗದವರಿಂದ ದುಡಿಯುವ ವರ್ಗಕ್ಕೆ ಹಣ ವರ್ಗಾವಣೆಯಾಗಿ ಆರ್ಥಿಕ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಸಹಕಾರಿಯಾಗಿದೆ.

### ರೇಷ್ಮೆ ಇಲಾಖೆಯ ಸಾಧನೆಗಳು

* **ದ್ವಿತಳಿ (ಬೈವೊಲ್ಟಿನ್) ರೇಷ್ಮೆ ಉತ್ಪಾದನೆ :** ವಿಶ್ವಬ್ಯಾಂಕ್ ಯೋಜನೆ 1 ಮತ್ತು 2 ರ ಅವಧಿಯಿಂದಲೂ ದ್ವಿತಳಿ (ಬೈವೊಲ್ಟಿನ್) ರೇಷ್ಮೆ ಉತ್ಪಾದನೆಗೆ ಸಾಕಷ್ಟು ಒತ್ತು ಕೊಡಲಾಗುತ್ತಿದೆ. ಇದರಿಂದ ರೈತರಿಗೆ ಆರ್ಥಿಕವಾಗಿ ತಾಂತ್ರಿಕವಾಗಿ ಹಾಗೂ ಗುಣಾತ್ಮಕವಾಗಿ ಸುಧಾರಣೆಯಾಗಲು ಕಾರಣವಾಗಿದೆ. 2001–02 ನೇ ಸಾಲಿನಲ್ಲಿ ಕೇವಲ 394 ಮೆ. ಟನ್ ಬೈವೊಲ್ಟಿನ್ ರೇಷ್ಮೆ ಉತ್ಪಾದನೆಯಾಗಿದ್ದು, 2015–16 ನೇ ಸಾಲಿನಲ್ಲಿ 1344 ಮೆ.ಟನ್ ಬೈವೊಲ್ಟಿನ್ ರೇಷ್ಮೆ ಉತ್ಪಾದನೆಯಾಗಿರುತ್ತದೆ. ಈ ಬೆಳವಣಿಗೆಯು ಪ್ರೋತ್ಸಾಹದಾಯಕವಾಗಿದ್ದು, ಕೃಷಿ ಚಟುವಟಿಕೆಯಲ್ಲಿ ಹಸಿರು ಕ್ರಾಂತಿಯಾಗಿದ್ದರೆ ರೇಷ್ಮೆ ಕೃಷಿಯಲ್ಲಿ ಇದನ್ನು ಶ್ವೇತ ಕ್ರಾಂತಿ ಎಂದು ಕರೆಯಬಹುದಾಗಿದೆ. ಈ ಸಾಧನೆಗೆ ಉದ್ಯಮದ ಭಾಗೀದಾರರಾದ ರೈತರು, ಮೊಟ್ಟೆ ತಯಾರಕರು ಹಾಗೂ ನೂಲು ಬಿಚ್ಚಾಣಿಕೆದಾರರ ಪಾತ್ರ ಅತೀ ಮುಖ್ಯವಾಗಿದೆ. ಅಲ್ಲದೇ ಇಲಾಖೆ ಈ ಎಲ್ಲ ಭಾಗೀದಾರರಿಗೆ ಗಣನೀಯ ಪ್ರೋತ್ಸಾಹ ನೀಡುತ್ತಾ ಬರುತ್ತಿದೆ. ಅಲ್ಲದೇ ಇಲಾಖೆಯಲ್ಲಿ ಸಾಕಷ್ಟು ಪ್ರಮಾಣದ ನೂತನ ತಾಂತ್ರಿಕತೆಯ ಅಳವಡಿಕೆಯಾಗಿದೆ. ಕ್ರಮೇಣ ರಾಜ್ಯದ ರೇಷ್ಮೆ ಉತ್ಪಾದನೆ ಶೇ. 50 ಕ್ಕಿಂತ ಹೆಚ್ಚು ಬೈವೊಲ್ಟಿನ್ ರೇಷ್ಮೆ ಉತ್ಪಾದನೆಯಾಗುವುದರಲ್ಲಿ ಸಂಶಯವಿಲ್ಲ.

* **ನೂಲು ಬಿಚ್ಚಾಣಿಕೆ :** ರೇಷ್ಮೆ ಗುಣಮಟ್ಟವು ಗೂಡಿನ ಗುಣಮಟ್ಟವನ್ನು ಅವಲಂಬಿಸಿದ್ದರೂ, ಅದಕ್ಕೆ ಬಳಸುವ ನೀರು, ಯಂತ್ರ, ಕೌಶಲ್ಯತೆ, ಹಾಗೂ ಬಂಡವಾಳ ಹೂಡಿಕೆಯಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಸಾಕಷ್ಟು ಶ್ರಮಿಸಿ ಉತ್ತಮ ಗುಣಮಟ್ಟದ ವಿಶೇಷವಾಗಿ ಬೈವೊಲ್ಟಿನ್ ರೇಷ್ಮೆ ಉತ್ಪಾದನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಶ್ಲಾಘನೀಯ. ಏಕೆಂದರೆ 1992–93 ನೇ ಸಾಲಿನಲ್ಲಿ ಇದ್ದ 12,726 ಸಾಂಪ್ರದಾಯಿಕ ಚರಕಗಳಿದ್ದು, 2014–15 ನೇ ಸಾಲಿಗೆ ಕೇವಲ 7636 ಚರಕಗಳು ಅದರಲ್ಲಿಯೂ ಸಹ ಸುಧಾರಿತ ಚರಕಾಗಳು ಕೆಲಸ ನಿರ್ವಹಿಸುತ್ತಿವೆ. ಇವುಗಳ



ಜೊತೆಗೆ 4405 ಕಾಟೇಜ್ ಬೇಸಿನ್, 236 ಮಲ್ಟಿ ಎಂಡ್ ಘಟಕಗಳು ಕೆಲಸ ನಿರ್ವಹಿಸುತ್ತಿದ್ದರೆ 2015–16 ನೇ ಸಾಲಿಗೆ 5 ಸ್ವಯಂ ಚಾಲಿತ ನೂಲು ಬಿಚ್ಚಾಣಿಕೆ ಯಂತ್ರಗಳು (ARM) ಅಳವಡಿಕೆಯಾಗಿವೆ. ಈ ಉದ್ಯೋಗದಲ್ಲಿ ತೊಡಗಿರುವ ಬಹುತೇಕ ಜನರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗದವರಾಗಿದೆ. ಇದರ ಪರಿಣಾಮ ಚರಕಾದಿಂದ ತೆಗೆಯುತ್ತಿದ್ದ 14 ರೆಂಡಿಟಾ (1 ಕೆ.ಜಿ. ರೇಷ್ಮೆ ಉತ್ಪಾದಿಸಲು ಬೇಕಾಗುವ ಗೂಡಿನ ಪ್ರಮಾಣ) ದಿಂದ ಚರಕಾ 8 ರೆಂಡಿಟಾ ಹಾಗೂ ಮಲ್ಟಿ ಎಂಡ್ ಮತ್ತು ಸ್ವಯಂ ಚಾಲಿತ ನೂಲು ಬಿಚ್ಚಾಣಿಕೆ ಯಂತ್ರಗಳು (ARM) ಗಳು 7 ರೆಂಡಿಟಾಕ್ಕೆ ಬಂದಿರುತ್ತವೆ. ಇದು ತಾಂತ್ರಿಕವಾಗಿ ಒಳ್ಳೆಯ ಸಾಧನೆಯಾಗಿದೆ.

### ಇಲಾಖೆಯ ಇತರೆ ಸಾಧನೆಗಳು

* ಹಿಪ್ಪುನೇರಳೆ ಉತ್ಪಾದಕತೆಯು ಒಂದು ಹೆಕ್ಟೇರಿಗೆ ಮೊದಲು ಇದ್ದ 20 ಮೆ.ಟನ್ ನಿಂದ 70 ಮೆ.ಟನ್ ವರೆಗೆ ಹೆಚ್ಚಳವಾಗಿದೆ. * ಹಿಪ್ಪುನೇರಳೆ ತಳಿ ಲೋಕಲ್ ಕಡ್ಡಿಯಿಂದ ವ್ಹಿ–1 ತಳಿಯವರೆಗೆ ಬದಲಾವಣೆಯಾಗಿದೆ. * ನಿಗದಿತ ಪ್ರದೇಶದ ಉತ್ಪಾದಕತೆ (Unit Area Production) ಮೊದಲು ಇದ್ದ 50 ಕೆ.ಜಿ. ಗೂಡಿನಿಂದ 112 ಕೆ.ಜಿ. ವರೆಗೆ ಹೆಚ್ಚಳವಾಗಿದೆ. * ಗೂಡಿನ ಸರಾಸರಿ ಇಳುವರಿ 1970 ರ ದಶಕದಲ್ಲಿ ಇದ್ದ 19 ಕೆ.ಜಿ. ಯಿಂದ ಕನಿಷ್ಠ 70 ಕೆ.ಜಿ.ಯವರೆಗೆ ಹೆಚ್ಚಳವಾಗಿದೆ. * ರೇಷ್ಮೆ ಬೆಳೆಗಾರರಲ್ಲಿ ಹಿಪ್ಪುನೇರಳೆ ಬೇಸಾಯ, ಸೋಂಕು ನಿವಾರಣೆ, ಹುಳು ಸಾಕಾಣಿಕೆ, ಹಾಗೂ ಗೂಡು ವಿಂಗಡಣೆ ವಿಚಾರಗಳಲ್ಲಿ ಸಾಕಷ್ಟು ನೂತನ ತಾಂತ್ರಿಕತೆಗಳ ಅಳವಡಿಕೆಯಾಗಿದೆ. * ಪ್ರತ್ಯೇಕ ಚಾಕಿ ತೋಟದ ನಿರ್ವಹಣೆ ಹಾಗೂ ಹಿಪ್ಪುನೇರಳೆ ಬೇಸಾಯದಲ್ಲಿ ಅಂತರದ ಅಭಿವೃದ್ಧಿಯಾಗಿ ಹಿಪ್ಪುನೇರಳೆ ಮರ ನೆಡುವವರೆಗೂ ಪ್ರಗತಿ ಸಾಧಿಸಲಾಗಿದೆ. * ಖಾಸಗಿ ಚಾಕಿ ಸಾಕಾಣಿಕೆ ಕೇಂದ್ರಗಳ ಸ್ಥಾಪನೆ ಹಾಗೂ ಹುಳುಗಳ ವಿತರಣೆ. * ಪ್ರತ್ಯೇಕ ರೇಷ್ಮೆ ಹುಳು ಸಾಕುವ ಮನೆಯ ಪರಿಕಲ್ಪನೆ. * ಹನಿ ನೀರಾವರಿ ಅಳವಡಿಕೆಯಲ್ಲಿ ಪ್ರಗತಿ ಸಾಧಿಸಲಾಗಿದೆ. * ನೂಲು ಬಿಚ್ಚಾಣಿಕೆ – ನೂಲು ಬಿಚ್ಚಾಣಿಕೆಯಲ್ಲಿ ಸಾಂಪ್ರದಾಯಿಕ ಪದ್ಧತಿಯ ಚರಕಾದಿಂದ ಕಾಟೇಜ್ ಬೇಸಿನ್, ಮಲ್ಟಿ ಎಂಡ್, ಸೆಮಿ–ಅಟೋಮೆಟಿಕ್ ಮತ್ತು ಎ.ಆರ್.ಎಂ. ಅಳವಡಿಕೆಯವರೆಗೆ ಪ್ರಗತಿ ಸಾಧಿಸಲಾಗಿದೆ. * ದ್ವಿತಳಿ ರೇಷ್ಮೆ ಉತ್ಪಾದನೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. * ಬಾಯ್ಲರ್ ಅಳವಡಿಕೆ, ನೀರು ಶುದ್ಧಿಕರಣದ ಯಂತ್ರ ಅಳವಡಿಕೆ, ನೀರು ಕುದಿಸುವ ಯಂತ್ರದ ಅಳವಡಿಕೆ ಮುಂತಾದ ನೂತನ ತಾಂತ್ರಿಕತೆಗಳನ್ನು ಅಳವಡಿಸಲಾಗಿದೆ. * ನೂತನ ತಾಂತ್ರಿಕತೆಗಳ ಅಳವಡಿಕೆಯ ಕಾರಣದಿಂದ ರೆಂಡಿಟಾವನ್ನು 14 ರಿಂದ 7.07 ಕ್ಕೆ ತರಲಾಗಿದೆ.

### ರೇಷ್ಮೆ ಇಲಾಖೆಯ ಸೌಲಭ್ಯಗಳು

**ರೇಷ್ಮೆ ಬೆಳೆಗಾರರಿಗೆ :** ರಾಜ್ಯ ರೇಷ್ಮೆ ಬೆಳೆಗಾರರಿಗೆ ಹೊಸದಾಗಿ ಹೊಸತಳಿ ಹಿಪ್ಪುನೇರಳೆ ನಾಟಿ, ಹಿಪ್ಪುನೇರಳೆ ಸಸಿ ಬೆಳೆಸಲು ಉಪಕರಣಗಳಿಗೆ, ಹನಿ ನೀರಾವರಿ ಘಟಕ ಸ್ಥಾಪಿಸಲು, ಪ್ರತ್ಯೇಕ ರೇಷ್ಮೆ ಹುಳು ಸಾಕಾಣಿಕೆ ಮನೆಗೆ, ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪಿಸಲು ದ್ವಿತಳಿ ಚಾಕಿ ಹುಳುಗಳಿಗೆ, ರೇಷ್ಮೆ ಗೂಡಿಗೆ, ಹಾಗೂ ಹೊಸ ಪ್ರದೇಶದ ರೇಷ್ಮೆ ಬೆಳೆಗಾರರು ಸಾಂಪ್ರದಾಯಿಕ ಪ್ರದೇಶದ ಮಾರುಕಟ್ಟೆಗಳಲ್ಲಿ ಗೂಡು ವಹಿವಾಟು ಮಾಡಿದರೆ ಸಾಗಾಣಿಕೆ ವೆಚ್ಚಕ್ಕಾಗಿ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.


**ನೂಲು ಬಿಚ್ಚಾಣಿಕೆದಾರರಿಗೆ :** ರೇಷ್ಮೆ ಉದ್ಯಮದ ಇನ್ನೊಬ್ಬ ಅತಿ ಮುಖ್ಯವಾದ ಭಾಗೀದಾರರಾದ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಯಾಂತ್ರಿಕೃತ ಚರಕಾ ಅಳವಡಿಕೆಗೆ, ಕಾಟೇಜ್ ಬೇಸಿನ್ ಯಂತ್ರ ಅಳವಡಿಸಲು, ಮಲ್ಟಿ ಎಂಡ್ ಮತ್ತು ಸೆಮಿ–ಅಟೋಮೆಟಿಕ್ ನೂಲು ಬಿಚ್ಚಾಣಿಕೆ ಯಂತ್ರ ಮತ್ತು ಸ್ವಯಂಚಾಲಿತ ನೂಲು ಬಿಚ್ಚಾಣಿಕೆ ಯಂತ್ರ (ARM) ಗಳಿಗೆ ಸಹಾಯಧನ ನೀಡಲಾಗುವುದು. ಅಲ್ಲದೇ ಸೌರಶಕ್ತಿಯಿಂದ ನೀರು ಕಾಯಿಸುವ ಯಂತ್ರ, ಗೂಡು ಕುದಿಸುವ ಯಂತ್ರ, ನೀರು ಶುದ್ಧಿಕರಣದ ಯಂತ್ರಗಳ ಅಳವಡಿಕೆಗೆ ಸಹಾಯಧನ ನೀಡಲಾಗುತ್ತಿದೆ. ವಿದ್ಯುತ್

ಶಕ್ತಿಯ ಸರಬರಾಜಿಗೆ ಹಾಗೂ ಮಿಶ್ರತಳಿ ಹಾಗೂ ದ್ವಿತಳಿ ರೇಷ್ಮೆಗೆ ಸಹಾಯಧನವನ್ನು ನೀಡಲಾಗುತ್ತಿದೆ. 1785 ರಿಂದ 1840ರ ಅವಧಿಯಲ್ಲಿ ರೇಷ್ಮೆ ಕಸುಬು ಕರ್ನಾಟಕದಲ್ಲಿ ಪ್ರಾರಂಭವಾಗಿ ಅಭಿವೃದ್ಧಿ ಹೊಂದಿತು. 1914 ರಲ್ಲಿ ಇಲಾಖೆ ಪ್ರಾರಂಭವಾದ ನಂತರ 1952 ಹಾಗೂ 1959 ರ ಕಾಯ್ದೆಗಳು ರೇಷ್ಮೆ ಅಭಿವೃದ್ಧಿಗೆ ತುಂಬಾ ಸಹಾಯವಾಯಿತು. ವಿಶೇಷವಾಗಿ Karnataka Silkworm Seed, Cocoon, Silkyarn (Regulation of Production, Supply, Distribution and Sale) Act 1959 ಅಡಿಯಲ್ಲಿ ಇಲಾಖೆಯು ಸಾಕಷ್ಟು ಅಭಿವೃದ್ಧಿ ಹೊಂದಿ ದೇಶದಲ್ಲಿಯೇ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕವು ಮಾದರಿಯ ರಾಜ್ಯವಾಗಿ ಹೊರಹೊಮ್ಮಿದೆ. ಇಂತಹ ಕಾನೂನು ದೇಶದ ಯಾವುದೇ ರಾಜ್ಯದಲ್ಲಿ ರಚನೆಯಾಗಿಲ್ಲ. ಈ ಕಾಯ್ದೆ ಅಡಿಯಲ್ಲಿ ಇಲಾಖೆಯಲ್ಲಿ ಅನೇಕ ಸಂಸ್ಥೆಗಳು ನಿಯಮಬದ್ಧವಾಗಿ ಕಾರ್ಯನಿರ್ವಹಿಸುತ್ತಿವೆ. ಅವುಗಳೆಂದರೆ,

1) ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರಗಳು – (P4,P3,P2 and P1). 2) ಸರ್ಕಾರಿ ಬಿತ್ತನೆ ಕೋಠಿಗಳು – (P3, P2 and P1). 3) ತಾಂತ್ರಿಕ ಸೇವಾ ಕೇಂದ್ರಗಳು – (ಗೂಡಿನ ಹಾಗೂ ಗೂಡಿನ ನಂತರದ ಚಟುವಟಿಕೆಗಳು). 4) ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಗಳು. 5) ರೇಷ್ಮೆ ವಿನಿಮಯ ಕೇಂದ್ರಗಳು. 6) ರೇಷ್ಮೆ ಗುಣಮಟ್ಟದ ಪರೀಕ್ಷೆ ಹಾಗೂ ನಿಯಂತ್ರಣ ಕೇಂದ್ರ. 7) ಸರ್ಕಾರಿ ರೇಷ್ಮೆ ತರಬೇತಿ ಶಾಲೆಗಳು. 8) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ. 9) ಕರ್ನಾಟಕ ರೇಷ್ಮೆ ಕೈಗಾರಿಕಾ ಸಂಸ್ಥೆ

### ರೇಷ್ಮೆ ಉದ್ಯಮದ ಉಪ ಉತ್ಪನ್ನಗಳು

1. ರೇಷ್ಮೆ ಕಡ್ಡಿಯಲ್ಲಿ ಉರುವಲು ಅಥವಾ ಕಾಂಪೋಸ್ಟ ಗೊಬ್ಬರವನ್ನಾಗಿ ತಯಾರಿಸಲು ಬಳಸಬಹುದಾಗಿದೆ. 2. ರೇಷ್ಮೆ ಹುಳುವಿನ ಗೊಬ್ಬರವನ್ನು ಉತ್ಕೃಷ್ಟ ಕಾಂಪೋಸ್ಟ ಗೊಬ್ಬರ ಹಾಗೂ ಗೊಬರ ಗ್ಯಾಸ್ ಘಟಕದಲ್ಲಿ ಉಪಯೋಗಿಸಬಹುದಾಗಿದೆ. 3. ಹಿಪ್ಪುನೇರಳೆ ಎಲೆಯಿಂದ ಚಹಾವನ್ನು ತಯಾರಿಸುತ್ತಾರೆ. 4. ರೇಷ್ಮೆ ಹುಳುಗಳು ತಿಂದು ಉಳಿದಿರುವ ಹಿಪ್ಪುನೇರಳೆ ಸೊಪ್ಪನ್ನು ಕುರಿ, ಮೇಕೆ, ಹಸು, ಮುಂತಾದ ಜಾನುವಾರುಗಳಿಗೆ ಆಹಾರವನ್ನಾಗಿ



ಉಪಯೋಗಿಸಬಹುದು. 5. ಹಿಪ್ಪುನೇರಳೆ ಹಣ್ಣುಗಳನ್ನು ಜೆಲ್ಲಿ, ಜಾಮ್, ಹಾಗೂ ವೈನ್ ತಯಾರಿಕೆಗಾಗಿ ಉಪಯೋಗಿಸಲಾಗುತ್ತಿದೆ. 6. ಹಿಪ್ಪುನೇರಳೆ ಮರದ ಕಟ್ಟಿಗೆಯನ್ನು ಕ್ರಿಕೆಟ್ ಬ್ಯಾಟ್ ಹಾಗೂ ಇತರೇ ಆಟದ ಉಪಕರಣಗಳ ತಯಾರಿಕೆಯಲ್ಲಿ ಬಳಸಲಾಗುತ್ತಿದೆ. 7. ಬಿತ್ತನೆ ಕೋಠಿಯಲ್ಲಿ ಉಪಯೋಗಿಸಿದ ಚಿಟ್ಟೆ ಕೊರೆದ ಗೂಡಿನಿಂದ ಕರಕುಶಲ ವಸ್ತುಗಳ ತಯಾರಿಕೆಗಾಗಿ ಬಳಸಬಹುದಾಗಿದೆ. 8. ಗೂಡಿನ ಗುಂಜು, ಗೂಡು ಬಿಚ್ಚಾಣಿಕೆಯಲ್ಲಿ ಬರುವ ಜೂಟ್, ಅರ್ಧ ಬೆಂದ ಗೂಡು, ಗಂಟು ಗೂಡು ಇತ್ಯಾದಿಗಳನ್ನು ನೂತ ರೇಷ್ಮೆ (Spun Silk) ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತಿದೆ. 9. ನೂಲು ಬಿಚ್ಚಾಣಿಕೆಯಲ್ಲಿ ಉಪಯೋಗಿಸುವ ನೀರಿನಲ್ಲಿ ಸಸಾರಜನಕದ ಅಂಶವಿರುವುದರಿಂದ ಇದನ್ನು ದ್ರವರೂಪದ ಗೊಬ್ಬರವನ್ನಾಗಿ ಕೃಷಿಯಲ್ಲಿ ಬಳಸಲಾಗುತ್ತಿದೆ. 10. ಕೋಶ (Pupa) ದಿಂದ ಎಣ್ಣೆ, ಸಾಬೂನು, ಔಷಧಿ, ಕೀಲೆಣ್ಣೆ, ಹಾಗೂ ತಯಾರಿಸಲು ಉಪಯೋಗಿಸಲಾಗುತ್ತಿದೆ. 11. ಕೋಶದಿಂದ ತಯಾರಿಸಿದ ಪುಡಿಯು ಹೆಚ್ಚು ಸಸಾರಜನಕಯುಕ್ತ ವಾಗಿರುವುದರಿಂದ ಕೋಳಿ, ಹಂದಿ, ಹಾಗೂ ಮೀನು ಸಾಕಾಣಿಕೆಯಲ್ಲಿ ಆಹಾರವನ್ನಾಗಿ ಉಪಯೋಗಿಸುತ್ತಾರೆ. 12. ನೂತ ರೇಷ್ಮೆ (Spun Silk) ಯಿಂದ ಸೀರೆ, ಅಂಗಿ, ಸೂಟ್, ಶಾಲು, ಕಾರ್ಪೆಟ್ಸ್, ಹೊಲಿಗೆಯ ದಾರ ಮತ್ತು ಕಸೂತಿ ದಾರವನ್ನು ತಯಾರಿಸಲು ಉಪಯೋಗಿಸುತ್ತಾರೆ.

### ಕರ್ನಾಟಕದ ವಿವಿಧ ಭಾಗದ ರೇಷ್ಮೆ

ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ರೇಷ್ಮೆ ಗೂಡು ಹಾಗೂ ಬಿಚ್ಚಾಣಿಕೆಗೆ ಉಪಯೋಗಿಸುವ ನೀರಿನ ಗುಣದರ್ಮ ಮತ್ತು ಯಂತ್ರಗಳ ಆಧಾರದ ಮೇಲೆ ಉತ್ಪತ್ತಿಯಾಗುವ ಕರ್ನಾಟಕದ ವಿವಿಧ ಭಾಗದ ರೇಷ್ಮೆಗಳಿಗೆ ವಿಶಿಷ್ಟವಾದ ಬಣ್ಣ, ದರ, ಹಾಗೂ ಬೇಡಿಕೆ ಇದೆ. ಅವುಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ

#### ರೇಷ್ಮೆಯ ವಿಶೇಷತೆಗಳು

* ಇದು ರೇಷ್ಮೆ ಹುಳುವಿನ ಗ್ರಂಥಿಯಿಂದ ಉತ್ಪಾದಿಸಲ್ಪಡುವ ಸಸಾರಜನಕಯುಕ್ತ ಸ್ವಾಭಾವಿಕ ಎಳೆಯಾಗಿದೆ.
* ಇದು ಎಲ್ಲ ಸ್ವಾಭಾವಿಕ ಎಳೆಗಳಗಿಂತ ಬಲಿಷ್ಟವಾಗಿದ್ದು, ಅಷ್ಟೇ ನಯವಾಗಿರುತ್ತದೆ.
* ಇದನ್ನು ಚರ್ಮದ ನಂತರದ (Next to Skin) ಹೊದಿಕೆ ಎಂದು ಉಪಯೋಗಿಸಲಾಗುತ್ತದೆ. ಅಲ್ಲದೇ ವಸ್ತ್ರಗಳ ತಯಾರಿಕೆ ಹೊರತುಪಡಿಸಿ ಇದನ್ನು ಔಷಧಿ ಕಾಂತಿವರ್ಧಕ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.
* ಇದು ಸ್ವಾಭಾವಿಕವಾಗಿ ಕಾಂತಿ ಮತ್ತು ತೇಜಸ್ಸನ್ನು ಹೊಂದಿದೆ.
* ಬಣ್ಣಗಳನ್ನು ಗ್ರಹಿಸುವ ಶಕ್ತಿಯನ್ನು ಹೊಂದಿದೆ.
* ಹೆಚ್ಚಿನ ಹೀರಿಕೊಳ್ಳುವ ಶಕ್ತಿಯನ್ನು ಹೊಂದಿದೆ.
* ಇದು ತೂಕದಲ್ಲಿ ಹಗುರಾಗಿದ್ದು, ಹಾಗೂ ಸ್ಥಿತಿ ಸ್ಥಾಪಕತ್ವ ಗುಣವನ್ನು ಹೊಂದಿದೆ.
* ಇದನ್ನು ಉಡುಪಿನಲ್ಲಿ ಉಪಯೋಗಿಸಲಾಗುತ್ತಿದ್ದು, ರೇಷ್ಮೆಯನ್ನು ಮಹಿಳೆಯರ ಜೊತೆಗಾರ್ತಿ ಎಂದು ಕರೆಯುತ್ತಾರೆ.
* ಇದು ಹೊಳಪುಯುಕ್ತವಾಗಿದೆ.

ಜವಳಿ ಉದ್ಯಮದಲ್ಲಿ ರೇಷ್ಮೆ ನೂಲಿನ ಪಾತ್ರ ಶೇ. ೦.2ರಷ್ಟು ಮಾತ್ರ. ಆದರೆ ಮೇಲೆ ತಿಳಿಸಿರುವ ರೇಷ್ಮೆ ಗುಣಲಕ್ಷಣಗಳ ಕಾರಣ ರೇಷ್ಮೆಯ ಉಡುಪನ್ನು ಎಲ್ಲರೂ ಇಚ್ಛಿಸುತ್ತಾರೆ. ಆದ್ದರಿಂದಲೇ ಇದು ವಸ್ತ್ರಗಳ ರಾಣಿ ಎಂದು ಕರೆಸಿಕೊಂಡಿದೆ.

| ರೇಷ್ಮೆ ಇಲಾಖೆಯ ಅಂಕಿ–ಅಂಶಗಳು | | | | | | | | | | | | | | |
|---|---|---|---|---|---|---|---|---|---|---|---|---|---|---|
| ಕ್ರ. ಸಂ | ವರ್ಷ | ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರ್) | ಮೊಟ್ಟೆ ಉತ್ಪಾದನೆ (ಲಕ್ಷಗಳಲ್ಲಿ) | ರೇಷ್ಮೆ ಗೂಡಿನ ಉತ್ಪಾದನೆ (ಮೆ.ಟನ್) | | ರೇಷ್ಮೆ ಉತ್ಪಾದನೆ (ಮೆ.ಟನ್) | | ಪ್ರತಿ ಹೆಕ್ಟೇರ್‌ಗೆ ಉತ್ಪಾದಕತೆ (ಕೆ.ಜಿಗಳಲ್ಲಿ) | | ಗೂಡಿನ ಸರಾಸರಿ ದರ (ರೂ./ ಕೆ.ಜಿ) | ರೆಂಡಿಟ್ಟಾ | ರೇಷ್ಮೆ ಬೆಳೆಗಾರರ ಕುಟುಂಬಗಳು | ರೇಷ್ಮೆ ನೂಲು ಬಿಚ್ಚಾಣಿಕೆ ದಾರರು |
| | | | | ಒಟ್ಟು | ಒಟ್ಟಿನಲ್ಲಿ ದ್ವಿತಳಿ | ಒಟ್ಟು | ಒಟ್ಟಿನಲ್ಲಿ ದ್ವಿತಳಿ | ಗೂಡು | ರೇಷ್ಮೆ | | | | |
| 1 | 2000–01 | 1,12,557 | 1602.23 | 66,518 | 2,761 | 8.200 | 394 | 590.0 | 72.8 | 125.89 | 8.50 | 2,56,000 | 13,514 |
| 2 | 2001–02 | 1,16,158 | 1689.8 | 73,860 | 4,168 | 8,728 | 532 | 635.0 | 75.1 | 119.85 | 8.50 | 2,54,000 | 13,514 |
| 3 | 2002–03 | 88,903 | 1287.14 | 55,851 | 2,749 | 6,760 | 352 | 628.0 | 76.0 | 92.54 | 8.26 | 2,05,000 | 13,556 |
| 4 | 2003–04 | 79,778 | 974.42 | 44,652 | 2,545 | 5,949 | 339 | 560.0 | 74.6 | 125.74 | 7.50 | 1,91,000 | 12,435 |
| 5 | 2004–05 | 77,998 | 1094.11 | 54,210 | 3,236 | 7,302 | 498 | 695.0 | 93.6 | 113.65 | 7.42 | 1,77,000 | 12,670 |
| 6 | 2005–06 | 87,734 | 1088.99 | 55,493 | 2,575 | 7,471 | 396 | 632.0 | 85.2 | 134.59 | 7.42 | 1,79,000 | 12,252 |
| 7 | 2006–07 | 97,647 | 1221.92 | 58,697 | 2,235 | 7,883 | 358 | 601.0 | 80.7 | 129.12 | 7.45 | 1,80,000 | 11,109 |
| 8 | 2007–08 | 91,434 | 1183.91 | 60,796 | 2,585 | 8,240 | 401 | 665.0 | 90.1 | 119.27 | 7.38 | 1,66,000 | 10,601 |
| 9 | 2008–09 | 77,329 | 943.11 | 53,377 | 2,409 | 7,238 | 374 | 690.0 | 93.6 | 141.08 | 7.37 | 1,41,000 | 7,195 |
| 10 | 2009–10 | 82,098 | 890.93 | 54,282 | 2,126 | 7,360 | 335 | 661.0 | 89.6 | 172.41 | 7.37 | 1,41,528 | 7,358 |
| 11 | 2010–11 | 62,697 | 820.77 | 52,709 | 1,929 | 7,338 | 311 | 841.0 | 117.0 | 236.49 | 7.18 | 1,25,700 | 7,429 |
| 12 | 2011–12 | 70,958 | 759.24 | 55,957 | 2,249 | 7,796 | 363 | 789.0 | 109.8 | 188.04 | 7.18 | 1,32,205 | 7,430 |
| 13 | 2012–13 | 74,128 | 646.571 | 49,441 | 3,549 | 7,063 | 572 | 667.0 | 95.3 | 260.90 | 7.19 | 1,30,522 | 7,621 |
| 14 | 2013–14 | 80,872 | 1049.31 | 61,419 | 5,006 | 8,574 | 807 | 759.0 | 106.0 | 336.67 | 7.16 | 1,34,661 | 7,653 |
| 15 | 2014–15 | 88,489 | 1229.417 | 68,759 | 7,459 | 9,645 | 1,203 | 777.0 | 109.0 | 295.53 | 7.13 | 1,29,509 | 7,637 |
| 16 | 2015–16 | 87,598 | 1259.67 | 70,436 | 8,852 | 9,823 | 1,344 | 804.1 | 112.1 | 254.56 | 7.07 | 123,442 | 6,518 |

ಕೋಲಾರ, ಚಿಂತಾಮಣಿ, ಶಿಡ್ಲಘಟ್ಟ, ರಾಮನಗರ, ಕೊಳ್ಳೆಗಾಲ, ಸಿಂಗಾನಲ್ಲೂರು, ಮಾಂಬಳಿ, ಎಳಂದೂರು, ಚಾಟಿಪುರ, ಮಸನಾಪೂರ, ಮಾದಾಪೂರ, ಹಾಗೂ ಕಿರಸಗೂರ ರೇಷ್ಮೆಗಳೆಂದು ಹೆಸರುಗಳಿಸಿವೆ.



**ರೇಷ್ಮೆ ಸೀರೆಗಳು**


ಮೈಸೂರು ರೇಷ್ಮೆ, ಕೊಳ್ಳೆಗಾಲ, ಮೊಳಕಾಲ್ಮೂರು ಹಾಗೂ ಇಳಕಲ್ ರೇಷ್ಮೆ ಸೀರೆಗಳು ಕರ್ನಾಟಕದಲ್ಲಿ ಪ್ರಸಿದ್ಧವಾಗಿವೆ. ಆದರೆ ಕಾಂಚಿವರಂ, ಧರ್ಮಾವರಂ ರೇಷ್ಮೆ ಸೀರೆಗಳಿಗೆ ಉಪಯೋಗಿಸುವ ಕಚ್ಚಾ ರೇಷ್ಮೆಯು ಕರ್ನಾಟಕದ್ದಾಗಿರುತ್ತದೆ.

ಕರ್ನಾಟಕದಲ್ಲಿ ರೇಷ್ಮೆ ಉದ್ಯಮವು ಪ್ರಾರಂಭದಿಂದಲೂ ಮಾರುಕಟ್ಟೆಯ ಸ್ಪಷ್ಟ ಪರಿಕಲ್ಪನೆಯಿಂದ ಆರಂಭಗೊಂಡಿದ್ದು, ಸಾಕಷ್ಟು ಅಭಿವೃದ್ಧಿಯನ್ನು ಹೊಂದಿ ತಾಂತ್ರಿಕವಾಗಿ, ಆಡಳಿತಾತ್ಮಕವಾಗಿ ರೇಷ್ಮೆ ಉದ್ಯಮದಲ್ಲಿ ದೇಶ ಹಾಗೂ ವಿದೇಶದಲ್ಲಿ ಮಾದರಿಯ ರಾಜ್ಯ ಎನಿಸಿಕೊಂಡಿದೆ.

ಈ ಕಾರಣದಿಂದ 1948 ರಲ್ಲಿ ಪ್ರಾರಂಭವಾದ ಕೇಂದ್ರ ರೇಷ್ಮೆ ಮಂಡಳಿಯು ದೆಹಲಿಯಿಂದ ಮುಂಬೈ ನಂತರ 1981 ರಲ್ಲಿ ಬೆಂಗಳೂರಿಗೆ ಸ್ಥಳಾಂತರಗೊಂಡಿದೆ. ರಾಜ್ಯ ರೇಷ್ಮೆ ಇಲಾಖೆಯು ದ್ವಿತಳಿ ರೇಷ್ಮೆ ಉತ್ಪಾದನೆ, ನೂತನ ತಾಂತ್ರಿಕತೆಗಳ ಅಳವಡಿಕೆ ಹಾಗೂ ಶಿಸ್ತುಬದ್ಧವಾಗಿ ಬಿತ್ತನೆವಲಯಗಳ ನಿರ್ವಹಣೆ ಇತ್ಯಾದಿ ಕಾರಣಗಳಿಂದ ತಾಂತ್ರಿಕವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಂದು ವಿಕಾಸಹೊಂದುವ ರಾಜ್ಯವಾಗಿ ಹೊರಹೊಮ್ಮಿರುವ ಕಾರಣ ಅಂತಾರಾಷ್ಟ್ರೀಯ ರೇಷ್ಮೆ ಸಂಸ್ಥೆ, (Internation Silk Commission) ಯು ಫ್ರಾನ್ಸ ದೇಶದ ಪ್ಯಾರಿಸ್ ನಿಂದ ಜನವರಿ 2013 ರಲ್ಲಿ ಬೆಂಗಳೂರಿಗೆ ಸ್ಥಳಾಂತರಗೊಂಡಿದೆ. ಕರ್ನಾಟಕವು ಕೇವಲ ರೇಷ್ಮೆ ಉತ್ಪಾದನೆಯಲ್ಲಿ ಅಲ್ಲದೇ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳುವಂತಹ ಪ್ರಗತಿ ಸಾಧಿಸಿ ದೇಶದ ರೇಷ್ಮೆ ಉದ್ಯಮದಲ್ಲಿ ಅಗ್ರಸ್ಥಾನವನ್ನು ಕಾಯ್ದುಕೊಂಡಿದೆ. ❑

# ಇಳಕಲ್ ಸೀರೆಯ ಇತಿಹಾಸ

* ರಾಮು ಮನಗೂಳಿ
** ಬಿ. ಬಾಬು ಇಳಕಲ್



**ಇಳಕಲ್ ಕೈಮುಗ್ಗಗಳು ಇತಿಹಾಸದ ಕಾಲಗರ್ಭದಲ್ಲಿ ಸೇರಿಕೊಳ್ಳುವ ಮೊದಲು ನಾವೆಲ್ಲರೂ ಎಚ್ಚೆತ್ತುಕೊಳ್ಳಬೇಕಾಗಿದೆ. ನಮ್ಮ ಸಂಸ್ಕೃತಿ, ಸಂಪ್ರದಾಯ ನೇಕಾರಿಕೆಯ ಉಳಿವಿಗೆ ನಾವೇ ಪಣತೊಟ್ಟು ನಿಲ್ಲಬೇಕು.**

ಇಳಕಲ್, ಕಲಾತ್ಮಕ ಕೈಮಗ್ಗ ಸೀರೆ ಮತ್ತು ಕೆಂಪು ಶಿಲೆಗಳಿಂದಾಗಿ ರಾಷ್ಟ್ರ ಮತ್ತು ವಿಶ್ವಮಟ್ಟದಲ್ಲಿ ತನ್ನದೇ ಆದ ಸ್ಥಾನ ಪಡೆದುಕೊಂಡಿದೆ. ಕೆಂಪು ಶಿಲೆ ಖ್ಯಾತಿ ಇತ್ತೀಚೆಗೆ ಬಂದಿದ್ದರೂ ಕೈ ಮಗ್ಗ ಸೀರೆಗಳ ಪ್ರಸಿದ್ಧಿಗೆ ಇತಿಹಾಸವೇ ಇದೆ. ಸೀರೆ ನೇಯ್ಗೆ ಇಲ್ಲಿಯ ಜನರ ಹೆಮ್ಮೆಯ ಪರಂಪರೆ ಮಾತ್ರವಲ್ಲ. ಅಕ್ಕರೆಯ ಕಸುಬಾಗಿದೆ; ಅನೇಕರ ಹೊಟ್ಟೆ ಹೊರೆಯುವ ವೃತ್ತಿಯಾಗಿದೆ. ಶತಮಾನದ ಕಾಲದಿಂದಲೂ ಇಲ್ಲಿಯ ಜನರು ಅದರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿದ್ದಾರೆ.

ಕೈ ಮಗ್ಗದ ಉದ್ದಿಮೆಯು ಅತ್ಯಂತ ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿ ಇದ್ದರೂ ಅದರ ಅಭಿವೃದ್ಧಿ ಹೆಜ್ಜೆ ದೀರ್ಘ. ನಮ್ಮ ಭಾರತದಲ್ಲಿ ಒಕ್ಕಲುತನದ ನಂತರ ಕೈಮಗ್ಗದ ಉದ್ದಿಮೆಯೇ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸಿದೆ. ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಕೇರಳ, ಬಿಹಾರ, ಒಡಿಶಾ, ಪಶ್ಚಿಮ ಬಂಗಾಲಗಳಲ್ಲಿ ಕೈಮಗ್ಗದ ಬಟ್ಟೆಗಳು ತಯಾರಾಗುತ್ತವೆ. ಇವುಗಳಲ್ಲಿ ಕರ್ನಾಟಕವು ದೊಡ್ಡ ಪ್ರಮಾಣದಲ್ಲಿ ನೂಲಿನ ಮತ್ತು ರೇಷ್ಮೆ ಬಟ್ಟೆಗಳನ್ನು ಉತ್ಪಾದಿಸುತ್ತದೆ. ಕರ್ನಾಟಕದಲ್ಲಿ ಸುಮಾರು ಒಂದು ಲಕ್ಷ ಮಗ್ಗಗಳಲ್ಲಿ ಬಟ್ಟೆಗಳನ್ನು ತಯಾರು ಮಾಡುತ್ತಾರೆ. ಇದರಲ್ಲಿ ಅಂದಾಜು 40 ಲಕ್ಷ ಜನರು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಇದನ್ನೇ ಅವಲಂಬಿಸಿ ಉಪಜೀವಿಸುತ್ತಿದ್ದಾರೆ. ವಿಜಯಪುರ, ಜಿಲ್ಲೆ ನಮ್ಮ ರಾಜ್ಯದಲ್ಲಿಯೇ ಅತ್ಯಂತ ಹೆಚ್ಚು ಮಗ್ಗಗಳನ್ನು ಹೊಂದಿದೆ. ಜಿಲ್ಲೆಯಲ್ಲಿ 25000 ಕೈಮಗ್ಗಗಳಿದ್ದು ಸುಮಾರು 8 ಲಕ್ಷ ಜನರು ಇದರಿಂದ ಉಪಜೀವಿಸುತ್ತಾರೆ. ಇಳಕಲ್ ನಗರದಲ್ಲಿಯ ಕೈ ಮಗ್ಗದ ಉದ್ದಿಮೆಯು ಜಿಲ್ಲೆಯಲ್ಲಿ ಮುಂದುವರಿದ ಮತ್ತು ಪುರಾತನ ಉದ್ದಿಮೆಯೆಂದು ಹೇಳಬಹುದು. ಇಳಕಲ್ಲದ 'ತೋಪತೆನಿ' ಸೀರೆಗಳು ತನ್ನ ವೈಶಿಷ್ಟ್ಯತೆಯಿಂದ ಕರ್ನಾಟಕ ಮಹಾರಾಷ್ಟ್ರಗಳಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಿವೆ.

## ಇಳಕಲ್ಲ ಕೈಮಗ್ಗದ ಉದ್ದಿಮೆಯ ಇತಿಹಾಸ

ಇಲ್ಲಿ ಕೈಮಗ್ಗದ ಉದ್ದಿಮೆಯು ಎಂದಿನಿಂದ ಪ್ರಾರಂಭವಾಯಿತೆಂದು ಹೇಳಲು ಸರಿಯಾದ ಯಾವ ಆಧಾರವೂ ಇರುವದಿಲ್ಲ. ಆದರೂ ಸಹ ನೇಕಾರಿಕೆಯು ಸುಮಾರು 8ನೇ ಶತಮಾನದಲ್ಲಿ ಚಾಲುಕ್ಯರ ಆಳ್ವಿಕೆಯಲ್ಲಿ ಪ್ರಾರಂಭವಾಗಿರಬಹುದೆಂದು ಊಹಿಸಬಹುದು. ಚಾಲುಕ್ಯರ ಕುಲದೇವತೆಯಾದ "ಶ್ರೀ ಬನಶಂಕರಿ ದೇವಿ" ಹಾಗೂ ನೇಕಾರಿಕೆ ಸಮಾಜದ "ದೇವಾಂಗ" ಕುಲ ದೇವತೆಯೂ(ಒಂದೆ) "ಶ್ರೀಬನಶಂಕರಿ" ಇರುವದರಿಂದ ಆ ಕಾಲದಲ್ಲಿ ಇರಬಹುದೆಂದು ನಂಬಬಹುದು. ನೇಕಾರಿಕೆಯು ಕುಲ ಕಸುಬು ಎನಿಸಿರುವ ಸಮಾಜಗಳಲ್ಲಿ "ದೇವಾಂಗ" ಸಮಾಜವು ಒಂದಾಗಿದ್ದು ಅದರಂತೆ ನೇಕಾರಿಕೆ ತಮ್ಮ ಮೂಲ ಉದ್ಯೋಗಗಳಾಗಿದ್ದಂಥ ಇನ್ನೂ ಅನೇಕ ಸಮಾಜಗಳು ಇಲ್ಲಿ ಇವೆ. ಅವುಗಳೆಂದರೆ "ಸ್ವಕುಳ ಸಾಳಿ", "ಕುರುವಿನಶೆಟ್ಟಿ", "ಪದ್ಮಸಾಲಿ", "ತೊಗಟವೀರ" ಸಮಾಜಗಳು ತಮ್ಮ ಕುಲದೇವತೆಯು ಜಗತ್ತಿಗೆ ವಸ್ತ್ರಗಳನ್ನೆ ನಿರ್ಮಿಸಲು ಅವತರಿಸಿದಂತೆ ಅವರ ವಂಶಸ್ಥರೆಲ್ಲರೂ ವಸ್ತ್ರಗಳನ್ನು ನಿರ್ಮಿಸಲು ನೇಕಾರಿಕೆಯನ್ನೇ ಅವಲಂಬಿಸಿದ್ದಾರೆ. ಹೀಗೆ

* ** ಹಿರಿಯ ಪತ್ರಕರ್ತರು.

ನಾನಾ ಸಮಾಜದ ವಸ್ತ್ರ ನಿರ್ಮಾಪಕರ ವಂಶಸ್ಥರು ಇಲ್ಲಿ ಇದ್ದರೂ ಅವರು ಇಲ್ಲಿಗೆ ಯಾವಾಗ ಬಂದರು ಯಾವ ಕಾಲದಿಂದ ಈ ಉದ್ಯೋಗ ಪ್ರಾರಂಭವಾಯಿತೆಂದು ಹೇಳುವ ದಾಖಲೆಗಳು ಇಲ್ಲ.

### ಅನುಕೂಲತೆ

ಇಳಕಲ್ ನಗರವು ಇಳುಕಲಿನಲ್ಲಿದ್ದು ಸುತ್ತಲಿನ ಪ್ರದೇಶ ಎತ್ತರವಾಗಿದೆ. ಹೀಗಾಗಿ ಗಾಳಿಯ ಪ್ರತಿರೋಧ ಇಲ್ಲದೆ ನೂಲು ಗಂಟಾಗದಂತೆ ನುಣುಪಾಗಿ ನೇಯಲು ಪ್ರಕೃತಿ ದತ್ತವಾದ ಅನುಕೂಲವಿದೆ. ಊರಿಗೆ ಸಮೀಪದಲ್ಲಿ ಹರಿಯುವ ಹಳ್ಳದ ನೀರಿನಲ್ಲಿ ಲವಣಗಳ ಮಿಶ್ರಣ ಇರುವದರಿಂದ ಬಣ್ಣವು ಹೋಗದಂತೆ ತಡೆಯುತ್ತದೆ. ಈ ಭಾಗದಲ್ಲಿ ಹತ್ತಿ ಬೆಳೆಯು ಪ್ರಮುಖವಾಗಿರುವದರಿಂದ ಹತ್ತಿ ನೂಲು ಸುಲಭವಾಗಿ ದೊರಕುತ್ತದೆ. ಮಳೆ ಕಡಿಮೆಯಾಗುವದರಿಂದ ಒಕ್ಕಲುತನದಿಂದ ಜೀವಿಸಲು ಸಾಧ್ಯವಿಲ್ಲ. ಮೇಲಿಂದ ಮೇಲೆ ಬರಗಾಲ ಬರುವದರಿಂದ ಉಳಿದ ಜನರು ಸಹ ಪೂರಕ ಉದ್ಯೋಗವಾಗಿ ನೇಕಾರಿಕೆಯನ್ನೇ ಅವಲಂಬಿಸಬೇಕಾಗುತ್ತದೆ.

19ನೇ ಶತಮಾನದ ಕೊನೆಯಲ್ಲಿ ಮತ್ತು 20 ನೇ ಶತಮಾನದ ಪ್ರಾರಂಭದಲ್ಲಿ ಇಲ್ಲಿ ಕೈಮಗ್ಗಗಳಿಂದ ಖಣ ಮತ್ತು 20 ನಂಬರ ನೂಲಿನ "ಗಚ್ಚಿ ಧಡಿ" ಸೀರೆಗಳನ್ನು ತಯಾರಿಸುತ್ತಿದ್ದರು. ಅಲ್ಲದೇ ಎಲ್ಲ ನಮೂನೆಯ ಬಿಳಿ ಬಟ್ಟೆಗಳನ್ನು ಇಲ್ಲಿ ಅಷ್ಟೇ ಅಲ್ಲದೇ ಸುತ್ತ ಮುತ್ತಲಿನ ಊರುಗಳಲ್ಲಿ ಉತ್ಪಾದಿಸುತ್ತಿದ್ದರು. ರೇಷ್ಮೆ ಸೀರೆಗಳನ್ನು ಸಹ ತಯಾರಿಸುತ್ತಿದ್ದರು. ಹೆಚ್ಚಾದ ಖಣಗಳನ್ನು ನೇಯುತ್ತಿದ್ದರು. ಅಂದಾಜು 1000 ಮಗ್ಗಗಳು ಇದ್ದಿರಬಹುದು. ಬರಬರುತ್ತ ಉತ್ತಮವಾದ ಜಿನಗು ನೂಲನ್ನು ಉಪಯೋಗಿಸುತ್ತಾ ಬಂದರು. ಆಗಿನ ಕೈಮಗ್ಗಗಳೆಂದರೆ ಲಾಳಿಯನ್ನು ಒಂದು ಕೈಯಿಂದ ಇನ್ನೊಂದು ಕೈಗೆ ಒಗೆದು ನೇಯುತ್ತಿದ್ದರು, ಅಂದರೆ ಕೈಮಗ್ಗಗಳಾಗಿದ್ದವು.

1920ನೇ ಇಸ್ವಿಯ ಸುಮಾರಿಗೆ ಇಲಕಲ್ಲ ಸೀರೆಯಲ್ಲಿ ಪ್ರಮುಖ ಬದಲಾವಣೆಯನ್ನು ತಂದರೆಂದರೆ ದಿ. ರಾಜಪ್ಪ ಧೋತ್ರೆ (ಎಣ್ಣಿ) ಇವರು. ಮೊದಲು ತಯಾರಾಗುವ "ಗಚ್ಚಿಧಡಿ"ಗೆ ಬದಲಾಗಿ ಈಗ ಇದ್ದಂಥ "ಗೋಮಿ" ಧಡಿಯನ್ನು ಪರಿಚಯಿಸಿದರು. ಇದಕ್ಕೆ ಇಲಕಲ್ಲ ಧಡಿ ಅಂತ ಈಗಲೂ ಹೇಳುತ್ತಾರೆ.



ರೇಷ್ಮೆ ಖಣದ ಸಾವಿರಾರು ಮಗ್ಗಗಳಿಗೆ ನೂಲಿನ ಶೀರೆಯ ಸಾವಿರಾರೂ ಮಗ್ಗಗಳಿಗೆ ಹಾಗೂ ರೇಷ್ಮೆ ಸೀರೆಯ ನೂರರಿಂದ ನೂರೈವತ್ತು ಮಗ್ಗಗಳಿಗೆ ಬೇಕಾಗುವ ಕಚ್ಚಾ ಮಾಲು ಬೇರೆ ಬೇರೆ ಭಾಗಗಳಿಂದ ಬರುತ್ತಿತ್ತು. ಜಪಾನ್, ಚೀನಾ ದೇಶದ ಈಸ್ಟಮ ಮತ್ತು ಲಕಾಸ ಎಂಬ ರೇಷ್ಮೆ ಬರುತ್ತಿತ್ತು. ಅಲ್ಲದೇ ನಮ್ಮ ದೇಶದ ಜಂಗೀರಪುರ (ಅಹಮದಾಬಾದ ಹತ್ತಿರ) ದಿಂದಾ ಬರುತ್ತಿತ್ತು. ನೂಲು ಚೋಳಛಾಪ, ಮೆಂಡಿಛಾಪ ಇದು ಮ್ಯಾಂಚೆಸ್ಟರ ಮಿಲ್ಲಿನದು ಇಂಗ್ಲಂಡದಿಂದ ಬರುತ್ತಿತ್ತು. ನಮ್ಮ ದೇಶದ ಮುಂಬಯಿಯಲ್ಲಿ ತಯಾರಾಗುವ ಶ್ರೀರಾಮ ಮಿಲ್ಲಿನ ಕೊಹಿನೂರ ನೂಲು ಉಪಯೋಗಿಸುತ್ತಿದ್ದರು. ಸುಮಾರು 1938ರಿಂದ ಬೆಂಗಳೂರಿನಿಂದ ರೇಷ್ಮೆ ಬರಹತ್ತಿತ್ತು. ರೇಷ್ಮೆಗೆ ಹಾಕುವ ಬಣ್ಣಗಳಾದ ಜಾಂಬಳಾ, ಆಸ್ಮಾನಿ, ಫಿರೋಜಿ, ಗುಲಾಬಿ ಬಣ್ಣದ ಡಬ್ಬಿಗಳು ಜರ್ಮನಿಯಿಂದ ಬರುತ್ತಿದ್ದವು. ಮತ್ತು ಉಳಿದ ಬಣ್ಣಗಳು ಅಂದರೆ ಕೆಂಪು (ಕಿರಮಂಜಿ) ಮಾಡಲು ಡಾಣಿ ವಿಸ್ತಾಫುಲ ಹಸರ ಬಣ್ಣ ಮಾಡಲು ಅಳ್ಳಿಕಾಯಿ, ಕಾಕಡ ಸಿಂಬಿ, ಹಳದಿ ಬಣ್ಣಕ್ಕೆ ಕಪಿಲಿ ಬೀಜ ನೂಲು ಕರ್ದು ಮಾಡಲು ಮಡ್ಡಿ ಬೇರು, ಮಡ್ಡಿ ತಪ್ಪಲು, ಸುಣ್ಣ ಮುಂತಾದವುಗಳನ್ನು ಉಪಯೋಗಿಸುತ್ತಿದ್ದರು. 1920ರಲ್ಲಿ 1000 ಮಗ್ಗಗಳಿದ್ದವು. ಇಸ್ವಿ 1928ರ ಸುಮಾರಿಗೆ, ಕೈಮಗ್ಗದಿಂದ ಶೆಟಲ್ ಮಗ್ಗಕ್ಕೆ ಉತ್ಪಾದನೆಯು ವರ್ಗಾಯಿಸಲ್ಪಟ್ಟಿತು. ಕೈಮಗ್ಗದಿಂದ ಉತ್ಪಾದನೆಯು ಬಹಳ ಕಡಿಮೆ ಆಗುತ್ತಿತ್ತು. ಶೆಟಲ್ ಮಗ್ಗ (ಲಾಳಿಯನ್ನು ಕೈಯಿಂದ ಒಗೆಯದೇ ದಾರದ ಮುಖಾಂತರ ವೇಗವಾಗಿ ಇತ್ತಿಂದ ಅತ್ತ ಒಗೆಯುವುದು) ಪ್ರಾರಂಭಾಗಿ ಉತ್ಪಾದನೆಯು ಎರಡು ಮೂರು ಪಟ್ಟು ಹೆಚ್ಚಾಯಿತು. ನೇಕಾರರ ಉತ್ಪನ್ನ ಸಹ ಇದರಿಂದ ಹೆಚ್ಚಾಯಿತು. ಈ ವೇಳೆಯಲ್ಲಿ ಖಣದ ಉತ್ಪಾದನೆಯು ಸಂಪೂರ್ಣವಾಗಿ ನಿಂತು ಬರೀ ಸೀರೆಯ ಉತ್ಪಾದನೆಯೇ ಇತ್ತು ಎಂದು ಹೇಳಬಹುದು. 1932ರಷ್ಟೊತ್ತಿಗೆ 2000 ಮಗ್ಗಗಳಾದವು..

### ಕೈಮಗ್ಗ ಉದ್ದಿಮೆ ಕುಂಠಿತ

ಮೊದಲನೇ ಮಹಾಯುದ್ಧದಿಂದ ಭಾರತ ದೇಶದ ಕೈ ಮಗ್ಗದ ಉದ್ದಿಮೆಗೆ ದೊಡ್ಡ ಪೆಟ್ಟು ಬಿತ್ತೆಂದು ಹೇಳಬಹುದು. ಇಳಕಲ್ ಸಹ ಇದರಿಂದ ಹೊರತಾಗಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಪರದೇಶದಿಂದ ಬರುವ ರೇಷ್ಮೆ ಬಣ್ಣ ಬಂದಾಯಿತು. ನೂಲಿನ ಮಿಲ್ಲುಗಳು ಹೆಚ್ಚಾಗಿ ಅರಿವೆಗಳನ್ನು ತಯಾರಿಸಹತ್ತಿದವು. ಕೈಮಗ್ಗಗಳಿಗೆ ನೂಲನ್ನು ಕಡಿಮೆ ಪ್ರಮಾಣದಲ್ಲಿ ಒದಗಿಸಹತ್ತಿದರು. ಕಚ್ಚಾಮಾಲುಗಳಾದ ನೂಲು ಮತ್ತು ರೇಷ್ಮೆಯ ಕೊರತೆಯಿಂದ ಮಗ್ಗಗಳು ಬಂದಾಗಹತ್ತಿದವು. ಕೆಲವು ನೇಕಾರರು ಸೀರೆಯ ಬದಲಾಗಿ ನೂಲಿನ ಮಲ್ ಮಲ್ ಅರಿವೆ ತಯಾರಿಸಹತ್ತಿದರು. 1936–37ರ ಮಹಾರಾಷ್ಟ್ರದ ಋಣ ವಿಮೋಚನಾ ಕಾಯ್ದೆಯಿಂದ ಸೀರೆಗಳ ಬೇಡಿಕೆ ಕಡಿಮೆಯಾಗತೊಡಗಿತು. ಕಚ್ಚಾ ಮಾಲಿನ ಕೊರತೆಯಿಂದ ನೇಯುವವರಿಗೂ, ಕೆಲಸ ಮಾಡುವವರಿಗೂ ಉದ್ಯೋಗವಿಲ್ಲದಂತಾಯಿತು. ಕೆಲಸಕ್ಕಾಗಿ ಪರದಾಡುವಂಥ ಸ್ಥಿತಿ ಬಂದಿತು.

ನೂಲು ಮತ್ತು ರೇಷ್ಮೆಗಳನ್ನು ಒದಗಿಸುವ ಸಲುವಾಗಿ, ನೇಕಾರರಿಗೆ ಸಹಾಯ ಸಲ್ಲಿಸಲು ವಿಜಯಪುರ ಜಿಲ್ಲೆಯಲ್ಲಿ 'ದಿ ಬಿಜಾಪೂರ' ಡಿಸ್ಟ್ರಿಕ್ಟ ಇಂಡಸ್ಟ್ರಿಯಲ್ ಕೊ. ಆ ಅಸೋಸಿಯೇಶನ್ ಲಿ, ಕಮತಗಿ" ಈ ಸಂಸ್ಥೆಯು ಪ್ರಪ್ರಥಮವಾಗಿ ಸನ್ 1936ರಲ್ಲಿ ಸ್ಥಾಪಿತವಾಯಿತು. ನೂಲು, ರೇಷ್ಮೆ ಬಣ್ಣ ಇತ್ಯಾದಿ ಕೈಮಗ್ಗಕ್ಕೆ ಬೇಕಾಗುವ ಕಚ್ಚಾ ಮಾಲಿನ ದರವು ಗಗನಕ್ಕೇರಿತು. ಮುಂಬೈ ಪ್ರಾಂತದಲ್ಲಿಯ ಈ ಪ್ರಥಮ ಸಂಘವೇ ನೇಕಾರ ಸಂಘಟನೆಯನ್ನೆ ಮಾಡಿ ನೇಕಾರರಿಗೆ ನೂಲನ್ನು ಪೂರೈಸುವ ಕೆಲಸವನ್ನು ಮಾಡುತ್ತಿತ್ತು. ಆಗ ಮಾಲಿಗೆ ಬೇಡಿಕೆ ಇಲ್ಲದಂತಾಯಿತು. ದುಡಿಮೆಯಿಂದಲೇ ಬದುಕುವ ನೇಕಾರ ಜನಾಂಗಕ್ಕೆ ದಿಕ್ಕೇ ತೋಚದಂತಾಯಿತು. ಹಸಿದ ಜನತೆಯು ಕಂಗಾಲಾಗಿ ಅಲೆಯ ಹತ್ತಿದರು. ಆಗ

ಜಿಲ್ಲೆಯಲ್ಲಿ ಬರಗಾಲಕ್ಕೆಂದು ಹುಟ್ಟಿದ "ಡಿಸ್ಟ್ರಿಕ್ಟ ಫೆಮಿನ್ ರಿಲೀಫ ಕಮೀಟಿಯು" ಸಹಕಾರದೊಂದಿಗೆ ನೇಕಾರರ ಬಗ್ಗೆ ಅಲ್ಪ ಸ್ವಲ್ಪ ಕೆಲಸ ಮಾಡಿತು. ಆದರೂ ಬಹಳೇ ಮಗ್ಗಗಳು ಬಂದ್ ಬೀಳುವಂತಾಯಿತು. 1942ರಲ್ಲಿ ಇಳಕಲ್ ನೇಕಾರರಿಗೆ ಸಹಾಯ ಮಾಡಲೋಸುಗ "ದಿ ಇಳಕಲ್ ನೇಕಾರ ಸಹಕಾರಿ ಸಂಘ ನಿ" ಇಲಕಲ್ಲ ಸಂಘವು ಸ್ಥಾಪಿತವಾಯಿತು. ಈ ಸಂಸ್ಥೆಯು ಸಹ ನೇಕಾರರಿಗೆ ಕಚ್ಚಾ ಮಾಲು ಒದಗಿಸಲು ಪ್ರಮುಖ ಪಾತ್ರವಹಿಸಿತು ಎಂದು ಹೇಳಬಹುದು.

### ಉದ್ದಿಮೆಯ ಮರು ಬೆಳವಣಿಗೆ

1ನೇ ಮಹಾಯುದ್ಧ ಮುಗಿದ ನಂತರ ಸರ್ಕಾರ ಲಘು ಉದ್ಯೋಗಕ್ಕೆ ಅದರಲ್ಲಿಯೂ ಕೈ ಮಗ್ಗ ಉದ್ದಿಮೆಗೆ ಹೆಚ್ಚು ಲಕ್ಷ ವಹಿಸಿತು. ಕೈ ಮಗ್ಗ ಅಭಿವೃದ್ಧಿಗಾಗಿ ಕೆಲವೊಂದು ಯೋಜನೆಗಳನ್ನು ಹಾಕಿ ಸುಧಾರಿಸಿದ ಸಾಮಾನು ಸಲಕರಣೆಗಳನ್ನು ಒದಗಿಸುವುದು, ಸಹಕಾರಿ ಸಂಘಗಳನ್ನು ಸ್ಥಾಪಿಸುವದು ಮುಂತಾದವುಗಳ ಸಹಾಯ ಒದಗಿಸಿತು. ಇಳಕಲ್ಲಿನ ಮಗ್ಗಗಳು ಪುನಶ್ಚೇತನಗೊಂಡವು. ಕಚ್ಚಾ ಮಾಲಿನ ಪೂರೈಕೆ ಮತ್ತು ಪಕ್ಕಾ ಮಾಲಿನ ಬೇಡಿಕೆಯಿಂದ ಮಗ್ಗಗಳು ಸರಿಯಾಗಿ ನಡೆಯಹತ್ತಿದವು. ಮಗ್ಗಗಳ ಬೆಳವಣಿಗೆಯಾಯಿತು. ನೇಕಾರರ ಪರಿಸ್ಥಿತಿ ಸುಧಾರಿಸತೊಡಗಿತು. ಯುದ್ಧದ ಸಮಯದಲ್ಲಿ ಸೀರೆಗೆಗಳ ಬೇಡಿಕೆ ಅತ್ಯಂತ ಉಚ್ಚ ಮಟ್ಟವನ್ನು ತಲುಪಿತು. ಸೀರೆಯ ಧಾರಣೆಗಳು 4–5 ಪಟ್ಟು ಹೆಚ್ಚಾದವು. ಇದರಿಂದ ದೊಡ್ಡ ವ್ಯಾಪಾರಸ್ಥರಿಗೆ ದೊಡ್ಡ ಲಾಭವಾಯಿತು. ಆದರೆ ನೇಕಾರರಿಗೆ ಅಷ್ಟೇನೂ ಲಾಭವು ದೊರೆಯಲಿಲ್ಲ.

### ಉತ್ಪಾದನೆಯಲ್ಲಿ ಬಿಕ್ಕಟ್ಟು

ಶಕೆ 1950ರಲ್ಲಿ ರೇಷ್ಮೆ ಬೆಲೆಯ ಅತಿ ಏರಿಕೆ ಮತ್ತು ಕೊರತೆಯಿಂದ ಉದ್ದಿಮೆ ಮತ್ತೆ ಬಿಕ್ಕಟ್ಟನ್ನು ಎದುರಿಸಬೇಕಾಯಿತು. ಪರದೇಶದ ರೇಷ್ಮೆ ಆಮದು ಸಂಪೂರ್ಣ ನಿಲ್ಲಿಸಲಾಯಿತು. ದೇಶದಲ್ಲಿ ತಯಾರಾಗುವ ರೇಷ್ಮೆ, ಬೇಡಿಕೆಗೆ ತಕ್ಕಂತೆ ಉತ್ಪಾದನೆ ಆಗದಂತಾಯಿತು. ರೇಷ್ಮೆ, ಕೊರತೆ ಮೂಲಕ ಬೆಲೆಗಳು ಅತ್ಯಂತ ಹೆಚ್ಚಾದವು. ಸೀರೆಗಳ ಉತ್ಪಾದನೆ ಮಾಡಿದರೆ ಹಾನಿಯನ್ನು ಅನುಭವಿಸಬೇಕಾಗುವದರಿಂದ ಉತ್ಪಾದನೆ ಕುಂಠಿತವಾಯಿತು.



### ಹೊಸ ಆವಿಷ್ಕಾರ

ಇಂಥ ಬಿಕ್ಕಟ್ಟಿನ ಸಮಯದಲ್ಲಿ ಹೊಸ ನಮೂನೆಯ ನೂಲಿನ ಆವಿಷ್ಕಾರವಾಯಿತು. ಅದೇ ಚಮಕ. ಶ್ರೀ ರಾಮಚಂದ್ರಸಾ ವೆಂಕೂಸಾ ರಾಯಬಾಗಿ (ಗ್ಯಾರಂಟಿ) ಇವರು ಮೊಟ್ಟ ಮೊದಲು ಚಮಕ ಸೀರೆಯ ಆವಿಷ್ಕಾರ ಮಾಡಿದರು. ರೇಷ್ಮೆ ಸೀರೆಯ ಬದಲು ಚಮಕ ಸೀರೆಗಳನ್ನು ತಯಾರಿಸಹತ್ತಿದರು. ಹೊಸದಾಗಿ ಬಂದ ಈ ನೂಲಿನಿಂದ ನೇಯಲು ನೇಕಾರರು ಹಿಂಜರಿಯಹತ್ತಿದರು. ಆದರೂ ಅನಿವಾರ್ಯವಾಗಿ ಪ್ರಸಂಗಕ್ಕೆ ತಕ್ಕಂತೆ ಬದಲಾವಣೆ ಮಾಡುವ ಪರಿಸ್ಥಿತಿ ಇದ್ದಿದ್ದರಿಂದ ರೇಷ್ಮೆಯ ಎಷ್ಟೋ ಮಗ್ಗಗಳನ್ನು ಬಿಟ್ಟು ಚಮಕ ಸೀರೆಗಳನ್ನು ಮಾಡಬೇಕಾಯಿತು. ಇದರಿಂದ ಅತ್ಯಂತ ಕಡಿಮೆ ಬೆಲೆಯ ಸೀರೆಗಳು ಉತ್ಪಾದನೆಯಾಗ ಹತ್ತಿದವು. ಬೆಲೆ ಕಡಿಮೆ ಇರುವದರಿಂದ ಬೇಡಿಕೆ ಮತ್ತು ಉತ್ಪಾದನೆ ಹೆಚ್ಚಾಗ ಹತ್ತಿತ್ತು. ಇದು ಇಳಕಲ್ ಕೈಮಗ್ಗದ ಉದ್ದಿಮೆ ಯಲ್ಲಿಯೇ ಒಂದು ಮಹತ್ವದ ಬದಲಾವಣೆಯೆಂದು ಹೇಳಬಹುದು. ಚಮಕ ಸೀರೆ ಪ್ರಾರಂಭವಾಗಿ ಉದ್ಯೋಗದ ದಿಕ್ಕನ್ನೇ ಬದಲಾಯಿಸಿತು. ಮೊಟ್ಟ ಮೊದಲು ಚಮಕ ಮುಂಬಯಿಯಿಂದ ಬರುತ್ತಿತ್ತು. ಆನಂತರ ಬಡೊದಾ, ಅಹಮ್ಮದಾಬಾದ, ಸೇಲಮ್, ಮುಂಬಯಿಗಳಿಂದ ಈಗಲೂ ಬರುತ್ತಿದೆ, ಇದಕ್ಕೆ ಬೇಕಾಗುವ ಬಣ್ಣ ಮುಂಬಯಿಯಿಂದಲೇ ಹೆಚ್ಚಾಗಿ ಬರುತ್ತದೆ. ಅದರಲ್ಲಿ ನೆಪ್ತಲ, ಇಂಡೆಂತ್ರಿನ, ಸಲ್ಫರ ಎಂಬ ಬೇರೆ ಬೇರೆ ಪ್ರಕಾರದಿಂದ ಬಣ್ಣಗಳನ್ನು ಬೇರೆ ಬೇರೆಯಾಗಿ ಹಾಕುತ್ತಾರೆ, ಇದರಲ್ಲಿ ಮುಖ್ಯವಾದ ಬಣ್ಣಗಳೆಂದರೆ ಹಸಿರು, ಫಿರೋಜ, ಗುಲಾಬಿ, ಕಿರಮಂಜಿ, ಹಳದಿ, ಕಪಿಲಿ, ಜಾಂಬಳಾ, ಬಿಳಿದು ಎಂದು ಹೆಸರಿಸಬಹುದು. ಚಮಕ ಸೀರೆಗಳ, ಬಣ್ಣಗಳ ಆಕರ್ಷಣೆ ಮತ್ತು ಕಡಿಮೆ ಬೆಲೆಗಳ ಮೂಲಕ ಬೇಡಿಕೆ ವಿಸ್ತಾರವಾಗುತ್ತಾ ನಡೆಯಿತು. ಮಹಾರಾಷ್ಟ್ರ, ಕರ್ನಾಟಕದ ಬೇರೆ ಬೇರೆ ಭಾಗಗಳಿಗೆ ಹೆಚ್ಚು ಹೆಚ್ಚಾಗಿ ಮಾಲು ಹೋಗಹತ್ತಿತು, ಉದ್ಯೋಗವು ಸ್ವಲ್ಪ ಹೆಚ್ಚು ಕಡಿಮೆ ಒಂದೇ ಮಟ್ಟದಲ್ಲಿ ನಡೆಯಹತ್ತಿತು. ಇಸ್ವಿ 1968ರಲ್ಲಿ ರಾಸಾಯನಿಕವಾಗಿ ತಯಾರಿಸಿದ ನೂಲು ಅಂದರೆ ಪ್ಲ್ಯಾಸ್ಟಿಕ ಜರಿಯ ಆವಿಷ್ಕಾರವಾಯಿತು. ಇದರಿಂದ ಸೀರೆಯ ಆಕರ್ಷಣೆ ಹೆಚ್ಚಿತು ಮತ್ತು ಬೇಡಿಕೆಯೂ ಹೆಚ್ಚಾಯಿತು.

### ಸೀರೆ ತಯಾರಿಸುವ ವಿಧಾನಗಳು

ಈ ಉದ್ಯೋಗವು ಮುಖ್ಯವಾಗಿ ಮೂರು ಪದ್ಧತಿಗಳಲ್ಲಿ ನಡೆಯುತ್ತದೆ. 1) ಮುಂಗಾಡ ಪದ್ಧತಿ 2) ಸಟ್ಟಾ ಪದ್ಧತಿ 3) ರೋಖಡಾ ಪದ್ಧತಿ

ಮುಂಗಾಡ ಪದ್ಧತಿಯಲ್ಲಿ ವ್ಯಾಪಾರಸ್ಥರಾಗಲಿ ಅಥವಾ ಸಂಘಗಳಾಗಲಿ ಕಚ್ಚಾ ಮಾಲಿಗೆ ಅಂದರೆ ನೂಲು, ರೇಷ್ಮೆ ಚಮಕ ಇವುಗಳಿಗೆ ಬಣ್ಣ ಹಾಕಿ ಪ್ರತಿಯೊಂದು ಮಗ್ಗಕ್ಕೆ 15 ರಿಂದ 20 ಸೀರೆಗಳ ಕಚ್ಚಾ ಮಾಲು ನೇಕಾರರಿಗೆ ಕೊಡುತ್ತಾರೆ. ನೇಕಾರನು ತೋಡುವದು, ಹಾಸುಮಾಡುವದು, ಕೆಚ್ಚುವದು ಎಲ್ಲವನ್ನು ಮಾಡಿಕೊಂಡು ಸೀರೆ ತಯಾರು ಮಾಡಿ ತಂದುಕೊಟ್ಟು ತಯಾರು ಮಾಡುವ ವೆಚ್ಚ ಮತ್ತು ನೇಯ್ಯುವ ಮಜೂರಿ ಕೂಡಿಸಿ ತೆಗೆದು ಕೊಳ್ಳುತ್ತಾನೆ. ಕಚ್ಚಾ ಮಾಲಿನ ಬೆಲೆಗಳ ಏರಿಳಿತಕ್ಕೆ ನೇಕಾರನು ಜವಾಬ್ದಾರನಲ್ಲ. ಅವನು ದುಡಿದಂತೆ ಮಜೂರಿ ಅವನಿಗೆ ಸಿಕ್ಕುವದು. ಸಟ್ಟಾ ಪದ್ಧತಿಯಲ್ಲಿ ನೇಕಾರನು ವ್ಯಾಪಾರಸ್ಥರ ಹತ್ತಿರ ಹೋಗಿ ಸ್ವಲ್ಪ ಹಣವನ್ನು ತರುತ್ತಾನೆ ಆ ಹಣದಿಂದ ಅವನು ಸೀರೆಗೆ ಬೇಕಾಗುವ ಚಮಕ, ನೂಲುಗಳನ್ನು ಬೇರೆ ಅಂಗಡಿಯಿಂದ ತಂದು ಸೀರೆಗಳನ್ನು ನೇಯ್ದು ಕೊಡುತ್ತಾನೆ. ಅದಕ್ಕೆ ವ್ಯಾಪಾರಸ್ಥನು ಬಝಾರ ಧಾರಣೆಯಂತೆ ಸೀರೆ ತೆಗೆದು ಕೊಳ್ಳುತ್ತಾನೆ. ಇದರಲ್ಲಿ ಕಚ್ಚಾ ಮಾಲಿನ ಹಣ ಸೀರೆ ತಯಾರಿಸುವ ವಿಧಾನದಲ್ಲಿಯ ವೆಚ್ಚ ಹೋಗಲಾಗಿ ಎಷ್ಟು ಹಣ ಉಳಿಯುತ್ತದೋ ಅದೇ ಅವನ ಲಾಭ ಅಥವಾ ಮಜೂರಿ. ಕೆಲವೊಮ್ಮೆ ಕಚ್ಚಾ ಮಾಲಿನ ಧಾರಣೆ ಹೆಚ್ಚಾದಾಗ ಸೀರೆಯ ಬೆಲೆ ಕಡಿಮೆ ಅಥವಾ ಸ್ಥಿರವಾಗಿದ್ದಾಗ ಅವರಿಗೆ ನೇಯುವ ಮಜೂರಿ ಕಡಿಮೆ ಬೀಳುತ್ತದೆ ಅಥವಾ ಲುಕ್ಸಾನಕ್ಕೆ ಪಾತ್ರನಾಗುತ್ತಾನೆ. ರೋಖಡಾ ಪದ್ಧತಿಯಲ್ಲಿ ನೇಕಾರರನು ತನ್ನ

ಸ್ವಂತ ಹಣದಿಂದ ಕಚ್ಚಾ ನೂಲನ್ನು ಖರೀದಿ ಮಾಡಿ ಸೀರೆಯನ್ನು ತಯಾರಿಸುತ್ತಾನೆ. ಆ ಸೀರೆಯನ್ನು ತಾನು ಪೇಟೆಯಲ್ಲಿ ಯಾರು ಹೆಚ್ಚಿನ ಧಾರಣಿ ಕೊಟ್ಟು ಕೊಳ್ಳುತ್ತಾರೋ ಅವರಿಗೆ ಸೀರೆಯೆನ್ನು ಕೊಡುವನು. ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ತನ್ನ ಉಪಜೀವನಕ್ಕೆ ಇಟ್ಟುಕೊಂಡು ಉಳಿದ ಹಣದಲ್ಲಿ ಮತ್ತೆ ಕಚ್ಚಾ ಮಾಲು ಖರೀದಿ ಮಾಡುತ್ತಾನೆ. ಕಚ್ಚಾ ಮಾಲಿನ ಧಾರಣೆಗಳ ಏರಿಳಿತ ಮತ್ತು ಸೀರೆಯ ಬೆಲೆಗಳ ಮೇಲೆ ಅವನ ಲಾಭ ಹಾನಿ ಆಗುತ್ತದೆ. ಈ ಪದ್ಧತಿಯಲ್ಲಿ ನೇಕಾರನು ಹೆಚ್ಚಾಗಿ ಹಾನಿಯನ್ನು ಅನುಭವಿಸುವದರಿಂದ ಕೆಲವು ಜನರು ಮಾತ್ರ ಇದನ್ನು ಅನುರಿಸುತ್ತಾರೆ.

### ಸೀರೆಯ ಉತ್ಪತ್ತಿಯ ಪ್ರಕಾರಗಳು

ಇಳಕಲ್ ಸೀರೆಯಲ್ಲಿ ಕಾಲಕ್ಕೆ ತಕ್ಕಂತೆ ಬದಲಾವಣೆಗಳು ಆಗಿರುತ್ತದೆ. 1900 ನೇ ಇಸ್ವಿಗಿಂತ ಮೊದಲು ಮತ್ತು ನಂತರ ನೂಲಿನ ಸೀರೆ, ನಂತರ ರೇಷ್ಮೆ ಸೀರೆ, ಆ ನಂತರ ಕೃತಕ ರೇಷ್ಮೆ(ಚಮಕ) ಸೀರೆ ಹೀಗೆ ಬೇರೆ ಬೇರೆ ಪ್ರಕಾರದ ಸೀರೆಗಳು ತಯಾರಾಗುತ್ತ ಬಂದಿವೆ. ಒಟ್ಟಿನಲ್ಲಿ 3 ಭಾಗಗಳನ್ನು ಮಾಡಬಹುದು ಅವು 1) ನೂಲಿನ ಸೀರೆ 2) ರೇಷ್ಮೆ ಸೀರೆ 3) ಚಮಕ ಸೀರೆ

**1. ನೂಲಿನ ಸೀರೆ :** ಇಸ್ವಿ 1900ಕ್ಕಿಂತ ಮೊದಲು ಆ ನಂತರ ಕೆಲವು ವರ್ಷ ದಡಿಯಲ್ಲಿ ಸ್ಟೇಪಲ ಬಡ್ಡದಲ್ಲಿ ನೂಲು ಇದ್ದ ಗಚ್ಚಿ ಧಡಿ (ಧಡಿಯಲ್ಲಿ ಹಳದಿ ಪಟ್ಟ ಇದ್ದದ್ದು) ಸೀರೆ, ಅದಕ್ಕೆ 20 ನಂಬರ ಮತ್ತು 40 ನಂಬರಿನ ನೂಲನ್ನೇ ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಹೆಚ್ಚಾಗಿ ಒಂದೇ ಬಣ್ಣದ ಪ್ಲೇನ ಸೀರೆ ಆಗುತ್ತಿದ್ದವು. ಬರುಬರುತ್ತ 60 ನಂಬರಿನ ನೂಲು ಉಪಯೋಗಿಸಬಹತ್ತಿದರು. 1950 ರ ನಂತರ ಸ್ಟೇಪಲ ಧಡಿ ಬದಲಾಗಿ ಚಮಕ ಧಡಿ ಉಪಯೋಗಿಸಿ ನೂಲಿನ ಸೀರೆಯಲ್ಲಿ ಖಡ್ಡಿ, ಢಪಳಾ, ರಾಗಾವಳಿ, ಚಂದ್ರಕಾಳಿ ನಮೂನೆಗಳನ್ನು ಮಾಡಲು ಪ್ರಾರಂಭಿಸಿದರು.

**2) ರೇಷ್ಮೆ ಸೀರೆ :** ದಡಿಯಲ್ಲಿ ರೇಷ್ಮೆ, ವಡ್ಲದಲ್ಲಿ (ಮಧ್ಯಭಾಗ) ನೂಲು ಅಥವಾ ರೇಷ್ಮೆ ಇದ್ದರೆ ರೇಷ್ಮೆ ಸೀರೆ ಅಂತಾ ಕರೆಯುತ್ತಾರೆ.



ಈ ಶತಮಾನದ ಪ್ರಾರಂಭದಲ್ಲಿ ರೇಷ್ಮೆ ಸೀರೆ ಮಾಡಲು ಪ್ರಾರಂಭಿಸಿರಬಹುದು ಅದಕ್ಕೂ ಮೊದಲು ಇದ್ದರೂ ಸಹ 50–60 ಮಗ್ಗಗಳು ಇದ್ದಿರಬಹುದು. ಆ ಕಾಲದಲ್ಲಿ 46 ಪನ್ನಾದ ಮಿಂಚೆಳಿ ಸೀರೆ, ಗಾಡಿಧಡಿ (ದಂಡನೆ ಹೂ ಇದ್ದದ್ದು) ತಯಾರಿಸುತ್ತಿದ್ದರೆಂದು ತಿಳಿದು ಬರುತ್ತದೆ. 1920 ರಲ್ಲಿ ಗೋಮಿ ಧಡಿಯ ಆವಿಷ್ಕಾರವಾದ ನಂತರ 50 ಪನ್ನಾದ 9ವಾರ ಸೀರೆ ತಯಾರು ಮಾಡಿ ಅದರಲ್ಲಿ ಖಡ್ಡಿ, ರಾಗಾವಳಿ, ರಾಸ್ತಾ, ಕರಿ ಚಂದ್ರಕಾಳಿ ಮಾತ್ರ ಮಾಡುತ್ತಿದ್ದರು. 1935 ರ ನಂತರ ಪ್ಲೇನ, ಕೊಂಡಿ ಚಿಕ್ಕಿ, ಶರಟಂಗ ಜೇನಸು ಪ್ರಾರಂಭಿಸಿದರು. ಧಡಿಯಲ್ಲಿ ಸಹ ತಯಾರಿಸಹತ್ತಿದರು. ಅನಂತರ ಬುಗಡಿ ಫರಾಸ ಪೇಟ ಧಡಿ ಪ್ರಾರಂಭಿಸಿದರು. 1955ರ ನಂತರ ಚಿಕ್ಕಿ ಪರಾಸ ಬಾರ್ಡರದ ಶೋಧನೆ ಮಾಡಿದರು. ಬಾರ್ಡರ ಅಥವಾ ಧಡಿ ಯಾವದೇ ಇದ್ದರೂ ಎಲ್ಲ ನಮೂನೆಯ ಸೀರೆಗಳನ್ನು ಮಾಡುತ್ತಾ ಬಂದಿದ್ದಾರೆ. ಪೂರ್ತಿ ರೇಷ್ಮೆಯ ಮಡಿ ಸೀರೆಯನ್ನು ತಯಾರಿಸುತ್ತಾರೆ. ಇದಲ್ಲದೇ ಇನ್ನೂ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿ ಬೇಡಿಕೆ ಹೆಚ್ಚಲು ಎಲ್ಲರೂ ಶ್ರಮಿಸಿದ್ದಾರೆ. 6 ವಾರ ಮತ್ತು 8 ವಾರದ ಸೀರೆ ಸಹ ತಯಾರಿಸಿದರು. ಈ ಎಲ್ಲ ಬದಲಾವಣೆಗಳನ್ನು ಯಾರು ಯಾವಾಗ ಮಾಡಿದರೆಂಬುದು ನಿಖರವಾಗಿ ಹೇಳಲು ದಾಖಲೆಗಳಿಲ್ಲ.

**3) ಚಮಕ ಸೀರೆ :** 1950 ರಲ್ಲಿ ಚಮಕ ಸೀರೆಯ ಉತ್ಪಾದನೆಯನ್ನು ಮೊಟ್ಟ ಮೊದಲು ದಿ. ರಾಮಚಂದ್ರಸಾ ರಾಯಬಾಗಿ (ಗ್ಯಾರಂಟಿ) ಇವರು ಪ್ರಾರಂಭಿಸಿದರು. ರೇಷ್ಮೆ ಸೀರೆಯಲ್ಲಿ ತಯಾರು ಮಾಡುವಂಥ ನಮೂನೆಗಳನ್ನೆ ಚಮಕ ಸೀರೆಗಳಲ್ಲಿ ಮಾಡ ಹತ್ತಿದರು. ರೇಷ್ಮೆ ಸೀರೆಯ ಧಾರಣೆ ಹೆಚ್ಚಾದಂತೆ ಬೇಡಿಕೆ ಕಡಿಮೆಯಾಯಿತು. ಅದಕ್ಕೆ ಬದಲಾಗಿ ಕಡಿಮೆ ಬೆಲೆಯಲ್ಲಿ ಅದೇ ನಮೂನೆ ಸೀರೆ ಪ್ರಾರಂಭ ಮಾಡಿದ್ದರಿಂದ ಬೇಡಿಕೆ ಹೆಚ್ಚುತ್ತಾ ನಡೆಯಿತು.

1968ರಲ್ಲಿ ಪ್ಲಾಸ್ಟಿಕ್ ಜರಿ ಬಂದ ನಂತರ ಅದಕ್ಕೆ ಮತ್ತಷ್ಟು ಪುಷ್ಟಿ ದೊರೆಯಿತು. ಚಮಕ ಸೀರೆಯಲ್ಲಿ ಮೊದಲು ತಯಾರಿಸುತ್ತಿದ್ದ ಕೆಂಪು ಧಡಿಯ ಜೊತೆಗೆ ಹಸಿರು, ಆನಂದ, ಜಾಂಬಳಾ ಬಣ್ಣಗಳನ್ನು ಉಪಯೋಗಿಸುತ್ತಿದ್ದರು. ಮೊದಲು ಚಮಕ ಸೀರೆ ಇದ್ದರು ಸಹ "ತೋಪ ತೆನೆ" ಶೆರಗು ಮಾತ್ರ ರೇಷ್ಮೆ ಮಾಡುತ್ತಿದ್ದರು. 1968ರಲ್ಲಿ ರೇಷ್ಮೆಗೆ ಬದಲಾಗಿ ಚಮಕ ಉಪಯೋಗಿಸಹತ್ತಿದರು. ಇದರಿಂದಲೂ ಬೆಲೆಗಳ ಮಟ್ಟ ಇನ್ನೂ ಕಡಿಮೆಯಾಗಿ ಬೇಡಿಕೆ ಹೆಚ್ಚಲು ಕಾರಣವಾಯಿತು. 1976ರಲ್ಲಿ ಮತ್ತೊಂದು ಬದಲಾವಣೆಯನ್ನು ಶ್ರೀ ಆರ್.ವ್ಹಿ. ಜಾಜು ಇವರು ತಂದರು ಅದುವೇ ಸಾಟಿನ ಧಡಿ. ಇದರಿಂದ ಇಲಕಲ್ಲಿನಲ್ಲಿ ಸಹ ಕಾಲಕ್ಕನುಸರಿಸಿ ಹೊಸ ಬದಲಾವಣೆ ಸಾಧ್ಯವೆಂಬುದು ದೃಢ ಪಟ್ಟಿತು. 1971–73 ಬರಗಾಲ – ಉದ್ದಿಮೆಯಲ್ಲಿ ಬಿಕ್ಕಟ್ಟು – ಈ ಅವಧಿಯಲ್ಲಿ ಇಳಕಲ್ ಸೀರೆಗೆ ಅಷ್ಟೇ ಅಲ್ಲ ಕೈಮಗ್ಗದ ಉದ್ದಿಮೆಗೇ ಒಂದು ಕರಾಳ ಸಮಯವೆಂದು ಹೇಳಬಹುದು. ಆ ಸಮಯದಲ್ಲಿ ನೇಕಾರರು ಅನುಭವಿಸಿದ ಕಷ್ಟವನ್ನು ವರ್ಣಿಸಲು ಶಬ್ದಗಳೇ ಸಾಲದು.

ನೇಕಾರನು ತಾನು ಸೀರೆ ತಯಾರಿಸಲು ಉಪಯೋಗಿಸುವ ಕಚ್ಚಾ ಮಾಲಿಗೆ ಅತೀ ಹೆಚ್ಚು ಬೆಲೆ ಕೊಡುವದಲ್ಲದೇ, ಕಚ್ಚಾ ಮಾಲು ಸಿಗಲಾರದೇ ಪರದಾಡುವದು, ಇನ್ನೊಂದೆಡೆ ಮಾಲು ತಯಾರು ಮಾಡಿದರೂ ಅದಕ್ಕೆ ಸರಿಯಾದ ಬೆಲೆ ಸಿಗದೇ ಮಾರಟವಾಗದೇ

#### ಕೌಟುಂಬಿಕ ಜೀವನ

ಈ ಉದ್ದಿಮೆಯಲ್ಲಿ ಮೊದಲಿ ನಿಂದಲೂ ಕುಟುಂಬದ ಸರ್ವ ಜನರಿಗೆ ಅಂದರೆ ಚಿಕ್ಕವರು ದೊಡ್ಡವರು ಹೆಣ್ಣು ಮಕ್ಕಳೆಲ್ಲರೂ ಕೆಲಸವನ್ನು ಮಾಡುತ್ತಾರೆ. ಹೆಣ್ಣುಮಕ್ಕಳು ಹಾಸುಮಾಡುವದು, ತೋಡುವದು, ಟಾಣಿಗಿ ಹಿಡಿಯುವದು ಇತ್ಯಾದಿ, ಗಂಡಸರು ಹೆಚ್ಚಾಗಿ ನೇಯ್ಯುವದು ಮಾಡುತ್ತಾರೆ. ಅಲ್ಲಲ್ಲಿ ಕೆಲವು ಜನ ಹೆಣ್ಣು ಮಕ್ಕಳು ಸಹ ನೇಯ್ಯುವದು ಮಾಡುತ್ತಾರೆ. ಇದಲ್ಲದೆ ಬಣ್ಣ ಹಾಕುವುದು, ಟ್ವಿಸ್ಟಿಂಗ ಫ್ಯಾಕ್ಟರಿ, ಹಾಸು ಮಾಡುವದು ಮುಂತಾದ ಸ್ವತಂತ್ರ ಉದ್ಯೋಗಸ್ಥರೂ ಇದ್ದಾರೆ. ಸೀರೆಗಳನ್ನು ಮಾರಾಟ ಮಾಡಲು ಸಣ್ಣ, ದೊಡ್ಡ ವ್ಯಾಪಾರಸ್ಥರೂ ಇದ್ದಾರೆ.

ಉಳಿಯುವದು ಒಂದು. ಇಂಥ ಪರಿಸ್ಥಿತಿಯಲ್ಲಿ ನೇಕಾರನಿಗೆ ದಿನಾಲು 3, 4 ರೂಪಾಯಿ ಸಿಗುವದೇ ದುಸ್ತರವಾಗಿತ್ತು. ಸರ್ಕಾರವು ಈ ದಾರುಣ ಸ್ಥಿತಿಯನ್ನು ಮನಗಂಡು ನೇಕಾರರಿಗೆ ನೂಲನ್ನು ಒದಗಿಸಲು ಡಿಪೋ ತೆರೆದರು. ಆ ಮುಖಾಂತರ ಕಡಿಮೆ ಬೆಲೆಯಲ್ಲಿ ನೂಲನ್ನು ಒದಗಿಸಹತ್ತಿದರು. ಆದರೆ ಈ ಯೋಜನೆಯು ವಿವಿಧ ಕಾರಣಗಳಿಂದ ಸಫಲವಾಗಲಿಲ್ಲ ವೆಂದು ವಿಷಾದದಿಂದ ಹೇಳಬಹುದಾಗಿದೆ. ಸಹಕಾರಿ ಸಂಘಗಳ ಮೂಲಕ ನೇಕಾರರ ಅಭಿವೃದ್ಧಿ ಸಾಕಷ್ಟಿಲ್ಲವೆಂಬುದನ್ನು ಮನಗಂಡು ಸರ್ಕಾರವೇ "ತೀವ್ರ ಕೈಮಗ್ಗ ಅಭಿವೃದ್ಧಿ ಯೋಜನೆ" (ಐ.ಹೆಚ್.ಡಿ.ಪಿ) ಪ್ರಾರಂಭಿಸಿತು. ಇದಕ್ಕೆ ಕಾರ್ಪೊರೇಶನ್ ಅಂತಲೂ ಕರೆಯುತ್ತಾರೆ. ಆ ಪ್ರಕಾರ ಇಳಕಲ್‌ನಲ್ಲಿ 19-7-1976 ರಂದು ಈ ಭಾಗದ ಮುಖ್ಯ ಶಾಖೆಯನ್ನು ಸ್ಥಾಪಿಸಿ ಇದರ ಮೂಲಕ ಕಮತಗಿ, ಅಮೀನಗಡ, ವಂದಾಲಗಳಲ್ಲಿ ಉಪಶಾಖೆಗಳನ್ನು ಪ್ರಾರಂಭಿಸಿತು. 1975ರಲ್ಲಿ ಇಳಕಲ್ ನೇಕಾರರ ಭಾಗ್ಯದ ವರ್ಷವೆಂದು ಹೇಳಬಹುದು. ಪಕ್ಕಾ ಮಾಲಿನ ಅಂದರೆ ಸೀರೆಗಳ ಬೆಲೆ ನೇಕಾರರ ಮಜೂರಿ ಇತ್ಯಾದಿ ಉತ್ತಮವಾಗಿ ಮಾರುಕಟ್ಟೆಯಲ್ಲಿ ಪಡೆದುಕೊಂಡವು. ಈ ರೀತಿಯಾಗಿ ನಮ್ಮ ಇಳಕಲ್ ನೇಕಾರಿಕೆಯು ಅನೇಕ ಏರಿಳಿತಗಳನ್ನು ಕಂಡು ಅನೇಕ ಸಮಸ್ಯೆಗಳನ್ನು ಎದುರಿಸಿ ಮುಂದೆ ಸಾಗುತ್ತಾ ನಡೆದಾಗ ಸುಮಾರ 1970 ರ ಸುಮಾರಿಗೆ, ಇಳಕಲ್ ಪಟ್ಟಣದಲ್ಲಿ ವಿದ್ಯುತ್ ಮಗ್ಗಗಳ ಪ್ರಾರಂಭಿಕ ಮುನ್ನುಡಿ ಬರೆಯಲಾಯಿತು.

ಆ ವೇಳೆಯಲ್ಲಿ ಅಂದಾಜು 50 ರಿಂದ 100 ವಿದ್ಯುತ್ ಮಗ್ಗಗಳ ಮೇಲೆ ಇಳಕಲ್ ಸೀರೆಗಳ ಅದರಲ್ಲೂ ಕೇವಲ ಚಮಕಾ ಹಾಗೂ ನೂಲಿನಿಂದ ತಯಾರಿಸಲ್ಪಟ್ಟ ಸೀರೆಗಳ ಉತ್ಪಾದನೆ ಪ್ರಾರಂಭವಾಯಿತು. ಆರಂಭದಲ್ಲಿ ಈ ಬದಲಾವಣೆ ಕೈಮಗ್ಗ ಕ್ಷೇತ್ರಕ್ಕೆ ಯಾವುದೇ ಪೈಪೋಟಿಯಾಗಲಿ, ಧಕ್ಕೆಯಾಗಲಿ ನೀಡಲಿಲ್ಲ. ಬರುಬರುತ್ತಾ ಕೈಮಗ್ಗ ಕ್ಷೇತ್ರದಿಂದ ನೇಕಾರರು ಹಾಗೂ ಈ ಕಸುಬಿಗೆ ಸೇರಿದ ಉಪಕಸುಬುದಾರರೆಲ್ಲರೂ



ವಿದ್ಯುತ್ ಮಗ್ಗಗಳ ಕ್ಷೇತ್ರಕ್ಕೆ ಆಕರ್ಷಿತರಾಗ ತೊಡಗಿದರು. ಅದಕ್ಕೆ ಕಾರಣಗಳು ಹಲವಾರು :

ಕೈಮಗ್ಗದ ಬಗ್ಗೆ ಕೀಳು ದೃಷ್ಟಿ ಯುವ ನೇಕಾರ ಪೀಳಿಗೆ ಕೈಮಗ್ಗದಲ್ಲಿ ಮುಂದುವರೆಯಲು ತೋರಿದ ಅನಾಸಕ್ತಿ. ಕೈಮಗ್ಗ ಕ್ಷೇತ್ರದಲ್ಲಿ ಒಬ್ಬ ನೇಕಾರ ಹಲವಾರು ಉಪಕಸುಬುದಾರರ ಮೇಲೆ ಅವಲಂಬಿತನಾಗಿರುವುದು. ಉಪಕಸುಬುದಾರರು ವೇಳೆಗೆ ಸರಿಯಾಗಿ ತಮ್ಮ ತಮ್ಮ ಕೆಲಸ ಮಾಡಿ ಕೊಡಲು ವಿಫಲರಾದದ್ದು. ವೇತನದ ಆಕರ್ಷಣೆ. ವಿದ್ಯುತ್ ಮಗ್ಗಗಳಲ್ಲಿ ತಯಾರಾದ ಸೀರೆಗಳಿಗೆ ಹೆಚ್ಚಿದ ಬೇಡಿಕೆ. ವಿದ್ಯುತ್ ಮಗ್ಗಗಳನ್ನು ನೇಯ್ಯುವ ನೇಕಾರರಿಗೆ ಸಿಗುವ ಹೆಚ್ಚಿನ ಸಾಲದ ಸೌಲಭ್ಯ. ಮಗ್ಗಗಳ ಖರೀದಿಗೆ ಸಿಗುವ ಹಣದ ಸೌಲಭ್ಯ. ಬಡ್ಡಿ ರಹಿತವಾಗಿ ನೇಕಾರರಿಗೆ ಲಕ್ಷಗಟ್ಟಲೇ ಹಣದ ಮುಂಗಡ ಸೌಲಭ್ಯ. ಈ ಎಲ್ಲ ಮುಖ್ಯ ಕಾರಣಗಳು ಇಳಕಲ್ಲಿನಲ್ಲಿ ವಿದ್ಯುತ್ ಮಗ್ಗಗಳ ಸ್ಥಾಪನೆಗೆ ಹಾಗೂ ಕೈಮಗ್ಗಗಳ ಅವನತಿಗೆ ಮುನ್ನುಡಿ ಬರೆಯಲು ಕಾರಣವಾದವು. ಒಟ್ಟಾರೆ ಹೇಳುವದಾದರೆ ವಿದ್ಯುತ್ ಮಗ್ಗಗಳು ಸರಿ ಸುಮಾರು 2000-2010 ರ ಅವಧಿಯಲ್ಲಿ ವಿಪರೀತ ಹಾಗೂ ಶೀಘ್ರ ಬೆಳವಣಿಗೆ ಕಂಡುಕೊಂಡವು. ಆ ಕಾಲದಲ್ಲಿ ಅವುಗಳ ಮೇಲೆ ತಯಾರಾಗುವ ಸೀರೆಗಳ ಗುಣಮಟ್ಟಕೂಡಾ ಉತ್ತಮವಾಗಿ ಇತ್ತೆಂದು ಹೇಳಬಹುದು.

ವಿದ್ಯುತ್ ಮಗ್ಗಗಳು ಹೆಚ್ಚಾದಂತೆ ವರ್ಷದಿಂದ ವರ್ಷಕ್ಕೆ ಉತ್ಪಾದನೆ ಕೂಡಾ ತೀವ್ರವಾಗಿ ಬೆಳೆಯಿತು. ಸ್ಪರ್ಧೆ ಪ್ರಾರಂಭವಾಗಿ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳುವ ಕಾಲ ಪ್ರಾರಂಭವಾಯಿತು. ಆರೋಗ್ಯಕರ ಸ್ಪರ್ಧೆಯ ಕಡೆಗೆ ನೇಕಾರರು, ವರ್ತಕರು ಗಮನಕೊಡದೇ ಕೇವಲ ಲಾಭಾಂಶದ ಕಡೆಗೆ ಹಾಗೂ ಇನ್ನೂ ವಿದ್ಯುತ್ ಮಗ್ಗಗಳನ್ನು ಹಾಕಬೇಕು ಎಂಬ ಹಂಬಲ ಶುರುವಾಯಿತು. ಇದರಿಂದಾಗಿ ಸುಮಾರು ವರ್ಷಗಳಿಂದ ಇದ್ದ ನೇಕಾರರ ಹಾಗೂ ವರ್ತಕರ ನಡುವೆ ಸುಮಧುರ ಸಂಬಂದ ಹಾಳಾಗಲು ಕಾರಣವಾಯಿತು.

ಈ ರೀತಿಯಾದ ತೀವ್ರ ಪೈಪೋಟಿಯಲ್ಲಿ ಇಳಕಲ್ ಕೈಮಗ್ಗ ಕ್ಷೇತ್ರ ನಿಜಕ್ಕೂ ಅನಾಥವಾಯಿತು. ತೀವ್ರವಾದ ನಿರ್ಲಕ್ಷ್ಯಕ್ಕೆ ಗುರಿಯಾಯಿತು. ಒಂದು ಕಾಲದಲ್ಲಿ ಸುಮಾರು 3000 ಕೈಮಗ್ಗಗಳಿಂದ ತುಂಬಿ ತುಳುಕುತ್ತಿದ್ದ ಇಳಕಲ್ ಪಟ್ಟಣ ಇಂದು ಕೇವಲ 50 ರಿಂದ 100 ಕೈಮಗ್ಗಗಳು ಮಾತ್ರ ಜೀವಂತ ಉಳಿಯುವಂತೆ ಕಾಲಚಕ್ರದಲ್ಲಿ ಬದಲಾವಣೆಯಾಗಿದೆ. ಇಳಕಲ್ ಕೈಮಗ್ಗಗಳು ಇತಿಹಾಸದ ಕಾಲಗರ್ಭದಲ್ಲಿ ಸೇರಿ ಕೊಳ್ಳುವ ಮೊದಲು ನಾವೆಲ್ಲರೂ ಎಚ್ಚೆತ್ತುಕೊಳ್ಳಬೇಕಾಗಿದೆ. ನಮ್ಮ ಸಂಸ್ಕೃತಿ, ಸಂಪ್ರದಾಯ ನಮ್ಮ ಪವಿತ್ರ ನೇಕಾರಿಕೆಯ ಉಳಿವಿಗೆ ನಾವೇ ಪಣತೊಟ್ಟು ನಿಲ್ಲಬೇಕು.

ಕರ್ನಾಟಕ ಸರ್ಕಾರ ಕೂಡಾ 2006 ರಲ್ಲೆ ರಾಜ್ಯದ ಬಜೆಟ್‌ನಲ್ಲಿ ಇಳಕಲ್ ಸೀರೆಯನ್ನು ಉಳಿಸಿ ಬೆಳೆಸಲು ಮಾರ್ಗೋಪಾಯಗಳನ್ನು ರೂಪಿಸಿದೆ, ಇವುಗಳನ್ನು ಬಳಸಿಕೊಂಡು ಕೈಮಗ್ಗ ಕ್ಷೇತ್ರದಲ್ಲಿ ಸೀರೆಯನ್ನು ಆಧುನೀಕರಣಗೊಳಿಸಿ ಉತ್ತಮ ಗುಣ ಮಟ್ಟ ಕಾಪಾಡಿಕೊಂಡು ಉತ್ತಮ ಮಾರ್ಕೆಟಿಂಗ್ ವ್ಯವಸ್ಥೆ ಕಲ್ಪಿಸುವುದರ ಮುಖಾಂತರ ಗತ ವೈಭವವನ್ನು ಮರಳಿ ತಂದು ಕೊಡಬೇಕಾಗಿದೆ. ಇಳಕಲ್ ಸೀರೆ ತನ್ನ ಸೀಮಿತ ಮಾರುಕಟ್ಟೆಯನ್ನು ಮೀರಿ ಬೆಳೆದರೆ ಈ ಭಾಗದ ನೇಕಾರರ ಬದುಕು ಹಸನಾಗುವದರಲ್ಲಿ ಯಾವುದೇ ಸಂದೇಹವಿಲ್ಲ. ❑

**ಪ್ರಧಾನ ಮಂತ್ರಿ ನುಡಿ**

**ಖಾದಿ, ಫ್ಯಾಷನ್ ಜಗತ್ತಿನಲ್ಲಿ ತನ್ನದೇ ಆದ ಸ್ಥಾನ ಕಂಡುಕೊಳ್ಳುತ್ತಿದೆ. ಯುವ ಜನಾಂಗದ ಗಮನ ಸೆಳೆಯುತ್ತಿದೆ. ಸಮಗ್ರ ಆರೋಗ್ಯ ಮತ್ತು ಸಾವಯವದತ್ತ ಒಲವಿರುವವರಿಗೆ ಖಾದಿ ಒಂದು ಪರಿಪೂರ್ಣ ಪರಿಹಾರವೆನಿಸಿದೆ. – ಶ್ರೀ ನರೇಂದ್ರ ಮೋದಿ**

# ವಿಶೇಷ ಸಾಮರ್ಥ್ಯ ಮೆರೆದ ಭಾರತೀಯರು



ಚಿನ್ನಕ್ಕೆ ಲಗ್ಗೆ



ಬಂಗಾರದ ಜಿಗಿತ | ಬೆಳ್ಳಿಯ ಸೆಲೆ



ಕಂಚಿನ ಎಸೆತ

ರಿಯೊಡಿಜನೈರೊನಲ್ಲಿ ನಡೆದ ಪ್ಯಾರಾಲಿಂಪಿಕ್‌ನಲ್ಲಿ ಭಾರತ ನಾಲ್ಕು ಪದಕಗಳನ್ನು ಗೆದ್ದುಕೊಂಡಿದೆ.

ಪುರುಷರ ಜಾವೆಲಿನ್ ಥ್ರೊನಲ್ಲಿ ದೇವೇಂದ್ರ ಝುಝೂರಿಯಾ 63.97 ಮೀಟರ್ ದೂರ ಜಾವೆಲಿನ್ ಎಸೆದು ತಮ್ಮದೇ ವಿಶ್ವದಾಖಲೆ ಉತ್ತಮ ಪಡಿಸಿ ಎರಡನೇ ಬಾರಿ ಈ ವಿಭಾಗದಲ್ಲಿ ಚಿನ್ನ ದ ಪದಕ ಗಳಿಸಿದ ಹೆಮ್ಮೆಗೆ ಪಾತ್ರರಾದರು.

ಪುರುಷರ ಹೈಜಂಪ್‌ನಲ್ಲಿ ಮಾರಿಯಪ್ಪನ್ ತಂಗವೇಲು 1.89 ಮೀಟರ್ ಎತ್ತರ ಜಿಗಿದು ಬಂಗಾರ ಬಾಚಿಕೊಂಡರೆ, ಇದೇ ವಿಭಾಗದಲ್ಲಿ ವರುಣ್ ಸಿಂಗ್ ಭಾತಿ 1.86 ಮೀಟರ್ ಎತ್ತರ ಹಾರಿ ಬೆಳ್ಳಿ ಪದಕಕ್ಕೆ ಪಾತ್ರರಾದರು.

ಮಹಿಳೆಯರ ಶಾಟ್‌ಪುಟ್ ವಿಭಾಗದಲ್ಲಿ ದೀಪಾ ಮಲ್ಲಿಕ್ ಕಬ್ಬಿಣದ ಗುಂಡನ್ನು 4.61 ಮೀಟರ್ ಎಸೆದು ಕಂಚಿನ ಪದಕ ಧರಿಸಿದರು.

# ವಾರ್ತಾ ವಿಶೇಷ


ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ–ಇಸ್ರೊ – ಸ್ಕ್ಯಾಟ್ ಸ್ಯಾಟ್–1 ಮತ್ತು ಇತರ 7 ಉಪಗ್ರಹಗಳನ್ನು ಶ್ರೀಹರಿಕೋಟಾದ ಉಡಾವಣಾ ಕೇಂದ್ರದಿಂದ ಪಿಎಸ್‌ಎಲ್‌ವಿ ಸಿ– 35 ನೌಕೆಯ ಮೂಲಕ ಯಶಸ್ವಿಯಾಗಿ ಹಾರಿಸಿದೆ. ಎರಡು ಪ್ರತ್ಯೇಕ ನಮೂನೆಯ ಉಪಗ್ರಹಗಳನ್ನು ಎರಡು ವಿಭಿನ್ನ ಕಕ್ಷೆಗಳಲ್ಲಿ ಸ್ಥಾಪಿಸುವ ಕಾರ್ಯವನ್ನು ಒಂದೇ ಉಡಾವಣೆಯ ಮೂಲಕ ನಿರ್ವಹಿಸಿದ ಐತಿಹಾಸಿಕ ದಾಖಲೆ ಇದಾಗಿದೆ. ಭಾರತದ ಸ್ಕ್ಯಾಟ್ ಸ್ಯಾಟ್–1 ಉಪಗ್ರಹದೊಂದಿಗೆ ಇತರ ಉಪಗ್ರಹಗಳು ಉಡಾವಣೆಗೊಂಡಿದ್ದು, ಈ ಇತರೆ ಉಪಗ್ರಹಗಳು ಅಮೆರಿಕ ಕೆನಡಾ ಮತ್ತು ಅಲ್ಜೀರಿಯಾ ದೇಶಗಳಿಗೆ ಸೇರಿದವು. ಎರಡು ಉಪಗ್ರಹಗಳು ಭಾರತದ ಶೈಕ್ಷಣಿಕ ಸಂಸ್ಥೆಯಲ್ಲಿ ನಿರ್ಮಿಸಿದ್ದಾಗಿವೆ. ಸ್ಕ್ಯಾಟ್ ಸ್ಯಾಟ್–1 ಉಪಗ್ರಹ ಸಾಗರಿಕ ಪ್ರದೇಶಗಳ ಹವಾಮಾನ ಅಧ್ಯಯನಕ್ಕೆ ಹೆಚ್ಚಿನ ಮಾಹಿತಿ ಪೂರೈಸಬಲ್ಲದ್ದಾಗಿದ್ದು, ಇದು ಒಶಿಯನ್ ಸ್ಯಾಟ್–2 ಕಾರ್ಯಕ್ರಮದ ಶ್ರೇಣಿಗೆ ಸೇರಿದೆ.

* * *

ಭಯೋತ್ಪಾದನೆಯನ್ನು ಪೋಷಿಸುತ್ತ, ಎಲ್ಲೆಡೆ ಅದನ್ನೇ ರಫ್ತು ಮಾಡುತ್ತಿರುವ ರಾಷ್ಟ್ರಕ್ಕೆ ಮರ್ಯಾದೆ ಕಾಪಾಡಿಕೊಂಡು ಬಂದಿರುವ ರಾಷ್ಟ್ರಗಳ ಜತೆ ನಿಲ್ಲಲು ಯಾವುದೇ ಸ್ಥಾನ ಇಲ್ಲ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವೆ ಶ್ರೀಮತಿ ಸುಷ್ಮಾ ಸ್ವರಾಜ್ ವಿಶ್ವಸಂಸ್ಥೆಯಲ್ಲಿ ಪ್ರತಿಪಾದಿಸಿದ್ದಾರೆ. 71ನೇ ವಿಶ್ವಸಂಸ್ಥೆ ಸಾಮಾನ್ಯ ಸಭೆಯ ಮಹಾಧಿವೇಶನ ಉದ್ದೇಶಿಸಿ ಭಾಷಣ ಮಾಡಿದ ಅವರು, ಅಮಾಯಕ ಜನರನ್ನು ಗುರಿ ಮಾಡುವ ಭಯೋತ್ಪಾದನೆಯು ಮಾನವ ಹಕ್ಕುಗಳ ಉಲ್ಲಂಘನೆಯ ಅತ್ಯಂತ ಕೆಟ್ಟ ರೂಪ ಎಂದು ಖಂಡಿಸಿದರು. ವಿಶ್ವಸಂಸ್ಥೆಯ ನಿಯೋಜಿತ ಭಯೋತ್ಪಾದಕರ ಕಪ್ಪುಪಟ್ಟಿಯಲ್ಲಿರುವ ಉಗ್ರರನ್ನು ಪಾಕಿಸ್ತಾನ ಸಲಹುತ್ತಿದೆ; ಈ ನಿಷೇಧಿತ ಉಗ್ರರು ಪಾಕಿಸ್ತಾನದಲ್ಲಿ ಧರ್ಮೋಪದೇಶದ ಹೆಸರಿನಲ್ಲಿ ದ್ವೇಷ ಮತ್ತು ವಿಷಬೀಜ ಬಿತ್ತುತ್ತಿದ್ದಾರೆ ಎಂದು ಸಚಿವರು ಕಟು ಮಾತುಗಳಲ್ಲಿ ತಿಳಿಸಿದರು. ಭಯೋತ್ಪಾದನೆಯ ಭಾಷೆಯಲ್ಲೇ ಮಾತನಾಡುವ ಹಾಗೂ ಭಯೋತ್ಪಾದಕರಿಗೆ ಆಶ್ರಯ ನೀಡುತ್ತ ಬಂದಿರುವ ರಾಷ್ಟ್ರವು ತನ್ನ ಈ ಗುಣಗಳಿಂದಲೇ ಜಗಜ್ಜಾಹಿರಾಗಿದೆ. ಈ ನಿಟ್ಟಿನಲ್ಲಿ ವಿಶ್ವ ಸಮುದಾಯ ಇಂತಹ ರಾಷ್ಟ್ರವನ್ನು ದೂರ ಇಡಲು ಸಂಘಟಿತ ಕ್ರಮಗಳನ್ನು ರೂಪಿಸಬೇಕು ಎಂದು ಒತ್ತಾಯಿಸಿದರು. ಕಾಶ್ಮೀರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ ಎಂದು ಪಾಕ್ ಪ್ರಧಾನಿ ಶ್ರೀ ನವಾಜ್ ಷರೀಫ್ ಮಾಡಿರುವ ಟೀಕೆಗಳು ನಿರಾಧಾರ. ಬೇರೆಯವರ ಮೇಲೆ ಆರೋಪ ಮಾಡುವವರು ಬಲೂಚಿಸ್ತಾನ ಸೇರಿದಂತೆ ತಮ್ಮ ದೇಶದ ನಗರ ಪಟ್ಟಣಗಳಲ್ಲಿ ನಡೆಯುತ್ತಿರುವ ದೌರ್ಜನ್ಯಗಳ ಆತ್ಮವಿಮರ್ಶೆ ಮಾಡಿಕೊಳ್ಳಲಿ ಎಂದು ಅವರು ಹೇಳಿದರು.

* * *


❑



# ಮಹಾತ್ಮ ಗಾಂಧಿ

## ಜೀವನ ಮತ್ತು ಸಂದೇಶ

ಪ್ರಕಾಶನ ವಿಭಾಗ
ಸಮಾಚಾರ ಮತ್ತು ಪ್ರಸಾರ ಸಚಿವಾಲಯ
ಭಾರತ ಸರ್ಕಾರ




ವ್ಯಾಪಾರದ ವೇಳೆ
ರಜಾ ದಿನ ಹೊರತುಪಡಿಸಿ
**ಸೋಮವಾರದಿಂದ ಶುಕ್ರವಾರದವರೆಗೆ**
ಬೆಳಿಗ್ಗೆ 11-00 ರಿಂದ ಸಂಜೆ 4-00 ಗಂಟೆಯವರೆಗೆ

ಈ ಪುಸ್ತಕಗಳನ್ನು ಖರೀದಿಸಲು ಸಂಪರ್ಕಿಸಿ:
**ಯೋಜನಾ - ಕನ್ನಡ**
ಮೊದಲನೆ ಅಂತಸ್ತು, 'ಎಫ್' ವಿಂಗ್, ಕೇಂದ್ರೀಯ ಸದನ,
ಕೋರಮಂಗಲ, ಬೆಂಗಳೂರು - 560 034 ✆ 080 2553 7244
E-mail : yojanakannada@yahoo.com